ವಿಶ್ವವಾಣಿ
ವಿಶ್ವಾಸವೇ ವಿಶ್ವ

ಆರ್‌ಸಿಬಿಗೆ ಕೆಎಂಎಫ್ ಪ್ರಾಯೋಜಕತ್ವ

ಮಾ.28ರಿಂದ ಐಪಿಎಲ್ ಶುರುವಾಗಲಿರುವ ಹೊತ್ತಿನಲ್ಲಿ ಆರ್‌ಸಿಬಿಯ ಪ್ರಾಯೋಜಕತ್ವವನ್ನು ರಾಜ್ಯ ಸರಕಾರದ ಕೆಎಂಎಫ್ ಹೊತ್ತುಕೊಂಡಿದೆ. ನಂದಿನಿ ಉತ್ಪನ್ನಗಳ ಮೂಲಕ ಜನಪ್ರಿಯವಾಗಿರುವ ಕೆಎಂಎಫ್ ಅನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ಬೆಳೆಸಲು ರಾಜ್ಯ ಸರಕಾರ ಹೊರಟಿದೆ. ಈ ನಿಟ್ಟಿನಲ್ಲಿ ಇದು ಮಹತ್ವದ ಹೆಜ್ಜೆಯಾಗಿದೆ. ಒಟ್ಟು 4 ಕೋಟಿ ರು.ಗಳನ್ನು ಕೆಎಂಎಫ್ ವೆಚ್ಚ ಮಾಡಲಿದೆ.

ಮೋದಿಗೆ ಟ್ರಂಪ್ ಕರೆ

ಹೊರ್ಮುಜ್ ಜಲಸಂಧಿಯಲ್ಲಿ ಮುಕ್ತಸಂಚಾರದ ಅಗತ್ಯದ ಬಗ್ಗೆ ಮಹತ್ವದ ಚರ್ಚೆ

ಇಂದು ಮೋದಿ ಸರ್ವಪಕ್ಷ ಸಭೆ, ಯುದ್ಧದ ಪರಿಣಾಮದ ಬಗ್ಗೆ ಚರ್ಚೆ, ರಾಹುಲ್ ಗೈರು

ಕುಗ್ಗದ ಅಮೆರಿಕ-ಇಸ್ರೇಲ್ ಯುದ್ಧೋತ್ಸಾಹ, ಇರಾನ್, ಲೆಬನಾನ್ ಮೇಲೆ ಮತ್ತೆ ದಾಳಿ

ದೆಹಲಿ: ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮಂಗಳವಾರ ಪ್ರಧಾನಿ ನರೇಂದ್ರ ಮೋದಿಗೆ ಕರೆ ಮಾಡಿ ಮಹತ್ವದ ಮಾತುಕತೆ ನಡೆಸಿದ್ದಾರೆ. ಇಸ್ರೇಲ್-ಅಮೆರಿಕ ದಾಳಿಯಿಂದ ಇರಾನ್ ಇಡೀ ಜಗತ್ತಿಗೆ ತೈಲ, ಅನಿಲ ಪೂರೈಕೆ ಮಾಡುವ ಹೊರ್ಮುಜ್ ಜಲಸಂಧಿಯನ್ನೇ ಮುಚ್ಚಿದೆ. ಈ ಜಲಸಂಧಿಯನ್ನು ವಾಣಿಜ್ಯ ಹಡಗು ಸಂಚಾರಕ್ಕೆ ಮುಕ್ತವಾಗಿಸುವ ಮಹತ್ವದ ಬಗ್ಗೆ ಗಂಭೀರ ಮಾತುಕತೆ ನಡೆದಿದೆ ಎಂದು ಪ್ರಧಾನಿ ಮೋದಿ ಮತ್ತು ಅಮೆರಿಕದ ಭಾರತೀಯ ರಾಯಭಾರಿ ಸೆರ್ಗಿಯೋ ಗೋರ್ ಹೇಳಿದ್ದಾರೆ. ಇದೇ ವೇಳೆ ಬುಧವಾರ ಸಂಜೆ 5 ಗಂಟೆಗೆ ಪ್ರಧಾನಿ ಮೋದಿ ಯುದ್ಧದಿಂದ ಉಂಟಾಗಿರುವ ಬಿಕ್ಕಟ್ಟನ್ನು ನಿಭಾಯಿಸಲು ಸರ್ವಪಕ್ಷ ಸಭೆ ಕರೆದಿದ್ದಾರೆ. ಕೇರಳ ಚುನಾವಣೆ ಪ್ರಚಾರದಲ್ಲಿ ಭಾಗಿಯಾಗುವುದರಿಂದ ಸಭೆಗೆ ಬರಲಾಗುವುದಿಲ್ಲ ಎಂದು ವಿಪಕ್ಷ ನಾಯಕ ರಾಹುಲ್ ಗಾಂಧಿ ಹೇಳಿದ್ದಾರೆ.

ಟ್ರಂಪ್ ಜೊತೆಗಿನ ಮಾತುಕತೆ ಬಗ್ಗೆ ಟ್ವೀಟ್ ಮಾಡಿರುವ ಮೋದಿ, ಅಧ್ಯಕ್ಷ ಟ್ರಂಪ್‌ರಿಂದ ಕರೆ ಸ್ವೀಕರಿಸಿ, ಪಶ್ಚಿಮ ಏಷ್ಯಾದ ಪರಿಸ್ಥಿತಿಯ ಕುರಿತು ಉಪಯುಕ್ತ ಅಭಿಪ್ರಾಯ ವಿನಿಮಯ ಮಾಡಿಕೊಂಡೆವು. ಭಾರತವು ಉದ್ವಿಗ್ನತೆಯನ್ನು ಕಡಿಮೆ ಮಾಡಲು ಮತ್ತು ಸಾಧ್ಯವಾದಷ್ಟು ಬೇಗ ಶಾಂತಿಯನ್ನು ಪುನಃಸ್ಥಾಪಿಸಲು ಆಗ್ರಹಿಸುತ್ತದೆ. ಹೊರ್ಮುಜ್ ಜಲಸಂಧಿಯು ಮುಕ್ತ, ಸುರಕ್ಷಿತ ಮತ್ತು ಪ್ರವೇಶಿಸಬಹುದಾದ ಸ್ಥಳವಾಗಿರುವುದನ್ನು ಖಚಿತಪಡಿಸಿಕೊಳ್ಳುವುದು ಇಡೀ ಜಗತ್ತಿಗೆ ಅತ್ಯಗತ್ಯ. ಶಾಂತಿ ಮತ್ತು ಸ್ಥಿರತೆಯತ್ತ ಪ್ರಯತ್ನಗಳ ಕುರಿತು ಸಂಪರ್ಕದಲ್ಲಿರಲು ಒಪ್ಪಿಕೊಂಡೆವು ಅಂತ ಮೋದಿ ಹೇಳಿದ್ದಾರೆ. →10

ಎಲ್‌ಪಿಜಿ ಹೊತ್ತು ಭಾರತಕ್ಕೆ ಹೊರಟ ಮತ್ತೆರಡು ಹಡಗು

ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಉದ್ವಿಗ್ನತೆಯಿಂದಾಗಿ ಭಾರತ ದ್ರವೀಕೃತ ಪೆಟ್ರೋಲಿಯಂ ಅನಿಲದ ಕೊರತೆಯನ್ನು (ಎಲ್‌ಪಿಜಿ) ಎದುರಿಸುತ್ತಿರುವ ಈ ಸಮಯದಲ್ಲಿ, ಎಲ್‌ಪಿಜಿ ಟ್ಯಾಂಕರ್‌ಗಳನ್ನು ಹೊಂದಿರುವ ಎರಡು ಭಾರತೀಯ ಹಡಗುಗಳು ಯುದ್ಧಪೀಡಿತ ಹೊರ್ಮುಜ್ ಜಲಸಂಧಿಯನ್ನು ಸುರಕ್ಷಿತವಾಗಿ ದಾಟಿವೆ ಅಂತ ವರದಿಗಳು ತಿಳಿಸಿವೆ. ಎರಡೂ ಹಡಗುಗಳು ಮುಂದಿನ ಎರಡು ದಿನಗಳಲ್ಲಿ ಭಾರತೀಯ ಬಂದರುಗಳನ್ನು ತಲುಪುವ ನಿರೀಕ್ಷೆಯಿದೆ.

ಅಮೆರಿಕದೊಳಗೇ ಭಿನ್ನಮತ!

ಯುದ್ಧ ತೀವ್ರವಾಗುತ್ತಿದ್ದಂತೆಯೇ ಅಮೆರಿಕದೊಳಗೆ ಭಿನ್ನಮತ ಕಾಣಿಸಿಕೊಂಡಿದೆ. ಸೋಮವಾರದ ಸಭೆಯಲ್ಲಿ ಮಾತನಾಡಿದ ಟ್ರಂಪ್, ಯುದ್ಧ ನಡೆಯಲಿ ಎಂದು ಮೊದಲು ಹೇಳಿದ್ದೇ ರಕ್ಷಣಾ ಸಚಿವ ಪೀಟ್ ಹೆಗ್ಸೆತ್. ಇರಾನ್ ಅಣ್ವಸ್ತ್ರ ಹೊಂದುವುದು ಅವರಿಗೆ ಇಷ್ಟವಿರಲಿಲ್ಲ ಎಂದು ಹೇಳಿದ್ದಾರೆ. ಈ ಮೂಲಕ ಯುದ್ಧದ ಹೊಣೆಗಾರಿಕೆಯನ್ನು ಹೆಗ್ಸೆತ್ ತಲೆಗೆ ಕಟ್ಟಲು ಟ್ರಂಪ್ ಯತ್ನಿಸುತ್ತಿದ್ದಾರಾ ಎಂಬ ಅನುಮಾನಗಳು ಮೂಡಿವೆ.

ಅಗತ್ಯ ಇಂಧನ ಇದೆ

ಇಂಧನ ಭದ್ರತೆಯ ದೃಷ್ಟಿಯಿಂದ ಭಾರತವು ಆತ್ಮನಿರ್ಭರವಾಗಲು ಹೊರಟಿದೆ. ಕಳೆದ 11 ವರ್ಷಗಳಲ್ಲಿ ಭಾರತದ ತೈಲ ನಿಕ್ಷೇಪಗಳನ್ನು ಅಭಿವೃದ್ಧಿಪಡಿಸುತ್ತಿದೆ. ಭಾರತವು 5.3 ಮಿಲಿಯನ್ ಮೆಟ್ರಿಕ್ ಟನ್‌ಗಳಿಗಿಂತ ಹೆಚ್ಚಿನ ಪೆಟ್ರೋಲಿಯಂ ನಿಕ್ಷೇಪವನ್ನು ಅಭಿವೃದ್ಧಿಪಡಿಸುತ್ತಿದೆ. ಪ್ರಸ್ತುತ ದೇಶಕ್ಕೆ ಅಗತ್ಯವಿರುವಷ್ಟು ಇಂಧನ ಲಭ್ಯತೆ ಇದೆ.

-ನರೇಂದ್ರ ಮೋದಿ, ಪ್ರಧಾನ ಮಂತ್ರಿ

ದಾಳಿ ಮಾಡಲ್ಲ ಎನ್ನುತ್ತಲೇ ದಾಳಿ

ಶಾಂತಿ ಮಾತುಕತೆಯ ನಡುವೆಯೇ ಇರಾನ್‌ನ ಇಸ್ಫಹಾನ್ ಮೇಲೆ ಅಮೆರಿಕ-ಇಸ್ರೇಲ್ ಜಂಟಿ ದಾಳಿ ನಡೆಸಿವೆ. ಇರಾನ್ ರಾಜಧಾನಿ ಟೆಹರಾನ್, ತಬ್ರಿಜ್, ಇಸ್ಫಹಾನ್, ಕರಾಜ್ ನಗರಗಳಲ್ಲಿ ಭಾರೀ ಸ್ಫೋಟಗಳು ಕೇಳಿಬಂದಿವೆ. ಇಂಧನ ಸೌಕರ್ಯಗಳ ಮೇಲೆ ದಾಳಿ ಮಾಡುವುದಿಲ್ಲ ಎಂದು ಟ್ರಂಪ್ ಹೇಳಿದ ಮೇಲೂ ಎರಡು ಅನಿಲ ಸೌಕರ್ಯಗಳ ಮೇಲೆ ದಾಳಿ ಮಾಡಲಾಗಿದೆ ಎಂದು ಇರಾನ್ ಹೇಳಿದೆ. ಲೆಬನಾನ್ ಮೇಲೆ ಇಸ್ರೇಲ್ ದಾಳಿಯೂ ಮುಂದುವರಿದಿದೆ.

ಶಾಂತಿಗೆ ಇರಾನ್ ಸಿದ್ಧ?

ಅಮೆರಿಕದ ಜೊತೆ ಶಾಂತಿ ಮಾತುಕತೆ ನಡೆಸಲು ಇರಾನ್‌ನ ಹೊಸ ಸರ್ವೋಚ್ಚ ನಾಯಕ ಮೊಜ್ತಬಾ ಖಮೇನಿ ಒಪ್ಪಿಕೊಂಡಿದ್ದಾರೆ ಎಂದು ಸೌದಿ ಅರೇಬಿಯಾ ಸರ್ಕಾರದ ಅಲ್ ಅರೇಬಿಯಾ ಮಾಧ್ಯಮ ವರದಿ ಮಾಡಿದೆ. ಈ ವರದಿಗೆ ಸಂಬಂಧಿಸಿದಂತೆ ಇಲ್ಲಿಯವರೆಗೆ ಇರಾನ್ ಕಡೆಯಿಂದ ಯಾವುದೇ ಪ್ರತಿಕ್ರಿಯೆ ಬಂದಿಲ್ಲ. ಸೋಮವಾರವಷ್ಟೇ ಟ್ರಂಪ್, ಇರಾನ್ ಮೇಲಿನ ದಾಳಿಯನ್ನು 5 ದಿನಗಳ ಕಾಲ ಮುಂದೂಡಿದ್ದರು.

ಮುಸ್ಲಿಂ ನಾಯಕ ಬಂಡಾಯ ಕಾಂಗ್ರೆಸ್ ನಾಯಕರಿಗೆ ಬಿಸಿ

ಉಪಚುನಾವಣೆ: ದಾವಣಗೆರೆಯಲ್ಲಿ ಬಂಡಾಯ ನಾಮಪತ್ರ ಹಿಂಪಡೆಯಲ್ಲ: ಖಾಲಿದ್ ಬಿಗಿಪಟ್ಟು

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಉಪಸಮರ ಘೋಷಣೆಯಾದಾಗಿನಿಂದ ಕಗ್ಗಂಟಾಗಿರುವ ದಾವಣಗೆರೆ ದಕ್ಷಿಣ ಕ್ಷೇತ್ರದ ಬಿಕ್ಕಟ್ಟನ್ನು ಬಿಡಿಸುವುದಕ್ಕೆ ಕಾಂಗ್ರೆಸ್ ಸರಣಿ ಪ್ರಯತ್ನ ನಡೆಸುತ್ತಿದ್ದರೂ, ಅದ್ಯಾವುದೂ ಫಲ ನೀಡಿದಂತೆ ಕಾಣುತ್ತಿಲ್ಲ. ಬದಲಿಗೆ ದಿನದಿಂದ ದಿನಕ್ಕೆ ಜಟಿಲವಾಗುತ್ತಿರುವ ಬಂಡಾಯದ ಸಮಸ್ಯೆಗೆ ಪರಿಹಾರ ಹುಡುಕುವ ಒತ್ತಡಕ್ಕೆ ರಾಜ್ಯ ಕಾಂಗ್ರೆಸ್ ಒಳಗಾಗಿದೆ.

ಶಾಮನೂರು ಶಿವಶಂಕರಪ್ಪ ಅವರ ನಿಧನದಿಂದ ತೆರವಾದ ಸ್ಥಾನಕ್ಕೆ ಮುಸ್ಲಿಂ ಅಭ್ಯರ್ಥಿಗೆ ಟಿಕೆಟ್ ನೀಡಬೇಕು ಎನ್ನುವ ಒತ್ತಡವಿದ್ದರೂ, ಕಾಂಗ್ರೆಸ್ ಹೈಕಮಾಂಡ್ ಶಾಮನೂರು ಮೊಮ್ಮಗ ಸಮರ್ಥ್‌ಗೆ ಟಿಕೆಟ್ ಘೋಷಿಸಿದೆ. ಈ ನಡುವೆ ಸ್ಥಳೀಯ ಮುಖಂಡ ಖಾಲಿದ್ ಸಾದಿಕ್ ಪೈಲ್ವಾನ್ ಬಂಡಾಯವಾಗಿ ನಾಮಪತ್ರ ಸಲ್ಲಿಸಿದ್ದಾರೆ. ನಾಮಪತ್ರ ಹಿಂಪಡೆಯಲು ಗುರುವಾರವೇ ಕೊನೆಯ ದಿನವಾದರೂ, 'ಯಾವುದೇ ಕಾರಣಕ್ಕೂ ಹಿಂಪಡೆಯಲ್ಲ' ಎನ್ನುವ ಹೇಳಿಕೆಯನ್ನು ಖಾಲಿದ್ ನೀಡಿರುವುದು ಪಕ್ಷಕ್ಕೆ ನುಂಗಲಾರದ ತುತ್ತಾಗಿದೆ. ಶಾಮನೂರು ಕುಟುಂಬಕ್ಕೆ ಆಪ್ತನಾಗಿರುವ ಖಾಲಿದ್ ಅವರ ಬಂಡಾಯವನ್ನು ಶಮನ ಮಾಡುವುದು ಸುಲಭವೆಂದೇ ಹೇಳಲಾಗಿತ್ತು. →10

ದಾವಣಗೆರೆ ಉಪಚುನಾವಣೆಯಲ್ಲಿ ಬಂಡಾಯವಾಗಿ ನಾಮಪತ್ರ ಸಲ್ಲಿಸಿರುವವರು ನಮ್ಮವರೇ. ಅವರೊಂದಿಗೆ ಮಾತನಾಡಿ ಸರಿ ಮಾಡಲಾಗುವುದು. ದಾವಣಗೆರೆಯಲ್ಲಿ ನಾವೇ ಬಲವಂತ ಮಾಡಿ ಪ್ರಭಾ ಮಲ್ಲಿಕಾರ್ಜುನರನ್ನು ಲೋಕಸಭಾ ಚುನಾವಣೆಗೆ ನಿಲ್ಲಿಸಿದ್ದೆವು. ಕುಟುಂಬ ರಾಜಕಾರಣ ಯಾವ ಪಕ್ಷದಲ್ಲಿ ಇಲ್ಲ ಹೇಳಿ?

-ಡಿ.ಕೆ.ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷ

ಇಂದು 2 ಕ್ಷೇತ್ರಗಳಿಗೆ ಉಸ್ತುವಾರಿ ನೇಮಕ

ಎರಡು ಕ್ಷೇತ್ರವನ್ನು ಪ್ರತಿಷ್ಠೆಯನ್ನಾಗಿ ತೆಗೆದುಕೊಂಡಿರುವ ಕಾಂಗ್ರೆಸ್, ಈ ಎರಡು ಕ್ಷೇತ್ರಗಳಿಗೆ ಪಕ್ಷದ ಶಕ್ತಿಯನ್ನೆಲ್ಲ ಬಳಸಲು ಮುಂದಾಗಿದೆ. ಈ ಹಿನ್ನೆಲೆಯಲ್ಲಿ ಬುಧವಾರ ಶಾಸಕಾಂಗ ಪಕ್ಷ ಸಭೆಯನ್ನು ಕರೆದಿದ್ದು, ಸಭೆಯಲ್ಲಿ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಭಾಗವಹಿಸಲಿದ್ದಾರೆ. ಈ ವೇಳೆ ದಾವಣಗೆರೆ ದಕ್ಷಿಣ ಹಾಗೂ ಬಾಗಲಕೋಟೆ ಕ್ಷೇತ್ರಗಳಿಗೆ ಸಚಿವರು, ಶಾಸಕರು ಹಾಗೂ ವಿಧಾನಪರಿಷತ್ ಸದಸ್ಯರನ್ನು ಹಂಚಲಾಗುವುದು. ಶಾಸಕರು, ಪರಿಷತ್ ಸದಸ್ಯರು ಮೈಕ್ರೋ ಲೆವೆಲ್‌ನಲ್ಲಿ ಕಾರ್ಯನಿರ್ವಹಿಸಬೇಕು ಎನ್ನುವ ಸೂಚನೆ ನೀಡಲಿದ್ದಾರೆ ಎಂದು ತಿಳಿದುಬಂದಿದೆ.

ಮುಸ್ಲಿಮರೊಂದಿಗೆ ಜಮೀರ್ ಮಾತುಕತೆ

ದಾವಣಗೆರೆ ದಕ್ಷಿಣದಲ್ಲಿ ಮುಸ್ಲಿಮರಿಗೆ ಟಿಕೆಟ್ ನೀಡದ ವಿಷಯಕ್ಕೆ ಸಚಿವ ಜಮೀರ್, ಪರಿಷತ್ ಸದಸ್ಯ ಅಬ್ದುಲ್ ಜಬ್ಬರ್ ಸೇರಿ ಹಲವು ನಾಯಕರು ತಮ್ಮ ಬೇಸರವನ್ನು ವ್ಯಕ್ತಪಡಿಸಿದ್ದರು. ಬುಧವಾರ ನಡೆಯಲಿರುವ ಶಾಸಕಾಂಗ ಪಕ್ಷದ ಸಭೆಯಲ್ಲಿ ಯಾವ ರೀತಿಯಲ್ಲಿ ಮಾತನಾಡಬೇಕು? ಮುಂದಿನ ಬೇಡಿಕೆಗಳು ಏನಿರಬೇಕು ಎನ್ನುವ ಬಗ್ಗೆ ಚರ್ಚಿಸಲು ಮಂಗಳವಾರ ವಿಧಾನಸೌಧದಲ್ಲಿರುವ ಕಾಂಗ್ರೆಸ್ ಶಾಸಕಾಂಗ ಪಕ್ಷದ ಕೊಠಡಿಯಲ್ಲಿ ಚರ್ಚೆ ನಡೆಸಿದ್ದಾರೆ. ಈ ಸಭೆಯಲ್ಲಿ, ಸಚಿವ ಜಮೀರ್, ಶಾಸಕ ರಿಜ್ವಾನ್ ಅರ್ಷದ್, ಎನ್.ಎ.ಹ್ಯಾರೀಸ್, ತನ್ವೀರ್ ಸೇಠ್ ಸೇರಿದಂತೆ ಮುಸ್ಲಿಂ ಜನಪ್ರತಿನಿಧಿಗಳು ಭಾಗವಹಿಸಿದ್ದರು.

ಸೊಂಪಾದ ಪುಟಗಳು

ವಿರೋಧಿ ಕೂಗಿಗೆ ಸಾಂತ್ವನವನ್ನಷ್ಟೇ ಹೇಳಬಹುದು!
ಜನಪಥ
ರಾಘವಶರ್ಮ ನಿಡ್ಲೆ 6

ಗ್ಯಾರಂಟಿ ಬೇಡ ಎನ್ನುವ ತಾಕತ್ತು ಯಾರಿಗಿದೆ ?
ಲೋಕಮತ
ಲೋಕೇಶ್ ಕಾಯರ್ಗ 7

ದಾರಿದೀಪೋಕ್ತಿ

ನೀವು ಸುಶಿಕ್ಷಿತರೋ, ಅಶಿಕ್ಷಿತರೋ ಅದು ಮುಖ್ಯವಲ್ಲ, ಆದರೆ ಬೇರೆಯವರನ್ನು ಅಗೌರವದಿಂದ, ಒರಟಾಗಿ ನಡಿಸಿಕೊಳ್ಳುವ ಅಧಿಕಾರವಿಲ್ಲ. ನಯ-ವಿನಯ, ಗೌರವದ ನಡೆ ನಾವೇ ರೂಢಿಸಿಕೊಳ್ಳಬೇಕಾದ ಗುಣಗಳು. ಇವನ್ನು ಪತ್ಯ-ಪುಸ್ತಕದಿಂದ ಓದಿ ಕಲಿತುಕೊಳ್ಳಲಾಗುವುದಿಲ್ಲ. ನಾವೇ ಕಲಿತುಕೊಳ್ಳಬೇಕು.

ವಕ್ರತುಂಡೋಕ್ತಿ



ಯಾವತ್ತೂ ಬೇರೆಯವರ ಪ್ರಮಾದಗಳನ್ನು ನೋಡಿಯೇ ಪಾಠ ಕಲಿಯಬೇಕು, ಅದರಲ್ಲೂ ನಮ್ಮ ಸಲಹೆ ಪಡೆದಿರುತ್ತಾರಲ್ಲ ಅಂಥವರ ಪ್ರಮಾದಗಳಿಂದ.

ಬಿರ್ಲಾ-ಟೈಮ್ಸ್ ತೆಕ್ಕೆಗೆ ಆರ್‌ಸಿಬಿ

ಬೆಂಗಳೂರು: ಐಪಿಎಲ್‌ನ ಅತ್ಯಂತ ಜನಪ್ರಿಯ ಫ್ರಾಂಚೈಸಿ ಆರ್‌ಸಿಬಿಯನ್ನು ಆದಿತ್ಯ ಬಿರ್ಲಾ ಗ್ರೂಪ್ ಮತ್ತು ಟೈಮ್ಸ್ ಆಫ್ ಇಂಡಿಯಾ ನೇತೃತ್ವದ ಒಕ್ಕೂಟವು ಖರೀದಿಸಿದೆ. 16,706 ಕೋಟಿ ರು. (1.78 ಬಿಲಿಯನ್ ಡಾಲರ್) ಮೊತ್ತಕ್ಕೆ ಖರೀದಿಸಲಾಗಿದೆ ಎಂದು ಹೇಳಲಾಗಿದೆ. ಮಾಜಿ ರಣಜಿ ಆಟಗಾರ, 28 ವರ್ಷದ ಆರ್ಯಮಾನ್ ವಿಕ್ರಮ್ ಬಿರ್ಲಾ ಈಗ ಜಗತ್ತಿನ ಅತ್ಯಂತ ಜನಪ್ರಿಯ ಕ್ರೀಡಾ ಫ್ರಾಂಚೈಸಿಗಳಲ್ಲಿ ಒಂದಾದ ಆರ್‌ಸಿಬಿಯ ಹೊಸ ಮುಖ್ಯಸ್ಥ ಎನಿಸಿಕೊಂಡಿದ್ದಾರೆ!

ಮಾಜಿ ಶಾಸಕನ ಪುತ್ರ ಕಗ್ಗೊಲೆ

ಧಾರವಾಡ: ತಾಲೂಕಿನ ರಾಮಾಪುರ ಬಳಿ ಮಂಗಳವಾರ ಮಧ್ಯಾಹ್ನ ಬೆಚ್ಚಿಬೀಳಿಸುವ ಘಟನೆಯೊಂದು ನಡೆದಿದೆ. ಬೆಳಗಾವಿ ಜಿಲ್ಲೆಯ ಬೈಲಹೊಂಗಲ ಕ್ಷೇತ್ರದ ಮಾಜಿ ಶಾಸಕ ಬಾಬುರಾವ್ ಬೋಳಶೆಟ್ಟಿ ಅವರ ಪುತ್ರ ರಾಜು ಬೋಳಶೆಟ್ಟಿ (53) ಕಾರಿನಲ್ಲೇ ಸುಟ್ಟು ಕರಕಲಾದ ಸ್ಥಿತಿಯಲ್ಲಿ ಪತ್ತೆಯಾಗಿದ್ದಾರೆ. ಮೇಲ್ನೋಟಕ್ಕೆ ಇದು ಪೂರ್ವಯೋಜಿತ ಕೊಲೆ ಎಂದು ಶಂಕಿಸಲಾಗಿದ್ದು, ಜಿಲ್ಲಾದ್ಯಂತ ಭಾರೀ ಸಂಚಲನ ಮೂಡಿಸಿದೆ. ತಾಲೂಕಿನ ರಾಮಾಪುರ ಗ್ರಾಮದ ಸಮೀಪವಿರುವ ರೈಲ್ವೆ ಟ್ರ್ಯಾಕ್ ಪಕ್ಕದ ದಟ್ಟ ಅರಣ್ಯ ಹಾಗೂ ನಿರ್ಜನ ಪ್ರದೇಶದಲ್ಲಿ ಮಧ್ಯಾಹ್ನ ಸುಮಾರು 2:30ರ ಸುಮಾರಿಗೆ ಕಾರೊಂದು ಹೊತ್ತಿ ಉರಿಯುತ್ತಿರುವುದನ್ನು ಗಮನಿಸಿದ ಸ್ಥಳೀಯರು ಕೂಡಲೇ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ.

ರಾಜ್ಯ ಸರಕಾರ ತರಲು ಹೊರಟಿರುವ ಒಳಮೀಸಲನ್ನು ವಿರೋಧಿಸಿ ಕರ್ನಾಟಕ ಮೀಸಲಾತಿ ಸಂರಕ್ಷಣಾ ಒಕ್ಕೂಟ ಬೆಂಗಳೂರಿನಲ್ಲಿ ಮಂಗಳವಾರ ನಡೆಸಿದ ಪ್ರತಿಭಟನೆಯಲ್ಲಿ ಸಾವಿರಾರು ಜನ ಭಾಗವಹಿಸಿದ್ದರು. ಸಚಿವ ಕೆ.ವೆಂಕಟೇಶ್‌ಗೆ ಬೋವಿ ಗುರು ಪೀಠದ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ ಸಮುದಾಯದ ಹಕ್ಕೊತ್ತಾಯ ಪತ್ರ ನೀಡಿದರು. ಸಚಿವ ಡಿ. ಸುಧಾಕರ್, ಮಾಜಿ ಸಚಿವ ಅರವಿಂದ ಲಿಂಬಾವಳಿ, ಸರ್ದಾರ್ ಸೇವಲಾಲ್ ಸ್ವಾಮೀಜಿ ಇದ್ದರು.

ಜಲಜೀವನ್ ಮಿಷನ್ ಹಣವನ್ನು ರಾಜ್ಯ ಪೂರ್ಣ ಬಳಸಿಕೊಂಡಿಲ್ಲ

ಜೆಜೆಎಂ ಹಣ ಸದ್ಬಳಕೆಯಾಗಿಲ್ಲ: ಸಿಎಜಿ

ಕಳೆದ ವರ್ಷ 24,819 ಕೋಟಿ ರು.ನಲ್ಲಿ ಸ್ವಲ್ಪ ಬಳಕೆ, ಬಾಕಿ ವಾಪಸ್

ವಿಧಾನಸಭೆ: ಜಿಎಸ್‌ಟಿ ಸೇರಿದಂತೆ ಇತರೆ ಮೂಲಗಳಿಂದ ಕೇಂದ್ರ ಸರಕಾರ ನಮಗೆ ಸರಿಯಾಗಿ ಪಾಲು ನೀಡುತ್ತಿಲ್ಲ ಎಂಬ ರಾಜ್ಯ ಸರಕಾರದ ಆರೋಪ ಸರಿಯಲ್ಲ ಎಂಬ ಸಂಗತಿ ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಜಲ ಜೀವನ್ ಮಿಷನ್ ಅನುಷ್ಠಾನದ ಕಾರ್ಯನಿರ್ವಹಣಾ ವರದಿಯಲ್ಲಿ ಬಹಿರಂಗಗೊಂಡಿದೆ.

ಯೋಜನೆಯಲ್ಲಿ ಹಿಂದಿನ ಹಣಕಾಸು ವರ್ಷದಲ್ಲಿ ಬಿಡುಗಡೆಯಾದ ನಿಧಿಯನ್ನು ಬಳಸಿಕೊಳ್ಳಲು ಸಾಧ್ಯವಾಗದ ಕಾರಣ ಕೇಂದ್ರದಿಂದ ಬಿಡುಗಡೆಯಾದ 24819 ಕೋಟಿ ರು. ಹಂಚಿಕೆಯಲ್ಲಿ ರಾಜ್ಯವು 11189 ಕೋಟಿ ರು.(ಶೇ.45) ಪಡೆಯಲಷ್ಟೇ ಶಕ್ತವಾಗಿದೆ. ಇದಕ್ಕೆ ಕಾರಣ ಕಳಪೆ ನಿಧಿಯ ಬಳಕೆ, ಸಂಸ್ಥೆಗಳು ಹಾಗೂ ಪ್ರಾಧಿಕಾರಗಳ ಕಾರ್ಯವೈಖರಿಯಲ್ಲಿ ಕೊರತೆ ಕಂಡು ಬಂದಿರುವುದರಿಂದ, ಈ ಹಣ ವಾಪಸಾಗಿದೆ ಎಂದು ತಿಳಿದು ಬಂದಿದೆ. →10

ಉಪಚುನಾವಣೆ ಕಾರಣ ವಿಧಾನಸಭೆ 1 ದಿನ ಮೊದಲೇ ಅಂತ್ಯ

ಇಂದೇ ಬಜೆಟ್ ಅಧಿವೇಶನ ಕೊನೆ

ಇಂದು ಮುಖ್ಯಮಂತ್ರಿ ಉತ್ತರ, ಪರಿಷತ್ ಗುರುವಾರ ಮುಕ್ತಾಯ

ಬೆಂಗಳೂರು: ನಾಮಪತ್ರ ಹಿಂಪಡೆಯಲು ಗುರುವಾರ ಕೊನೆಯ ದಿನವಾಗಿರುವುದರಿಂದ, ಆ ದಿನದಿಂದ ಉಪಸಮರದ ಕಾವು ಜೋರಾಗಲಿದೆ. ಇದಕ್ಕೆ ಪೂರಕವಾಗಿ ವಿಧಾನಸಭೆ ಬಜೆಟ್ ಅಧಿವೇಶನವನ್ನು ನಿಗದಿಗಿಂತ ಒಂದು ದಿನ ಮೊದಲೇ ಅಂದರೆ ಬುಧವಾರವೇ ಅಂತಿಮಗೊಳಿಸಲು ರಾಜ್ಯ ಸರಕಾರ ತೀರ್ಮಾನಿಸಿದೆ.

ಈ ಹಿಂದೆ 27ರವರೆಗೆ ಬಜೆಟ್ ಅಧಿವೇಶನ ನಡೆಸಲು ತೀರ್ಮಾನಿಸಲಾಗಿತ್ತು. ಆದರೆ ರಾಮನವಮಿಯ ಕಾರಣಕ್ಕೆ 26ಕ್ಕೆ ಮುಗಿಸುವಂತೆ ಮೊದಲ ಬಿಎಸಿ ಸಭೆಯಲ್ಲಿ ಬಿಜೆಪಿಗರು ಮನವಿ ಮಾಡಿದ್ದರು. ಮಂಗಳವಾರ ನಡೆದ ಕಲಾಪ ಸಲಹಾ ಸಮಿತಿ ಸಭೆಯಲ್ಲಿ ಬುಧವಾರಕ್ಕೇ ಮುಕ್ತಾಯಗೊಳಿಸುವ ಸಿಎಂ, ಡಿಸಿಎಂ ಸಲಹೆಯಂತೆ ಈ ನಿರ್ಧಾರ ಮಾಡಲಾಗಿದೆ. ವಿಧಾನಪರಿಷತ್ ಗುರುವಾರದ ತನಕ ನಡೆಯಲಿದೆ.

ಬಜೆಟ್ ಹಾಗೂ ಬೇಡಿಕೆಗಳ ಮೇಲೆ ನಡೆದ ಚರ್ಚೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಬುಧವಾರ ಉಭಯ ಸದನಗಳಲ್ಲೂ ಉತ್ತರ ನೀಡುವ ಸಾಧ್ಯತೆಯಿದೆ. ಅನಂತರ ಸಂಜೆಯ ವೇಳೆಗೆ ಕಲಾಪವನ್ನು ಮುಂದೂಡುವ ಚರ್ಚೆಗಳಾಗಿವೆ. ರಾಜ್ಯದಲ್ಲಿ ಎರಡು ಕ್ಷೇತ್ರಗಳಿಗೆ ಉಪಚುನಾವಣೆ ಘೋಷಣೆಯಾಗಿದೆ. ಅಲ್ಲಿಗೆ ಪ್ರಚಾರಕ್ಕೆ ತೆರಳುವ ಒತ್ತಡ ನಾಯಕರಿಗಿದೆ. ಹೀಗಾಗಿ ಆತುರಾತುರವಾಗಿ ಕಲಾಪವನ್ನು ಮೊಟಕುಗೊಳಿಸಲಾಗುತ್ತಿದೆ ಎಂದು ತಿಳಿದುಬಂದಿದೆ.

ಸದನ ನಿಗದಿಯಂತೆ ಮುಗಿಸಲು ಮನವಿ: ಅಧಿವೇಶನವನ್ನು ಒಂದು ದಿನ ಮೊದಲೇ ಮುಗಿಸಬೇಕು ಎನ್ನುವ ವಿಷಯ ವಿಧಾನಸಭಾ ಕಲಾಪ ಸಮಿತಿ ಸಭೆಯಲ್ಲಿ ಪ್ರಸ್ತಾಪವಾಗುತ್ತಿದ್ದಂತೆ, ಪ್ರತಿಪಕ್ಷ ನಾಯಕ ಆರ್.ಅಶೋಕ್ ಅವಧಿಗೂ ಮೊದಲು ಮುಗಿಸಬಾರದು. →10

ಈ ಹಿಂದೆ ಮಾ.27ರವರೆಗೆ ಅಧಿವೇಶನ ನಡೆಸಲು ಉದ್ದೇಶಿಸಲಾಗಿತ್ತು. ಆದರೆ ಉಪಚುನಾವಣೆ ಹಿನ್ನೆಲೆಯಲ್ಲಿ ನಾಯಕರು ಪ್ರಚಾರಕ್ಕೆ ತೆರಳುತ್ತಿರುವುದರಿಂದ ಬುಧವಾರವೇ ಅಂತಿಮಗೊಳಿಸಲು ತೀರ್ಮಾನಿಸಲಾಗಿದೆ. ಈ ಬಗ್ಗೆ ವಿಧಾನಸಭೆ ಕಲಾಪ ಸಲಹಾ ಸಮಿತಿ ಸಭೆಯಲ್ಲಿ ತೀರ್ಮಾನಿಸಲಾಗಿದೆ. ಆದ್ದರಿಂದ ಬುಧವಾರವೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಜೆಟ್ ಮೇಲಿನ ಚರ್ಚೆಗೆ ಉತ್ತರಿಸಲಿದ್ದಾರೆ.

- ಯು.ಟಿ. ಖಾದರ್, ವಿಧಾನಸಭಾಧ್ಯಕ್ಷ

ಫನ್‌ತರಂಗ

- ರಘುಪತಿ ಶೃಂಗೇರಿ -

ಇನ್ಮುಂದೆ ಶಾಲಾ ಶಿಕ್ಷಕರೇ ಮೊಟ್ಟೆ ಖರೀದಿಸಿ, ಬೇಯಿಸಿ, ಸುಲಿದು ಮಕ್ಕಳಿಗೆ ಕೊಡಬೇಕು
– ಸರ್ಕಾರ
ಸುದ್ದಿ

ಸುಪ್ರೀಂ ಕೋರ್ಟ್ ಐತಿಹಾಸಿಕ ತೀರ್ಪು | ಜಾತಿನಿಂದನೆ ದೂರು ಸಲ್ಲಿಸಿದ್ದ ಪಾದ್ರಿ, ಆನಂದ್ ಅರ್ಜಿ ವಜಾ

ಹಿಂದೂ, ಸಿಖ್, ಬೌದ್ಧ ಧರ್ಮ ಬಿಟ್ಟು ಅನ್ಯಮತಗಳಿಗೆ ಮತಾಂತರಗೊಂಡರೆ ಎಸ್‌ಸಿಎಸ್‌ಟಿ ಸೌಲಭ್ಯ ಸಿಗಲ್ಲ

ಕ್ರೈಸ್ತರಾಗಿ ಮತಾಂತರಗೊಂಡರೆ ಪರಿಶಿಷ್ಟ ಸ್ಥಾನ ರದ್ದು

ದೆಹಲಿ: ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಗಳ (ಎಸ್‌ಸಿಎಸ್‌ಟಿ) ಸ್ಥಾನಮಾನದ ಕುರಿತು ಸುಪ್ರೀಂ ಕೋರ್ಟ್ ಮಂಗಳವಾರ ಐತಿಹಾಸಿಕ ತೀರ್ಪು ಪ್ರಕಟಿಸಿದೆ. ಎಸ್‌ಸಿ, ಎಸ್‌ಟಿಗಳು ಹಿಂದೂ, ಸಿಖ್, ಬೌದ್ಧ ಧರ್ಮ ಹೊರತು ಪಡಿಸಿ ಬೇರೆ ಯಾವುದೇ ಧರ್ಮಗಳಿಗೆ ಮತಾಂತರ ಗೊಂಡರೇ, ಅವರು ಎಸ್‌ಸಿ, ಎಸ್‌ಟಿ ಸ್ಥಾನಮಾನ ಕಳೆದುಕೊಳ್ಳುತ್ತಾರೆ. ಅವರು ಪರಿಶಿಷ್ಟ ಜಾತಿ, ಪಂಗಡಗಳ ಜಾತಿ ದೌರ್ಜನ್ಯ ನಿಗ್ರಹ ಕಾಯ್ದೆಯಡಿ ರಕ್ಷಣೆ ಪಡೆಯಲು ಸಾಧ್ಯವಿಲ್ಲ ಎಂದು ನ್ಯಾಯಪೀಠ ಹೇಳಿದೆ.

ಆಂಧ್ರಪ್ರದೇಶ ಹೈಕೋರ್ಟ್ 2025ರ ಮೇ ತಿಂಗಳಲ್ಲಿ ನೀಡಿದ್ದ ತೀರ್ಪನ್ನು ಪ್ರಶ್ನಿಸಿ, ಪಾದ್ರಿ ಚಿಂತದಾ ಆನಂದ್ ಎಂಬುವವರು ಸಲ್ಲಿಸಿದ್ದ ಮೇಲ್ಮನವಿ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಪಿ.ಕೆ.ಮಿಶ್ರಾ ಮತ್ತು ಮನಮೋಹನ್ ಅವರಿದ್ದ ದ್ವಿಸದಸ್ಯ ಪೀಠವು ಈ ತೀರ್ಪು ಪ್ರಕಟಿಸಿದೆ. ಜಾತಿಭೇದವಿಲ್ಲದ ಅನ್ಯ ಧರ್ಮವನ್ನು ಪ್ರತಿಪಾದಿಸುವ ಯಾರನ್ನೂ ಪರಿಶಿಷ್ಟ ಜಾತಿ ಎಂದು ಪರಿಗಣಿಸಲಾಗುವುದಿಲ್ಲ ಎಂದು ನ್ಯಾಯಪೀಠ ಹೇಳಿದೆ.

ಹಿಂದೂ ಧರ್ಮ, ಸಿಖ್ ಅಥವಾ ಬೌದ್ಧ ಧರ್ಮವನ್ನ ಪ್ರತಿಪಾದಿಸುವ ಪರಿಶಿಷ್ಟ ಜಾತಿ (ಎಸ್‌ಸಿ) ವ್ಯಕ್ತಿಯು ಬೇರೆ ಧರ್ಮಕ್ಕೆ ಮತಾಂತರಗೊಂಡರೆ, ಅವರ ಪರಿಶಿಷ್ಟ ಜಾತಿ ಸ್ಥಾನಮಾನವನ್ನು ತಕ್ಷಣವೇ ಮತ್ತು ಸಂಪೂರ್ಣವಾಗಿ ರದ್ದುಗೊಳಿಸಲಾಗುತ್ತದೆ. 1950ರ ಸಂವಿಧಾನ (ಪರಿಶಿಷ್ಟ ಜಾತಿಗಳು) ಆದೇಶವು ಇದನ್ನು ಸ್ಪಷ್ಟಪಡಿಸಿದೆ. ಈ ಆದೇಶದ ಅಡಿಯಲ್ಲಿ ನಿಷೇಧವು ಸಂಪೂರ್ಣವಾಗಿ ಜಾರಿಯಲ್ಲಿದೆ. 1950ರ ಆದೇಶದ ಷರತ್ತು 3ರಲ್ಲಿ ನಿರ್ದಿಷ್ಟಪಡಿಸಿದ ಧರ್ಮಗಳನ್ನು ಹೊರತುಪಡಿಸಿ ಯಾವುದೇ ಧರ್ಮವನ್ನು ಅಳವಡಿಸಿಕೊಳ್ಳುವುದರಿಂದ, ಜನ್ಮ ಸ್ಥಾನಮಾನವನ್ನು ಲೆಕ್ಕಿಸದೆ, ಪರಿಶಿಷ್ಟ ಜಾತಿ ಸ್ಥಾನಮಾನವನ್ನು ತಕ್ಷಣವೇ ಆತ ಕಳೆದುಕೊಳ್ಳುತ್ತಾನೆ. ಹೀಗಾಗಿ ಕ್ರೈಸ್ತ ಧರ್ಮಕ್ಕೆ ಮತಾಂತರಗೊಂಡ ದಲಿತ ವ್ಯಕ್ತಿಯು ಎಸ್‌ಸಿ/ಎಸ್‌ಟಿ ದೌರ್ಜನ್ಯ ತಡೆ ಕಾಯ್ದೆ ಉಲ್ಲಂಘನೆಯನ್ನು ಪ್ರತಿಪಾದಿಸಲು ಸಾಧ್ಯವಿಲ್ಲ ಎಂದು ನ್ಯಾಯಪೀಠ ಸ್ಪಷ್ಟಪಡಿಸಿದೆ. →10

ಹಿನ್ನೆಲೆಯೇನು?

- ಪ್ರಾರ್ಥನೆ ನಡೆಸುತ್ತಿದ್ದಾಗ, ಅಕ್ಕಲ ರಾಮಿರೆಡ್ಡಿ ಹಲ್ಲೆ, ಜಾತಿನಿಂದನೆ: ಪ್ಯಾಸ್ಟರ್ ಆನಂದ್ ದೂರು
- ಎಸ್‌ಸಿ/ಎಸ್‌ಟಿ ದೌರ್ಜನ್ಯ ತಡೆ ಕಾಯ್ದೆಯಡಿ ದೂರು ದಾಖಲು, ಎಫ್‌ಐಆರ್ ದಾಖಲು
- ಆನಂದ್ ಕ್ರೈಸ್ತರಾಗಿದ್ದಾರೆ, ಅವರಿಗೆ ಎಸ್‌ಸಿಎಸ್‌ಟಿ ಕಾಯ್ದೆ ರಕ್ಷಣೆ ಸಾಧ್ಯವಿಲ್ಲ: ರಾಮಿರೆಡ್ಡಿ ಅರ್ಜಿ
- ಆಂಧ್ರ ಹೈಕೋರ್ಟ್‌ನಲ್ಲಿ ರಾಮಿರೆಡ್ಡಿ ವಿರುದ್ಧದ ಎಫ್‌ಐಆರ್ ರದ್ದು, ಸುಪ್ರೀಂ ಕೋರ್ಟ್‌ನಲ್ಲಿ ಆನಂದ್ ಮೇಲ್ಮನವಿಗೂ ಸೋಲು



7.12 ಲಕ್ಷ ರು. ಮೌಲ್ಯದ 285 ಕೆ.ಜಿ. ರಕ್ತ ಚಂದನ ಜಪ್ತಿ

ಮಾದಕ ದ್ರವ್ಯ ನಿಗ್ರಹ ದಳ ಭರ್ಜರಿ ಬೇಟೆ

ಬೆಂಗಳೂರು: ಅಕ್ರಮವಾಗಿ ರಕ್ತ ಚಂದನ ತುಂಡುಗಳನ್ನು ಮಾರಾಟ ಮಾಡುತ್ತಿದ್ದ ವ್ಯಕ್ತಿಯನ್ನು ನಗರ ಪೊಲೀಸರು ಬಂಧಿಸಿದ್ದು,ಆರೋಪಿಯಿಂದ 285 ಕೆ.ಜಿ. ರಕ್ತ ಚಂದನದ ತುಂಡುಗಳನ್ನು ವಶಪಡಿಸಿಕೊಳ್ಳಲಾಗಿದ್ದು, ಇದರ ಮೌಲ್ಯ 7.12 ಲಕ್ಷ ರು. ಎಂದು ಅಂದಾಜಿಸಲಾಗಿದೆ.

ಮಾರ್ಚ್ 11ರಂದು ಮಾದಕ ದ್ರವ್ಯ ನಿಗ್ರಹ ದಳದ ಪೊಲೀಸರಿಗೆ ಖಚಿತ ಮಾಹಿತಿ ಮೇರೆಗೆ ಲಭ್ಯವಾಗಿತ್ತು. ಹಳೇ ವಿಮಾನ ನಿಲ್ದಾಣ ರಸ್ತೆಯ ಸಿಲ್ಕ್ ಬೋರ್ಡ್ ಬಸ್ ನಿಲ್ದಾಣದ ಬಳಿ ಅರಣ್ಯ ಸರ್ವೀಸ್ ರಸ್ತೆಯಲ್ಲಿ ಅಪರಿಚಿತನೊಬ್ಬ ಟಾಟಾ ಏಸ್ ವಾಹನದಲ್ಲಿ ರಕ್ತ ಚಂದನದ ತುಂಡುಗಳನ್ನು ಮಾರಾಟ ಮಾಡಲು ಬರುತ್ತಾನೆ ಎಂಬ ಮಾಹಿತಿ ಮೇರೆಗೆ ದಾಳಿ ನಡೆಸಿದ

ವಶಕ್ಕೆ ಪಡೆದ ರಕ್ತಚಂದನದ ತುಂಡುಗಳು.

ಪೊಲೀಸರು ಆರೋಪಿಯನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಬಂಧಿತನನ್ನು 10 ಕೆ.ಜಿ. ತೂಕದ 3 ಕೆ ರಕ್ತ ಚಂದನದ ತುಂಡುಗಳ ಸಮೇತ ಠಾಣೆಗೆ ಕರೆದೊಯ್ಯಲಾಯಿತು. ಆತನ ವಿರುದ್ಧ ಕೆ.ಎಫ್. ಕಾಯಿದೆ (ಕರ್ನಾಟಕ ಅರಣ್ಯ ಕಾಯಿದೆ) ಮತ್ತು ಕಳ್ಳತನ ಪ್ರಕರಣ ದಾಖಲಿಸಲಾಗಿದೆ.

275 ಕೆ.ಜಿ. ತೂಕದ ರಕ್ತ ಚಂದನ: ಮಾರ್ಚ್ 12ರಂದು ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ 14 ದಿನಗಳ ಪೊಲೀಸ್ ಕಸ್ಟಡಿಗೆ ಪಡೆಯಲಾಗಿತ್ತು. ಪೊಲೀಸ್ ಕಸ್ಟಡಿಯಲ್ಲಿದ್ದ ಆರೋಪಿಯನ್ನು ವಿಚಾರಣೆಗೊಳಪಡಿಸಿದಾಗ, ಹೆಚ್ಚಿನ ಹಣ ಗಳಿಸುವ ಉದ್ದೇಶದಿಂದ ರಕ್ತ ಚಂದನದ ಮರದ ತುಂಡುಗಳನ್ನು ಅಕ್ರಮವಾಗಿ ಸಂಗ್ರಹಿಸಿ ಮಾರಾಟ ಮಾಡಲು ಯತ್ನಿಸುತ್ತಿರುವುದಾಗಿ ಒಪ್ಪಿಕೊಂಡಿದ್ದಾನೆ. ಅಲ್ಲದೆ, ಮಾರಾಟ ಮಾಡುವ ಸಲುವಾಗಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಆನೇಕಲ್ ತಾಲೂಕಿನ ಶ್ಯಾನುಭೋಗನಹಳ್ಳಿ ಬಳಿಯ ಮಸೀದಿ ಪಕ್ಕದ ಖಾಲಿ ಜಾಗದಲ್ಲಿ 275 ಕೆ.ಜಿ. ತೂಕದ 13 ರಕ್ತ ಚಂದನದ ತುಂಡುಗಳನ್ನು ಇಟ್ಟಿರುವುದಾಗಿ ಮಾಹಿತಿ ನೀಡಿದ್ದ.

ಆರೋಪಿಗಳ ಪತ್ತೆಗೆ ಪೊಲೀಸ್ ಬಲೆ: ಆರೋಪಿ ನೀಡಿದ ಮಾಹಿತಿ ಆಧಾರದ ಮೇಲೆ ಮಾರ್ಚ್ 16ರಂದು ಆತ ತಿಳಿಸಿದ ಸ್ಥಳದಿಂದ 275 ಕೆ.ಜಿ. ರಕ್ತ ಚಂದನದ 13 ತುಂಡುಗಳನ್ನು ವಶಪಡಿಸಿಕೊಳ್ಳಲಾಗಿದ್ದು, ಇವುಗಳ ಒಟ್ಟು ಮೌಲ್ಯ 7.12 ಲಕ್ಷ ರು. ಎಂದು ಅಂದಾಜಿಸಲಾಗಿದೆ. ಮಾರ್ಚ್ 18ರಂದು ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಯಿತು. ನ್ಯಾಯಾಲಯವು ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ. ಈ ಪ್ರಕರಣದಲ್ಲಿ ಭಾಗಿಯಾದ ಇತರ ಆರೋಪಿಗಳು ತಲೆಮರೆಸಿಕೊಂಡಿದ್ದು, ಅವರ ಪತ್ತೆಗಾಗಿ ಪೊಲೀಸರು ಬಲೆ ಬೀಸಿದ್ದಾರೆ. ಈ ಕಾರ್ಯಾಚರಣೆಯನ್ನು ಆಗ್ನೇಯ ವಿಭಾಗದ ಉಪ ಪೊಲೀಸ್ ಆಯುಕ್ತೆ ಮೊಹಮ್ಮದ್ ಸುಜೀತಾ ಎಂ.ಎ. ಅವರ ಮಾರ್ಗದರ್ಶನದಲ್ಲಿ, ಮಾದಕ ದ್ರವ್ಯ ನಿಗ್ರಹ ದಳದ ಸಹಾಯಕ ಪೊಲೀಸ್ ಆಯುಕ್ತ ವಾಸುದೇವ್ ಅವರ ನೇತೃತ್ವದಲ್ಲಿ, ಮಾದಕ ದ್ರವ್ಯ ನಿಗ್ರಹ ಠಾಣೆಯ ಪೊಲೀಸ್ ಇನ್ಸ್‌ಪೆಕ್ಟರ್ ಎ.ಜೆ. ಮೊಹಮ್ಮದ್ ಮತ್ತು ಇತರ ಅಧಿಕಾರಿ ಹಾಗೂ ಸಿಬ್ಬಂದಿಯ ತಂಡವು ಯಶಸ್ವಿಯಾಗಿ ಭೇದಿಸಿದೆ.

11 ಕೋಟಿ ಮೌಲ್ಯದ ಮಾದಕ ವಸ್ತು ಜಪ್ತಿ

ಬೃಹತ್ ಡ್ರಗ್ಸ್ ಜಾಲ ಪತ್ತೆ

ಜಪ್ತಿ ಮಾಡಿಕೊಂಡ ಮಾದಕ ವಸ್ತುಗಳನ್ನು ನಗರ ಪೊಲೀಸ್ ಕಮಿಷನರ್ ಸೀಮಂತ್‌ಕುಮಾರ್ ಸಿಂಗ್ ಪರಿಶೀಲಿಸಿದರು.

ಬೆಂಗಳೂರು: ನಗರ ಪೊಲೀಸರು ಮಾದಕ ವಸ್ತುಗಳ ಮಾರಾಟ ಜಾಲವನ್ನು ಭೇದಿಸಿ ಐವರು ಆರೋಪಿಗಳನ್ನು ಬಂಧಿಸಿದ್ದಾರೆ. ಆರೋಪಿಗಳಿಂದ ಅಂದಾಜು 5.77 ಕೋಟಿ ರು. ಮೌಲ್ಯದ ಮಾದಕ ವಸ್ತುಗಳನ್ನು ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಸಿಸಿಬಿ ಮಾದಕ ದ್ರವ್ಯ ನಿಗ್ರಹ ದಳ, ಉಪ್ಪಾರಪೇಟೆ ಮತ್ತು ಕಾಡುಗೋಡಿ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಈ ಕಾರ್ಯಾಚರಣೆ ನಡೆಸಲಾಗಿದೆ. ಬಂಧಿತ ಆರೋಪಿಗಳು ಅಂತಾರಾಜ್ಯ ಮಟ್ಟದಲ್ಲಿ ಮಾದಕ ವಸ್ತುಗಳನ್ನು ಮಾರಾಟ ಮಾಡುತ್ತಿದ್ದರು ಎಂದು ಪೊಲೀಸರು ತಿಳಿಸಿದ್ದು, 3 ಕೆ.ಜಿ. 912 ಗ್ರಾಂ ಎಂಡಿಎಂಎ (ಎಂಡಿಎಂ), 343 ಕೆ.ಜಿ. 170 ಗ್ರಾಂ ಗಾಂಜಾ, ಒಂದು ಟಾಟಾ ಏಸ್ ಗೂಡ್ಸ್ ವಾಹನ ಮತ್ತು ಒಂದು ಮೊಬೈಲ್ ಫೋನನ್ನು ವಶಪಡಿಸಿ ಕೊಂಡಿದ್ದಾರೆ. ಈ ವಸ್ತುಗಳ ಮಾರುಕಟ್ಟೆ ಮೌಲ್ಯ 11.04 ಕೋಟಿ ರು. ಎಂದು ಅಂದಾಜಿಸಲಾಗಿದೆ.ಸಿಸಿಬಿ ಮಾದಕ ದ್ರವ್ಯ ನಿಗ್ರಹ ದಳದ ಅಧಿಕಾರಿಗಳಿಗೆ ಮೈಸೂರು ರಸ್ತೆಯ ನಾಯಂಡಹಳ್ಳಿ ಸಿಗ್ನಲ್ ಬಳಿ ಗಾಂಜಾ ಸಾಗಿಸುತ್ತಿರುವ ಬಗ್ಗೆ ಖಚಿತ ಮಾಹಿತಿ ಲಭಿಸಿತ್ತು. ಅದೇ ರೀತಿ, ಉಪ್ಪಾರಪೇಟೆ ಪೊಲೀಸ್ ಠಾಣಾ ವ್ಯಾಪ್ತಿಯ ಕೆ.ಆರ್. ಪುರಂ ಬಳಿ ಮತ್ತು ಕಾಡುಗೋಡಿ ಪೊಲೀಸ್ ಠಾಣಾ ವ್ಯಾಪ್ತಿಯ ಚನ್ನಸಂದ್ರ ಮುಖ್ಯ ರಸ್ತೆಯಲ್ಲಿ ಎಂಡಿಎಂಎ ಮತ್ತು ಗಾಂಜಾ ಮಾರಾಟ ಮಾಡುತ್ತಿರುವ ಬಗ್ಗೆ ಮಾಹಿತಿ ಬಂದಿತ್ತು. ಈ ಮಾಹಿತಿಯ ಆಧಾರದ ಮೇಲೆ, ಠಾಣಾಧಿಕಾರಿಗಳು ಎನ್‌ಡಿಪಿಎಸ್ ಕಾಯಿದೆಯಡಿ ಪ್ರಕರಣ ಗಳನ್ನು ದಾಖಲಿಸಿ, ದಾಳಿ ನಡೆಸಿದ್ದರು.

ಕಾಲೇಜು ವಿದ್ಯಾರ್ಥಿಗಳಿಗೆ ಮಾರಾಟ: ಪೊಲೀಸರು ಹೊರ ರಾಜ್ಯದ ಓರ್ವ ವ್ಯಕ್ತಿಯನ್ನು ಒಳಗೊಂಡಂತೆ ಒಟ್ಟು ಐವರು ಆರೋಪಿಗಳನ್ನು ಬಂಧಿಸಿದ್ದಾರೆ.

ಯಾವ ಠಾಣೆಯಲ್ಲಿ ಎಷ್ಟು ಜಪ್ತಿ?

ಸಿಸಿಬಿ ಮಾದಕ ದ್ರವ್ಯ ನಿಗ್ರಹ ದಳದಿಂದ 332 ಕೆ.ಜಿ. ಗಾಂಜಾ, 1 ಗೂಡ್ಸ್ ವಾಹನ, 1 ಮೊಬೈಲ್ ಫೋನ್ ಹಾಗೂ ಇವುಗಳ ಒಟ್ಟು ಮೌಲ್ಯ 3.32 ಕೋಟಿ ರು., ಉಪ್ಪಾರಪೇಟೆ ವ್ಯಾಪ್ತಿಯಲ್ಲಿ 3.9 ಕೆ.ಜಿ. ಎಂಡಿಎಂಎ (ಒಟ್ಟು ಮಾರುಕಟ್ಟೆ ಮೌಲ್ಯ 7.60 ಕೋಟಿ ರು.), ಕಾಡುಗೋಡಿ ವ್ಯಾಪ್ತಿಯಲ್ಲಿ 12 ಗ್ರಾಂ ಎಂಡಿಎಂಎ, 11 ಕೆ.ಜಿ. 170 ಗ್ರಾಂ ಗಾಂಜಾ ಸೇರಿ ಒಟ್ಟು 3.9 ಕೆ.ಜಿ. ಎಂಡಿಎಂಎ, 343 ಕೆ.ಜಿ. 170 ಗ್ರಾಂ ಗಾಂಜಾ, 1 ಗೂಡ್ಸ್ ವಾಹನ, 1 ಮೊಬೈಲ್ ಫೋನ್ ವಶಪಡಿಸಿಕೊಳ್ಳಲಾಗಿದೆ.

ವಿಚಾರಣೆ ವೇಳೆ, ಬಂಧಿತರು ವಿದೇಶಿ ಮೂಲದ ವ್ಯಕ್ತಿಯಿಂದ ಕಡಿಮೆ ಬೆಲೆಗೆ ಎಂಡಿಎಂಎ ಮತ್ತು ಗಾಂಜಾವನ್ನು ಖರೀದಿಸಿ, ಸಾರ್ವಜನಿಕರಿಗೆ ಮತ್ತು ಕಾಲೇಜು ವಿದ್ಯಾರ್ಥಿಗಳಿಗೆ ಮಾರಾಟ ಮಾಡುತ್ತಿರುವುದಾಗಿ ಒಪ್ಪಿಕೊಂಡಿದ್ದಾರೆ. ಈ ಕಾರ್ಯಾಚರಣೆಯಲ್ಲಿ ಭಾಗಿಯಾದ ಎಲ್ಲ ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದ್ದು, ನ್ಯಾಯಾಲಯವು ಅವರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ. ಅಪರಾಧ ವಿಭಾಗದ ಹೆಚ್ಚುವರಿ ಪೊಲೀಸ್ ಆಯುಕ್ತ ಸಿ.ಎಚ್. ಹಿಲ್ಮೆರಿ (ಐಪಿಎಸ್), ಉಪ ಪೊಲೀಸ್ ಆಯುಕ್ತ ರಾಜಾ ಇಮಾಮ್ ಕಾಸಿಂ, ಪಶ್ಚಿಮ ವಿಭಾಗದ ಉಪ ಆಯುಕ್ತ ಯತೀಶ್ ಮತ್ತು ವೈಟ್‌ಫೀಲ್ಡ್ ವಿಭಾಗದ ಉಪ ಆಯುಕ್ತ ಸೈದುಲು ಅಡಾವತ್ ಅವರ ಮಾರ್ಗದರ್ಶನದಲ್ಲಿ ಈ ಕಾರ್ಯಾಚರಣೆ ನಡೆಸಲಾಗಿದೆ.

ಹೈಕೋರ್ಟ್‌ಗೆ ರಣವೀರ್ ಸಿಂಗ್ ಪರ ವಕೀಲ ವಿವರಣೆ

ಕ್ಷಮೆ ಕೋರಿ ಅಫಿಡವಿಟ್ ಸಲ್ಲಿಕೆ

ಬೆಂಗಳೂರು: ಕಾಂತಾರ ಚಾಪ್ಟರ್-1 ಚಿತ್ರದ ದೈವಪಾತ್ರದ ಬಗ್ಗೆ ಅಪಮಾನಕಾರಿಯಾಗಿ ಮಾತನಾಡಿದ ಆರೋಪಕ್ಕೆ ಗುರಿಯಾಗಿರುವ ಬಾಲಿವುಡ್ ನಟ ರಣವೀರ್ ಸಿಂಗ್ ಪರ ಹಿರಿಯ ವಕೀಲ ಸಜನ್ ಪೂವಯ್ಯ ಅವರು ಕ್ಷಮೆಯಾಚಿಸಿ ಅಫಿಡವಿಟ್ ಸಲ್ಲಿಸಲಾಗುವುದು ಮತ್ತು ಚಾಮುಂಡಿ ಬೆಟ್ಟಕ್ಕೆ ಭೇಟಿ ನೀಡಲಾಗುವುದು ಎಂದು ಮಂಗಳವಾರ ಹೈಕೋರ್ಟ್‌ಗೆ ತಿಳಿಸಿದರು.

ಗೋವಾದಲ್ಲಿ ಈಚೆಗೆ ನಡೆದಿದ್ದ ಭಾರತೀಯ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ (ಐಎಫ್‌ಎಫ್‌ಐ) ಕಾಂತಾರ ಚಾಪ್ಟರ್-1 ಚಿತ್ರದ ಚಾಮುಂಡಿ ದೈವಕ್ಕೆ ಅಪಮಾನ ಮಾಡಿದ ಆರೋಪದ ಸಂಬಂಧ ದಾಖಲಾಗಿರುವ ಖಾಸಗಿ ದೂರು ಮತ್ತು ಅದರ ಮುಂದುವರಿದ ಭಾಗವಾಗಿ ಬೆಂಗಳೂರಿನ ಹೈಗ್ರೌಂಡ್ಸ್ ಠಾಣೆಯಲ್ಲಿ ದಾಖಲಾಗಿರುವ ಎಫ್‌ಐಆರ್ ರದ್ದುಪಡಿಸುವಂತೆ ಕೋರಿ ರಣವೀರ್ ಸಿಂಗ್ ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ನ್ಯಾಯಮೂರ್ತಿ ಎಂ ನಾಗಪ್ರಸನ್ನ ಅವರ ಏಕಸದಸ್ಯ ಪೀಠ ನಡೆಸಿತು.ದೂರುದಾರರ ಪರ ವಕೀಲ ಸಿಜಿ ಮಲೆಯಾಳಿ ಅವರು ರಣವೀರ್ ಸಿಂಗ್ ಟ್ವೀಟ್ ಮಾಡಿ ಕ್ಷಮೆ ಕೇಳಿದ್ದಾರೆ. ಆದರೆ, ಅದರಲ್ಲಿ ಪ್ರಾಮಾಣಿಕತೆ ಕಾಣುವುದಿಲ್ಲ. ಹೃದಯಪೂರ್ವಕವಾಗಿ ಅವರು ಕ್ಷಮೆಯಾಚಿಸಿಲ್ಲ. ಅವರ ಮ್ಯಾನೇಜರ್‌ಗಳು ಟ್ವೀಟ್ ಮಾಡಿದ್ದಾರೆ. ಚಾಮುಂಡಿ ದೈವವನ್ನು ಮಹಿಳಾ ದೆವ್ವ ಎಂದಿದ್ದಾರೆ. ಮೌಖಿಕವಾಗಿ

ದೈವಕ್ಕೆ ಅಪಮಾನ ಮಾಡಿರುವುದರಿಂದ ಅವರು ಮೌಖಿಕವಾಗಿ ಕ್ಷಮೆ ಕೋರಬೇಕು. ಚಾಮುಂಡಿ ಬೆಟ್ಟಕ್ಕೆ ಸಜನ್ ಪೂವಯ್ಯ ಅವರ ಜತೆ ಹೋಗಿ ರಣವೀರ್ ಅಲ್ಲಿಯೇ ಕ್ಷಮೆ ಕೋರಲಿ ಎಂದರು. ಅಲ್ಲದೇ, ಚಾಮುಂಡಿ ನಮಗೆ ನ್ಯಾಯ ಕೊಡಿಸುವ ದೇವತೆ. ನಾಗದೇವ (ನ್ಯಾ. ನಾಗಪ್ರಸನ್ನ ಅವರನ್ನು ಉಲ್ಲೇಖಿಸಿ) ರಣವೀರ್‌ಗೆ ರಕ್ಷಣೆ ನೀಡಿದ್ದಾರೆ ಎಂದು ಲಘು ದಾಟಿಯಲ್ಲಿ ಹೇಳಿದರು.

ಸೈಬರ್ ವಂಚಕರಿಂದ ಯೋಧ ಸಂಕಷ್ಟಕ್ಕೆ

ಬೆಂಗಳೂರು: ಸೈಬರ್ ವಂಚನೆಯಿಂದ ಸಂಕಷ್ಟಕ್ಕೆ ಸಿಲುಕಿ ಗಡಿ ಕಾಯುವ ಯೋಧ ಪರದಾಡುವಂತಾಗಿದೆ. ಇದೀಗ ಅಕೌಂಟ್ ಅನ್‌ಫ್ರೀಜ್ ಮಾಡುವಂತೆ ಬೆಂಗಳೂರು ಪೊಲೀಸರಿಗೆ ಮನವಿ ಮಾಡಿದ್ದಾರೆ. ಯೋಧ ಸುರೇಂದ್ರ ಚೌದರಿ ಅವರು ತಮ್ಮ ಟ್ವಿಟರ್ ಖಾತೆಯ ಮೂಲಕ ಬೆಂಗಳೂರು ಪೊಲೀಸರಿಗೆ ಮನವಿ ಮಾಡಿಕೊಂಡಿದ್ದಾರೆ. ತಾವು ಜಮ್ಮು ಕಾಶ್ಮೀರದ ರಿಮೋಟ್ ಕಂಟ್ರೋಲ್ ಏರಿಯಾದಲ್ಲಿ ಕೆಲಸ ಮಾಡುತ್ತಿದ್ದು, ಈ ಮೊದಲು ಸೈಬರ್ ವಂಚನೆ ಸಂಬಂಧ ಅಕೌಂಟ್ ಅನ್ನು ಫ್ರೀಜ್ ಮಾಡಲಾಗಿತ್ತು. ಇದೀಗ ಅನ್‌ಫ್ರೀಜ್ ಮಾಡಲು ಸೂಕ್ತ ದಾಖಲೆಗಳನ್ನು ತರುವಂತೆ ಉತ್ತರ ವಿಭಾಗದ ಸೆನ್ ಪೊಲೀಸರು ಮೆಸೇಜ್ ಮಾಡಿದ್ದಾರೆ. ಆದರೆ ಇದೀಗ ಕೆಲಸ ಬಿಟ್ಟು ಬರಲು ಆಗುತ್ತಿಲ್ಲ. ದಯವಿಟ್ಟು ಅಕೌಂಟ್ ಅನ್‌ಫ್ರೀಜ್ ಮಾಡಿ ಎಂದು ಕೋರಿದ್ದಾರೆ.

IN THE COURT OF THE HON'BLE XXVII ADDITIONAL CITY CIVIL AND SESSIONS JUDGE, AT BENGALURU (CCH-9)

O. S. No. 8071 OF 2024

BETWEEN : State Bank of India, Retail Assets Central Processing Centre (RACPC), Branch Code 18994 At Sy No.5/1, "Prestige Star" Next to Mother Dairy, Yelahanka, BENGALURU -560064
Rept., by its Chief Manager, Mr. Amrendra ...**PLAINTIFF**

AND : Mr. ALLEN JOSEPH. ...**DEFENDANT**

Notice to the Defendant under Order V Rule 20(1-A) Of CPC:

To : Mr Allen Joseph, R/at No.001, First Floor, PVR Elegance, Chikkabanasawadi Main Road, OMBR Layout, Bangalore -560043.

The plaintiff has instituted the above suit against you for the recovery of a total Sum of Rs.9,71,363/- (Rupees Nine Lakh Seventy-One Thousand Three Hundred Sixty-Three Only) as on 16.12.2022 along with Court costs and interest at 8% P.A. thereon till its realization. Therefore, you are hereby summoned to appear before this Hon'ble Court either in person or through a duly instructed advocate on **10.04.2026 at 11.A.M.** to answer the claim of the plaintiff. On your failure to appear before the Hon'ble Court on the aforesaid date the case will be decided EXPARTE.

Given under my hand and seal of the court on 18-03-2026, Bengaluru.

By Order of the Court
Sd/- Senior Sheristedar
City Civil Court, Bengaluru

Advocate for Plaintiff : Mr. G.M. RUDRASWAMY, Office at No.27, Akshya Complex, 2nd Cross, First Floor, Nagappa Street, Palace Guttahalli, BENGALURU -560003. Phone 99868 33635

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ ನನ್ನ ಕಕ್ಷಿದಾರರಾದ ಶ್ರೀ. ಗುರುಪ್ರಸಾದ್.ಕೆ, & ಶ್ರೀಮತಿ.ಕಾವ್ಯ.ಎನ್ ಕೋಂ ಶ್ರೀ.ಗುರುಪ್ರಸಾದ್.ಕೆ. ಇವರು ಈ ಕೆಳಕಂಡ ಷೆಡ್ಯೂಲ್‌ನಲ್ಲಿ ವಿವರಿಸಿರುವ ಸ್ಥಿರಾಸ್ತಿಯ ಮಾಲೀಕರಾಗಿದ್ದು ಇವರು ಮೈಸೂರು ಸರ್ಕಾರ ಹೊರಡಿಸಿದ 23/11/1972 ರ ಆದೇಶ ಸಂಖ್ಯೆ DPC 15 D.R.H ನ ಮೂಲ ಹಕ್ಕು ಪತ್ರವನ್ನು ಅವರು ಕಳೆದುಕೊಂಡಿದ್ದಾರೆ, ಇದನ್ನು ಬೆಂಗಳೂರು ಉತ್ತರ ತಾಲ್ಲೂಕು ತಹಶೀಲ್ದಾರ್ ಅವರು 30X30 ಅಡಿ ಅಳತೆಯ ಸೈಟ್ ಸಂಖ್ಯೆ 140 ಕ್ಕೆ ಸಂಬಂಧಿಸಿದಂತೆ ಶ್ರೀ.ಪಿ.ರಾಜಣ್ಣ ಮತ್ತು ಅವರ ಪತ್ನಿ ಶ್ರೀಮತಿ ರತ್ನಮ್ಮ ಅವರ ಪರವಾಗಿ ಸಹಿ ಮಾಡಿದ್ದಾರೆ. ಮತ್ತು ಈ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾರಾದರೂ ಸ್ವತ್ತಿನ ಮೇಲೆ ಸ್ವಾಧೀನವನ್ನು ಹೊಂದಿದ್ದರೆ, ಅದನ್ನು ಈ ದಿನಾಂಕದಿಂದ ನೋಟೀಸು ಪ್ರಕಟವಾದ ಏಳು ದಿನಗಳ ಒಳಗಾಗಿ ಕೆಳಸಹಿದಾರರಿಗೆ ತಲುಪಿಸಬೇಕೆಂದು ಈ ಮೂಲಕ ತಿಳಿಸಲಾಗಿದೆ.

ಷೆಡ್ಯೂಲ್ ಸ್ವತ್ತು

ಬೆಂಗಳೂರು ಉತ್ತರ ತಾಲ್ಲೂಕಿನ ಹೇರೋಹಳ್ಳಿ ಗ್ರಾಮ ಯಶವಂತಪುರ ಹೋಬಳಿಯಲ್ಲಿರುವ ನಿವೇಶನ ಸಂಖ್ಯೆ.140, ಖಾತಾ ಸಂಖ್ಯೆ.231, ಅಸೆಸ್ಮೆಂಟ್ ಸಂಖ್ಯೆ.67, ಖಾತಾ ಸಂಖ್ಯೆ.67/231 ಹೊಂದಿರುವ ಆಸ್ತಿಯ ಅಳತೆ: ಪೂರ್ವದಿಂದ ಪಶ್ಚಿಮಕ್ಕೆ: 27 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ: 29 ಅಡಿ, ಒಟ್ಟು ಅಳತೆ: 783 ಚದರ ಅಡಿ., ಈ ಸ್ವತ್ತಿಗೆ ಚಕ್ಕುಬಂದಿ:- ಪೂರ್ವಕ್ಕೆ : ನಿವೇಶನ ಸಂಖ್ಯೆ 143 ರಾಮು ಅವರಿಗೆ ಸೇರಿದ್ದು, ಪಶ್ಚಿಮಕ್ಕೆ : ನಿವೇಶನ ಸಂಖ್ಯೆ 139 ಜಯಮ್ಮ ಮತ್ತು ದೊಡ್ಡಮುದಪ್ಪ ಅವರಿಗೆ ಸೇರಿದ್ದು, ಉತ್ತರಕ್ಕೆ : ರಸ್ತೆ, ದಕ್ಷಿಣಕ್ಕೆ : ನಿವೇಶನ ಸಂಖ್ಯೆ 141 ಜಯಮ್ಮ ಅವರಿಗೆ ಸೇರಿದ್ದು,

ಎನ್. ಜಗದೀಶ್ ಕುಮಾರ್, ವಕೀಲರು
ನಂ.30/1, 2ನೇ ಮಹಡಿ, 7ನೇ ಕ್ರಾಸ್,
ಎನ್.ಆರ್. ಕಾಲೋನಿ ಹತ್ತಿರ ಬಸ್ ನಿಲ್ದಾಣ,
ಹೋಟೆಲ್ ದ್ವಾರಕ ಎದುರು, ಬೆಂಗಳೂರು-560019.

THIS IS A PUBLIC ANNOUNCEMENT FOR INFORMATION PURPOSES ONLY AND IS NOT A PROSPECTUS ANNOUNCEMENT AND DOES NOT CONSTITUTE AN INVITATION OR OFFER TO ACQUIRE, PURCHASE OR SUBSCRIBE TO SECURITIES UNDER THE SECURITIES AND EXCHANGE BOARD OF INDIA (ISSUE OF CAPITAL AND DISCLOSURE REQUIREMENTS) REGULATIONS, 2018, AS AMENDED ("SEBI ICDR REGULATIONS"). INITIAL PUBLIC OFFERING OF EQUITY SHARES ON THE MAIN BOARD OF BSE LIMITED ("BSE") AND NATIONAL STOCK EXCHANGE OF INDIA LIMITED ("NSE") (TOGETHER, THE "STOCK EXCHANGES") IN COMPLIANCE WITH CHAPTER II OF THE SEBI ICDR REGULATIONS. NOT FOR RELEASE, PUBLICATION OR DISTRIBUTION DIRECTLY OR INDIRECTLY, OUTSIDE INDIA.

PUBLIC ANNOUNCEMENT

(Please scan the QR Code to view the DRHP and the Draft Abridged Prospectus)

manipalhospitals
LIFE'S ON

MANIPAL HEALTH ENTERPRISES LIMITED

Our Company was originally incorporated in Bengaluru, Karnataka as 'Manipal Health Enterprises Private Limited' as a private limited company under the Companies Act, 1956 pursuant to a certificate of incorporation dated February 15, 2010, issued by the RoC. Subsequently, our Company was converted to a public limited company and the name of our Company was changed to Manipal Health Enterprises Limited pursuant to a resolution passed by our Board and by our Shareholders passed on November 8, 2025 and November 20, 2025, respectively and a fresh certificate of incorporation dated December 24, 2025 was issued by the Registrar of Companies, Central Processing Centre. For details of changes in the name of our Company, see "History and Certain Corporate Matters" on page 263 of the draft red herring prospectus dated March 23, 2026 (the "**DRHP**" or the "**Draft Red Herring Prospectus**").

Registered and Corporate Office: The Annexe, #98/2, Rustom Bagh, HAL Airport Road, Bengaluru 560 017, Karnataka, India; **Contact Person:** Sathish Kolar Ramamoorthy, Company Secretary and Compliance Officer
Tel.: +91 80 4936 0300; **E-mail:** legalcs@manipalhospitals.com; **Website:** www.manipalhospitals.com; **Corporate Identity Number:** U85110KA2010PLC052540

THE PROMOTERS OF OUR COMPANY ARE DR. RANJAN RAMDAS PAI, MANIPAL GLOBAL HEALTH SERVICES, MEMG INTERNATIONAL LTD, KANGTO INVESTMENTS PTE. LTD., IMPERIUS HEALTHCARE INVESTMENTS PTE. LTD., AND KABRU INVESTMENTS PTE. LTD.

INITIAL PUBLIC OFFER OF UP TO [●] EQUITY SHARES OF FACE VALUE OF ₹2 EACH ("EQUITY SHARES") OF MANIPAL HEALTH ENTERPRISES LIMITED ("COMPANY" OR "ISSUER") FOR CASH AT A PRICE OF ₹[●] PER EQUITY SHARE (INCLUDING A SHARE PREMIUM OF ₹[●] PER EQUITY SHARE) ("OFFER PRICE") AGGREGATING UP TO ₹[●] MILLION COMPRISING A FRESH ISSUE OF UP TO [●] EQUITY SHARES OF FACE VALUE OF ₹2 EACH AGGREGATING UP TO ₹80,000.00 MILLION BY OUR COMPANY ("FRESH ISSUE") AND AN OFFER FOR SALE OF UP TO 43,227,668 EQUITY SHARES OF FACE VALUE OF ₹2 EACH AGGREGATING UP TO ₹[●] MILLION BY THE SELLING SHAREHOLDERS, COMPRISING AN OFFER FOR SALE OF UP TO 21,617,723 EQUITY SHARES OF FACE VALUE OF ₹2 EACH AGGREGATING UP TO ₹[●] MILLION BY IMPERIUS HEALTHCARE INVESTMENTS PTE. LTD., (THE "PROMOTER SELLING SHAREHOLDER"), UP TO 13,584,004 EQUITY SHARES OF FACE VALUE OF ₹2 EACH AGGREGATING UP TO ₹[●] MILLION BY MANIPAL EDUCATION AND MEDICAL GROUP INDIA PRIVATE LIMITED (THE "PROMOTER GROUP SELLING SHAREHOLDER"), UP TO 4,659,335 EQUITY SHARES OF FACE VALUE OF ₹2 EACH AGGREGATING UP TO ₹[●] MILLION BY TPG SG MAGAZINE PTE. LTD., UP TO 1,584,987 EQUITY SHARES OF FACE VALUE OF ₹2 EACH AGGREGATING UP TO ₹[●] MILLION BY SEVENTY SECOND INVESTMENT COMPANY LLC, UP TO 811,582 EQUITY SHARES OF FACE VALUE OF ₹2 EACH AGGREGATING UP TO ₹[●] MILLION BY AMMAR SDN BHD, UP TO 529,111 EQUITY SHARES OF FACE VALUE OF ₹2 EACH AGGREGATING UP TO ₹[●] MILLION BY NOVO HOLDINGS INVEST ASIA A/S, AND UP TO 440,926 EQUITY SHARES OF FACE VALUE OF ₹2 EACH AGGREGATING UP TO ₹[●] MILLION BY PHOENIX BEAR INVESTMENTS, LLC, (COLLECTIVELY THE "INVESTOR SELLING SHAREHOLDERS") (THE PROMOTER SELLING SHAREHOLDER, THE PROMOTER GROUP SELLING SHAREHOLDER AND THE INVESTOR SELLING SHAREHOLDERS COLLECTIVELY REFERRED TO AS THE "SELLING SHAREHOLDERS" AND SUCH EQUITY SHARES OFFERED BY THE SELLING SHAREHOLDERS ("OFFERED SHARES") AND SUCH OFFER, "OFFER FOR SALE", AND TOGETHER WITH THE FRESH ISSUE, THE "OFFER").

OUR COMPANY, IN CONSULTATION WITH THE BRLMS, MAY CONSIDER A PRE-IPO PLACEMENT OF EQUITY SHARES, AS MAY BE PERMITTED UNDER APPLICABLE LAW, AT ITS DISCRETION, AGGREGATING UP TO ₹ 16,000.00 MILLION PRIOR TO FILING OF THE RED HERRING PROSPECTUS WITH THE ROC ("PRE-IPO PLACEMENT"). THE PRE-IPO PLACEMENT, IF UNDERTAKEN, WILL BE AT A PRICE TO BE DECIDED BY OUR COMPANY, IN CONSULTATION WITH THE BRLMS. IF THE PRE-IPO PLACEMENT IS COMPLETED, THE AMOUNT RAISED PURSUANT TO THE PRE-IPO PLACEMENT WILL BE REDUCED FROM THE FRESH ISSUE, SUBJECT TO COMPLIANCE WITH RULE 19(2)(B) OF THE SECURITIES CONTRACTS (REGULATION) RULES, 1957, AS AMENDED. THE PRE-IPO PLACEMENT, IF UNDERTAKEN, SHALL NOT EXCEED 20% OF THE SIZE OF THE FRESH ISSUE. THE UTILISATION OF THE PROCEEDS RAISED PURSUANT TO THE PRE-IPO PLACEMENT WILL BE DONE TOWARDS THE PROPOSED OBJECTS OF THE OFFER IN COMPLIANCE WITH APPLICABLE LAW. PRIOR TO THE COMPLETION OF THE OFFER, OUR COMPANY SHALL APPROPRIATELY INTIMATE THE SUBSCRIBERS TO THE PRE-IPO PLACEMENT, PRIOR TO ALLOTMENT PURSUANT TO THE PRE-IPO PLACEMENT, THAT THERE IS NO GUARANTEE THAT OUR COMPANY MAY PROCEED WITH THE OFFER OR THE OFFER MAY BE SUCCESSFUL AND WILL RESULT INTO LISTING OF THE EQUITY SHARES ON THE STOCK EXCHANGES. FURTHER, RELEVANT DISCLOSURES IN RELATION TO SUCH INTIMATION TO THE SUBSCRIBERS TO THE PRE-IPO PLACEMENT (IF UNDERTAKEN) SHALL BE APPROPRIATELY MADE IN THE RELEVANT SECTIONS OF THE RED HERRING PROSPECTUS AND THE PROSPECTUS.

This Offer is being made in terms of Rule 19(2)(b) of the SCRR read with Regulation 31 of the SEBI ICDR Regulations. The Offer is being made through the Book Building Process and is in compliance with Regulation 6(1) of the SEBI ICDR Regulations wherein in terms of Regulation 32(1) of the SEBI ICDR Regulations, not more than 50% of the Offer shall be available for allocation on a proportionate basis to Qualified Institutional Buyers ("**QIBs**", and such portion, the "**QIB Portion**") provided that our Company, in consultation with the BRLMs, may allocate up to 60% of the QIB Portion to Anchor Investors on a discretionary basis in accordance with the SEBI ICDR Regulations ("**Anchor Investor Portion**"), of which 40% of such Anchor Investor Portion shall be reserved for domestic Mutual Funds, in the following manner (i) 33.33% shall be reserved for allocation to domestic Mutual Funds; and (ii) 6.67% shall be reserved for Life Insurance Companies and Pension Funds, subject to valid Bids being received from domestic Mutual Funds, Life Insurance Companies and Pension Funds at or above the Anchor Investor Allocation Price. In the event of under-subscription in (ii) above, the allocation may be made to domestic Mutual Funds, at or above the Anchor Investor Allocation Price, in accordance with the SEBI ICDR Regulations. In the event of under-subscription or non-allocation in the Anchor Investor Portion, the balance Equity Shares shall be added to the Net QIB Portion. Further, 5% of the Net QIB Portion shall be available for allocation on a proportionate basis only to Mutual Funds and the remainder of the Net QIB Portion shall be available for allocation on a proportionate basis to all QIB Bidders (other than Anchor Investors) including Mutual Funds, subject to valid Bids being received at or above the Offer Price. However, if the aggregate demand from Mutual Funds is less than 5% of the QIB Portion, the balance Equity Shares available for allocation in the Mutual Fund Portion will be added to the remaining QIB Portion for proportionate allocation to QIBs. Further, not less than 15% of the Offer shall be available for allocation to Non-Institutional Bidders ("**Non-Institutional Portion**") wherein (a) one-third of such portion shall be reserved for applicants with application size of more than ₹0.20 million and up to ₹1.00 million; and (b) two-third of such portion shall be reserved for applicants with application size of more than ₹1.00 million, provided that the unsubscribed portion in either of such sub-categories may be allocated to applicants in the other sub-category of Non-Institutional Bidders and not less than 35% of the Offer shall be available for allocation to Retail Individual Bidders ("**RIBs**") in accordance with the SEBI ICDR Regulations ("**Retail Portion**"), subject to valid Bids being received from them at or above the Offer Price. Further all potential Bidders (except Anchor Investors) are required to mandatorily participate in the Offer through the Application Supported by Blocked Amount ("**ASBA**") process by providing details of their respective bank accounts (including UPI ID for UPI Bidders using UPI Mechanism) (as defined hereinafter) in which the Bid amount will be blocked by the SCSBs or the Sponsor Banks, under the UPI mechanism as applicable, to participate in the Offer. Anchor Investors are not permitted to participate in the Anchor Investor Portion of the Offer through the ASBA process. For details, see *"Offer Procedure"* on page 658 of the DRHP.

This public announcement is being made in compliance with the provisions of Regulation 26(2) of the SEBI ICDR Regulations to inform the public that our Company is proposing to undertake, subject to applicable statutory and regulatory requirements, receipt of requisite approvals, market conditions and other considerations, an initial public offering of its Equity Shares pursuant to the Offer and has filed the DRHP dated March 23, 2026 along with the Draft Abridged Prospectus with the Securities and Exchange Board of India (**"SEBI"**) and with the Stock Exchanges.

Pursuant to Regulation 26(1) of the SEBI ICDR Regulations, the DRHP along with the Draft Abridged Prospectus filed with SEBI and the Stock Exchanges has been made available to the public for comments, if any, for a period of at least 21 days, from the date of publication of this public announcement, in accordance with Regulation 26(2) of the SEBI ICDR Regulations by hosting it on the website of SEBI at www.sebi.gov.in, on the websites of the Stock Exchanges, i.e., BSE at www.bseindia.com, NSE at www.nseindia.com where the Equity Shares are proposed to be listed, the websites of the BRLMs, i.e., Kotak Mahindra Capital Company Limited at https://investmentbank.kotak.com, Axis Capital Limited at www.axiscapital.co.in, Goldman Sachs (India) Securities Private Limited at www.goldmansachs.com, Jefferies India Private Limited at www.jefferies.com, J.P. Morgan India Private Limited at www.jpmipl.com, UBS Securities India Private Limited at www.ubs.com/indiaoffers and DBS Bank India Limited at https://go.dbs.com/ipo and on the website of our Company at www.manipalhospitals.com. Our Company hereby invites the public to give their comments on the DRHP along with the Draft Abridged Prospectus filed with SEBI and the Stock Exchanges, with respect to disclosures made in the DRHP along with the Draft Abridged Prospectus. The members of the public are requested to send a copy of their comments to SEBI and/or to the Company Secretary and Compliance Officer of our Company and/or the BRLMs at their respective addresses mentioned herein. All comments must be received by SEBI and/or our Company and/or the BRLMs and/or the Company Secretary and Compliance Officer of our Company at their respective addresses mentioned herein in relation to the Offer on or before 5:00 p.m. on the 21st day from the date of publication of this public announcement.

Investments in equity and equity-related securities involve a degree of risk and investors should not invest any funds in the Offer unless they can afford to take the risk of losing their entire investment. Bidders are advised to read the risk factors carefully before taking an investment decision in the Offer. For taking an investment decision, investors must rely on their own examination of our Company and the Offer, including the risks involved. The Equity Shares in the Offer have not been recommended or approved by SEBI, nor does SEBI guarantee the accuracy or adequacy of the contents of the Draft Red Herring Prospectus. Specific attention of the investors is invited to *"Risk Factors"* beginning on page 31 of the DRHP.

Any decision to invest in the Equity Shares described in the DRHP may only be made after the red herring prospectus ("**Red Herring Prospectus**" or "**RHP**") has been filed with the RoC in the future and must be made solely on the basis of such Red Herring Prospectus as there may be material changes in the Red Herring Prospectus from the DRHP.

The Equity Shares, when offered, through the Red Herring Prospectus, are proposed to be listed on the main board of the Stock Exchanges.

The liability of the members of the Company is limited. For details of the share capital, capital structure of the Company and the names of the signatories to the Memorandum of Association and the number of shares subscribed by them see *"Capital Structure"* beginning on page 107 of the DRHP.

For details of the main objects of the Company as contained in its Memorandum of Association, see *"History and Certain Corporate Matters"* beginning on page 263 of the DRHP.

BOOK RUNNING LEAD MANAGERS			
kotak Investment Banking	AXIS CAPITAL	Goldman Sachs	Jefferies
Kotak Mahindra Capital Company Limited 1st Floor, 27 BKC, Plot No. C – 27, "G" Block, Bandra Kurla Complex, Bandra (East), Mumbai – 400 051, Maharashtra, India; **Tel:** +91 22 4336 0000 **E-mail:** manipal.ipo@kotak.com **Website:** https://investmentbank.kotak.com **Investor Grievance ID:** kmccredressal@kotak.com **Contact Person:** Ganesh Rane **SEBI Registration Number:** INM000008704	**Axis Capital Limited** 1st Floor, Axis House, Pandurang Budhkar Marg Worli, Mumbai - 400 025 Maharashtra, India **Tel:** + 91 22 4325 2183 **E-mail:** manipalhospitals.ipo@axiscap.in **Website:** www.axiscapital.co.in **Investor Grievance ID:** complaints@axiscap.in **Contact Person:** Sagar Jatakiya **SEBI Registration Number:** INM000012029	**Goldman Sachs (India) Securities Private Limited** 9th and 10th Floor, Ascent-Worli, Sudam Kalu Ahire Marg, Worli, Mumbai - 400 025, Maharashtra, India **Tel:** +91 22 6616 9000 **E-mail:** gs-manipal@gs.com **Website:** www.goldmansachs.com **Investor Grievance ID:** india-client-support@gs.com **Contact Person:** Achint Parmanandka/ Sumedha Srinivasan **SEBI Registration Number:** INM000011054	**Jefferies India Private Limited** Level 16, Express Towers, Nariman Point, Mumbai - 400 021 Maharashtra, India **Tel:** +91 22 4356 6000 **E-mail:** Manipal.IPO@jefferies.com **Website:** www.jefferies.com **Investor Grievance ID:** jipl.grievance@jefferies.com **Contact Person:** Akshat Shah/ Saiyam Sanghvi **SEBI Registration Number:** INM000011443
BOOK RUNNING LEAD MANAGERS			REGISTRAR TO THE OFFER
J.P.Morgan	UBS	DBS	KFINTECH
J.P. Morgan India Private Limited J.P. Morgan Tower, Off CST Road, Kalina Santacruz East, Mumbai - 400 098, Maharashtra, India **Tel:** +91 22 6157 3000 **E-mail:** Manipal_Hospitals_IPO@jpmorgan.com **Website:** www.jpmipl.com **Investor Grievance ID:** investorsmb.jpmipl@jpmorgan.com **Contact Person:** Darshil Mehta **SEBI Registration Number:** INM000002970	**UBS Securities India Private Limited** Level 2, 3, North Avenue, Maker Maxity, Bandra Kurla Complex, Bandra East, Mumbai – 400 051 Maharashtra, India **Tel:** +91 22 6155 6000 **E-mail:** ol-manipalhospitalsipo@ubs.com **Website:** www.ubs.com/indiaoffers **Investor Grievance ID:** igmbindia@ubs.com **Contact Person:** Devendra Sethia **SEBI Registration Number:** INM000013101	**DBS Bank India Limited#** Ground Floor, Express Towers, Nariman Point, Mumbai 400 021, Maharashtra, India **Tel:** +91 44 6632 8000 **E-mail:** Manipal.IPO@dbs.com **Website:** https://go.dbs.com/ipo **Investor Grievance ID:** investor.grievance@dbs.com **Contact Person:** Sanjog Kusumwal/ Rutvik Pawgi **SEBI Registration Number:** INM000012892	**KFin Technologies Limited** Selenium Tower B, Plot No. 31 and 32, Financial District, Nanakramguda, Serilingampally, Hyderabad, Rangareddy – 500 032, Telangana, India **Tel:** +91 40 6716 2222/ 180 0309 4001 **E-mail:** manipal.ipo@kfintech.com **Website:** www.kfintech.com **Investor Grievance ID:** einward.ris@kfintech.com **Contact Person:** M. Murali Krishna **SEBI Registration Number:** INR000000221
COMPANY SECRETARY AND COMPLIANCE OFFICER			
Sathish Kolar Ramamoorthy (Company Secretary and Compliance Officer) The Annexe, #98/2, Rustom Bagh, HAL Airport Road, Bengaluru 560 017, Karnataka, India; **Tel:** +91 80 4936 0300; **E-mail:** legalcs@manipalhospitals.com; **Website:** www.manipalhospitals.com			

#DBS Bank India Limited is deemed to be an "associate" of Imperius Healthcare Investments Pte. Ltd. (one of our Selling Shareholders) in terms of Regulation 21A of SEBI Merchant Bankers Regulations and has undertaken to be associated only with respect to the marketing of the Offer in compliance with Regulation 21A of SEBI Merchant Bankers Regulations. Further, DBS Bank India Limited has signed the due diligence certificate and has been disclosed as a Book Running Lead Manager in the Draft Red Herring Prospectus
All capitalized terms used herein and not specifically defined shall have the same meaning as ascribed to them in the DRHP.

For **MANIPAL HEALTH ENTERPRISES LIMITED**
On behalf of the Board of Directors
Sd/-
Sathish Kolar Ramamoorthy
Company Secretary and Compliance Officer

Place : Bengaluru
Date : March 24, 2026

MANIPAL HEALTH ENTERPRISES LIMITED is proposing, subject to applicable statutory and regulatory requirements, receipt of requisite approvals, market conditions and other considerations, to undertake an initial public offer of its Equity Shares and has filed the DRHP along with the Draft Abridged Prospectus each dated March 23, 2026, with SEBI and the Stock Exchanges. The DRHP along with the Draft Abridged Prospectus is available on the website of SEBI at www.sebi.gov.in, on the websites of the Stock Exchanges i.e., BSE at www.bseindia.com, NSE at www.nseindia.com, on the websites of the BRLMs, i.e. Kotak Mahindra Capital Company Limited at https://investmentbank.kotak.com, Axis Capital Limited at www.axiscapital.co.in, Goldman Sachs (India) Securities Private Limited at www.goldmansachs.com, Jefferies India Private Limited at www.jefferies.com, J.P. Morgan India Private Limited at www.jpmipl.com, UBS Securities India Private Limited at www.ubs.com/indiaoffers and DBS Bank India Limited at https://go.dbs.com/ipo and on the website of our Company at www.manipalhospitals.com. Potential investors should note that investment in equity shares involves a high degree of risk and for details relating to such risk, see the section titled *"Risk Factors"* on page 31 of the DRHP and the details set out in the RHP, when filed. Potential investors should not rely on the DRHP or the Draft Abridged Prospectus for making any investment decision and should rely on the RHP, when filed, for making an investment decision.

The Equity Shares have not been and will not be registered under the U.S. Securities Act or any applicable laws in the United States, and may not be offered or sold within the United States, except pursuant to an exemption from, or in a transaction not subject to, the registration requirements of the U.S. Securities Act and applicable state securities laws in the United States. Accordingly, the Equity Shares are only being offered and sold (i) within the United States only to persons reasonably believed to be "qualified institutional buyers" (as defined in Rule 144A under the U.S. Securities Act and referred to in the Draft Red Herring Prospectus as "U.S. QIBs" and, for the avoidance of doubt, the term U.S. QIBs does not refer to a category of institutional investor defined under applicable Indian regulations and referred to in the Draft Red Herring Prospectus as "QIBs") in transactions exempt from or not subject to the registration requirements of the U.S. Securities Act or (ii) outside the United States in "offshore transactions" as defined in, and in compliance with Regulation S under the U.S. Securities Act and the applicable laws of the jurisdiction where those offers and sales occur.

CONCEPT

ಸಮಾಚಾರ ಸಣ್ಣದಲ್ಲ

ಏ.1ಕ್ಕೆ ಪ್ರಾಚೀನ ಆರೋಗ್ಯ ಪರಂಪರಾ ವೈದ್ಯ ಸಂಗಮ

ಬೆಂಗಳೂರು: ಪ್ರಾಚೀನ ಆರೋಗ್ಯ ಪರಂಪರೆ ಸಂರಕ್ಷಣಾ ಟ್ರಸ್ಟ್ ವತಿಯಿಂದ ಏ.1 ಮತ್ತು 2ರಂದು ಹೊನ್ನಾವರ ತಾಲೂಕಿನ ಗೇರುಸೊಪ್ಪದ ಬಂಗಾರ ಮಕ್ಕಿಯಲ್ಲಿ ಪ್ರಾಚೀನ ಆರೋಗ್ಯ ಪರಂಪರಾ ವೈದ್ಯ ಸಂಗಮ ಹಾಗೂ ಉಚಿತ ಆರೋಗ್ಯ ತಪಾಸಣೆ ಮತ್ತು ಔಷಧಿ ವಿತರಣಾ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಕಾರ್ಯಕ್ರಮದಲ್ಲಿ ಪ್ರಾಚೀನ ವೈದ್ಯರತ್ನ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಇದಕ್ಕಾಗಿ ರಾಜ್ಯದ ಮೂವರು ವೈದ್ಯರನ್ನು ಆಯ್ಕೆ ಮಾಡಲಾಗಿದೆ. ಪಾರಂಪರಿಕ ಆರೋಗ್ಯವನ್ನು ಉಳಿಸಿ ಬೆಳೆಸುವುದು ಹಾಗೂ ರಾಜ್ಯದ ಪಾರಂಪರಿಕ ವೈದ್ಯರ ಹಕ್ಕುಗಳು,ಮಾನ್ಯತೆ ಮತ್ತು ಭದ್ರತೆಯನ್ನು ಕಾಯ್ದುಕೊಳ್ಳುವ ಮಹತ್ತರ ಉದ್ದೇಶದಿಂದ ಈ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದು ಪ್ರಕಟಣೆಯಲ್ಲಿ ಸಂಸ್ಥೆ ತಿಳಿಸಿದೆ.

ರೋಸ್ಟರ್ ಪದ್ಧತಿಯ ದೋಷ ಸರಿಪಡಿಸಿ

ಬೆಂಗಳೂರು: ಒಳಮೀಸಲಿನಲ್ಲಿ ನೀಡಿರುವ ರೋಸ್ಟರ್ ಪದ್ಧತಿಯಲ್ಲಿ ಆಗಿರುವ ಲೋಪದೋಷಗಳನ್ನು ಸರಿಪಡಿಸಿ ಜಾರಿಗೊಳಿಸಬೇಕು. ಪರಿಷ್ಕೃತ ಆದೇಶದ ಬಳಿಕವೇ 56,432 ಹುದ್ದೆಗಳನ್ನು ತುಂಬುವಂತೆ ಕರ್ನಾಟಕ ದಲಿತ ಸಂಘರ್ಷ ಸಮಿತಿಯ ರಾಜ್ಯ ಸಂಚಾಲಕರು ಗುರುಮೂರ್ತಿ.ಎಂ. ಆಗ್ರಹಿಸಿದ್ದಾರೆ. ಈ ಕುರಿತು ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ರಾಜ್ಯ ಸರಕಾರ ಪರಿಶಿಷ್ಟ ಜಾತಿಗಳ ಒಳಮೀಸಲಾತಿ ನಿಯಮವಿಲ್ಲದೆ ಉದ್ಯೋಗ ನೇಮಕಾತಿಗೆ ಹೊರಡಿಸಿರುವ ಆದೇಶವನ್ನು ರದ್ದುಪಡಿಸಬೇಕು. 101 ಪರಿಶಿಷ್ಟ ಜಾತಿಗಳಿಗೂ ಅವರವರ ಜನಸಂಖ್ಯಾವಾರು ಪಾಲು ನ್ಯಾಯುತವಾಗಿ ಲಭಿಸುವಂತೆ ಆದೇಶ ಹೊರಡಿಸಬೇಕು. ತಮಿಳುನಾಡು ಮತ್ತು ಜಾರ್ಖಂಡ್ ರಾಜ್ಯಗಳ ಮುಖ್ಯಮಂತ್ರಿಗಳು ತಮ್ಮ ರಾಜ್ಯಗಳಲ್ಲಿ ಮೀಸಲಾತಿ ಪ್ರಮಾಣವನ್ನು ಶೇ50ಕ್ಕಿಂತ ಹೆಚ್ಚಾಗಿ ಏರಿಕೆ ಮಾಡಿ ಅದನ್ನು ಕೇಂದ್ರ ಸರಕಾರದಲ್ಲಿ ಸಂವಿಧಾನದ ಒಂಬತ್ತನೇ ಶೆಡ್ಯೂಲ್‌ಗೆ ಸೇರಿಸುವಲ್ಲಿ ಯಶಸ್ವಿಯಾಗಿರುವುದನ್ನು ರಾಜ್ಯದ ಆಡಳಿತ ಪಕ್ಷ ಮತ್ತು ವಿರೋಧ ಪಕ್ಷಗಳು ಅನುಸರಿಸಿ ರಾಜ್ಯದ ಪರಿಶಿಷ್ಟರಿಗೆ ನ್ಯಾಯ ಕೊಡಬೇಕೆಂದು ಆಗ್ರಹಿಸಿದರು.

ಮತದಾರರ ಪಟ್ಟಿ ಆಕ್ಷೇಪಣೆಗೆ ಅವಕಾಶ

ಬೆಂಗಳೂರು: ಜಿಬಿಎಯ ಪೂರ್ವ ನಗರ ಪಾಲಿಕೆಯ ಸಾರ್ವತ್ರಿಕ ಚುನಾವಣೆ-2026ಕ್ಕೆ ಸಂಬಂಧಿಸಿದಂತೆ ಮಾ.9ರಿಂದ ಪರಿಷ್ಕೃತ ಕರಡು ಮತದಾರರ ಪಟ್ಟಿಯನ್ನು ಈಗಾಗಲೇ ಪ್ರಚುರ ಪಡಿಸಲಾಗಿದ್ದು, ಅಂತಿಮ ಮತದಾರರ ಪಟ್ಟಿ ಪರಿಷ್ಕರಣೆಯ ಹಂತದಲ್ಲಿರುತ್ತದೆ ಎಂದು ಪೂರ್ವ ನಗರ ಪಾಲಿಕೆ ಅಪರ ಜಿಲ್ಲಾ ಚುನಾವಣಾಧಿಕಾರಿ, ಆಯುಕ್ತ ಡಿ.ಎಸ್ ರಮೇಶ್ ತಿಳಿಸಿದರು. ಸಾರ್ವತ್ರಿಕ ಚುನಾವಣೆ-2026 ಸಂಬಂಧಿಸಿದಂತೆ ವಾರ್ಡ್‌ವಾರು ಪರಿಷ್ಕೃತ ಕರಡು ಮತದಾರರ ಪಟ್ಟಿಗೆ ದೂರು ಹಾಗೂ ಆಕ್ಷೇಪಣೆ ಸಲ್ಲಿಸುವ ಅವಧಿಯನ್ನು ರಾಜ್ಯ ಚುನಾವಣಾ ಆಯೋಗದ ನಿರ್ದೇಶನದಂತೆ 30 ಮಾರ್ಚ್ 2026 ರವರೆಗೆ ವಿಸ್ತರಿಸಲಾಗಿರುತ್ತದೆ. ಪರಿಷ್ಕೃತ ಕರಡು ಮತದಾರರ ಪಟ್ಟಿಯಲ್ಲಿ ಏನಾದರೂ ಲೋಪ ದೋಷಗಳಿದ್ದರೆ ಮಾ.30ರವರೆಗೆ ಅಹವಾಲು, ಆಕ್ಷೇಪಣೆಗಳನ್ನು ಸಲ್ಲಿಸಬಹುದಾಗಿದೆ ಎಂದು ಮನವಿ ಮಾಡಿದ್ದಾರೆ. ಪೂರ್ವ ನಗರ ಪಾಲಿಕೆ ವ್ಯಾಪ್ತಿಯ ವಾರ್ಡ್‌ಗಳ ಪರಿಷ್ಕೃತ ಕರಡು ಮತದಾರರ ಪಟ್ಟಿಯನ್ನು ಸಂಬಂಧಿತ ಮತದಾರರ ನೋಂದಣಾಧಿಕಾರಿಗಳು ಮತ್ತು ಸಹಾಯಕ ಮತದಾರರ ನೋಂದಣಾಧಿಕಾರಿ ಗಳ ಕಚೇರಿಗಳಲ್ಲಿ ಹಾಗೂ ಜಿಬಿಎ ವೆಬ್ ಸೈಟ್ HTTPS://GBA.KARNATAKA.GOV.IN/ELECTORAL2026ನಲ್ಲಿ ವೀಕ್ಷಿಸಬಹುದಾಗಿದ್ದು, ಮತದಾರರು ತಮ್ಮ ಹೆಸರನ್ನು ಪರಿಶೀಲಿಸಿಕೊಂಡು ಅಗತ್ಯವಿದ್ದಲ್ಲಿ ದೂರು ಅಥವಾ ಆಕ್ಷೇಪಣೆಗಳನ್ನು ಸಲ್ಲಿಸುವ ಮೂಲಕ ಮುಕ್ತ ಮತ್ತು ಪಾರದರ್ಶಕ ಚುನಾವಣೆಗೆ ಸಹಕರಿಸುವಂತೆ ಈ ಮೂಲಕ ಮನವಿ ಮಾಡಲಾಗಿದೆ. ಬಸವರಾಜ್ ಎಸ್ ಮಗಿ ಮತದಾರರ ನೊಂದಣಾಧಿಕಾರಿ ಮತ್ತು ಕಂದಾಯ ಅಧಿಕಾರಿಗಳು 151-ಕೆ.ಆರ್.ಪುರ ವಿಧಾನ ಸಭಾ ಕ್ಷೇತ್ರ, ಮೊಬೈಲ್ ಸಂಖ್ಯೆ: 9480683002, ಇಮೇಲ್ ಐಡಿ: ero151krpuramgmail.com ಕೆ.ಆರ್.ಪುರ ಜಿಬಿಎ ಕಚೇರಿ, ಹಳೇ ಮದ್ರಾಸ್ ರಸ್ತೆ.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

ಬೋವಿ, ಬಂಜಾರ, ಕೊರಚ, ಕೊರಮ ಸಮುದಾಯದಿಂದ ಪ್ರತಿಭಟನೆ | ಫ್ರೀಡಂಪಾರ್ಕ್ ಸುತ್ತಮುತ್ತ ಟ್ರಾಫಿಕ್ ಜಾಮ್

ಒಳಮೀಸಲಾತಿ ವರದಿ ವಿರೋಧಿಸಿ ಬೃಹತ್ ಪ್ರತಿಭಟನೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯದಲ್ಲಿ ಪರಿಶಿಷ್ಟ ಜಾತಿಗಳ ಒಳಮೀಸಲಾತಿ ಹಂಚಿಕೆ ಕುರಿತಂತೆ ತೀವ್ರ ಅಸಮಾಧಾನ ವ್ಯಕ್ತವಾಗಿದ್ದು, ಇದರ ವಿರುದ್ಧ ಕರ್ನಾಟಕ ಮೀಸಲಾತಿ ಸಂರಕ್ಷಣಾ ಒಕ್ಕೂಟ ವತಿಯಿಂದ ಪ್ರತಿಭಟನೆಗೆ ಕರೆನೀಡಿದೆ. ಸರಕಾರ ಮಾ.27 ರಂದು ನಡೆಯುವ ವಿಶೇಷ ಸಚಿವ ಸಂಪುಟದಲ್ಲಿ ತೌಲನಿಕ ಅಧ್ಯಯನ ನಡೆಸಿ, ಎಲ್ಲ ಸಮುದಾಯಗಳಿಗೆ ನ್ಯಾಯ ಸಿಗುವಂತೆ ಕ್ರಮ ಕೈಗೊಳ್ಳಬೇಕು ಎಂದು ಭೋವಿ ಗುರುಪೀಠದ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ ಆಗ್ರಹಿಸಿದ್ದಾರೆ.

ನಗರದ ಫ್ರೀಡಂ ಪಾರ್ಕ್ ನಲ್ಲಿ ನಡೆದ ಪ್ರತಿಭಟನೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಒಳ ಮೀಸಲಾತಿ ವರದಿ ಅಪೂರ್ಣ ಮಾಹಿತಿಯ ಮೇಲೆ ಸಿದ್ಧವಾಗಿದ್ದು, ಭೋವಿ, ಬಂಜಾರ, ಕೊರಮ, ಕೊರಚ ಸೇರಿದಂತೆ ಅನೇಕ ಸೂಕ್ಷ್ಮ ಮತ್ತು ಅತಿಸೂಕ್ಷ್ಮ ಜಾತಿಗಳಿಗೆ ಅನ್ಯಾಯವಾಗಲಿದೆ. ಸರಕಾರ ಹೊಸ ನೇಮಕಾತಿಗಳಲ್ಲಿ ಈ ಒಳಮೀಸಲಾತಿಯನ್ನು ಜಾರಿಗೆ ತಂದರೆ, ಸಣ್ಣ ಸಮುದಾಯಗಳ ಹಕ್ಕುಗಳಿಗೆ ಧಕ್ಕೆಯಾಗಲಿದೆ ಎಂದರು

ಒಳಮೀಸಲಾತಿ ವರದಿ ರಾಜ್ಯದಲ್ಲಿ ಪರಿಶಿಷ್ಟ ಜಾತಿಗಳಿಗೆ ಒಟ್ಟು ಶೇ.17 ಮೀಸಲಾತಿ ನೀಡಲಾಗಿದ್ದು, ಅದರಡಿ ಎಡಗೈ ಸಮುದಾಯಕ್ಕೆ ಶೇ.6, ಬಲಗೈಗೆ ಶೇ.6 ಮತ್ತು ಅಸ್ಪೃಶ್ಯರಿಗೆ ಶೇ.5 ಒಳಮೀಸಲಾತಿ ಹಂಚಿಕೆಯಿಂದ ವಿವಿಧ ಸಮುದಾಯಗಳಿಗೆ ಅನ್ಯಾಯವಾಗಿದೆ. ಇದನ್ನು ಹಿಂತೆಗೆದುಕೊಂಡು ಹಿಂದಿನ ಮೀಸಲಾತಿ ಹಂಚಿಕೆ ಪ್ರಕಾರ ಎಡಗೈಗೆ ಶೇ.6, ಬಲಗೈಗೆ ಶೇ.5.5, ಅಸ್ಪೃಶ್ಯರಿಗೆ ಶೇ.4.5 ಮತ್ತು ಇತರರಿಗೆ ಶೇ.1 ಮೀಸಲಾತಿಯ ಈ ಹಳೆಯ ವ್ಯವಸ್ಥೆಯನ್ನೇ ಮುಂದುವರಿಸಬೇಕು. ನ್ಯಾ. ನಾಗಮೋಹನ್ ದಾಸ್ ವರದಿ ಸಮಗ್ರ ಮಾಹಿತಿಯಿಲ್ಲದೆ ಸಿದ್ಧವಾಗಿದೆ. ಒಳಮೀಸಲಾತಿಯನ್ನು ಸಮರ್ಪಕವಾಗಿ ಮರುಪರಿಶೀಲನೆ ಮಾಡಬೇಕು. ಸದ್ಯದ ನೇಮಕಾತಿಯಲ್ಲಿ ಇದನ್ನು ಜಾರಿಗೆ ತರಬಾರದು ಎಂದರು.

ಜನಗಣತಿ ದತ್ತಾಂಶ ಹೊರಬರುವವರೆಗೆ ಒಳ ಮೀಸಲಾತಿ ಕುರಿತು ಏಕಪಕ್ಷೀಯ ನಿರ್ಧಾರ ಕೈಗೊಳ್ಳಬಾರದು. ಒಳಮೀಸಲಾತಿ ಜಾರಿಗೆ ಮುನ್ನ ಸಂಬಂಧಿತ ಸಮುದಾಯಗಳೊಂದಿಗೆ ಸಮಗ್ರ ಚರ್ಚೆ ನಡೆಸಬೇಕು. ನ್ಯಾ. ನಾಗಮೋಹನ್ ದಾಸ್ ಆಯೋಗದ ಸಮೀಕ್ಷಾ ವರದಿಯನ್ನು ಬಹಿರಂಗಗೊಳಿಸಬೇಕು. ಆಯೋಗದ ದತ್ತಾಂಶ ಪ್ರಕಾರ ಕೆಲವು ಸಮುದಾಯಗಳು ಅತ್ಯಂತ ಹಿಂದುಳಿದಿರುವುದರಿಂದ ಅವರಿಗೆ ಮೊದಲನೇ ಆದ್ಯತೆ ನೀಡಬೇಕೆಂದು ಒತ್ತಾಯಿಸಿದರು. ಆದರೆ, ಪ್ರಸ್ತುತ ಜಾರಿಯಲ್ಲಿರುವ ರೋಸ್ಟರ್ ಬಿಂದು ವ್ಯವಸ್ಥೆ ಸಮುದಾಯಗಳನ್ನು ಶತಮಾನಗಳ ಕಾಲ ಹಿಂದುಳಿದ ಸ್ಥಿತಿಯಲ್ಲೇ ಇಡುವಂತಾಗಿದೆ ಎಂದರು.



ಬೋವಿ ಗುರುಪೀಠದ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ ಸಮುದಾಯದ ಹಕ್ಕೊತ್ತಾಯಗಳನ್ನು ಪಶುಸಂಗೋಪನೆ ಸಚಿವ ಕೆ.ವೆಂಕಟೇಶ್‌ಗೆ ಸಲ್ಲಿಸಿದರು. ಈ ವೇಳೆ ನ್ಯಾಮತಿಯ ಸರ್ದಾರ್ ಸೇವ ಲಾಲ್ ಸ್ವಾಮೀಜಿ, ಮಾಜಿ ಸಚಿವ ಅರವಿಂದ ಎಂ.ಲಿಂಬಾವಳಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಒಳಮೀಸಲಾತಿ ವಿರೋಧಿ ಹೋರಾಟದಲ್ಲಿ ಭಾಗಿಯಾಗಿದ್ದ ಜನ.

ಹಕ್ಕೊತ್ತಾಯಗಳು

- ಒಳಮೀಸಲಾತಿ ಕುರಿತು ಸುಪ್ರೀಂ ಕೋರ್ಟ್ ತೀರ್ಪಿನ ಮಾನದಂಡಗಳನ್ನು ಸರಿಯಾಗಿ ಅರ್ಥೈಸಿ, 2027ರ ಜಾತಿ ಜನಗಣತಿ ವರದಿ ಹಾಗೂ ಎಂಪೆರಿಕಲ್ ದತ್ತಾಂಶದ ಆಧಾರದ ಮೇಲೆ ಕ್ರಮ ಕೈಗೊಳ್ಳಬೇಕು.
- ಜಸ್ಟೀಸ್ ನಾಗಮೋಹನ್ ದಾಸ್ ಆಯೋಗದ ಶಿಫಾರಸ್ಸುಗಳನ್ನು ಸಂಪೂರ್ಣವಾಗಿ ತಿರಸ್ಕರಿಸಬೇಕು.
- ಮಾ.27 ರಂದು ನಡೆಯುವ ವಿಶೇಷ ಸಂಪುಟ ಸಭೆಯಲ್ಲಿ ತಜ್ಞರ ಸಮಿತಿ ರಚಿಸಿ, ಹೊಸ ರೋಸ್ಟರ್ ವ್ಯವಸ್ಥೆ ಜಾರಿಗೆ ತಂದು ಎಲ್ಲಾ 101 ಪರಿಶಿಷ್ಟ ಜಾತಿಗಳಿಗೆ ಸಮಾನ ಅವಕಾಶ ಕಲ್ಪಿಸಬೇಕು.
- ಜನಸಂಖ್ಯೆ ಅನುಪಾತದಲ್ಲಿ ಎಸ್.ಸಿ (ಶೇ.17) ಮತ್ತು ಎಸ್.ಟಿ (ಶೇ.7) ಮೀಸಲಾತಿಯನ್ನು ಶಾಶ್ವತಗೊಳಿಸಲು ಕೇಂದ್ರದ ಮೇಲೆ ಒತ್ತಡ ಹೇರಬೇಕು.

ಕಲ್ಲುಒಡೆದು ಹೋರಾಟಕ್ಕೆ ಬೋವಿ ಶ್ರೀ ಚಾಲನೆ.

ಈ ವೇಳೆ ಮಾಜಿ ಸಚಿವ ಅರವಿಂದ ಲಿಂಬಾವಳಿ ಮಾತನಾಡಿ, ವಿಧಾನಸಭಾ ಅಧಿವೇಶನದ ಹಿನ್ನೆಲೆ, ಒಳ ಮೀಸಲಾತಿ ಮತ್ತು ಹೊಸ ರೋಸ್ಟರ್ ಪದ್ಧತಿಗೆ ವಿರೋಧವಾಗಿ ಮೀಸಲಾತಿ ಸಂರಕ್ಷಣಾ ಒಕ್ಕೂಟದ ನೇತೃತ್ವದಲ್ಲಿ ಪ್ರತಿಭಟನೆ ಆಯೋಜಿಸಿದೆ. ಸರಕಾರ ಜಾರಿಗೆ ತಂದಿರುವ ಹೊಸ ರೋಸ್ಟರ್ ಪದ್ಧತಿ ಮತ್ತು ಒಳ ಮೀಸಲಾತಿ ಕ್ರಮಗಳು ಸಾಮಾಜಿಕ ನ್ಯಾಯಕ್ಕೆ ವಿರುದ್ಧವಾಗಿವೆ. ನೇಮಕಾತಿ ಪ್ರಕ್ರಿಯೆಯಲ್ಲಿ ಒಂದೇ ಪ್ರವರ್ಗಕ್ಕೆ ಹೆಚ್ಚಿನ ಸ್ಥಾನಗಳನ್ನು ಮೀಸಲಿಡಲಾಗುತ್ತಿದೆ, ಇದರಿಂದ ಇತರ ವರ್ಗಗಳಿಗೆ ಅವಕಾಶವೇ ಸಿಗದ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಎಸ್‌ಸಿಪಿ-ಟಿಎಸ್‌ಪಿ ನಿಧಿಗಳ ದುರುಪಯೋಗ ತಡೆಗಟ್ಟಬೇಕು. ಎಸ್‌ಸಿ-ಎಸ್‌ಟಿ ಸಮುದಾಯಗಳಿಗೆ ಮೀಸಲಾದ ಶೇ. 24.1 ಬಜೆಟ್ ಹಣವನ್ನು ಬೇರೆ ಉದ್ದೇಶಗಳಿಗೆ ಬಳಸದೆ, ಸಂಪೂರ್ಣವಾಗಿ ಆ ಸಮುದಾಯಗಳ ಅಭಿವೃದ್ಧಿಗೆ ಬಳಸಬೇಕು ಎಂದರು.

ಟ್ರಾಫಿಕ್ ಜಾಮ್, ಮದ್ಯದಂಗಡಿ ಬಂದ್

ಕರ್ನಾಟಕ ಮೀಸಲಾತಿ ಸಂರಕ್ಷಣಾ ಒಕ್ಕೂಟ ವತಿಯಿಂದ ಮಂಗಳವಾರ ಆಯೋಜಿಸಿದ್ದ ಪ್ರತಿಭಟನೆ ರಾಜ್ಯದ ವಿವಿಧ ಜಿಲ್ಲೆಗಳಿಂದ 10 ಸಾವಿರ ಜನ ಸೇರಿದ ಬೆನ್ನಲೇ ಶೇಷಾದ್ರಿ ರಸ್ತೆ, ಆನಂದ್ ರಾವ್ ಸರ್ಕಲ್, ಮೈಸೂರು ಬ್ಯಾಂಕ್, ಬಸವೇಶ್ವರ ಸರ್ಕಲ್ ಭಾಗಗಳಲ್ಲಿ ಸಾವಿರಾರು ಜನರು ಹಾಗೂ ವಾಹನಗಳು ಒಂದೇ ಕಡೆ ಸೇರಿದ್ದ ರಿಂದ ವಾಹನ ದಟ್ಟಣೆ ಉಂಟಾಯಿತು. ಪೊಲೀಸ್‌ರು ಮುಂಜಾಗ್ರತವಾಗಿ ಪರ್ಯಾಯ ಮಾರ್ಗವನ್ನು ಸೂಚಿಸಿದ್ದರು ಸಹ ಜನರು ಪಾಲಿಸದಿರುವುದು ಟ್ರಾಫಿಕ್ ಜಾಮ್‌ಗೆ ಕಾರಣವಾಯಿತು ಹಾಗೂ ಭದ್ರತೆ ಕಾರಣದಿಂದ ಸುತ್ತಮುತ್ತಲಿನ ಕೆಲವೆಡೆ ಸ್ಥಳೀಯವಾಗಿ ಮಧ್ಯದ ಅಂಗಡಿಗಳು ತಾತ್ಕಾಲಿಕವಾಗಿ ಬಂದ್ ಮಾಡಲಾಗಿತ್ತು.

ಒಳಮೀಸಲಾತಿಯಲ್ಲಿ ಮತ್ತೆ ವಿಭಜನೆ ಮಾಡುವ ಮೂಲಕ ಸಮಾಜಗಳ ನಡುವೆ ಭಿನ್ನತೆ ಸೃಷ್ಟಿಸುವ ಯತ್ನ ನಡೆಯುತ್ತಿದೆ. ಸಮಾವೇಶದಲ್ಲಿ ನಾಲ್ಕು ಪ್ರಮುಖ ಬೇಡಿಕೆಗಳನ್ನು ಮಂಡಿಸಲಾಗಿದ್ದು, ಮಾ. 27ರೊಳಗೆ ಅವುಗಳನ್ನು ಈಡೇರಿಸುವಂತೆ ಸರಕಾರಕ್ಕೆ ಗಡುವು ನೀಡಲಾಗಿದೆ. ಬೇಡಿಕೆಗಳನ್ನು ಈಡೇರಿಸದಿದ್ದಲ್ಲಿ ರಾಜ್ಯದ ಪ್ರತಿಯೊಂದು ಜಿಲ್ಲೆಯಲ್ಲಿ ಹಂತ ಹಂತವಾಗಿ ಪ್ರತಿಭಟನೆಗಳನ್ನು ಹಮ್ಮಿಕೊಳ್ಳಲಾಗುವುದು.

-ಚಂದ್ರು ಲಮಾಣಿ, ಶಾಸಕ

ಒಳ ಮೀಸಲಾತಿ ವಿಷಯದಲ್ಲಿ ಸುಪ್ರೀಂ ಕೋರ್ಟ್ ನೀಡಿರುವ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಅನುಸರಿಸಬೇಕು. ಎಂಪಿರಿಕಲ್ ಡೇಟಾ ಸಂಗ್ರಹಣೆ ಮಾಡದೇ ನಾಗಮೋಹನ ದಾಸ್ ಒಳಮೀಸಲಾತಿ ವರದಿ ಜಾರಿಗೆ ಮಾಡಿದೆ. ಅಲೆಮಾರಿ ಜಾತಿಗಳಿಗೆ ಪ್ರತ್ಯೇಕ ಒಳ ಮೀಸಲಾತಿ ನೀಡಬೇಕು. ಬಂಜಾರ, ಭೋವಿ, ಕೊರಚ ಹಾಗೂ ಕೊರಮ ಸಮುದಾಯಗಳಿಗೆ ವಿಶೇಷ ಮೀಸಲಾತಿ ನೀಡುವುದು ಅಗತ್ಯ.

-ಪಿ.ರಾಜೀವ್, ಬಿಜೆಪಿ ಪ್ರಧಾನ ಕಾರ್ಯದರ್ಶಿ

ಬೆಂಗಳೂರು ಕರಗಕ್ಕೆ ಚಾಲನೆ

ಬೆಂಗಳೂರು: ನಗರದ ಐತಿಹಾಸಿಕ ಹಾಗೂ ಸಾಂಸ್ಕೃತಿಕ ಪರಂಪರೆಯ ಪ್ರತೀಕವಾಗಿರುವ ಬೆಂಗಳೂರು ಕರಗ ಶಕ್ತ್ಯ ಉತ್ಸವಕ್ಕೆ ಮಂಗಳವಾರ ಮುಂಜಾನೆ ಚಾಲನೆ ದೊರಕಿತು.

ನಗರದ ಹೃದಯಭಾಗದಲ್ಲಿರುವ ಧರ್ಮರಾಯ ಸ್ವಾಮಿ ದೇವಸ್ಥಾನದಲ್ಲಿ ಧ್ವಜಾರೋಹಣ ನೆರವೇರಿಸುವ ಮೂಲಕ 11 ದಿನಗಳ ಉತ್ಸವಕ್ಕೆ ಅಧಿಕೃತವಾಗಿ ನಾಂದಿ ಹಾಡಲಾಯಿತು. ಮುಂಜಾನೆ ಶುಭ ಮುಹೂರ್ತದಲ್ಲಿ ನಡೆದ ಧ್ವಜಾರೋಹಣ ಕಾರ್ಯಕ್ರಮದಲ್ಲಿ ತಿಗಳ ಸಮುದಾಯದ ಪ್ರಮುಖರು, ಕುಲಬಾಂಧವರು ಹಾಗೂ ಸಾವಿರಾರು ಭಕ್ತರು ಭಾಗವಹಿಸಿದರು. ದ್ರೌಪದಿ ದೇವಿಯ ಜಯ ಘೋಷಗಳ ಮಧ್ಯೆ ದೇವಾ ಲಯದ ಆವರಣ ಭಕ್ತಿಭಾವದಿಂದ ಮೈಮರೆಯಿತು. ಈ ಬಾರಿಯ ಕರಗವನ್ನು ಜ್ಞಾನೇಂದ್ರಸ್ವಾಮಿ ಹೊರುವ ಸಾಧ್ಯತೆ ಇದ್ದು, ಅವರು ಈಗಾಗಲೇ ಕಟ್ಟುನಿಟ್ಟಿನ ವ್ರತಾಚರಣೆಯಲ್ಲಿ ತೊಡಗಿದ್ದಾರೆ ಎಂಬ ಮಾಹಿತಿ ಲಭ್ಯವಾಗಿದೆ. ಕರಗ ಸಾಗುವ ಮಾರ್ಗದಲ್ಲಿ ಮೈಸೂರು ದಸರಾ ಮಾದರಿಯ ವಿದ್ಯುತ್ ದೀಪಾಲಂಕಾರಕ್ಕೆ ಬಿಬಿಎಂಪಿ ವಿಶೇಷ ಒತ್ತು ನೀಡಿದ್ದು, ಅವೆನ್ಯೂ ರಸ್ತೆ ಸೇರಿದಂತೆ ಪ್ರಮುಖ ಬೀದಿಗಳಲ್ಲಿ ಹಬ್ಬದ ಕಳೆ ಮೂಡಿದೆ. ಲಕ್ಷಾಂತರ ಭಕ್ತರು ಭಾಗವಹಿಸುವ ನಿರೀಕ್ಷೆಯ ಹಿನ್ನೆಲೆಯಲ್ಲಿ ನಗರದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿದೆ. ಸಿದ್ಧತೆಗಳ ಕುರಿತು ಈಗಾಗಲೇ ಉನ್ನತ ಮಟ್ಟದ ಸಭೆಗಳನ್ನು ನಡೆಸಲಾ ಗಿದ್ದು, ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆ. ಉತ್ಸವದ ಪ್ರಮುಖ ಅಂಗವಾಗಿ ಮಾರ್ಚ್ 30ರಂದು ಹಸಿ 'ಕರಗ' ನಡೆಯಲಿದ್ದು, ಏಪ್ರಿಲ್ 1ರ ಮಧ್ಯರಾತ್ರಿ ವಿಶ್ವಪ್ರಸಿದ್ಧ ಬೆಂಗಳೂರು 'ಕರಗ' ಮೆರವಣಿಗೆ ಜರುಗಲಿದೆ. ಮೆರವಣಿಗೆ ನಗರದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ, ಮಸ್ತಾನ್ ಸಾಹೇಬ್ ದರ್ಗಾಕ್ಕೆ ಭೇಟಿ ನೀಡಿ ಧಾರ್ಮಿಕ ಸೌಹಾರ್ದತೆಯ ಸಂದೇಶ ಸಾರಲಿದೆ. ನಗರದ ಸಂಸ್ಕೃತಿ, ಭಕ್ತಿ ಹಾಗೂ ಪರಂಪರೆಯ ಸಂಕೇತವಾಗಿರುವ ಈ ಕರಗಕ್ಕೆ ದೇಶ-ವಿದೇಶಗಳಿಂದಲೂ ಭಕ್ತರು ಆಗಮಿಸುವ ನಿರೀಕ್ಷೆ ಇದೆ.

ನಾಳೆ ನೀರಿನ ಅದಾಲತ್

ಬೆಂಗಳೂರು: ಬೆಂಗಳೂರು ಜಲಮಂಡಳಿ ವತಿಯಿಂದ ಮಾ.26ರ ಬೆಳಗ್ಗೆ 9.30ರಿಂದ 11.00 ಗಂಟೆಯವರೆಗೆ ನೀರಿನ ಅದಾಲತ್ ನ್ನು ಆಯೋಜಿಸಲಾಗಿದೆ ಎಂದು ಮಂಡಳಿ ತಿಳಿಸಿದೆ. ನಗರದ (ಆಗ್ನೇಯ-3), (ಆಗ್ನೇಯ-6)(ಪಶ್ಚಿಮ-1-3),(ವಾಯುವ್ಯ-5),(ಉತ್ತರ-2-3),(ದಕ್ಷಿಣ-1-3),(ನೈರುತ್ಯ-3), (ನೈರುತ್ಯ-6)ಮತ್ತು (ಪೂರ್ವ-2-4)ಉಪವಿಭಾಗಗಳಲ್ಲಿ ನೀರಿನ ಬಿಲ್ಲು, ನೀರು ಮತ್ತು ಒಳಚರಂಡಿ ಸಂಪರ್ಕ ಕಲ್ಪಿಸುವಲ್ಲಿನ ವಿಳಂಬ, ಗೃಹ ಬಳಕೆಯಿಂದ ಗೃಹೇತರ ಬಳಕೆ ಪರಿವರ್ತನೆ ವಿಳಂಬ ಮತ್ತಿತರ ಕುಂದುಕೊರತೆಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸಲು ಸಾರ್ವಜನಿಕರು ಮಂಡಳಿಯ 24/7 ದೂರು ನಿರ್ವಹಣಾ ಕೇಂದ್ರದ ಸಹಾಯವಾಣಿ 1916 ಗೆ ಕರೆಮಾಡಿ ಅಥವಾ ವಾಟ್ಸ್‌ಆಪ್ ಸಂಖ್ಯೆ: 8762228888 ಸಂದೇಶದ ಮೂಲಕ ದೂರನ್ನು ಸಲ್ಲಿಸಬಹುದು ಎಂದು ಮಂಡಳಿ ತಿಳಿಸಿದೆ.

ಜಿಬಿಎನಿಂದ ಮತ್ತೆ ಟೋಯಿಂಗ್ ಜಾರಿ

ಬೆಂಗಳೂರು: ನಗರದ ವಾಹನ ಸವಾರರು ಎಲ್ಲೆಂದರಲ್ಲಿ ವಾಹನ ಪಾರ್ಕ್ ಮಾಡಿ ತೆರಳುವಾಗ ಎಚ್ಚರಿಕೆಯಿಂದಿರಬೇಕಾಗಿದ್ದು, ಟೋಯಿಂಗ್ ವ್ಯವಸ್ಥೆಯನ್ನು ಪುನಾರಂಭಿಸಲು ಜಿಬಿಎ ಹಾಗೂ ಸಂಚಾರಿ ಪೊಲೀಸರು ನಿರ್ಧರಿಸಿದ್ದಾರೆ.

2022ರಲ್ಲಿ ಸ್ಥಗಿತಗೊಳಿಸಲಾಗಿದ್ದ ಟೋಯಿಂಗ್ ವ್ಯವಸ್ಥೆಯನ್ನು ಇದೀಗ ಮತ್ತೆ ಆರಂಭಿಸಲು ಜಿಬಿಎ ಹಾಗೂ ಸಂಚಾರಿ ಪೊಲೀಸರು ಮುಂದಾಗಿದ್ದು, ಮಾರ್ಚ್ 25 ರಿಂದಲೇ ಬೆಂಗಳೂರಿನಲ್ಲಿ ಟೋಯಿಂಗ್ ಪ್ರಕ್ರಿಯೆ ಪುನಾರಂಭವಾಗುವ ಸಾಧ್ಯತೆ ಇದೆ. ಎಲ್ಲೆಂದರಲ್ಲಿ ವಾಹನಗಳನ್ನು ಪಾರ್ಕ್ ಮಾಡುತ್ತಿರುವ ಸಮಸ್ಯೆಗೆ ಕಡಿವಾಣ ಹಾಕುವ ಉದ್ದೇಶದಿಂದ ಈ ಕ್ರಮಕ್ಕೆ ಮುಂದಾಗಿದ್ದು, ಪ್ರತಿ ಪಾಲಿಕೆ ವ್ಯಾಪ್ತಿಗೆ 2 ಟೋಯಿಂಗ್ ವಾಹನಗಳಂತೆ ಒಟ್ಟು 10 ವಾಹನಗಳನ್ನು ಒದಗಿಸಲಾಗಿದೆ.

ಜಿಬಿಎ ಸಹಯೋಗದಲ್ಲಿ ಟೋಯಿಂಗ್ ಕಾರ್ಯಾಚರಣೆ: ಈ ಟೋಯಿಂಗ್ ಕಾರ್ಯಾಚರಣೆ ಜಿಬಿಎ ಸಹಯೋಗದಲ್ಲಿ ನಡೆಯಲಿದ್ದು, ಟೋಯಿಂಗ್ ಕಾರ್ಯಕ್ಕೆ ಅಗತ್ಯ ಸಿಬ್ಬಂದಿಯನ್ನು ಜಿಬಿಎ ವತಿಯಿಂದ ನಿಯೋಜಿಸಲಾಗುತ್ತದೆ. ಸಂಚಾರಿ ಪೊಲೀಸರು ದಂಡ ವಿಧಿಸುವ ಕೆಲಸ ಮಾಡಲಿದ್ದು, ಟೋಯಿಂಗ್ ಕಾರ್ಯವನ್ನು ಜಿಬಿಎ ಸಿಬ್ಬಂದಿ ನಿರ್ವಹಿಸಲಿದ್ದಾರೆ.

ನೋ ಪಾರ್ಕಿಂಗ್ ಉಲ್ಲಂಘನೆಗೆ ಈಗಾಗಲೇ 500 ರು. ದಂಡ ನಿಗದಿ ಮಾಡಲಾಗಿದೆ. ಇದಕ್ಕೆ ಹೆಚ್ಚುವರಿಯಾಗಿ ವಾಹನಗಳ ಆಧಾರದಲ್ಲಿ ಟೋಯಿಂಗ್ ಚಾರ್ಜ್ ನಿಗದಿಪಡಿಸಲಾಗಿದೆ. ದ್ವಿಚಕ್ರ ವಾಹನಗಳಿಗೆ 650 ರು. ಟೋಯಿಂಗ್ ಚಾರ್ಜ್ ನಿಗದಿಪಡಿಸಲಾಗಿದ್ದು, ನಾಲ್ಕು ಚಕ್ರದ ವಾಹನಗಳಿಗೆ 1000 ರು . ಟೋಯಿಂಗ್ ಚಾರ್ಜ್ ನಿಗದಿ ಮಾಡಲಾಗಿದೆ. ಈ ಹಿಂದಿನಂತೆ ಟೋಯಿಂಗ್ ವೇಳೆ ಸಾರ್ವಜನಿಕರು ಮತ್ತು ಸಿಬ್ಬಂದಿ ನಡುವೆ ಗಲಾಟೆಗಳು ನಡೆಯುತ್ತಿದ್ದ ಹಿನ್ನೆಲೆಯಲ್ಲಿ, ಈ ಬಾರಿ ಟೋಯಿಂಗ್ ವಾಹನಗಳಲ್ಲಿ ಸಿಸಿಟಿವಿ ಕ್ಯಾಮರಾ ಅಳವಡಿಸಲಾಗುತ್ತದೆ. ಜತೆಗೆ ಟೋಯಿಂಗ್ ಸಿಬ್ಬಂದಿಗೆ ಬಾಡಿ ವಾರ್ನ್ ಕ್ಯಾಮರಾ ಕಡ್ಡಾಯಗೊಳಿಸಲಾಗಿದೆ.

ವೇತನ ವಿಳಂಬ: ಕಸ ಸಂಗ್ರಹಣೆ ಸ್ಥಗಿತ

ಬೆಂಗಳೂರು: ವೇತನ ಬಾಕಿ ಹಾಗೂ ಹೊಸ ಕಸ ವಿಂಗಡಣಾ ನಿಯಮಗಳ ವಿರುದ್ಧ ಆಟೋ ಚಾಲಕರು ಸಾಮೂಹಿಕ ರಜೆ ಘೋಷಿಸಿದ್ದು, 50 ವಾರ್ಡ್‌ಗಳಲ್ಲಿ ಕಸ ಸಂಗ್ರಹಣೆಯು ಸ್ಥಗಿತಗೊಂಡಿರುವುದರಿಂದ ತ್ಯಾಜ್ಯ ಸಂಗ್ರಹಣೆಯು ಅಸ್ತವ್ಯಸ್ತಗೊಂಡಿದೆ.

ನಗರದ 50 ವಾರ್ಡ್‌ಗಳಲ್ಲಿ ವೇತನ ಬಾಕಿ ಹಾಗೂ ಕಸ ವಿಂಗಡಣೆ ಕುರಿತ ಹೊಸ ನಿಯಮದ ವಿರುದ್ಧ ಪ್ರತಿಭಟನೆಯ ಸಲುವಾಗಿ ಆಟೋ ಟಿಪ್ಪರ್ ಚಾಲಕರು ಮತ್ತು ಲೋಡರ್ ಗಳು ಸಾಮೂಹಿಕ ರಜೆ ಹಾಕಿದ್ದರಿಂದ ತ್ಯಾಜ್ಯ ಸಂಗ್ರಹಣೆ ಹಾಗೂ ವಿಲೇವಾರಿಯಲ್ಲಿ ಅಡಚಣೆಯುಂಟಾಗಿದೆ. ಬೆಂಗಳೂರು ಘನ ತ್ಯಾಜ್ಯ ನಿರ್ವಹಣಾ ಸಂಸ್ಥೆಯು ಮೂಲದಲ್ಲೇ ಕಸದ ವಿಂಗಡಣೆ ಕಡ್ಡಾಯವಾಗಬೇಕು ಎಂದು ಒತ್ತಾಯಿಸು ತ್ತಿದ್ದು, ಗುತ್ತಿಗೆದಾರರು ಇದನ್ನು ವಿರೋಧಿಸಿ ದ್ದಾರೆ. ಕಸ ವಿಂಗಡಿಸುವ ಜವಾಬ್ದಾರಿ ಕಸ ಉತ್ಪಾದಕರದ್ದೇ ಹೊರತು ಕಸ ಸಂಗ್ರಹಿ ಸುವವರದ್ದಲ್ಲ ಎಂದು ವಾದ ಮಂಡಿಸಿದ್ದಾರೆ. ಬಿಎಸ್‌ಡಬ್ಲ್ಯುಎಂಎಲ್‌ನ ಸಿಇಒ ಕರೀಗೌಡ, ಸುಮಾರು 40-50 ವಾರ್ಡ್‌ಗಳಲ್ಲಿ ಮಾತ್ರ ಸಮಸ್ಯೆ ಉಂಟಾಗಿದ್ದು, ನಗರದ ಉಳಿದ ಭಾಗ ಗಳಲ್ಲಿ ಸಂಗ್ರಹಣೆ ಸಾಮಾನ್ಯವಾಗಿದೆ. ಅಲ್ಲದೆ ಕಳೆದ ನಾಲ್ಕು ತಿಂಗಳ ವೇತನ ಪಾವತಿಗೆ ಕ್ರಮ ಕೈಗೊಳ್ಳಲಾಗಿದೆ ಎಂದೂ ಸಹ ಸ್ಪಷ್ಟಪಡಿಸಿದ್ದಾರೆ.

ಕಸ ಸಂಗ್ರಹಿಸದ ಗುತ್ತಿಗೆದಾರರ ವಿರುದ್ಧ ಅಗತ್ಯ ಸೇವೆಗಳ ಕಾಯಿದೆಯಡಿಯಲ್ಲಿ 35 ಎಫ್‌ಐಆರ್‌ಗಳು ದಾಖಲಾಗಿವೆ. ಗುತ್ತಿಗೆದಾರರ ಸಂಘವು ಹೊಸ ನಿಯಮಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದೆ. ಬಿಬಿಎಂಪಿ ಕಸ ಗುತ್ತಿಗೆದಾರರ ಸಂಘದ ಅಧ್ಯಕ್ಷ ಎಸ್‌ಎನ್ ಬಾಲಸುಬ್ರಮಣಿಯನ್, ತ್ಯಾಜ್ಯವನ್ನು ಬೇರ್ಪಡಿಸುವ ಜವಾಬ್ದಾರಿ ತ್ಯಾಜ್ಯ ಉತ್ಪಾದಕರ ಮೇಲಿದೆ ಎಂದು ಹೇಳಿದ್ದಾರೆ.ತ್ಯಾಜ್ಯವನ್ನು ಬೇರ್ಪಡಿಸುವುದನ್ನು ಖಚಿತಪಡಿಸಿಕೊಳ್ಳುವಂತೆ ಬಿಎಸ್ಡಬ್ಲ್ಯುಎಂಎಲ್ ನಮ್ಮ ಆಟೋ ಚಾಲ ಕರು ಮತ್ತು ಲೋಡರ್‌ಗಳಿಗೆ ಹೇಳಲಾಗಿದೆ. ನಾವು ತ್ಯಾಜ್ಯವನ್ನು ಹೇಗೆ ಬೇರ್ಪಡಿಸಬಹುದು? ಇದು ಮ್ಯಾನುಯಲ್ ಸ್ಕ್ಯಾವೆಂಜರ್ಸ್ ಕಾಯ್ದೆ ಉಲ್ಲಂಘನೆಗೆ ಸಮನಾಗುವುದಿಲ್ಲವೇ ಎನ್ನಲಾಗಿದೆ.

ಅನಧಿಕೃತ ಫ್ಲೆಕ್ಸ್ ತೆರವು ಕಾರ್ಯಾಚರಣೆ

ಬೆಂಗಳೂರು: ಉತ್ತರ ನಗರ ಪಾಲಿಕೆಯ ವ್ಯಾಪ್ತಿಯಲ್ಲಿ ನಗರವನ್ನು ಸ್ವಚ್ಛ, ಸುಂದರ ಹಾಗೂ ನಿಯಮ ಬದ್ಧವಾಗಿಡುವ ಉದ್ದೇಶದಿಂದ ಸೋಮವಾರ ಮತ್ತು ಮಂಗಳವಾರ ದಂದು ನಗರ ಪಾಲಿಕೆಯ ಆಯುಕ್ತ ಪೊಮ್ಮಲ ಸುನೀಲ್ ಕುಮಾರ್ ನಿರ್ದೇಶನದಂತೆ ಅನಧಿಕೃತ ಫ್ಲೆಕ್ಸ್ ಮತ್ತು ಬ್ಯಾನರ್‌ಗಳನ್ನು ತೆರವುಗೊಳಿಸುವ ವಿಶೇಷ ಅಭಿಯಾನ ಹಮ್ಮಿಕೊಳ್ಳಲಾಯಿತು. ಈ ಅಭಿಯಾನದಲ್ಲಿ ವಿವಿಧ ವಿಭಾಗಗಳಲ್ಲಿ ವ್ಯಾಪಕವಾಗಿ ಕಾರ್ಯಾಚರಣೆ ನಡೆಸಿ ಸಾವಿರಾರು ಫ್ಲೆಕ್ಸ್ ಮತ್ತು ಬ್ಯಾನರ್‌ಗಳನ್ನು ತೆರವುಗೊಳಿಸಲಾಯಿತು. ಈ ಅಭಿಯಾನವು ನಗರದಲ್ಲಿ ಅನಧಿಕೃತ ಜಾಹೀರಾತುಗಳನ್ನು ನಿಯಂತ್ರಿಸುವುದು, ರಸ್ತೆ ಸುರಕ್ಷತೆ ಹೆಚ್ಚಿಸುವುದು ಹಾಗೂ ನಗರ ಸೌಂದರ್ಯವನ್ನು ಕಾಪಾಡುವುದು ಎಂಬ ಉದ್ದೇಶ ಹೊಂದಿದೆ ಎಂದರು.

ವಿಶ್ವವಾಣಿ
ವಿಶ್ವಾಸವೇ ವಿಶ್ವ
ಕುಟುಂಬದ ಸದಸ್ಯರಾಗಲು ಬಯಸುತ್ತೀರಾ..?
ಆಕರ್ಷಕ ವೇತನದೊಂದಿಗೆ
ಇಲ್ಲಿದೆ ಅವಕಾಶ
ಬೇಕಾಗಿದ್ದಾರೆ
- ಪುಟ ವಿನ್ಯಾಸಕರು
- ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್
- ಷೆಡ್ಯೂಲಿಂಗ್ ಎಕ್ಸಿಕ್ಯೂಟಿವ್
- ಗ್ರಾಫಿಕ್ ಡಿಸೈನರ್
ವಿದ್ಯಾರ್ಹತೆ: ಪಿಯುಸಿ / ಡಿಪ್ಲೋಮಾ / ಪದವಿ
ಪುಟ ವಿನ್ಯಾಸದ ಜತೆ ಕನ್ನಡ ಟೈಪಿಂಗ್ ಗೊತ್ತಿರಬೇಕು.
ಪತ್ರಿಕೆಗಳಲ್ಲಿ ಕನಿಷ್ಠ ಮೂರು ವರ್ಷ ಕೆಲಸ ಮಾಡಿದ ಅನುಭವಿ ಪುಟ ವಿನ್ಯಾಸಕರಿಗೆ ಆದ್ಯತೆ. ಇನ್‌ಡಿಸೈನ್, ಫೋಟೋಶಾಪ್, ಗ್ರಾಫಿಕ್ ಡಿಸೈನಿಂಗ್ ತಿಳಿದಿರುವ ಆಸಕ್ತರೂ ಅರ್ಜಿ ಸಲ್ಲಿಸಬಹುದು.

ನಿಮ್ಮ ಅರ್ಜಿಗಳನ್ನು 30/3/2026ರೊಳಗೆ ಈ ಕೆಳಗಿನ ಇ-ಮೇಲ್ ವಿಳಾಸಕ್ಕೆ ಕಳುಹಿಸಿ ಅಥವಾ ವಾಟ್ಸ್ ಆ್ಯಪ್ ಮಾಡಿ. ರೆಸ್ಯೂಮ್ ಜತೆ ನಿಮ್ಮ ಇತ್ತೀಚಿನ ಭಾವಚಿತ್ರ ಲಗತ್ತಿಸಿ.
ವಿಶ್ವವಾಣಿ
hr@vishwavani.news
63623 93988

ಪಂಚಮಸಾಲಿ ಪೀಠದ ಹಣ ಶ್ವಾಸ ಕೇಂದ್ರಕ್ಕೆ ಬಳಸಿಲ್ಲ | ಶ್ವಾಸಕೇಂದ್ರದ ಅನುದಾನ ಪಂಚಮಸಾಲಿ ಹರಪೀಠದ ಅಭಿವೃದ್ಧಿಗೆ ಬಳಕೆ

ಪಂಚಮಸಾಲಿಯೇ ನನ್ನ ಶ್ವಾಸ: ವಚನಾನಂದ ಸ್ವಾಮೀಜಿ

ಬೆಂಗಳೂರು: ಹರಿಹರ ಪಂಚಮಸಾಲಿ ಗುರು ಪೀಠದ ಗೊಂದಲಕ್ಕೆ ಸಂಬಂಧ ಮೌನ ಮುರಿದ ವಚನಾನಂದ ಸ್ವಾಮೀಜಿ ಪಂಚಮಸಾಲಿ ಸಮಾಜವೇ ನನ್ನ ಶ್ವಾಸ, ಪಂಚಮಸಾಲಿ ಸಮಾಜವೇ ನನ್ನ ಸರ್ವಸ್ವ ಎಂದಿದ್ದಾರೆ.

ಪಂಚಮಸಾಲಿ ಪೀಠಕ್ಕಿಂತ ಶ್ವಾಸಯೋಗ ಕೇಂದ್ರಕ್ಕೆ ಹೆಚ್ಚಿನ ಒತ್ತು ನೀಡುತ್ತಿದ್ದಾರೆ ಎನ್ನುವ ಆರೋಪ ಸಂಬಂಧ ಪ್ರಕಟಣೆ ನೀಡಿರುವ ಅವರು, ಪಂಚಮಸಾಲಿ ಪೀಠದ ಹಣವನ್ನು ಶ್ವಾಸ ಕೇಂದ್ರಕ್ಕೆ ಬಳಸಿಲ್ಲ. ಆದರೆ ಶ್ವಾಸಕೇಂದ್ರದ ಅನುದಾನವನ್ನು ಪಂಚಮಸಾಲಿ ಹರಪೀಠದ ಅಭಿವೃದ್ಧಿಗೆ ಬಳಸಲಾಗಿದೆ ಎಂದು ಸ್ಪಷ್ಟಪಡಿಸಿದ್ದಾರೆ.

ಬೆಂಗಳೂರು ಭೂಪಸಂದ್ರದಲ್ಲಿರುವ ಶ್ವಾಸಯೋಗ ಕೇಂದ್ರವು ಬಾಡಿಗೆ ಕಟ್ಟಡದಲ್ಲಿದೆ. ಶ್ವಾಸಯೋಗ ಪೀಠಕ್ಕೆ ಹರಿಹರ ವೀರಶೈವ ಲಿಂಗಾಯತ ಪಂಚಮಸಾಲಿ ಜಗದ್ಗುರು ಪೀಠ (ಹರಪೀಠ) ದಿಂದ ಒಂದೇ ಒಂದು ರುಪಾಯಿ ಹಣ ಹೋಗಿಲ್ಲ. ಆದರೆ ಶ್ವಾಸಯೋಗ ಪೀಠದಿಂದ ಹರಪೀಠದ ಅಭಿವೃದ್ಧಿಗೆ ಹಣವನ್ನು ಬಳಸಿದ್ದೇವೆ. ಶ್ವಾಸಯೋಗ ಪೀಠದ ಹೆಸರಿನಲ್ಲಾಗಲಿ, ನಮ್ಮ ಹೆಸರಿನಲ್ಲಾಗಲಿ ಒಂದೇ ಒಂದು ಇಂಚು ಭೂಮಿಯೂ ಇಲ್ಲ. ಹರಪೀಠದಿಂದ ಯಾವುದೇ ಹಣಕಾಸಿನ ವ್ಯವಹಾರ ಮಾಡಿಲ್ಲ. ಒಂದೇ ಒಂದು ರುಪಾಯಿ ನಮ್ಮ ಸ್ವಂತ ಖರ್ಚಿಗೆ ಪಡೆದಿಲ್ಲ. ಯಾವುದೇ ಚೆಕ್‌ಗಳಿಗೆ ಸಹಿ ಮಾಡಿಲ್ಲ ಹಾಗೂ ಅದರ ಅಧಿಕಾರವನ್ನು ಪಡೆದಿಲ್ಲ. ಸಮಾಜದ ಕಟ್ಟಕಡೆಯ ವ್ಯಕ್ತಿಯ ಧ್ವನಿಯಾಗಿ, ನಮ್ಮ ಸಮಾಜದ ಸಂಸ್ಕೃತಿ ಪರಂಪರೆಯ ವಾರಸುದಾರನಾಗಿ ಸಮಾಜಸೇವೆಗೆ ನನ್ನನ್ನು ಸಮರ್ಪಿಸಿಕೊಂಡಿದ್ದೇನೆ. ನಾನು ಪೀಠವನ್ನು ಅರಸಿಕೊಂಡು ಬರಲಿಲ್ಲ. ಪೀಠವೇ ನನ್ನನ್ನು ಅರಸಿಕೊಂಡು ಬಂದಿದೆ. ಈ ಸಮಾಜದ ನೊಗವನ್ನು ಹೊರಲು ಯಾರೂ ಇಲ್ಲದ ಸಂದರ್ಭದಲ್ಲಿ ಸಮಾಜದ ಕಟ್ಟಕಡೆಯ ವ್ಯಕ್ತಿಗೆ ಅನಾಥ ಪ್ರಜ್ಞೆ ಕಾಡುತ್ತಿದ್ದಾಗ, ಈ ಸಮಾಜದ ಜವಾಬ್ದಾರಿಯ ನೊಗವನ್ನು ಹೊತ್ತಿದ್ದೇನೆ. ನನ್ನೆಲ್ಲ ಶಕ್ತಿ ಸಾಮರ್ಥ್ಯವನ್ನು ಸಮರ್ಪಿಸಿಕೊಂಡಿದ್ದೇನೆ ಎಂದು ಸ್ಪಷ್ಟಪಡಿಸಿದ್ದಾರೆ.

ನಾವು ಯಾವುದೇ ಹಣಕಾಸಿನ ಅವ್ಯವಹಾರದಲ್ಲಿಲ್ಲ. ನಾವು ಬಹಳ ಸ್ವಚ್ಛವಾಗಿದ್ದೇವೆ. ನಮ್ಮ ಹೆಸರಿನಲ್ಲಿ ಒಂದೇ ಒಂದು ಇಂಚು ಭೂಮಿಯಿಲ್ಲ. ನಾನು ಪೀಠಕ್ಕೆ ಬಂದಿರುವುದು ಹಣ ಮಾಡಲಿಕ್ಕಲ್ಲ. ಜಗವನ್ನೇ ಸುತ್ತಿದವನು ನಾನು, ಆದರೆ ಜನರನ್ನ ಮಾಡಿದ್ದೇನೆ. ಬಡವ ಇರಲಿ, ಬಲ್ಲಿದನಿರಲಿ ನಾನು ಬಡತನದಿಂದ ಬಂದವನು.

-ವಚನಾನಂದ ಸ್ವಾಮೀಜಿ, ಹರಪೀಠ

'ಯಾವತ್ತೂ ಯಾರೊಬ್ಬರ ಅಡಿಯಾಗದೆ, ಸಮಸ್ತ ಸಮಾಜದ ಅಡಿಗೆ ಎಡೆಯಾಗಿದ್ದೇನೆ' ಸಮಾಜವನ್ನು ಸುತ್ತು, ಕಟ್ಟು ಎಂಬ ತತ್ತ್ವದ ಅಡಿಯಲ್ಲಿ ನನ್ನನ್ನು ನಾನು ಸಮರ್ಪಣೆ ಮಾಡಿಕೊಂಡಿದ್ದೇನೆ. 'ಭಕ್ತರ ಮನೆಯಂಗಳವೇ ನನ್ನ ಕಾಶಿ, ಭಕ್ತನೇ ಭೂಮಿಯ ಮೇಲಿನ ಭಗವಂತ. ಪಂಚಮಸಾಲಿ ಸಮಾಜವೇ ನನ್ನ ಶ್ವಾಸ, ಪಂಚಮಸಾಲಿ ಸಮಾಜವೇ ನನ್ನ ಸರ್ವಸ್ವ. ಈ ಕ್ಷಣದಿಂದ ಸಮಾಜದ ಅತ್ಯಂತ ಕಡುಬಡವನ ಮನೆಗೆ ಪಾದಾರ್ಪಣೆ ಮಾಡುತ್ತೇನೆ. ನನ್ನ ಶ್ವಾಸ ಇರುವವರೆಗೆ ಕಡುಬಡವರ ಗುಡಿಸಲಿರಲಿ, ಮನೆ ಇರಲಿ ಶೈಕ್ಷಣಿಕವಾಗಿ, ಸಾಮಾಜಿಕವಾಗಿ, ಧಾರ್ಮಿಕವಾಗಿ, ಆಧ್ಯಾತ್ಮಿಕವಾಗಿ, ಯೋಗಿಕವಾಗಿ ಈ ಸಮಾಜವನ್ನು ಉದ್ಧಾರದ ಹೆದ್ದಾರಿಗೆ ತೆಗೆದುಕೊಂಡು ಹೋಗಲು ಸನ್ನದ್ಧನಾಗಿದ್ದೇನೆ ಎಂದಿದ್ದಾರೆ.

ನಮ್ಮ ಉದ್ದೇಶ ಸಮಾಜವನ್ನು ಸರ್ವತೋಮುಖವಾಗಿ ಬೆಳೆಸುವುದಾಗಿದೆ. ಉಳಿದ ವಿಚಾರಗಳಾದ ಹಣಕಾಸಿನ ಅವ್ಯವಹಾರ ಕುರಿತು ಸಂಘ, ಟ್ರಸ್ಟಿಗಳು ಹಾಗೂ ಆಡಳಿತಾಧಿಕಾರಿಗಳಾದ ಡಾ.ರಾಜಕುಮಾರರು ಉತ್ತರ ನೀಡುತ್ತಾರೆ ಎಂದು ಸ್ಪಷ್ಟಪಡಿಸಿದ್ದಾರೆ.



ಸಮಾಚಾರ ಸಣ್ಣದಲ್ಲ

ಪ್ರಾಮಾಣಿಕ ವ್ಯಕ್ತಿ ಚರಂತಿಮಠ ಗೆಲ್ಲಿಸಿ

ಬಾಗಲಕೋಟೆ: ಅಭಿವೃದ್ಧಿಯ ಹರಿಕಾರ ವೀರಣ್ಣ ಚರಂತಿಮಠ ಅವರು ರಾಜ್ಯಖಂಡ ಅತ್ಯಂತ ಪ್ರಾಮಾಣಿಕ ರಾಜಕಾರಣಿ ಎಂದು ವಿಧಾನ ಪರಿಷತ್

ಮಾಜಿ ಸದಸ್ಯ ಎಂ.ಡಿ ಲಕ್ಷ್ಮೀನಾರಾಯಣ ಹೇಳಿದರು. ಅವರು ನವನಗರದ 63 ನೇ ಸೇಕ್ಟರ್ ನಲ್ಲಿ ಬಿಜೆಪಿ ಅಭ್ಯರ್ಥಿ ಡಾ.ವೀರಣ್ಣ ಚರಂತಿಮಠ ಅವರ ಪರವಾಗಿ ಮತಯಾಚನೆ ಮಾಡಿ ಮಾತನಾಡಿದ ಅವರು, ಬಾಗಲಕೋಟೆಯನ್ನು ಮಾದರಿ ಕ್ಷೇತ್ರವನ್ನಾಗಿಸುವಲ್ಲಿ ಚರಂತಿಮಠರ ಕಾರ್ಯ ಶ್ಲಾಘನೀಯವಾಗಿದೆ, ಕ್ಷೇತ್ರಕ್ಕೆ ಸರಕಾರದಿಂದ ಕೆಲಸ ತಂದು ಅದನ್ನು ಪೂರ್ಣಗೊಳಿಸಿ ಜನರಸೇವೆಗೆ ಅಣಿಯಾಗುವರೆಗೂ ಅವರು ವಿಶ್ರಮಿಸುವುದಿಲ್ಲ, ಅಂತ ಪ್ರಾಮಾಣಿಕರನ್ನು ಜನ ಮತ ನೀಡಿ ಹಾರಿಸಿತರಬೇಕೆಂದು ಜನರಲ್ಲಿ ವಿನಂತಿಸಿದರು.

ದೇಶದ ಭದ್ರತೆಗಾಗಿ ಬಿಜೆಪಿಗೆ ಮತ ನೀಡಿ

ಬಾಗಲಕೋಟೆ : ಪ್ರಧಾನಿ ನರೇಂದ್ರ ಮೋದಿಯವರು ದೇಶದ ಭದ್ರತೆಗೆ ಆದ್ಯತೆ ನೀಡಿದ್ದರಿಂದ ಇಂದು ದೇಶ ಸುರಕ್ಷಿತವಾಗಿದೆ. ದೇಶ ಹಾಗೂ ನಾಡಿನ ಭದ್ರತೆಗೆ ಬಿಜೆಪಿ ಅವಶ್ಯವಾಗಿದ್ದು, ಬಿಜೆಪಿಗೆ ಮತನೀಡಿ ಎಂದು ನವೀನ್ ಚರಂತಿಮಠ ಮತಯಾಚನೆ ಮಾಡಿದರು. ನವನಗರದ 21ನೇ ವಾರ್ಡಿನ ರಾಜೀವ ಗಾಂಧಿ ಆಶ್ರಯ ಕಾಲೋನಿಯಲ್ಲಿ ಮನೆಮನೆಗೆ ತೆರಳಿ ಮಾತನಾಡಿ ಅವರು, ದೇಶದ ಭದ್ರತೆ, ಮಹಿಳೆಯರಿಗೆ, ರೈತರಿಗೆ, ಕಾರ್ಮಿಕರಿಕೆ ಯುವಕರಿಗೆ ಅನೇಕ ಯೋಜನೆಗಳ ಕೇಂದ್ರ ಬಿಜೆಪಿ ಸರಕಾರ ನೀಡುತ್ತಿದೆ. ಬಾಗಲಕೋಟೆ ಬಿಜೆಪಿ ಅವಧಿಯಲ್ಲಿ ಸಾಕಷ್ಟು ಅಭಿವೃದ್ಧಿ ಖಂಡಿದೆ ಎಂದರು. ಬಸವರಾಜ ಅವರಾಧಿ, ಯಲ್ಲಪ್ಪ ನಾರಾಯಣಿ, ನಾಗರಾಜ ನಾರಾಯಣಕರ, ಚೇತನ ನಾಯ್ಕರ್, ಕಾಂತು ಖಾತೆದಾರ, ಮಹಾದೇವಪ್ಪ ಸಪಡಲಿ, ಅಮೃತಾ ಚಳಿಗೇರಿ, ಬಸಪ್ಪ ಹಂದರಗಲ್ಲ, ರಿಯಾಜ್ ಮುದಿನವರ, ಯಲ್ಲಪ್ಪ ದುರಿಗಿಮುರಗಿ ಸೇರಿ ನೂರಾರು ಕಾರ್ಯಕರ್ತರು ಭಾಗವಹಿಸಿದ್ದರು.

ಬಾಗಲಕೋಟೆ: 14 ಅಭ್ಯರ್ಥಿಗಳು ಕಣದಲ್ಲಿ

ಬಾಗಲಕೋಟೆ: ಬಾಗಲಕೋಟೆ ವಿಧಾನಸಭಾ ಉಪಚುನಾವಣೆಗೆ 16 ಅಭ್ಯರ್ಥಿಗಳಿಂದ 26 ನಾಮಪತ್ರಗಳು ಸಲ್ಲಿಕೆಯಾಗಿದ್ದವು. ಮಂಗಳವಾರ ನಡೆದ ನಾಮಪತ್ರ ಪರಿಶೀಲನೆಯಲ್ಲಿ 14 ಅಭ್ಯರ್ಥಿಗಳ ನಾಮಪತ್ರಗಳು ಕ್ರಮಬದ್ಧವಾಗಿದ್ದು, ಇಬ್ಬರು ಅಭ್ಯರ್ಥಿಗಳ ನಾಮಪತ್ರಗಳು ತಿರಸ್ಕೃತಗೊಂಡಿವೆ ಎಂದು ಚುನಾವಣಾಧಿಕಾರಿ ಸಂತೋಷ ಜಗಲಾಸರ ತಿಳಿಸಿದ್ದಾರೆ. ಕಾಂಗ್ರೆಸ್‌ನಿಂದ ಉಮೇಶ ಮೇಟಿ, ಬಿಜೆಪಿಯಿಂದ ವೀರಭದ್ರಯ್ಯ ಚರಂತಿಮಠ, ಉತ್ತಮ ಪ್ರಜಾಕೀಯ ಪಾರ್ಟಿಯ ಅಂತೋಷ ಸವ್ವಾಸೆ, ಜನತಾ ಚಳವಳಿ ಭಾರತ ಪಕ್ಷದ ತೇಜೋರಾಮ ಶೆಟ್ಟಿ ದೇವಾಂಗ, ಕೆಆರ್‌ಎಸ್‌ನ ನಾಗರಾಜ ಕಲಕುಟಗರ, ಬ್ಲೂ ಇಂಡಿಯಾ ಪಾರ್ಟಿಯ ತಳವಾರ ಶಿವಕುಮಾರ, ಆಲ್ ಇಂಡಿಯಾ ಜನರಕ್ಷಕ ಪಾರ್ಟಿಯಿಂದ ಸಿದ್ದಪ್ಪ ಗೋಡಿ, ಪಕ್ಷೇತರರಾಗಿ ಅಬ್ದುಲ್ ರಜಾಕ ಬಾಳಿಕಾಯಿ, ಆಯ್ಯುಬಖಾನ ಲಾಲಸಾಬ ಬಾಗೇವಾಡಿ, ಆನಂದ ಜಕಾತಿ, ಗೋವಿಂದಪ್ಪ ಬಳ್ಳಾರಿ, ಪ್ರಶಾಂತ ಶರಣಪ್ಪ ರಾವ, ಯಂಕಪ್ಪ ಬಾಪಣ್ಣ ಕಮತಗಿ, ರವಿ ಶಿವಪ್ಪ ಪಡಸಲಗಿ ಚುನಾವಣೆ ಕಣದಲ್ಲಿದ್ದಾರೆ.

ಹರಿದು ಹಂಚಿಹೋಗುತ್ತಾ ಅಲ್ಪಸಂಖ್ಯಾತರ ಮತ | ಟಿಕೆಟ್ ಕೈತಪ್ಪಿದ ಅಸಮಾಧಾನ, ಕಾಂಗ್ರೆಸ್‌ಗೆ ತೊಡಕು?

38 ಅಭ್ಯರ್ಥಿಗಳಲ್ಲಿ 23 ಮುಸ್ಲಿಂಮರು!

ಗಣೇಶ್ ಕಮ್ಮಾಪುರ ದಾವಣಗೆರೆ:

ದಾವಣಗೆರೆ ದಕ್ಷಿಣ ಕ್ಷೇತ್ರದ ಸೋಲು-ಗೆಲುವಿನಲ್ಲಿ ನಿರ್ಣಾಯಕ ಸ್ಥಾನದಲ್ಲಿರುವ ಮುಸ್ಲಿಂ ಸಮುದಾಯದವರಿಗೆ ಕಾಂಗ್ರೆಸ್ ಟಿಕೆಟ್ ನೀಡದ್ದರಿಂದ ಬರೋಬ್ಬರಿ 23 ಅಲ್ಪಸಂಖ್ಯಾತ ಅಭ್ಯರ್ಥಿಗಳು ಸ್ವತಂತ್ರ, ಬಂಡಾಯವಾಗಿ ನಾಮಪತ್ರ ಸಲ್ಲಿಸಿ ತಮ್ಮ ಅಸಮಾಧಾನ ಹೊರಹಾಕುವ ಮೂಲಕ ಕಾಂಗ್ರೆಸ್‌ಗೆ ಸೆಡ್ಡು ಹೊಡೆದಂತಿದೆ.

ಸೋಮವಾರ ತಂತಮ್ಮ ಬೆಂಬಲಿಗರೊಂದಿಗೆ ಆಗಮಿಸಿದ ಮುಸ್ಲಿಂ ಅಭ್ಯರ್ಥಿಗಳು ಸಿಎಂ, ಡಿಸಿಎಂ ಇದ್ದರೂ ಕ್ಯಾರೆ ಎನ್ನದೇ ನಾಮಪತ್ರ ಸಲ್ಲಿಸಿದ್ದಾರೆ. ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಟಿಕೆಟ್‌ಗಾಗಿ ದೊಡ್ಡಮಟ್ಟದಲ್ಲಿ ಲಾಬಿ ನಡೆದಿತ್ತು. ಅದರಲ್ಲೂ ಹೆಚ್ಚಿನ ಸಂಖ್ಯೆಯಲ್ಲಿರುವ ಮುಸ್ಲಿಂಮರು ಟಿಕೆಟ್ ನಮ್ಮ ಸಮುದಾಯಕ್ಕೇ ಸಿಗಬೇಕೆಂದು ಪಟ್ಟು ಡಿದಿದ್ದರು. ಸಚಿವ ಜಮೀರ್ ಆಹಮದ್ ಟಿಕೆಟ್ ನೀಡದಿದ್ದರೆ ರಾಜೀನಾಮೆ ಸಲ್ಲಿಸುವ ಬೆದರಿಕೆ ಸಹ ಒಡ್ಡಿದ್ದರು. ಆದರೂ, ಹೈಕಮಾಂಡ್ ಅಳೆದು ತೂಗಿ ಶಾಮನೂರು ಕುಟುಂಬಕ್ಕೆ ಅಸ್ತು ಎಂದಿದೆ.

ಇದರಿಂದ ಅಸಮಾಧಾನಗೊಂಡ ಸಾದಿಕ್ ಪೈಲ್ವಾನ್ ಮತ್ತಿತರರು ಬರಂಗವಾಗಿಯೇ ಅಸಮಾಧಾನ ವ್ಯಕ್ತಪಡಿಸಿದ್ದಲ್ಲದೇ ನಾಮಪತ್ರ ಸಲ್ಲಿಸಿ, ಅಖಾಡಕ್ಕೆ ಇಳಿದಿದ್ದಾರೆ. ಕೊನೆ ದಿನದವರೆಗೆ ಅಂದರೆ ಸೋಮವಾರದವರೆಗೆ ಒಟ್ಟು 38 ನಾಮಪತ್ರಗಳು ಸಲ್ಲಿಕೆಯಾಗಿದ್ದು, ಬಿಜೆಪಿ, ಕಾಂಗ್ರೆಸ್ ಸೇರಿದಂತೆ ಎಎಪಿ, ಎಸ್‌ಡಿಪಿಐ ಒಟ್ಟು 12 ಇತರೆ ಪಕ್ಷಗಳಿಂದ ನಾಮಪತ್ರ ಸಲ್ಲಿಕೆಯಾಗಿವೆ. 21 ಅಭ್ಯರ್ಥಿಗಳು ಸ್ವತಂತ್ರ ಅಭ್ಯರ್ಥಿಗಳಾಗಿ ನಾಮಪತ್ರ ಸಲ್ಲಿಸಿದ್ದಾರೆ. ಒಟ್ಟಾರೆ 45 ನಾಮಪತ್ರಗಳು ಸಲ್ಲಿಕೆಯಾಗಿವೆ.

ಹಿಂದೆ ಸರಿದ ಶಿವಸೇನೆ: ದಾವಣಗೆರೆ ದಕ್ಷಿಣ ಚುನಾವಣಾ ಕಣಕ್ಕಿಳಿಯಲು ಸಕಲ ಸಿದ್ಧತೆ ನಡೆಸಿದ್ದ ಶಿವಸೇನೆ (ಶಿಂಧೆ ಬಣ) ತದನಂತರ ಒದೆ ಸರಿದದ್ದು ಅಚ್ಚರಿ ಮೂಡಿಸಿದೆ. ಇದರಿಂದ ಂದುತ್ವದ ಮತಗಳು ಚದುರಿಹೋಗುವ ಸಾಧ್ಯತೆ ಕಡಿಮೆಯಾಗಿದ್ದು, ಬಿಜೆಪಿ ಒಂದಿಷ್ಟು ಅನುಕೂಲಕವೆನಿಸಿದೆ.

ಕಾಂಗ್ರೆಸ್ ಬಂಡಾಯ ಅಭ್ಯರ್ಥಿಯಾಗಿ ಸೋಮವಾರ ಸಾದಿಕ್ ಪೈಲ್ವಾನ್ ನಾಮಪತ್ರ ಸಲ್ಲಿಸಿದರು.

ನಾಮಪತ್ರ ಸಲ್ಲಿಸಿದ ಅಭ್ಯರ್ಥಿಗಳು?

ಬಿಜೆಪಿ-ಶ್ರೀನಿವಾಸ ದಾಸಕರಿಯಪ್ಪ, ಕಾಂಗ್ರೆಸ್- ಸಮರ್ಥ ಶಾಮನೂರು, ಆಮ್ ಆದ್ಮಿ ಪಾರ್ಟಿ- ಕೆ.ಎಸ್. ಶಿವಕುಮಾರಪ್ಪ, ಬ್ಲೂ ಇಂಡಿಯಾ ಪಾರ್ಟಿ-ಖಾಜಾ ಮೋದ್ದೀನ್ ಗುಡಗೇರಿ, ಯಂಗ್‌ಸ್ಟರ್ ಎಂಪವರ್‌ಮೆಂಟ್ ಪಾರ್ಟಿ- ಶಾಬಾಜುಲ್ಲಾಖಾನ್, ಎಸ್‌ಡಿಪಿಐ-ಅಫ್ಸರ್ ಕೆ.ಬಿ., ಇಸ್ಮಾಯಿಲ್ ಜಬಿವುಲ್ಲಾ, ಉತ್ತಮ ಪ್ರಜಾಕೀಯ ಪಕ್ಷ- ಈಶ್ವರ, ಕಂಟ್ರಿ ಸಿಟಿಜನ್ ಪಾರ್ಟಿ- ಎ.ಟಿ. ದಾದಾ ಕಲಂದರ್, ಜನತ ಪಕ್ಷ- ಸೈಯ್ಯದ್ ಇಫ್ತಿಯಾಜ್‌ನವಭಾರತ್ ಸೇನಾ- ಎಂ.ಜಿ.ಶ್ರೀಕಾಂತ್, ಜನತಾ ಚಳವಳಿ ಪಾರ್ಟಿ- ಜಿ.ಎನ್.ಪ್ರಶಾಂತ್‌ಕುಮಾರ್, ಕರ್ನಾಟಕ ರಾಷ್ಟ್ರ ಸಮಿತಿ-ಎಚ್.ಕೆ.ದಾವುಲ್ ಸಾಬ್, ಇಂಡಿಯನ್ ಪೊಲಿಟಿಕಲ್ ಕಾಂಗ್ರೆಸ್- ಈರಣ್ಣ ಭಾರತೀಯ ಪ್ರಜೆಗಳ ಕಲ್ಯಾಣ ಪಕ್ಷ-ಎಂ.ಸಿ.ಶ್ರೀನಿವಾಸ.

ಕಾಂಗ್ರೆಸ್‌ಗೆ ತಟ್ಟುತ್ತಾ ಬಂಡಾಯದ ಬಿಸಿ?

ದಾವಣಗೆರೆ ದಕ್ಷಿಣವೆಂದರೆ ಅದು ಅಲ್ಪಸಂಖ್ಯಾತರ ಜೇನುಗೂಡು ಇದ್ದಂತೆ.

ಆದರೆ, ಈ ಬಾರಿ ಮುಸ್ಲಿಂರಿಗೆ ಟಿಕೆಟ್ ದಕ್ಕದಿರುವುದರಿಂದ ಅಲ್ಪಸಂಖ್ಯಾತರೂ ನೇರವಾಗಿಯೇ ಅಸಮಾಧಾನ ಹೊರಹಾಕಿದ್ದಾರೆ. ಬಂಡಾಯ, ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸುವವರ ಸಂಖ್ಯೆ ಹೆಚ್ಚಿರುವುದು ಒಂದೆಡೆಯಾದರೆ ಮತ್ತೊಂದೆಡೆ ಅನೇಕ ಮುಸ್ಲಿಂ ಮುಖಂಡರು, ಯುವಕರು ಬಿಜೆಪಿಗೆ ಸೇರ್ಪಡೆಯಾಗುತ್ತಿರುವುದು ಕಾಂಗ್ರೆಸ್‌ಗೆ ನುಂಗಲಾರದ ತುಪ್ಪವಾಗಿ ಪರಿಣುಸಿದೆ.

ಸ್ವತಂತ್ರ ಅಭ್ಯರ್ಥಿಗಳಾಗಿ ನಾಮಪತ್ರ ಸಲ್ಲಿಸಿದವರು

ಸಾದಿಕ್ ಪೈಲ್ವಾನ್ (ಕಾಂಗ್ರೆಸ್ ಬಂಡಾಯ), ಸೈಯ್ಯದ್ ಚಾಂದ್‌ಪೀರ್, ಡಿ.ಸಯ್ಯದ್ ರಿಯಾಜ್, ಗೌತಮ್ ಕುಮಾರ್ ಯು. ಜೈನ್, ಯು.ಎಂ.ಮನ್ಸೂರ್ ಅಲಿ, ಬಿ. ರಾಜಶೇಖರ್, ಸಿ.ಎಂ.ಮಂಜುನಾಥಯ್ಯಸ್ವಾಮಿ, ಎಚ್.ಸುಬಾನ್ ಸಾಬ್, ಸೈಯ್ಯದ್ ಜಬಿವುಲ್ಲಾ ಸಾಜಿದ್, ಡಿ.ಹನುಮಂತಪ್ಪ, ಎಸ್.ಎಲ್. ಆನಂದಪ್ಪ, ಎಸ್.ಕೆ.ಅಫ್ಜಲ್ ಖಾನ್, ಬಿ.ಅಲ್ಲಾಬಕ್ಷಿ, ಎಚ್.ಪರ್ವೇಜ್, ಎಸ್.ಸಿ. ತ್ರಿಮೂರ್ತಿ, ಅಮೀರ್ ಅಹಮದ್ ಖಾನ್, ಟಿ.ಜಬೀನ್‌ತಾಜ್, ಕೆ.ಎಚ್.ಮಹಬೂಬ್, ಖಾದರ್ ಆದಿಲ್ ಬಾಷಮೊಹಮದ್ ಜಬಿವುಲ್ಲಾ, ಸುಭಾನ್ ಖಾನ್.

ಸಹೋದರಿಗೆ ಕೊಟ್ಟ ವಚನ ಪಾಲಿಸುತ್ತಾರಾ ಉಮೇಶ್?

ಉಮೇಶ್ ಮೇಟಿಗೆ ವಚನ ಪಾಲನೆಯೇ ದೊಡ್ಡ ಸವಾಲು

ಬಾಗಲಕೋಟೆ: ಕಾಂಗ್ರೆಸ್ ಪಕ್ಷ ದಿ.ಎಚ್.ವೈ. ಮೇಟಿ ಅವರ ಪುತ್ರಿ ಮಹಾದೇವಿ ಮೇಟಿ ಅವರ ಷರತ್ತಿಗೆ ಕಟ್ಟುಬಿದ್ದು ಉಮೇಶ ಮೇಟಿ ಅವರಿಗೆ ಟಿಕೆಟ್ ಘೋಷಣೆ ಮಾಡಿದೆ. ಕಾಂಗ್ರೆಸ್ ಅಭ್ಯರ್ಥಿಯಾಗಿ ಸೋಮವಾರ

ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಸಚಿವರು, ಪಕ್ಷದ ಮುಖಂಡರ ನೇತೃತ್ವದಲ್ಲಿ ಉಮೇಶ ಅವರು ನಾಮಪತ್ರ ಸಲ್ಲಿಸಿದ್ದಾರೆ. ಈ ವೇಳೆ ತಮ್ಮ ಸಹೋದರಿಗೆ ಕೊಟ್ಟ ವಚನ ಪಾಲನೆ ಬಹುದೊಡ್ಡ ಸವಾಲಾಗಿ ಪರಿಣಮಿಸಿದೆ.

ಮಹಾದೇವಿ ವಚನ ಪಡೆದಿದ್ದೇನು: ಕಾಂಗ್ರೆಸ್ ಅಭ್ಯರ್ಥಿಯಾಗಿ ಉಮೇಶ ಮೇಟಿ ಅವರು ತಮ್ಮ ಸಹೋದರಿ ಮಹಾದೇವಿ ಅವರಿಗೆ ನೀಡಿದ ವಚನದಂತೆ ನಡೆದುಕೊಳ್ಳವುದು ಅನಿವಾರ್ಯ. ಮೂರನೇ ವ್ಯಕ್ತಿಯ ಹಸ್ತಕ್ಷೇಪದಿಂದ ದೂರವೇ ಇರಬೇಕಿದೆ. ಅದು ಅಂದುಕೊಂಡಷ್ಟು ಸುಲಭವಲ್ಲ. ಹಾಗಾಗಿ ವಚನ ಪಾಲನೆ ಸದ್ಯ ಸಾಕಷ್ಟು ಕುತೂಹಲಕ್ಕೆ ಕಾರಣವಾಗಿದೆ.

ವಚನ ಪಾಲನೆ: ಪಕ್ಷ ಉಮೇಶ್ ಮೇಟಿ ಅವರಿಗೆ ಟಿಕೆಟ್ ನೀಡಿದೆ. ಈಗ ಉಮೇಶ್ ಮೇಟಿ ಅವರು ಸಹೋದರಿಗೆ ನೀಡಿದ (ಆಣೆ-ಪ್ರಮಾಣ) ವಚನದಂತೆ ನಡೆದುಕೊಳ್ಳಬೇಕಿದೆ. ಎಷ್ಟರ ಮಟ್ಟಿಗೆ ನಡೆದುಕೊಳ್ಳುತ್ತಾರೆ ಎನ್ನುವುದರತ್ತಲೇ ಬಹುತೇಕರು ಚಿತ್ತ್ಯೆಸಿದ್ದಾರೆ. ಕಾಂಗ್ರೆಸ್ ಅಭ್ಯರ್ಥಿ ಸಹೋದರಿಗೆ ನೀಡಿದ ವಚನ ಪಾಲಿಸಲು, ಷರತ್ತಿನಂತೆ ಮೂರನೇ ವ್ಯಕ್ತಿಯನ್ನು ದೂರವಿದ್ದಾರೆ .

ಮಹಾದೇವಿ ಮೇಟಿ ಅವರ ಪ್ರಕಾರ ಮೂರನೇ ವ್ಯಕ್ತಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಆಪ್ತರಾಗಿದ್ದಾರೆ. ಸಿದ್ದರಾಮಯ್ಯ ಇದ್ದಲ್ಲಿ ಅವರಿರುತ್ತಾರೆ. ಹಾಗಾಗಿ ಉಮೇಶ್ ಮೇಟಿ ಅವರು ಆ ಮೂರನೇ ವ್ಯಕ್ತಿಯನ್ನು ದೂರವಿಡುವ ಮೂಲಕ ಸಹೋದರಿಗೆ ನೀಡಿದ ವಚನವನ್ನು ಎಷ್ಟರ ಮಟ್ಟಿಗೆ ಪಾಲಿಸಲಿದ್ದಾರೆ ಎನ್ನುವುದನ್ನು ಕಾಯ್ದು ನೋಡಬೇಕಿದೆ. ಕಾಂಗ್ರೆಸ್ ಅಭ್ಯರ್ಥಿ ಉಮೇಶ ಮೇಟಿ ಅವರು ಮೂರನೇ ವ್ಯಕ್ತಿ ದೂರವಿಟ್ಟು ಸಹೋದರಿಗೆ ಕೊಟ್ಟ ವಚನ ಪಾಲಿಸುತ್ತಾರೋ, ಹತ್ತಿರ ಬಿಟ್ಟುಕೊಂಡು ವಚನ ಭ್ರಷ್ಟರಾಗುತ್ತಾರೋ ಎನ್ನುವದು ಕಾದು ನೋಡಬೇಕಿದೆ.

ಆಣೆ-ಪ್ರಮಾಣದ ಒಪ್ಪಂದ

ದಿ.ಶಾಸಕ ಎಚ್.ವೈ.ಮೇಟಿ ಅವರ ಕುಟುಂಬಸ್ಥರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಲು ಹೋಗುವ ಸಮಯದಲ್ಲಿ ಮಹಾದೇವಿ ಮೇಟಿ ಅವರು ಉಮೇಶ ಮೇಟಿ ಅವರಿಂದ ಕ್ಷೇತ್ರದ ಆಡಳಿತದಲ್ಲಿ ಮೂರನೇ ವ್ಯಕ್ತಿಯ ಹಸ್ತಕ್ಷೇಪದಿಂದ ದೂರವಿರಬೇಕು ಎನ್ನುವ ಆಣೆ-ಪ್ರಮಾಣ ಮಾಡಿಸಿಕೊಂಡಿದ್ದರಂತೆ. ಈ ಕುರಿತು ಅವರೇ ಮಾಧ್ಯಮಗಳ ಮುಂದೆ ಹೇಳಿಕೊಂಡಿದ್ದಾರೆ. ಆಣೆ-ಪ್ರಮಾಣದ ಹಿನ್ನೆಲೆಯಲ್ಲಿಯೇ ಬಂಡಾಯ ಬಾವುಟ ಹಾರಿಸುವುದಾಗಿ ಹೇಳಿದ್ದ ಮಹಾದೇವಿ ಮೇಟಿ ಅವರು ಉಮೇಶ್ ಮೇಟಿ ಅವರನ್ನು ಬೆಂಬಲಿಸುವ ನಿರ್ಧಾರಕ್ಕೆ ಬಂದಿದ್ದಾರೆ.

ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾ ರಾಜ್ಯ ಘಟಕದ ಅಧ್ಯಕ್ಷ ರಘು ಕೌಟಿಲ್ಯ

ಅಹಿಂದ ಅಭಿವೃದ್ಧಿ ಕಡೆಗಣಿಸಿದ ಸಿದ್ದರಾಮಯ್ಯ

ದಾವಣಗೆರೆ: ದಾವಣಗೆರೆಯಲ್ಲಿ ಪ್ರಜಾಪ್ರಭುತ್ವವನ್ನು ಪಾಳೇಗಾರಿಕೆ ಸಂಸ್ಕೃತಿಯಿಂದ ಹೊರತರಲು ಉಪಚುನಾವಣೆಯು ನೆರವಾಗಲಿದೆ ಎಂದು ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾ ರಾಜ್ಯ ಘಟಕದ ಅಧ್ಯಕ್ಷ ರಘು ಕೌಟಿಲ್ಯ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಸಂಪತ್ತಿಗೆ ಸವಾಲು ಹಾಕುವುದಾಗಿ ಕ್ಷೇತ್ರದ ಮತದಾರರು ಹೇಳುತ್ತಿದ್ದಾರೆ. ಹಿಂದುಳಿದ ವರ್ಗಗಳ ಸಮುದಾಯದವರು ಈ ಬಾರಿ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿಯನ್ನು ಗೆಲ್ಲಿಸಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಹಿಂದ ಸಮುದಾಯಗಳ ಅಭಿವೃದ್ಧಿಯನ್ನು ಸಂಪೂರ್ಣವಾಗಿ ಕಡೆಗಣಿಸಿದ್ದಾರೆ. ಬಜೆಟ್ ಪ್ರತಿಯಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಬಗ್ಗೆ ಪ್ರಸ್ತಾಪವೇ ಇರಲಿಲ್ಲ. ದಾವಣಗೆರೆ ದಕ್ಷಿಣ ಕ್ಷೇತ್ರವು ಎರಡೂವರೆ ದಶಕದಿಂದ ಅಭಿವೃದ್ಧಿಯಿಂದ ವಂಚಿತವಾಗಿದೆ. ಶಾಮನೂರು ಕುಟುಂಬ ಹೈಕಮಾಂಡ್ ನಾಯಕರನ್ನೇ ಹೆದರಿಸಿ ಟಿಕೆಟ್ ಪಡೆದಿದೆ. ಜನಸಾಮಾನ್ಯರ ಅಭ್ಯರ್ಥಿ ಶ್ರೀನಿವಾಸ ದಾಸಕರಿಯಪ್ಪ ಅವರು ಹೆಚ್ಚಿನ ಮತಗಳ ಅಂತರದಿಂದ ಗೆಲುವು ಸಾಧಿಸಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ ಎನ್. ರಾಜಶೇಖರ್, ಮುಖಂಡರಾದ ರಾಜನಹಳ್ಳಿ ಶಿವುಕುಮಾರ್, ಅಶ್ವಿನಿ, ಜಯಮ್ಮ, ವೀರೇಶ್ ಬಾತಿ, ತಿಪ್ಪೇಸ್ವಾಮಿ ಸೇರಿದಂತೆ ಇನ್ನಿತರರಿದ್ದರು.



ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾ ಅಧ್ಯಕ್ಷ ರಘು ಕೌಟಿಲ್ಯ ಮಾತನಾಡಿದರು.

> ಮುಸ್ಲಿಂ ಸಮುದಾಯದವರನ್ನು ಕಾಂಗ್ರೆಸ್ ಮತ ಹಾಕಲು ಮಾತ್ರ ಬಳಸಿಕೊಂಡಿದೆ. ಸಮುದಾಯವನ್ನು ಕಡೆಗಣಿಸಿರುವುದು ಮುಸ್ಲಿಮರಿಗೆ ಈಗ ಅರ್ಥವಾಗುತ್ತಿದೆ. ಅವರು ಈ ಬಾರಿ ಕಾಂಗ್ರೆಸ್‌ಗೆ ತಕ್ಕ ಪಾಠ ಕಲಿಸಲಿದ್ದಾರೆ.
> **- ರಘು ಕೌಟಿಲ್ಯ, ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾ ಅಧ್ಯಕ್ಷ**

ಚರಂತಿಮಠ ಪರ ಕಾರಜೋಳ ಮತಬೇಟೆ

ಬಾಗಲಕೋಟೆ: ಮತಕ್ಷೇತ್ರದ ಪ್ರಗತಿಗಾಗಿ, ಅಭಿವೃದ್ಧಿಯ ಪಥದಲ್ಲಿ ಸಾಗಲು ಕಮಲದ ಗುರುತಿಗೆ ಮತನೀಡಿ ಎಂದು ಸಂಸದ ಗೋವಿಂದ ಕಾರಜೋಳ ಹೇಳಿದರು.

ಅವರು ಬಾಗಲಕೋಟೆ ಉಪಚುನಾವಣೆ ನಿಮಿತ್ಯ ಮತಕ್ಷೇತ್ರದ ಬೇವೂರ ಗ್ರಾಮದ ಎಸ್ಸಿ ಕಾಲೋನಿಯಲ್ಲಿ ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ ಅವರ ಪರವಾಗಿ ಮತಯಾಚನೆ ಮಾಡಿ ಮಾತನಾಡಿದ ಅವರು ರಾಜ್ಯದಲ್ಲಿ ಬಿಜೆಪಿ ಬಿಜೆಪಿ ಸರಕಾರವಿದ್ದಾಗ ಸಾಕಷ್ಟು ಅಭಿವೃದ್ಧಿ ಕೆಲಸಗಳನ್ನು ಮಾಡಿದೆ. ವೀರಣ್ಣ ಚರಂತಿಮಠ ಶಾಸಕರಾಗಿದ್ದ ಅವದಿಯಲ್ಲಿ ಸುಮಾರು ಆರು ಸಾವಿರ ಕೋಟಿ ರು. ಗಳ ಅನುದಾನ ತಂದು ಬಾಗಲಕೋಟೆ ಮತಕ್ಷೇತ್ರವನ್ನು ಅಭಿವೃದ್ದಿ ಪಡಿಸಿದ್ದಾರೆ, ಗ್ರಾಮಗಳ ಅಭಿವೃದ್ದಿ. ಖಿಜಿಟಲ್ ಗ್ರಂಥಾಲಯ, ಪ್ರಾಥಮಿಕ ಆರೋಗ್ಯ ಕೇಂದ್ರ ಸ್ಥಾಪನೆ, ಹೊಲಗದ್ದೆಗೆ ತೆರಳು ರಸ್ತೆಗಳು, ನೂತನ ಅಂಗನವಾಡಿ ಕೇಂದ್ರಗಳ ಸ್ಥಾಪನೆ ಸೇರಿದಂತೆ ಅನೇಕ ಕೆಲಸಗಳನ್ನು ಮಾಡಿದ್ದಾರೆ ಅವರ ಅಭಿವೃದ್ಧಿ ಕೆಲಸಗಳನ್ನು ಗುರುತಿಸಿ ಮತನೀಡಿ ಮತ್ತೊಮ್ಮೆ ಬಿಜೆಪಿಯನ್ನು ಗೆಲ್ಲಿಸಬೇಕೆಂದರು.

ಮಾಜಿ ಸಚಿವ ಎನ್ ಮಹೇಶ ಮಾತನಾಡಿ ರಾಜ್ಯ ಕಾಂಗ್ರೆಸ್ ಸರಕಾರ ಮಿಸಲಾತಿಯಲ್ಲಿ ದಲಿತರಿಗೆ ಅನ್ಯಾಯ ಮಾಡುತ್ತಿದೆ, ಇಂಥ ಸರಕಾರವನ್ನು ಕಿತ್ತೆಸೆಯಬೇಕೆಂದರು.

ಗ್ರಾಮೀಣ ಮಂಡಲ ಅಧ್ಯಕ್ಷ ಸುರೇಶ ಕೋಣ್ಣೂರ, ಪರಪ್ಪ ಗುನ್ನಿ, ಈರಪ್ಪ ಅಕ್ಕಿ, ನಿಂಗಪ್ಪ ಮಾಗನೂರ, ಸಂಗಣ್ಣ ರಾಮದಂಡ, ಹುಶೇನ ನದಾಫ್, ರಾಜು ಮುದೇನೂರ, ರಾಮಣ್ಣ ಮಾದರ, ದ್ಯಾಮಣ್ಣ ಮಾದರ, ಬಸು ಮಾದರ ಸೇರಿದಂತೆ ಅನೇಕರು ಭಾಗವಹಿಸಿದ್ದರು.

ಬೇವೂರು ಗ್ರಾಮದಲ್ಲಿ ಗೋವಿಂದ ಕಾರಜೋಳ ಹಾಗೂ ಎನ್.ಮಹೇಶ್ ವೀರಣ್ಣ ಚರಂತಿಮಠ ಪರ ಪ್ರಚಾರ ನಡೆಸಿದರು.

ನಗರಸಭೆಯಲ್ಲಿ ಲಂಚ ಮೂವರ ಬಂಧನ

ಕೋಲಾರ: 15 ಸಾವಿರ ರು.ಲಂಚ ಪಡೆದುಕೊಳ್ಳುತ್ತಿದ್ದ ಕೋಲಾರ ನಗರಸಭೆಯ ರೆವಿನ್ಯೂ ಇನ್‌ಸ್ಪೆಕ್ಟರ್ ಎನ್. ಕಿರಣ್ ಕುಮಾರ್, ಬಿಲ್ ಕಲೆಕ್ಟರ್ ನಟರಾಜ್ ಮತ್ತು ಏಜೆಂಟ್ ವೆಂಕಟೇಶಪ್ಪ ಅವರನ್ನು ಲೋಕಾಯುಕ್ತ ಪೊಲೀಸರು ಬಂಧಿಸಿ ಜೈಲಿಗೆ ಕಳುಹಿಸಿದ್ದಾರೆ. ಸುಲ್ತಾನ್ ತಿಪ್ಪಸಂದ್ರದ ಸೈಟ್ ಪರಿಶೀಲಿಸಿ ವರದಿ ನೀಡಲು ಮುನಾವರ್ ಅವರಿಂದ ಈಗಾಗಲೇ 8 ಸಾವಿರ ರು. ಪಡೆದುಕೊಂಡಿದ್ದ ಆರೋಪಿಗಳು ನಗರಸಭೆ ಆವರಣದಲ್ಲಿ 15 ಸಾವಿರ ರು.ಪಡೆದುಕೊಳ್ಳುವಾಗ ಹಣದ ಸಮೇತ ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ.

ಸಾಲ: ಹೋಟೆಲ್ ಮಾಲೀಕ ಆತ್ಮಹತ್ಯೆ

ಬೆಳಗಾವಿ: ಸಾಲ ಭಾದೆ ತಾಳಲಾರದೇ ಹೋಟೆಲ್ ಮಾಲೀಕರೊಬ್ಬರು ನೇಣುಬಿಗಿದುಕೊಂಡು ಆತ್ಮಹತ್ಯೆ

ಮಾಡಿಕೊಂಡ ಘಟನೆ ಬೆಳಗಾವಿ ಜಿಲ್ಲೆಯ ಹುಕ್ಕೇರಿ ಪಟ್ಟಣದಲ್ಲಿ ನಡೆದಿದೆ. ಪಟ್ಟಣದ ಹಳೆಬಸ್ ನಿಲ್ದಾಣ ಹತ್ತಿರದ ಹೋಟೆಲ್ ಮಾಲೀಕ ರಾಮು ಹಳ್ಳೂರಿ (50) ಮೃತ ದುರ್ದೈವಿ. ವ್ಯಾಪಾರ ನಷ್ಟಕ್ಕೀಡಾಗಿ ಸಾಲದ ಹೊರೆ ಹೆಚ್ಚಾಗಿತ್ತು. ಈ ನಡುವೆ ವಾಣಿಜ್ಯ ಗ್ಯಾಸ್‌ಸಿಲಿಂಡರ್ ಪೂರೈಕೆಯಲ್ಲಿ ವ್ಯತ್ಯಯ ಆಗಿ ಕಳೆದ ಕೆಲ ದಿನಗಳಿಂದ ವ್ಯಾಪಾರ ಸಂಪೂರ್ಣ ನಿಂತು ಹೋಗಿತ್ತು. ಈ ಹಿನ್ನೆಲೆ ಮಾರ್ಚ್‌ನಲ್ಲಿ ಸಾಲಗಳನ್ನು ತೀರಿಸುವುದು ತುಂಬಾ ಹೊರೆಯಾಗಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎನ್ನಲಾಗಿದೆ. ಈ ಸಂಬಂಧ ಹುಕ್ಕೇರಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿರಾಮ
ಪ್ರತಿ ಭಾನುವಾರ

ನಾಲ್ಕು ತಾಸಿನಲ್ಲಿ 4 ಸಾವಿರ ಮಂದಿಗೆ ದೋಸೆ ಹಾಕುವ ಸಾಮರ್ಥ್ಯ | ಅಗಲಿದ ಅಡುಗೆ ದಿಗ್ಗಜ

ದೋಸೆ ಮಾಂತ್ರಿಕ ಗಣೇಶ್ ರಾವ್ ನಿಧನ

ಬೆಂಗಳೂರು: ಅತ್ಯಂತ ವೇಗವಾಗಿ ಸ್ವಾದಿಷ್ಟಕರ ರುಚಿಯಲ್ಲಿ ದೋಸೆ ಹಾಕಿ ಹೆಸರಾಗಿದ್ದ ಅಡುಗೆ ಲೋಕದ ದಿಗ್ಗಜ, 'ದೋಸೆ ಗಣೇಶ್ ರಾವ್' (83) ಮಾ.21ರಂದು ವಯೋಸಹಜ

ಅನಾರೋಗ್ಯದಿಂದ ನಿಧನರಾದರು.

ದಕ್ಷಿಣ ಕನ್ನಡ ಮೂಲದವರಾದ ಗಣೇಶ್ ರಾವ್, ಕಡು ಬಡತನದ ನಡುವೆ 4ನೇ ತರಗತಿ ಓದಿದ್ದರು. ತಂದೆ ಮಾಡಿದ ಸಾಲವನ್ನು ತೀರಿಸುವ ಸವಾಲು ಮತ್ತು ಬೆಂಗಳೂರಿನಲ್ಲಿ ಸ್ವಂತ ಮನೆ ಕಟ್ಟುವ ಕನಸನ್ನು ಹೊತ್ತು ಅಡುಗೆ ಕ್ಷೇತ್ರಕ್ಕೆ ಕಾಲಿಟ್ಟ ಇವರು, ನಂತರದ ದಿನಗಳಲ್ಲಿ ಬಹು ಬೇಡಿಕೆ ಮತ್ತು ಗೌರವವನ್ನು ಸಂಪಾದಿಸಿದ್ದರು.

ಕೈ ಚಳಕದ ಅಚ್ಚರಿ: ಗಣೇಶ್ ರಾವ್ ಅವರ ದೋಸೆ ಹಾಕುವ ವೇಗ ಕಲ್ಪನೆಗೂ ಮೀರಿದ್ದು. ಸಾಮಾನ್ಯವಾಗಿ ಆರು ಮಂದಿ ಯುವಕರು ಮೂರು ಹೆಂಚುಗಳಲ್ಲಿ ಮಾಡುವ ಕೆಲಸವನ್ನು ಇವರು ಒಬ್ಬರೇ ಎರಡು ಹೆಂಚುಗಳಲ್ಲಿ ನಿರಾಯಾಸವಾಗಿ ಮಾಡುತ್ತಿದ್ದರು. ಏಕಕಾಲದಲ್ಲಿ ಎರಡು ಹೆಂಚುಗಳಲ್ಲಿ 40 ದೋಸೆಗಳನ್ನು ಹೊಯ್ಯುತ್ತಿದ್ದ ಅವರು, ಕೇವಲ 4 ಗಂಟೆಗಳಲ್ಲಿ 4,000 ಮಂದಿಗೆ ಬಿಸಿಬಿಸಿ ಮಸಾಲೆ ದೋಸೆ ನೀಡಬಲ್ಲ ಸಾಮರ್ಥ್ಯ ಹೊಂದಿದ್ದರು. ವಿಶೇಷವೆಂದರೆ, ಒಂದೇ ಒಂದು ದೋಸೆಯೂ ಸೀದುಹೋಗದಂತೆ ಅಥವಾ ರುಚಿ ಕೆಡದಂತೆ ನೋಡಿಕೊಳ್ಳುವ ಕಲೆ ಅವರಿಗೆ ಸಿದ್ಧಿಸಿತ್ತು.

ವೃತ್ತಿ ಬದ್ಧತೆ: ಗಣೇಶ್ ರಾವ್ ಬಂದರೆ ಮಾತ್ರ ನಮ್ಮ ಮದುವೆಯಲ್ಲಿ ದೋಸೆ ಮೆನು ಇರಲಿ ಎಂದು ಪಟ್ಟು ಹಿಡಿಯುವ ಗ್ರಾಹಕರು ಇದ್ದರು. ವರ್ಷದ ಮುಂಚೆಯೇ ಇವರ ಕಾಲ್‌ಶೀಟ್ ಕಾಯ್ದಿರಿಸುವ ಅಡುಗೆ ಗುತ್ತಿಗೆದಾರರ ದಂಡೇ ಇತ್ತು. ಕೆಲಸದ ಮೇಲಿನ ಶ್ರದ್ಧೆ ಎಷ್ಟಿತ್ತೆಂದರೆ, ನಾಲ್ಕು ತಾಸು ಸತತವಾಗಿ ನಿಂತು ದೋಸೆ ಹಾಕುವಾಗ ಅವರು ಕೇವಲ ನೀರು ಕುಡಿಯುತ್ತಿದ್ದರು. ಮದುಮಕ್ಕಳು ದೋಸೆ ತಿನ್ನುವವರೆಗೂ ಅವರು ಹೆಂಚಿನ ಎದುರಿನಿಂದ ಕದಲುತ್ತಿರಲಿಲ್ಲ. ಇತ್ತೀಚೆಗೆ ಅನಾರೋಗ್ಯದಿಂದ ದೋಸೆ ವೃತ್ತಿಯನ್ನು ಕೈಬಿಟ್ಟಿದ್ದರು. ಗಣೇಶ್ ರಾವ್ ಅವರ ನಿಧನದೊಂದಿಗೆ ಅಡುಗೆ ಕ್ಷೇತ್ರದ ತಜ್ಞರ ಕೊಂಡಿಯೊಂದು ಕಳಚಿದಂತಾಗಿದೆ. ಮೃತರು ಪತ್ನಿ ವಾಣಿ, ಇಬ್ಬರು ಪುತ್ರಿಯರು ಹಾಗೂ ಅಪಾರ ಅಭಿಮಾನಿ ಬಳಗವನ್ನು ಅಗಲಿದ್ದಾರೆ.

ಗಣ್ಯರ ಮೆಚ್ಚಿನ ಬಾಣಸಿಗ

ಇವರ ಕೈರುಚಿಗೆ ಆಸ್ಕರ್ ಪ್ರಶಸ್ತಿ ವಿಜೇತ ಎಆರ್. ರೆಹಮಾನ್ ಶಹಬ್ಬಾಸ್‌ಗಿರಿ ನೀಡಿದ್ದರು. ಖ್ಯಾತ ಗಾಯಕರಾದ ಎಸ್.ಪಿ. ಬಾಲಸುಬ್ರಹ್ಮಣ್ಯಂ, ನಟ ಅನಂತನಾಗ್ ಸೇರಿದಂತೆ ಅನೇಕ ಗಣ್ಯರು ಇವರ ದೋಸೆ ಸವಿದು ಗುಣಗಾನ ಮಾಡಿದ್ದರು. ಸ್ಟಾರ್ ಹೋಟೆಲ್‌ಗಳ ಬಾಣಸಿಗರಿಗೂ ದೋಸೆ ತಯಾರಿಕೆ ಬಗ್ಗೆ ಇವರು ತರಬೇತಿ ನೀಡುತ್ತಿದ್ದರು ಎನ್ನುವುದು ಇವರ ವೃತ್ತಿ ನೈಪುಣ್ಯತೆಗೆ ಸಾಕ್ಷಿ.

ನೀರಿಗಾಗಿ ಗಲಾಟೆ: 21 ಮಂದಿ ಸೆರೆ

ಗದಗ: ಎರಡು ಸಮುದಾಯಗಳ ನಡುವೆ ನೀರಿನ ವಿಚಾರಕ್ಕೆ ನಡೆದ ಗಲಾಟೆ ಪ್ರಕರಣಕ್ಕೆ ಸಂಬಂಧಿಸಿದಂತೆ 21 ಮಂದಿಯನ್ನು ಬಂಧನ ಮಾಡಲಾಗಿದೆ. ಮುಂಡರಗಿ ತಾಲೂಕಿನ ಚಿಕ್ಕ ವಡ್ಡಟ್ಟಿ ಗ್ರಾಮದಲ್ಲಿ ಎಸ್‌ಟಿ ಜನಾಂಗದ ರೈತನ ಜಮೀನಿನಲ್ಲಿ ದಲಿತ ವ್ಯಕ್ತಿ ನೀರಿನ ಬಳಕೆ ವಿಚಾರಕ್ಕೆ ಗಲಾಟೆ ನಡೆದಿತ್ತು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಎರಡು ಗುಂಪಿನ 21 ಜನರ ಬಂಧನ ಮಾಡಲಾಗಿದೆ ಎಂದು ಗದಗ ಎಸ್‌ಪಿ ರೋಹನ್ ಜಗದೀಶ್ ಹೇಳಿದ್ದಾರೆ.

ಚಿಕ್ಕ ವಡ್ಡಟ್ಟಿ ಗ್ರಾಮದಲ್ಲಿ ಸೋಮವಾರ ಸಂಜೆ ಎಸ್‌ಸಿ ಹಾಗೂ ಎಸ್‌ಟಿ ಜನರ ಮಧ್ಯೆ ಈ ಗಲಾಟೆ ನಡೆದಿತ್ತು. ಎಸ್‌ಟಿ ಜನಾಂಗ ರೈತನ ಜಮೀನಿನಲ್ಲಿ ನೀರಿನ ಹೊಂಡ ಇದೆ. ಅದರಲ್ಲಿ ಎಸ್‌ಸಿ ಯುವಕರು ಈಜಲು ಹೋಗಿದ್ದರು. ಬೇಸಿಗೆಯಲ್ಲಿ ಅನಾವಶ್ಯ ನೀರು ಹಾಳು ಮಾಡಬೇಡಿ. ಜನ ಜಾನುವಾರುಗಳಿಗೆ ನೀರಿಲ್ಲ ಎಂದು ಅದಕ್ಕೆ ಎಸ್‌ಟಿ ರೈತ ವಿರೋಧ ಮಾಡಿದ್ದ. ವಿರೋಧಿಸಿದ್ದಕ್ಕೆ ಮಾತಿಗೆ ಮಾತು ಬೆಳೆದು ಗಲಾಟೆಯಾಗಿದೆ. ಎರಡು ಗುಂಪಿನ 32 ಜನರು ಗಾಯಗೊಂಡಿದ್ದು ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಗಾಯಗೊಂಡ ಪೈಕಿ ಕೆಲವನ್ನು ಮುಂಡರಗಿ ತಾಲೂಕು ಆಸ್ಪತ್ರೆಗೆ ದಾಖಲಾಗಿದ್ದರೆ ಇನ್ನು ಕೆಲವು ಗಾಯಾಳುಗಳನ್ನು ಗದಗ ಜಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಕಳೆದ ತಿಂಗಳು ಶಿವರಾತ್ರಿ ಹಬ್ಬದ ಸಂದರ್ಭದಲ್ಲೂ ಸ್ವಲ್ಪ ಗಲಾಟೆ ಆಗಿತ್ತು. ನಂತರ ಹಿರಿಯರ ಸಮ್ಮುಖದಲ್ಲಿ ಮಾತುಕತೆ ನಡೆದು ಸರಿ ಹೋಗಿತ್ತು. ಆದರೆ ಸೋಮವಾರ ಮತ್ತೆ ಹೊಡೆದಾಡಿಕೊಂಡಿದ್ದಾರೆ. ಚಿಕ್ಕ ವಡ್ಡಟ್ಟಿ ಗ್ರಾಮದಲ್ಲಿ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗಿದೆ.

ಪ್ರವಾಸೋದ್ಯಮ ಕ್ಷೇತ್ರದಲ್ಲಿ ಯುವ ಜನತೆಗೆ ಅಡಿಗಾಸ್ ಉದ್ಯೋಗ ಅವಕಾಶ

ಬೆಂಗಳೂರು: ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿರುವ ಅಡಿಗಾಸ್ ಯಾತ್ರಾ

Adigas Yatra

ಸಂಸ್ಥೆ ಇದೀಗ ಪ್ರವಾಸೋದ್ಯಮ ಕ್ಷೇತ್ರದಲ್ಲಿ ಆಸಕ್ತಿ ಇರುವ ಯುವ ಪ್ರತಿಭೆಗಳಿಗೆ ಸುವರ್ಣಾವಕಾಶ ಕಲ್ಪಿಸಿದೆ.

ಸಂಸ್ಥೆಯು ಅರ್ಹ ಅಭ್ಯರ್ಥಿಗಳಿಗೆ ಡೆಸ್ಟಿನೇಶನ್ ಮ್ಯಾನೇಜ್‌ಮೆಂಟ್ ಎಕ್ಸ್‌ಪರ್ಟ್ ಹೆಸರಿನಲ್ಲಿ ದೇಶಾದ್ಯಂತ ಹಾಗೂ ಪ್ರಪಂಚದ ಪ್ರಸಿದ್ಧ ಪ್ರವಾಸಿ ತಾಣಗಳಿಗೆ 3 ತಿಂಗಳ ಅವಧಿಯಲ್ಲಿ ತರಬೇತಿ ಅವಕಾಶ ರೂಪಿಸಿದೆ. ಈ ಅವಧಿಯಲ್ಲಿ ಅಭ್ಯರ್ಥಿಗಳಿಗೆ ಸ್ಟೈಪೆಂಡ್ ಹಾಗೂ ಇನ್ಸೆಂಟಿವ್ ಕೊಡಲಾಗುತ್ತದೆ. ಭೂತಾನ್, ನೇಪಾಳ, ಸಿಂಗಾಪುರ, ಮಲೇಷಿಯಾ, ಥೈಲ್ಯಾಂಡ್, ಜಪಾನ್, ದಕ್ಷಿಣ ಆಫ್ರಿಕಾ, ಅಮೇರಿಕಾ, ಯುರೋಪ್, ಆಸ್ಟ್ರೇಲಿಯಾ, ನ್ಯೂಜಿಲೆಂಡ್, ಇಂಡೋನೇಶಿಯ, ವಿಯೆಟ್ನಾಂ ಇತ್ಯಾದಿ ದೇಶಗಳ ಸಂಪೂರ್ಣ ತರಬೇತಿ ಕೊಡಲಾಗುತ್ತದೆ. ಯಾವುದೇ ಪದವಿ ಹೊಂದಿದವರು, ಪ್ರವಾಸೋದ್ಯಮದಲ್ಲಿ ಆಸಕ್ತಿಯುಳ್ಳವರು ಹಾಗೂ ಹೊಸಬರು ತಮ್ಮ ವೈಯಕ್ತಿಕ ವಿವರ ಒಳಗೊಂಡ ಅರ್ಜಿಗಳನ್ನು adigasyatragmail.com ಈ ವಿಳಾಸಕ್ಕೆ ಕಳುಹಿಸಬಹುದು. ಹೆಚ್ಚಿನ ಮಾಹಿತಿಗಾಗಿ 9611600810 ಸಂಪರ್ಕಿಸಬಹುದು ಎಂದು ಸಂಸ್ಥೆಯ ಎಚ್.ಆರ್ ನವೀನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದಾವಣಗೆರೆ ದಕ್ಷಿಣದಲ್ಲಿ ಮತಬೇಟೆ ಜೋರು | ಎರಡೂ ಪಕ್ಷಗಳಿಂದ ಪ್ರಚಾರ

ಮುಸ್ಲಿಂ ಬಾಹುಳ್ಯ ಪ್ರದೇಶದಲ್ಲಿ ಬಿಜೆಪಿಯಿಂದ ಮತಯಾಚನೆ

ದಾವಣಗೆರೆ: ಮುಸ್ಲಿಂ ಬಾಹುಳ್ಯವಿರುವ ಇಲ್ಲಿನ ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಕಡೆಯುವರು ಮೊದಲ ಬಾರಿಗೆ ಮುಸ್ಲಿಂರ ಮನೆ ಮನೆಗೆ ತೆರಳಿ ಮತಯಾಚನೆ ಮಾಡಿದ್ದಾರೆ. ಇತ್ತ ಕಾಂಗ್ರೆಸ್ ನಾಯಕರು ಹಳೆ ಪಿಬಿ ರಸ್ತೆಯಲ್ಲಿ ಕ್ಯಾಂಪೇನ್ ಮಾಡಿದರು.ಬಿಜೆಪಿ ಅಭ್ಯರ್ಥಿ ಶ್ರೀನಿವಾಸ್ ದಾಸಕರಿಯಪ್ಪ ದಕ್ಷಿಣ ಕ್ಷೇತ್ರದ 13ನೇ ವಾರ್ಡ್‌ನ ಕೆ.ಕೆ ಕಾಲೋನಿ, ದೇವರಾಜ್ ನಗರ, ಇಂದಿರಾನಗರ, ಕಾರ್ಲ್ ಮಾರ್ಕ್ಸ್ ನಗರದಲ್ಲಿ ಅದ್ದೂರಿ ಪ್ರಚಾರ ನಡೆಸಿದರು. ಈ ವೇಳೆ ಕಾಲೋನಿ ನಿವಾಸಿಗಳು ಬಿಜೆಪಿ ಅಭ್ಯರ್ಥಿ ಶ್ರೀನಿವಾಸ್ ದಾಸಕರಿಯಪ್ಪ ಅವರನ್ನು ಅದ್ದೂರಿಯಾಗಿ ಸ್ವಾಗತಿಸಿ ಶುಭವಾಗಲಿ ಎಂದು ಹಾರೈಸಿದರು. ಕಾಂಗ್ರೆಸ್ ಪಕ್ಷದಿಂದ ಮುಸ್ಲಿಮರಿಗೆ ಟಿಕೆಟ್ ಕೈತಪ್ಪಿದ್ದಕ್ಕೆ ಬಿಜೆಪಿಯವರು ಅದನ್ನೇ ಬಂಡವಾಳ ಮಾಡಿಕೊಂಡು ಮೊದಲ ಬಾರಿಗೆ ಮುಸ್ಲಿಂರ ಮನೆ ಮನೆಗೆ ತೆರಳಿ ಮತಯಾಚಿಸುತ್ತಿದ್ದಾರೆ. ಅಲ್ಲದೆ ಕೇಂದ್ರ ಸರಕಾರದ ಸಾಧನೆಗಳ ಬಗ್ಗೆ ತಿಳಿಸುತ್ತಿದ್ದಾರೆ.

ಇಲ್ಲಿನ ಇಮಾಂ ನಗರದಲ್ಲಿ ಮುಸ್ಲಿಂ ಮಹಿಳೆಯರು ಬಿಜೆಪಿ ಅಭ್ಯರ್ಥಿ ಶ್ರೀನಿವಾಸ್ ದಾಸಕರಿಯಪ್ಪ ಅವರ ಪತ್ನಿ ಸಂಧ್ಯಾ ಶ್ರೀನಿವಾಸ್ ಅವರು ಜೆ.ಇಮಾಂ ನಗರದ ಅಲ್ಪಸಂಖ್ಯಾತರ ಮನೆಗಳಿಗೆ ಭೇಟಿ ನೀಡಿ ಮತಯಾಚನೆ ಮಾಡಿದರು. ಈ ವೇಳೆ ಅವರಿಗೆ ಉಡಿ ತುಂಬಿ ಮುಸ್ಲಿಂ ಮಹಿಳೆಯರು ಬೆಂಬಲ ವ್ಯಕ್ತಪಡಿಸಿದರು. ಸಂಧ್ಯಾ ಶ್ರೀನಿವಾಸ್ ಅವರು ತಮ್ಮ ಪತಿ ಪರ ಪ್ರಚಾರ ಮಾಡುವಾಗ, ಅವರನ್ನು ಮನೆ ಒಳಗೆ ಕರೆದುಕೊಂಡು ಹೋಗಿ ಗೌರವಿಸಲಾಯಿತು. ಹಿಂದೂ ಸಂಪ್ರದಾಯದಂತೆ ಮುಸ್ಲಿಂ ಮಹಿಳೆಯರು ಉಂಡಿತುಂಬಿ ಆಶೀರ್ವಾದ ಮಾಡಿದರು. ಈ ಬಾರಿ ನಿಮ್ಮ ಪತಿ ಶ್ರೀನಿವಾಸ್ ಅವರಿಗೆ ಮತ ಹಾಕುತ್ತೇವೆ. ಕಾಂಗ್ರೆಸ್ ಮುಸ್ಲಿಂ ಮತ ಹಾಕಿಸಿಕೊಂಡು ದ್ರೋಹ ಬಗೆದಿದೆ. ಈ ಬಾರಿ ಅವರಿಗೆ ತಕ್ಕ ಪಾಠ ಕಲಿಸುತ್ತೇವೆ ಎಂದರು.



ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಬಿಜೆಪಿ ಹಾಗೂ ಕಾಂಗ್ರೆಸ್‌ನಿಂದ ಮತಪ್ರಚಾರ ನಡೆಯಿತು.

ಸಮಾಚಾರ ಸಣ್ಣದಲ್ಲ

ಹಜ್ ಯಾತ್ರಿಕರಿಗೆ ಪ್ರತ್ಯೇಕ ಟರ್ಮಿನಲ್

ವಿಧಾನ ಪರಿಷತ್: ಮಂಗಳೂರು ವಿಮಾನ ನಿಲ್ದಾಣದಿಂದ ಹಜ್ ಯಾತ್ರೆಗೆ ತೆರಳುವವರಿಗೆ ಮತ್ತೆ ಪ್ರತ್ಯೇಕ ಟರ್ಮಿನಲ್ ಆರಂಭಿಸುವ ನಿರೀಕ್ಷೆಯಿದೆ ಎಂದು ಹಜ್ ಸಚಿವ ರಹೀಂ ಖಾನ್ ಹೇಳಿದರು. ಬೆಂಗಳೂರು ವಿಮಾನ ನಿಲ್ದಾಣದಿಂದ ಹೊರಡುವ ಯಾತ್ರಿಕರಿಗೆ ಬಿಐಎಲ್‌ನಿಂದ ಪ್ರತಿವರ್ಷ ಪ್ರತ್ಯೇಕ ತಾತ್ಕಾಲಿಕ ಟರ್ಮಿನಲ್ ವ್ಯವಸ್ಥೆ ಕಲ್ಪಿಸಲಾ ಗುತ್ತಿದೆ. ಅದೇ ರೀತಿ ಮಂಗಳೂರು ವಿಮಾನ ನಿಲ್ದಾಣದಿಂದ ಪ್ರತ್ಯೇಕ ಟರ್ಮಿನಲ್‌ಗೆ 2 ವರ್ಷಗಳಿಂದ ಕೇಂದ್ರ ಸರಕಾರ ಅನುಮತಿ ನೀಡಿರಲಿಲ್ಲ. ಮತ್ತೆ ಅನುಮತಿ ನೀಡುವ ಕುರಿತು ಕೇಂದ್ರ ಸಚಿವರಿಗೆ ಮನವಿ ಮಾಡಲಾಗಿದ್ದು, ಈ ವರ್ಷ ಆರಂಭಿಸುವ ವಿಶ್ವಾಸ ವಿದೆ ಎಂದರು. ರಾಜ್ಯದಲ್ಲಿ ಪ್ರತಿ ವರ್ಷ ಸಾವಿರಾರು ಮಂದಿ ಹಜ್ ಯಾತ್ರೆ ಕೈಗೊಳ್ಳುತ್ತಿದ್ದಾರೆ. 2025ರಲ್ಲಿ 8 ಸಾವಿರ ಹಾಗೂ ಈ ಬಾರಿ 11 ಸಾವಿರ ಮಂದಿ ಹಜ್ ಯಾತ್ರೆ ತೆರಳಲು ಆಯ್ಕೆಯಾಗಿದ್ದಾರೆ. ಸೌದಿ ಅರೆಬಿಯಾವು ಹಜ್ ಯಾತ್ರಿಕರು ಆರೋಗ್ಯ ತಪಾಸಣೆಯಲ್ಲಿ ದೃಢವಾಗಿರಬೇಕು ಎಂದು ತಿಳಿಸಿದೆ. ಅದರಂತೆ ರಾಜ್ಯ ಸರಕಾರ ಆರೋಗ್ಯ ತಪಾಸಣೆ ನಡೆಸುತ್ತಿದೆ ಎಂದರು.

ಕಸ ವಿಲೇವಾರಿಯಲ್ಲಿ ಮಾಫಿಯಾ: ಅರುಣ್

ವಿಧಾನ ಪರಿಷತ್: ರಾಜ್ಯದಲ್ಲಿ ಕಸ ವಿಲೇವಾರಿ ಮಾಫಿಯಾ ಕಪಿಮುಷ್ಠಿಯಲ್ಲಿದೆ. ದೊಡ್ಡ ಲಾಬಿ ಇದನ್ನು ನಿಯಂತ್ರಿಸುತ್ತಿದೆ ಎಂದು ಬಿಜೆಪಿ ಸದಸ್ಯ ಡಿ.ಎಸ್. ಅರುಣ್ ದೂರಿದರು. ಇತ್ಯಾಜ್ಯ ವಿಲೇವಾರಿ, ವೈದ್ಯಕೀಯ ವಲಯದ ತ್ಯಾಜ್ಯ ವಿಲೇವಾರಿ ಸೇರಿ ಪೂರ್ಣ ಪ್ರಮಾಣದಲ್ಲಿ ಕಸ ವಿಲೇವಾರಿ ವೈಜ್ಞಾನಿಕವಾಗಿ ನಿರ್ವಹಣೆಯಾಗುತ್ತಿಲ್ಲ. ಗ್ರಾಮೀಣ ಭಾಗದಲ್ಲಿಯೂ ಈ ಸಮಸ್ಯೆ ವ್ಯಾಪಕವಾಗಿದೆ. ಈ ಹಿನ್ನೆಲೆಯಲ್ಲಿ ಗ್ರಾಮೀಣಾಭಿವೃದ್ಧಿ, ನಗರಾಭಿವೃದ್ಧಿ ಸೇರಿ ವಿವಿಧ ಇಲಾಖೆಗಳ ಸಮನ್ವಯ ಅಗತ್ಯ ಎಂದರು. ಆ ವೇಳೆ ಪೌರಾಡಳಿತ ಸಚಿವ ರಹೀಂ ಖಾನ್, ಕೆಲವು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಘನ ತ್ಯಾಜ್ಯ ನಿರ್ವಹಣೆಯಲ್ಲಿ ಹಾಗೂ ವಿಲೇವಾರಿಯಲ್ಲಿ ಸಮಸ್ಯೆ ಉಂಟಾಗುತ್ತಿರುವುದನ್ನು ಒಪ್ಪಿಕೊಂಡರು. ಬೆಂಗಳೂರು ನಗರ ಹೊರತುಪಡಿಸಿ ರಾಜ್ಯದ 325 ನಗರ ಸ್ಥಳೀಯ ಸಂಸ್ಥೆಗಳಿಂದ ಪ್ರತಿ ದಿನ 7,304 ಟನ್ ಘನ ತ್ಯಾಜ್ಯ ಉತ್ಪಾದನೆಯಾಗುತ್ತಿದ್ದು, 6,083 ಟನ್‌ಗಳಷ್ಟು ತ್ಯಾಜ್ಯವನ್ನು ಸಂಸ್ಕರಣೆ ಮಾಡಲಾಗುತ್ತಿದೆ, ಯಾವ ಲಾಬಿಗೂ ಮಣಿಯದಂತೆ ಶೀಘ್ರದಲ್ಲಿಯೇ ಸುತ್ತೋಲೆ ಹೊರಡಿಸಲಾಗುವುದು ಎಂದರು.

ಸಿಸಿ, ಓಸಿ ರಹಿತ ವಿದ್ಯುತ್ ಕಲ್ಪಿಸಿ

ಬೆಂಗಳೂರು: ಬೆಂಗಳೂರು ಮತ್ತು ರಾಜ್ಯದ್ಯಂತ ಹೊಸ ನಿರ್ಮಾಣದ ಮನೆಗಳಿಗೆ ಒಂದು ಅವಧಿಗೆ ಸೀಮಿತವಾಗಿ ಸಿಸಿ ಮತ್ತು ಓಸಿ ರಹಿತವಾಗಿ ವಿದ್ಯುತ್ ಸಂಪರ್ಕ ಕಲ್ಪಿಸಲು ಸರಕಾರ ಕ್ರಮ ಕೈಗೊಳ್ಳಬೇಕು ಎಂದು ವಿಧಾನಸಭೆಯ ಪ್ರತಿಪಕ್ಷದ ನಾಯಕ ಆರ್.ಅಶೋಕ ಆಗ್ರಹಿಸಿದ್ದಾರೆ. ವಿಧಾನ ಸಭೆಯಲ್ಲಿ ನಿಯಮ 90ರಡಿ ಬೆಂಗಳೂರಿನ ಸಮಸ್ಯೆಗಳು ಹಾಗೂ ಅಭಿವೃದ್ಧಿ ಕುರಿತು ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿ, ಈ ಹಿಂದೆ ನಮ್ಮ ಸರಕಾರದಲ್ಲೂ ಇದೇ ರೀತಿಯ ಸಮಸ್ಯೆ ಎದುರಾಗಿತ್ತು ಸುಪ್ರೀಂಕೋರ್ಟ್ ಆದೇಶ ನೀಡಿರುವುದು ಉತ್ತರ ಪ್ರದೇಶಕ್ಕೆ ಸೀಮಿತವಾಗಿ ದೇಶದ ಯಾವ ರಾಜ್ಯಗಳು ಇದನ್ನು ಅನುಷ್ಠಾನಗೊಳಿಸುತ್ತಿಲ್ಲ. ಆದರೆ ಕರ್ನಾಟಕದಲ್ಲಿ ಮಾತ್ರ ಪಾಲನೆ ಮಾಡಲಾಗುತ್ತಿದೆ ಎಂದು ಆಕ್ಷೇಪಿಸಿದರು.

ದಿನ ವಿಶೇಷ

25 ಮಾರ್ಚ್ 2026 ಬುಧವಾರ

» ಸೂರ್ಯೋದಯ	: 6-28
» ಸೂರ್ಯಾಸ್ತ	: 6-38
» ತಿಥಿ	: ಸಪ್ತಮಿ
» ನಕ್ಷತ್ರ	: ಮೃಗಶಿರ
» ಸಂವತ್ಸರ	: ಪರಾಭವ
» ಆಯನ	: ಉತ್ತರಾಯಣ
» ಋತು	: ವಸಂತ
» ಮಾಸ	: ಚೈತ್ರ
» ಪಕ್ಷ	: ಶುಕ್ಲಪಕ್ಷ

7 ವರ್ಷಗಳಲ್ಲಿ 1.28 ಕೋಟಿ ರು. ಫಲಾನುಭವಿಗಳ ಪಾವತಿ ಬಾಕಿ | ಕೆಟಿಪಿಪಿ ಕಾಯಿದೆ ಅನುಸರಿಸದೇ ಟೆಂಡರ್ ನಿಯಮ ಉಲ್ಲಂಘನೆ

ಮನರೇಗಾ ಲೋಪ ಎತ್ತಿ ತೋರಿಸಿದ ಸಿವಿಜಿ

ವಿಶ್ವವಾಣಿ ಸುದ್ದಿಮನೆ ವಿಧಾನಸಭೆ

ಈ ಹಿಂದಿನ ಮನರೇಗಾ ಸಂಬಂಧ ಕೇಂದ್ರ ಹಾಗೂ ರಾಜ್ಯ ಸರಕಾರಗಳ ನಡುವೆ ಸಂಘರ್ಷ ನಡೆಯುತ್ತಿರುವ ಬೆನ್ನಲ್ಲೇ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಲ್ಲಿ (ಮನರೇಗಾ) ಟೆಂಡರ್ ಪ್ರಕ್ರಿಯೆ, ಜಾಬ್ ಕಾರ್ಡ್ ಸೇರಿದಂತೆ ಅನೇಕ ಲೋಪಗಳಾಗಿರುವುದನ್ನು ಭಾರತ ಲೆಕ್ಕ ನಿಯಂತ್ರಕ ಹಾಗೂ ಮಹಾ ಲೆಕ್ಕಪಾಲರ (ಸಿಎಜಿ) ವರದಿ ಉಲ್ಲೇಖಿಸಿದೆ.

2019-20ರಿಂದ 2023-24ರ ಅವಧಿಯ ಮನರೇಗಾ ಕಾರ್ಯನಿರ್ವಹಣೆ ಮೇಲಿನ ಸಿಎಜಿ ವರದಿಯನ್ನು ಸರಕಾರ ಮಂಗಳವಾರ ವಿಧಾನಸಭೆಯಲ್ಲಿ ಮಂಡಿಸಿತು. ಸಿಎಜಿ ತನಿಖೆ ನಡೆಸಿದ ಗ್ರಾಮ ಪಂಚಾಯಿತಿಗಳಲ್ಲಿ ಹಲವು 'ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ' (ಕೆಟಿಪಿಪಿ) ಕಾಯಿದೆ ಅನುಸರಿಸದೇ ಟೆಂಡರ್ ನಿಯಮ ಉಲ್ಲಂಘಿಸಿದೆ. ಐದು ಲಕ್ಷ ರುಪಾಯಿ ಮೀರಿದ ಸಾಮಗ್ರಿಗಳ ಖರೀದಿ ಟೆಂಡರ್ ಕರೆಯದೇ ಖರೀದಿಸಿವೆ. ಹೀಗಾಗಿ ರಾಜ್ಯ ಸರಕಾರ ವಿವರವಾದ ತನಿಖೆ ನಡೆಸಬೇಕು ಮತ್ತು ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ದಂಡನಾ ಕ್ರಮ ಪ್ರಾರಂಭಿಸಬೇಕು ಎಂದು ವರದಿಯಲ್ಲಿ ಶಿಫಾರಸು ಮಾಡಲಾಗಿದೆ.

ಕಳೆದ ಏಳು ವರ್ಷಗಳ ಅವಧಿಯಲ್ಲಿ 1.28 ಕೋಟಿ ರುಪಾಯಿಗಳಷ್ಟು ಫಲಾನುಭವಿಗಳ ಬಾಕಿ ಪಾವತಿಯಾಗದೇ ಉಳಿದಿದೆ. ಈ ನಷ್ಟಕ್ಕೆ ಹೊಣೆಗಾರಿಕೆಯನ್ನು ನಿಗದಿ ಮಾಡಿ ಬಾಕಿ ಕಾಮಗಾರಿಗಳ ಸ್ಥಿತಿಗತಿ ಪರಿಶೀಲನೆ ಮಾಡಬೇಕು. ಮನರೇಗಾ ಅಡಿ ಹಲವು ಕಾಮಗಾರಿಗಳು ಇನ್ನೂ ಬಾಕಿ ಇವೆ. ಇವುಗಳನ್ನು ಪೂರ್ಣಗೊಳಿಸಲು ಕಾರ್ಯಯೋಜನೆ ರೂಪಿಸಬೇಕು ಎಂದು ಶಿಫಾರಸು ಮಾಡಲಾಗಿದೆ.

ವರದಿಯ ಪ್ರಮುಖಾಂಶಗಳು

- ಮೀಸಲಾತಿ ನೀತಿ ಅನುಸರಿಸದೇ ಯೋಜನೆಗೆ ಗುತ್ತಿಗೆ ಸಿಬ್ಬಂದಿ ನೇಮಕ
- ಮಹಿಳೆಯರು, ಎಸ್‌ಸಿ, ಎಸ್‌ಟಿ, ವಿಕಲಚೇತನರಿಗೆ ಪ್ರಾತಿನಿಧ್ಯ ಸಿಕ್ಕಿಲ್ಲ
- ಮಾನವ ಸಂಪನ್ಮೂಲ ಸೇವೆಗಳ ಹೊರಗುತ್ತಿಗೆ ಒಪ್ಪಂದ ಅನಧಿಕೃತ ವಿಸ್ತರಣೆ
- ವಿಕಲಚೇತನರಿಗೆ ವಿಶೇಷ ಜಾಬ್ ಕಾರ್ಡಗಳನ್ನು ನೀಡಿಲ್ಲ
- 100 ಉದ್ಯೋಗ ದಿನಗಳನ್ನು ನೀಡುವಲ್ಲಿ ಯಶಸ್ವಿಯಾಗಿಲ್ಲ
- ಶೇ.48ಕ್ಕಿಂತ ಹೆಚ್ಚು ದಿನ ಉದ್ಯೋಗ ಕೊಡುವುದು ಸಾಧ್ಯವಾಗಲಿಲ್ಲ

ಎಸ್‌ಸಿ, ಎಸ್‌ಟಿಗಳಿಗೆ ಪ್ರಾತಿನಿಧ್ಯವಿಲ್ಲ: ರಾಜ್ಯದ ಮೀಸಲಾತಿ ನೀತಿ ಅನುಸರಿಸದೇ ಯೋಜನೆಗೆ ಗುತ್ತಿಗೆ ಸಿಬ್ಬಂದಿ ನೇಮಕಾತಿ ಮಾಡಲಾಗಿದೆ. ಇದರಿಂದ ಮಹಿಳೆಯರು, ಎಸ್‌ಸಿ, ಎಸ್‌ಟಿ, ವಿಕಲಚೇತನ ವ್ಯಕ್ತಿಗಳಿಗೆ ಪ್ರಾತಿನಿಧ್ಯ ಸಮರ್ಪಕವಾಗಿ ಸಿಕ್ಕಿಲ್ಲ. ಹೊಸ ಟೆಂಡರ್ ಕರೆಯದೇ ಮಾನವ ಸಂಪನ್ಮೂಲ ಸೇವೆಗಳ ಹೊರಗುತ್ತಿಗೆ ಒಪ್ಪಂದಗಳನ್ನು ಅನಧಿಕೃತವಾಗಿ ವಿಸ್ತರಿಸಲಾಗಿದೆ. 84.98 ಲಕ್ಷ ಸಕ್ರಿಯ ಕಾರ್ಮಿಕರಲ್ಲಿ 3.11 ಲಕ್ಷ ಕಾರ್ಮಿಕರ ಖಾತೆಗಳೊಂದಿಗೆ ಆಧಾರ್ ಮ್ಯಾಪಿಂಗ್ ರಾಜ್ಯ ಮಟ್ಟದಲ್ಲಿ ಬಾಕಿ ಉಳಿದಿತ್ತು (ಮಾರ್ಚ್ 2024). ಈ ಕಾರಣದಿಂದಾಗಿ ವೇತನ ಪಟ್ಟಿಗಳನ್ನು ತಯಾರಿಸುವ ಬಗ್ಗೆ ಮತ್ತು ಈ ಸಕ್ರಿಯ ಕಾರ್ಮಿಕರಿಗೆ ಪಾವತಿ ಸಾಧ್ಯವಾಗಲಿಲ್ಲ. ತಿರಸ್ಕರಿಸಲಾದ ಮತ್ತು ಪುನರುಜ್ಜೀವನಗೊಳಿಸಲಾದ ಆಧಾರ್ ಆಧಾರಿತ ವೇತನ ಮತ್ತು ಸಾಮಗ್ರಿ ವಹಿವಾಟುಗಳಿಗೆ ಸಂಬಂಧಿಸಿದಂತೆ 35.10 ಕೋಟಿ ಬಾಕಿ ಇರುವುದನ್ನು ವರದಿಯಲ್ಲಿ ಗುರುತಿಸಲಾಗಿದೆ.

ಯೋಜನೆಯಲ್ಲಿ ಕಾಮಗಾರಿಗಳನ್ನು ನಿರ್ವಹಿಸುವಾಗ ಆಗಿರುವ ಮೋಸ ಹಾಗೂ ಹಾಜರಾತಿ ಕುರಿತ ವ್ಯತ್ಯಾಸಗಳ ಬಗ್ಗೆ ತನಿಖೆ ನಡೆಸಬೇಕು ಎಂದು ವರದಿ ಶಿಫಾರಸು ಮಾಡಿದೆ. ಮಾರ್ಚ್ 2024ರಲ್ಲಿದ್ದಂತೆ ಉದ್ಯೋಗಕ್ಕಾಗಿ ಅರ್ಜಿ ಸಲ್ಲಿಸಿದ 34,499 ಫಲಾನು ಭವಿಗಳಿಗೆ ಜಾಬ್ ಕಾರ್ಡ್‌ಗಳ ವಿತರಣೆ ಬಾಕಿ ಉಳಿದಿತ್ತು. ಪರೀಕ್ಷಾ-ತನಿಖೆ ನಡೆಸಿದ ಜಿಲ್ಲೆಗಳಲ್ಲಿ ಜಾಬ್ ಕಾರ್ಡಗಳು ನಿಗದಿತ ನಮೂನೆಗೆ ಬದ್ಧವಾಗಿ ರಲಿಲ್ಲ ಮತ್ತು ವಿಕಲಚೇತನರಿಗೆ ವಿಶೇಷ ಜಾಬ್ ಕಾರ್ಡಗಳನ್ನು ನೀಡಿರಲಿಲ್ಲ. 100 ಉದ್ಯೋಗ ದಿನಗಳನ್ನು ನೀಡುವಲ್ಲಿ ಯಶಸ್ವಿಯಾಗಿಲ್ಲ, ಶೇ.48ಕ್ಕಿಂತ ಹೆಚ್ಚು ದಿನಗಳ ಕಾಲ ಉದ್ಯೋಗ ಕೊಡುವುದು ಸಾಧ್ಯವಾಗಲಿಲ್ಲ. ಕೇವಲ ಶೇ.5ರಷ್ಟು ಕುಟುಂಬಗಳು ಮಾತ್ರ 100 ದಿನಗಳ ಉದ್ಯೋಗ ಪಡೆದುಕೊಂಡವು. ಉಳಿದ ಬಹುಪಾಲು ಕುಟುಂಬಗಳಿಗೆ ಕೇವಲ 1ರಿಂದ 30 ದಿನಗಳ ಉದ್ಯೋಗವನ್ನು ಮಾತ್ರ ಒದಗಿಸಲಾಗಿತ್ತು ಎಂದು ಸಿಎಜಿ ವಿವರಿಸಿದೆ.

ಹಲವಾರು ಮೋಸದ ವಹಿವಾಟು ಬಹಿರಂಗ

ಯೋಜನೆಯಡಿ ಹೆಚ್ಚಿನ ಸಂಖ್ಯೆಯ ಅನುಮೋದಿತ ಕಾಮಗಾರಿಗಳನ್ನು ಕೈಗೆತ್ತಿಕೊಂಡಿರಲಿಲ್ಲ. ವಸತಿ ಕಾಮಗಾರಿಗಳಡಿಯಲ್ಲಿ ಈಗಾಗಲೇ ಪೂರ್ಣಗೊಂಡ ಮನೆಗಳಿಗೆ ಪಾವತಿ, ಅನರ್ಹ ಫಲಾನುಭವಿಗಳಿಗೆ ಪಾವತಿ, ನಿರ್ಮಾಣವನ್ನು ಕೈಗೊಳ್ಳದೆ ಪಾವತಿ, ನಿಗದಿತ ಮಿತಿಗಿಂತ ಹೆಚ್ಚಿನ ಪಾವತಿಗಳು ಮುಂತಾದ ಮೋಸದ ವಹಿವಾಟುಗಳನ್ನು ಗಮನಿಸಲಾಗಿದೆ. ಅಂತೆಯೇ, ಘನತ್ಯಾಜ್ಯ ನಿರ್ವಹಣಾ ಶೆಡ್‌ಗಳು, ಚೆಕ್ ಡ್ಯಾಂಗಳು ಮತ್ತು ಸಾಮಾಜಿಕ ಅರಣ್ಯೀಕರಣದ ಅಡಿಯಲ್ಲಿ ಸಸಿಗಳನ್ನು ಬೆಳೆಸುವುದಕ್ಕೆ ಸಂಬಂಧಿಸಿದ ಪರೀಕ್ಷಾ-ತನಿಖೆ ನಡೆಸಿದ ಕಾಮಗಾರಿಗಳಡಿಯಲ್ಲಿ ನಕಲಿ ದಾಖಲೆಗಳ ಮತ್ತು ಮೋಸದ ಪಾವತಿಗಳನ್ನು ವರದಿಯಲ್ಲಿ ಗಮನಿಸಲಾಗಿದೆ. ಯೋಜನೆಯ ಬಗ್ಗೆ ಅನೇಕ ಗ್ರಾಮ ಪಂಚಾಯಿತಿಗಳು ಸರಿಯಾಗಿ ರಿಜಿಸ್ಟರ್ ನಿರ್ವಹಿಸಿಲ್ಲ ಹಾಗೂ ಅನೇಕ ಕಡೆ ಕಾರ್ಮಿಕರ ಬೇಡಿಕೆಯನ್ನು ತಪ್ಪಾಗಿ ದಾಖಲಿಸಲಾಗಿದೆ. ಕೈಗೆತ್ತಿಕೊಳ್ಳಬೇಕಾದ ಕಾಮಗಾರಿಗಳಿಗೆ ಆದ್ಯತೆಯನ್ನು ಪಂಚಾಯಿತಿಗಳು ನೀಡಿರಲಿಲ್ಲ. ವಾರ್ಷಿಕ ಕಾರ್ಯಯೋಜನೆಗಳನ್ನು ಸಿದ್ಧಪಡಿಸುವಲ್ಲಿ ವಿಫಲವಾಗಿದೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಸಾಂಸ್ಥಿಕ ದೌರ್ಬಲ್ಯಗಳಿಂದ ಬಳಲಿಕೆ

ಎನ್‌ಆರ್‌ಇಜಿಎ ಸಾಫ್ಟ್ ಅನ್ನು ಬಳಸದೆ ಮಸ್ಟರ್ ರೋಲ್‌ಗಳನ್ನು ಮುದ್ರಿಸುವುದು ಮತ್ತು ಅಂತಹ ತಿದ್ದಿದ ಮಸ್ಟರ್ ರೋಲ್‌ಗಳ ಮೇಲೆ ಅನಿಯಮಿತ ಪಾವತಿಗಳಂತಹ ಅಕ್ರಮಗಳನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದೆ. ಇಲಾಖಾ ಅಧಿಕಾರಿಗಳೊಂದಿಗೆ ಯೋಜನೆಯಡಿಯಲ್ಲಿ ರಚಿಸಲಾದ ಸ್ವತ್ತುಗಳ ಜಂಟಿ ಭೌತಿಕ ಪರಿಶೀಲನೆ ಅವುಗಳ ಅಸ್ತಿತ್ವದಲ್ಲಿರಲಿಲ್ಲ ಅಥವಾ ಆಸ್ತಿಗಳು ನಿಷ್ಕ್ರಿಯವಾಗಿರುವುದನ್ನು ಬಹಿರಂಗಪಡಿಸಿದೆ. ಸಾಮಾಜಿಕ ಲೆಕ್ಕಪರಿಶೋಧನಾ ಘಟಕವು ನಿರ್ದೇಶಕರ ನೇಮಕಾತಿಯಲ್ಲಿ ಮಾನದಂಡಗಳ ಉಲ್ಲಂಘನೆ, ಸಿಬ್ಬಂದಿಯ ಕೊರತೆ, ಹಣದ ಕೊರತೆ/ಬಿಡುಗಡೆಯಲ್ಲಿ ವಿಳಂಬ ಮತ್ತು ಲೆಕ್ಕ ಪರಿಶೋಧನೆಗಾಗಿ ದಾಖಲೆಗಳ ಅಲಭ್ಯತೆಯಂತಹ ಸಾಂಸ್ಥಿಕ ದೌರ್ಬಲ್ಯಗಳಿಂದ ಬಳಲುತ್ತಿದೆ ಎಂದು ಲೆಕ್ಕ ಪರಿಶೋಧನೆಯು ಗಮನಿಸಿದೆ.

ಸಂಗ್ರಹ ಚಿತ್ರ.

ವಿಧಾನಸಭೆಯಲ್ಲಿ ಶಿವಲಿಂಗೇಗೌಡ, ರಾಯರಡ್ಡಿ ಮಧ್ಯೆ ಬಿರುಸಿನ ಚರ್ಚೆ

ಕಲಿಕೆ ಮಾಧ್ಯಮ: ಶಾಸಕರ ಜಟಾಪಟಿ

ವಿಶ್ವವಾಣಿ ಸುದ್ದಿಮನೆ ವಿಧಾನಸಭೆ

ಶಿಕ್ಷಕರ ವರ್ಗಾವಣೆ ನಿಯಂತ್ರಣ ತಿದ್ದುಪಡಿ ವಿಧೇಯಕ ಪರ್ಯಾಲೋಚನೆ ವೇಳೆ ಆಡಳಿತ ಪಕ್ಷದ ಶಾಸಕರ ಮಧ್ಯೆ ಶಾಲೆಯಲ್ಲಿ ಕನ್ನಡ ಹಾಗೂ ಆಂಗ್ಲ ಮಾಧ್ಯಮ ಕಲಿಕೆ ವಿಚಾರವಾಗಿ ಮಾತಿನ ಜಟಾಪಟಿ ನಡೆಯಿತು. ಚರ್ಚೆ ವೇಳೆ ಶಿವಲಿಂಗೇಗೌಡ ಆಂಗ್ಲ ಮಾಧ್ಯಮಕ್ಕೆ ಒತ್ತಾಯಿಸಿದರು. ನಮ್ಮ ಮಕ್ಕಳು ಇಂಗ್ಲಿಷ್ ಕಲಿಯಬೇಕು. ಅವರು ಅಮೆರಿಕಕ್ಕೆ ಹೋಗಬೇಕು. ಅಲ್ಲಿಯೂ ಅವರು ತಿರುಗಿ ಬರಬೇಕು. ನಮ್ಮ ಮಕ್ಕಳು ಇಲ್ಲಿಯೇ ಇರಬೇಕಾ? ಅವರು ದೇಶ ಸುತ್ತಿ ಬರಲಿ. ಕನ್ನಡ ಮಾಧ್ಯಮ ಬೇಡ ಅಂತ ಹೇಳಲ್ಲ. ಆದರೆ ಆಂಗ್ಲ ಮಾಧ್ಯಮ ಬೇಕು. ಹಳ್ಳಿ ಮಕ್ಕಳು, ಆರ್ಥಿಕ ಶಕ್ತಿ ಇಲ್ಲದ ಮಕ್ಕಳು ಇಂಗ್ಲಿಷ್ ಓದಬೇಕು ಎಂದು ಆಗ್ರಹಿಸಿದರು.

ಈ ವೇಳೆ ಬಸವರಾಜ ರಾಯರಡ್ಡಿ ಮಧ್ಯೆ ಪ್ರವೇಶಿಸಿ, ಮಕ್ಕಳು ಕನ್ನಡದಲ್ಲಿಯೇ ಓದಲಿ. ಕನ್ನಡದಲ್ಲಿಯೂ ಒಳ್ಳೆಯ ಅವಕಾಶಗಳಿವೆ. ಕನ್ನಡದ ಜತೆ ಇಂಗ್ಲಿಷ್ ಕಲಿಯಲಿ. ಇದಕ್ಕೆ ಯಾರ ಅಭ್ಯಂತರವೂ ಇಲ್ಲ. ನಾವು ಬೇರೆಯವರಿಗೆ ಗುಲಾಮರಾಗಬೇಕಿಲ್ಲ, ಇಂಗ್ಲಿಷ್ ಗುಲಾಮರಾಗಬೇಕಿಲ್ಲ. ಕನ್ನಡದಲ್ಲಿ ಓದಿದರೆ ಸಮಸ್ಯೆಯೇನು? ಎಂದು ಶಿವಲಿಂಗೇಗೌಡ ಮಾತಿಗೆ ಆಕ್ಷೇಪಿಸಿದರು.

ಈ ವೇಳೆ ನೀವು ಯಾಕೆ ಇಂಗ್ಲಿಷ್ ಓದಿದ್ರಿ? ಎಂದು ಪ್ರಶ್ನಿಸಿದ ಶಿವಲಿಂಗೇಗೌಡ, ನೀವು ಸರಕಾರದ ಪರವಾಗಿ ಮಾತನಾಡುತ್ತಿಲ್ಲ. ಸರಕಾರದ ವಿರುದ್ಧ ಮಾತನಾಡುತ್ತಿದ್ದೀರಿ. ಇಂಗ್ಲಿಷ್ ಅವಶ್ಯಕತೆ ಇಲ್ಲ ಅಂತ ಹೇಗೆ ಹೇಳ್ತೀರಾ? ನಮ್ಮ ಮಕ್ಕಳು ಇಂಗ್ಲಿಷ್ ಕಲಿಯಬೇಕು. ಇಂಗ್ಲಿಷ್ ಬೇಕೇಬೇಕು. ಸರಕಾರಿ ಶಾಲಾ ಮಕ್ಕಳು ಸಹ ಇಂಗ್ಲಿಷ್ ಓದಬೇಕು ಎಂದು ಒತ್ತಿ ಹೇಳಿದರು.

ಈ ವೇಳೆ ರಾಯರಡ್ಡಿ ಮತ್ತು ಶಿವಲಿಂಗೇಗೌಡರ ನಡುವೆ ವಾಗ್ವಾದ ನಡೆಯಿತು. ಇಂಗ್ಲಿಷ್ ಬರೋರು ಮಾತ್ರ ಮೇಧಾವಿ ಅಲ್ಲ. ನಾವೆಲ್ಲಾ ಪಿಯುಸಿ ತನಕ ಕನ್ನಡ ಓದಿದ್ದೇವೆ. ಬೇರೆ ದೇಶಗಳಲ್ಲಿ ಸ್ಥಳೀಯ ಭಾಷೆಯನ್ನೇ ಕಲಿಯುತ್ತಾರೆ. ಆಂಗ್ಲ ಮಾಧ್ಯಮಕ್ಕೆ ಆದ್ಯತೆ ನೀಡುವುದಿಲ್ಲ ಎಂದು ಪ್ರತಿಪಾದಿಸಿದರು. ಈ ವೇಳೆ ಇಬ್ಬರು ಹಠಕ್ಕೆ ಬಿದ್ದವರಂತೆ ಒಬ್ಬರಿಗೊಬ್ಬರು ಪರಸ್ಪರ ಏರು ಧ್ವನಿಯಲ್ಲೇ ಮಾತನಾಡುತ್ತಾ ತಮ್ಮ ವಾದವನ್ನು ಪ್ರತಿಪಾದಿಸಿದರು. ಇತ್ತ ಸ್ಪೀಕರ್ ಯು.ಟಿ.ಖಾದರ್ ಇಬ್ಬರನ್ನೂ ಸಮಾಧಾನ ಪಡಿಸುವಲ್ಲಿ ಸುಸ್ತಾಗಿ ಹೋದರು. ಎಷ್ಟೇ ಹೇಳಿದರೂ ಇಬ್ಬರೂ ಶಾಸಕರು ಪರಸ್ಪರ ವಾಗ್ವಾದ ಮುಂದುವರಿಸಿದರು.

ಇದೇ ವೇಳೆ ಆಡಳಿತ ಪಕ್ಷದ ಇಬ್ಬರು ಶಾಸಕರ ಮಾತಿನ ಚಕಮಕಿಗೆ ಬಿಜೆಪಿ ಹಾಸ್ಯ ಚಟಾಕಿ ಹಾರಿಸಿತು. ಅವರಿಬ್ಬರಿಗೆ ಯಾವ ಮಾಧ್ಯಮ ಬೇಕು ಎಂಬುದನ್ನು ಮೊದಲು ಮುಗಿಸಿ ಎಂದು ಕಾಲೆಳೆ ದರು. ಈ ವೇಳೆ ಮಧ್ಯೆಪ್ರವೇಶಿಸಿದ ರಾಯರಡ್ಡಿ, ಶಿವಲಿಂಗೇಗೌಡರದ್ದು ಬಾಂಬೆ ಇಂಗ್ಲಿಷ್ ಒಂದು ಇದೆ ಎಂದು ಕಾಲೆಳೆದರು. ಅತ್ತ ಸುನಿಲ್ ಕುಮಾರ್, ಶಿವಲಿಂಗೇಗೌಡರ ಇಂಗ್ಲಿಷೂ ಇರಲಿ, ರಾಯರಡ್ಡಿಯ ವರ ಕನ್ನಡ ಸಹ ಇರಲಿ ಎಂದು ನಗೆ ಚಟಾಕಿ ಹಾರಿಸಿದರು.

ಲಾಂಗ್ವೇಜ್ ಲ್ಯಾಬ್ ಬಗ್ಗೆ ಚಿಂತನೆ ನಡೆಸಿ

ಇದೇ ವೇಳೆ ವಿಧಾನಸಭೆಯಲ್ಲಿ ಸ್ಪೀಕರ್ ಯು.ಟಿ.ಖಾದರ್ ಸಲಹೆ ನೀಡುತ್ತಾ, ಕರ್ನಾಟಕದ ಶಾಲೆಗಳಲ್ಲಿ ಲಾಂಗ್ವೇಜ್ ಲ್ಯಾಬ್ ತೆರೆಯಿರಿ. ಕನ್ನಡದ ಜತೆಗೆ ಎಲ್ಲ ಭಾಷೆಗಳನ್ನು ಕಲಿಯುವಂತಾಗಬೇಕು. ಲಾಂಗ್ವೇಜ್ ಲ್ಯಾಬ್ ಬಗ್ಗೆ ಗಂಭೀರವಾಗಿ ಚಿಂತನೆ ನಡೆಸಿ. ಬೇರೆ ದೇಶಗಳ ಭಾಷೆಯನ್ನೂ ಕಲಿಸಲು ಮುಂದಾಗಿ ಎಂದರು.

ಸದಸ್ಯರ ಪ್ರಶ್ನೆಗಳಿಗೆ ಉತ್ತರವಿಲ್ಲ ಎಂದರೆ ಏನರ್ಥ?: ಹೊರಟ್ಟಿ

ವಿಧಾನ ಪರಿಷತ್: ಮೇಲ್ಮನೆ ಸದಸ್ಯರು ಕೇಳಿದ ಪ್ರಶ್ನೆಗಳಿಗೆ ಉತ್ತರಿಸಲಾಗುತ್ತಿಲ್ಲವೆಂದರೆ ಏನರ್ಥ? ನಾಳೆ(ಬುಧವಾರ) ಸದನಕ್ಕೆ ಉತ್ತರ ಒದಗಿಸದ ಅಧಿಕಾರಿಗಳ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕ್ರಮ ಜರುಗಿಸಿ, ಇಲ್ಲವೇ ಅವರನ್ನು ಕರೆತಂದು ಸದನದಲ್ಲಿ ನಿಲ್ಲಿಸಿ ಎಂದು ಸಭಾಪತಿ ಬಸವರಾಜ್ ಹೊರಟ್ಟಿ ಅವರು ಮೇಲ್ಮನೆ ಸಭಾನಾಯಕ ಬೋಸರಾಜು ಅವರಿಗೆ ತಾಕೀತು ಮಾಡಿದರು.

ಮೇಲ್ಮನೆಯಲ್ಲಿ ಈ ಬಗ್ಗೆ ಮಾತನಾಡಿದ ಅವರು, ಈ ಬಾರಿ ಸದನದಲ್ಲಿ ಪ್ರಶ್ನೋತ್ತರದಲ್ಲಿ 157 ಪ್ರಶ್ನೆಗಳನ್ನು ಕೇಳಲಾಗಿದ್ದು, ಈವರೆಗೆ 57ಕ್ಕೆ ಮಾತ್ರ ಉತ್ತರಗಳು ಬಂದಿವೆ. ಹೀಗಾದರೆ ಹೇಗೆ ಎಂದ ಸದಸ್ಯ ಭೋಜೇಗೌಡ ಸಭಾಪತಿಗಳ ಗಮನ ಸೆಳೆದರು. ಅದಕ್ಕೆ ಧ್ವನಿಗೂಡಿಸಿದ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಬಿಜೆಪಿ ಸದಸ್ಯ ಸಿ.ಟಿ.ರವಿ, ಈ ಬಾರಿಯಷ್ಟೇ ಅಲ್ಲ. ಕಳೆದ ಬೆಳಗಾವಿ ಅಧಿವೇಶನದಲ್ಲಿ ಕೇಳಿದ ಪ್ರಶ್ನೆಗಳಿಗೂ ಇನ್ನೂ ಉತ್ತರ ಸಿಕ್ಕಿಲ್ಲ ಎಂದು ದೂರಿದರು.

ಸದನಕ್ಕೆ ಉತ್ತರ ಒದಗಿಸದ ಅಧಿಕಾರಿಗಳನ್ನು ಅಮಾನತು ಮಾಡುವಂತೆ ಈಗಾಗಲೇ ಪೀಠ ಸರಕಾರಕ್ಕೆ ಆದೇಶಿಸಿದೆ. ಅದರಂತೆ ಕ್ರಮ ವಹಿಸಲಿ. ವಿಧಾನ ಪರಿಷತ್ ಸದಸ್ಯರು ಕೇಳಿದ ಪ್ರಶ್ನೆಗಳಿಗೂ ಅಧಿಕಾರಿಗಳು ಉತ್ತರ ಹೇಳುತ್ತಿಲ್ಲ ಎಂದರೆ ಜನರು ಏನು ಮಾತನಾಡಿಕೊಳ್ಳಬಹುದು. ತಕ್ಷಣ ಕ್ರಮ ಕೈಗೊಳ್ಳಬೇಕು ಎಂದು ಕಾಂಗ್ರೆಸ್ ಸದಸ್ಯ ಪುಟ್ಟಣ್ಣ ಮನವಿ ಮಾಡಿದರು. ಇದರಿಂದ ಮತ್ತಷ್ಟು ಕೋಪಗೊಂಡ ಸಭಾಪತಿ ಹೊರಟ್ಟಿ, ಸದಸ್ಯರ ಪ್ರಶ್ನೆಗಳಿಗೆ ಉತ್ತರ ಒದಗಿಸದ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಿ. ಇಲ್ಲವೇ ಸದನಕ್ಕೆ ತಂದು ನಿಲ್ಲಿಸಿ ಎಂದು ಆದೇಶಿಸಿದ ಅವರು, ವಿವಾಹದಲ್ಲಿ ಆಯ್ಕೆ ಸ್ವಾತಂತ್ರ್ಯ ಹಾಗೂ ಮರ್ಯಾದಾ ಹತ್ಯೆ-2026 ವಿಧೇಯಕ ಮಂಡನೆ ವೇಳೆಗೆ ಸದಸ್ಯರ ಹಾಜರಾತಿ ಬಗ್ಗೆಯೂ ಬೇಸರ ವ್ಯಕ್ತಪಡಿಸಿದರು. ಆಡಳಿತ ಪಕ್ಷದ 37 ಜನ ಸದಸ್ಯರ ಪೈಕಿ ಕೇವಲ 16 ಜನರಿದ್ದಾರೆ. ಇನ್ನುಳಿದವರು ಎಲ್ಲಿ ಎಂದು ಗರಂ ಆದರು. ಸದಸ್ಯರು ಹಾಜರಿರುವ ಬಗ್ಗೆ ಆಡಳಿತ ಮತ್ತು ವಿಪಕ್ಷದ ನಾಯಕರು ಮತ್ತು ಮುಖ್ಯಸಚೇತಕರು ಗಮನ ಹರಿಸಬೇಕು ಎಂದು ಕಿವಿ ಹಿಂಡಿದರು.

ಪಾರಂಪರಿಕ ಕಟ್ಟಡಗಳ ಪುನರುಜ್ಜೀವನ ನಿರ್ಮಾಣಕ್ಕೆ ಪ್ರಯತ್ನ: ಬೈರತಿ ಸುರೇಶ್

ವಿಧಾನ ಪರಿಷತ್: ಮೈಸೂರಿನಲ್ಲಿರುವ ಐತಿಹಾಸಿಕ ಲ್ಯಾನ್ಸ್ ಡೌನ್ ಬಿಲ್ಡಿಂಗ್, ದೇವರಾಜ್ ಮಾರುಕಟ್ಟೆ, ವಾಣಿವಿಲಾಸ ಮಾರುಕಟ್ಟೆ ಮತ್ತು ಮಂಡಿ ಮಾರುಕಟ್ಟೆ ಸೇರಿದಂತೆ ವಿವಿಧ ಪಾರಂಪರಿಕ ಕಟ್ಟಡಗಳಿಗೆ ಅದೇ ಶೈಲಿಯಲ್ಲಿ ಪುನರುಜ್ಜೀವನ ನಿರ್ಮಾಣಕ್ಕೆ ಸಂಬಂಧಿಸಿದಂತೆ ಸರಕಾರ ಪ್ರಯತ್ನಶೀಲವಾಗಿದೆ. ಈ ವಿಷಯ ಸುಪ್ರೀಂಕೋರ್ಟ್‌ನಲ್ಲಿ ಇತ್ಯರ್ಥವಾಗಬೇಕು. ಈ ತೀರ್ಪು ಪ್ರಕಟಿಸಿದ ನಂತರ ಈ ಕಾಮಗಾರಿ ಕೈಗೊಳ್ಳಲಾಗುವುದು ಎಂದು ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ತಿಳಿಸಿದರು. ಪ್ರಶ್ನೋತ್ತರ ಕಲಾಪದಲ್ಲಿ ಕಾಂಗ್ರೆಸ್ ಸದಸ್ಯ ಶಿವಕುಮಾರ್ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ರಾಜ್ಯದ ಎಲ್ಲ ಪಾರಂಪರಿಕ ಕಟ್ಟಡಗಳ ನಿರ್ವಹಣೆಗಾಗಿ ಆಯಾ ಜಿಲ್ಲಾಧಿಕಾರಿಗಳ ಬಳಿ ವಿಶೇಷ ಶೀರ್ಷಿಕೆಯ ಅಡಿಯಲ್ಲಿ ಅನುದಾನ ಲಭ್ಯವಿದೆ. ಪಾರಂಪರಿಕ ಕಟ್ಟಡಗಳ ವ್ಯಾಪ್ತಿಯಲ್ಲಿ ನಿಯಮ ಮೀರಿ ಬಹುಮಹಡಿ ಕಟ್ಟಡಗಳು ನಿರ್ಮಾಣಗೊಂಡಿದ್ದರೆ, ಅಂತಹ ಕಟ್ಟಡಗಳಿಗೆ ನೋಟಿಸ್ ನೀಡಲಾಗುವುದು, ನಿಯಮಾವಳಿ ಮೀರಿದ್ದು ಸಾಬೀತಾದರೆ ಕ್ರಮ ಜರುಗಿಸಲಾಗುವುದು ಎಂದು ಸ್ಪಷ್ಟಪಡಿಸಿದರು.

22 ಇಂದಿರಾ ಕ್ಯಾಂಟಿನ್‌ಗಳು ಆರು ತಿಂಗಳಿಂದ ಉದ್ಘಾಟನೆಗೆ ಕಾಯುತ್ತಿವೆ

ವಿಧಾನ ಪರಿಷತ್: ರಾಜ್ಯದ ವಿವಿಧೆಡೆ ಹೊಸದಾಗಿ ನಿರ್ಮಾಣಗೊಂಡಿರುವ 22 ಇಂದಿರಾ ಕ್ಯಾಂಟಿನ್‌ಗಳಿಗೆ ಕಳೆದ ಆರು ತಿಂಗಳಿಂದ ಉದ್ಘಾಟನೆಗೆ ಮುಹೂರ್ತ ಕೂಡಿ ಬಂದಿಲ್ಲ. ಕ್ಯಾಂಟಿನ್ ನಿರ್ಮಾಣದ ಕಾರ್ಯ ಪೂರ್ಣಗೊಂಡರೂ ಸ್ಥಳೀಯ ಶಾಸಕರು ಉದ್ಘಾಟಿಸಿಲ್ಲ ಎಂಬುದನ್ನು ರಾಜ್ಯ ಸರಕಾರ ಹೇಳಿದೆ. ವಿಧಾನ ಪರಿಷತ್‌ನಲ್ಲಿ ಕೆ.ಎಸ್.ನವೀನ್ ಅವರ ಪ್ರಶ್ನೆಗೆ ಉತ್ತರಿಸಿದ ಪೌರಾಡಳಿತ ಸಚಿವ ರಹೀಂಖಾನ್, ಇಂದಿರಾ ಕ್ಯಾಂಟಿನ್ ಯೋಜನೆಯು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕನಸಿನ ಯೋಜನೆಯಾಗಿದೆ. ರಾಜ್ಯದಲ್ಲಿ 346 ಇಂದಿರಾ ಕ್ಯಾಂಟಿನ್‌ಗಳು ಕಾರ್ಯನಿರ್ವಹಿಸುತ್ತಿವೆ. 15 ಕ್ಯಾಂಟಿನ್‌ಗಳು ನಿರ್ಮಾಣ ಹಂತದಲ್ಲಿವೆ. 22 ಕ್ಯಾಂಟಿನ್‌ಗಳ ನಿರ್ಮಾಣ ಪೂರ್ಣಗೊಂಡಿದಿದ್ದರೂ ಕಳೆದ ಆರು ತಿಂಗಳಿಂದ ಸ್ಥಳೀಯ ಶಾಸಕರು ಉದ್ಘಾಟನೆ ಸಮಯ ನೀಡಿಲ್ಲ. ಈ ಬಗ್ಗೆ ವೈಯಕ್ತಿಕವಾಗಿ ಪತ್ರ ಬರೆದು ಉದ್ಘಾಟಿಸುವಂತೆ ಮನವಿ ಮಾಡಿದ್ದೇನೆ. ಈ ತಿಂಗಳಲ್ಲಿ ಕ್ಯಾಂಟಿನ್‌ಗಳನ್ನು ಉದ್ಘಾಟಿಸುವ ಭರವಸೆ ನೀಡಿದ್ದಾರೆ. ಇಂದಿರಾ ಕ್ಯಾಂಟಿನ್‌ಗಳ ನಿರ್ಮಾಣ ವಿಚಾರವಾಗಿ 2023ರಲ್ಲಿ ಅರ್ಜಿ ಸಲ್ಲಿಸಿ ಕಂಪನಿಗೆ ಬಿಡ್ ಮಾಡಿತ್ತು. 2ನೇ ಹಂತದ ಕ್ಯಾಂಟಿನ್‌ಗಳನ್ನು ಇದೇ ಕಂಪನಿ ನಿರ್ಮಿಸುತ್ತಿದೆ ಎಂದರು.

ಇ-ಖಾತಾ ಲಂಚಕ್ಕೆ ಡಿಜಿಟಲ್ ಸಾಕ್ಷಿ ಕೊಟ್ಟ ಪ್ರತಿಪಕ್ಷ ನಾಯಕ ಅಶೋಕ

ವಿಧಾನಸಭೆ: ಬೆಂಗಳೂರು ಸೇರಿದಂತೆ ರಾಜ್ಯಾದ್ಯಂತ ಇ-ಖಾತಾ ಆಂದೋಲನದಲ್ಲಿ ಲಂಚದ ವಹಿವಾಟು ನಡೆಯುತ್ತಿದೆ ಎಂದು ಗಂಭೀರ ಆರೋಪ ಮಾಡಿದ ಪ್ರತಿಪಕ್ಷದ ನಾಯಕ ಆರ್.ಅಶೋಕ, ಸೂಕ್ತ ದಾಖಲೆಗಳನ್ನು ನೀಡುವ ಮೂಲಕ ಡಿಸಿಎಂ ಡಿ.ಕೆ.ಶಿವಕುಮಾರ್ ಅವರಿಗೆ ಪ್ರತಿ ಸವಾಲು ಹಾಕಿದ್ದಾರೆ. ಬೆಂಗಳೂರು ಅಭಿವೃದ್ಧಿ ಕುರಿತಂತೆ ವಿಧಾನಸಭೆಯಲ್ಲಿ ನಡೆದ ಚರ್ಚೆಯಲ್ಲಿ ಭಾಗವಹಿಸಿದ ಅವರು, ಇ-ಖಾತಾ ಆಂದೋಲನದಲ್ಲಿ ಯಾರಾದರೂ ಲಂಚ ಪಡೆದಿರುವುದನ್ನು ತೋರಿಸಿದರೆ ತಕ್ಷಣವೇ ಅಮಾನತುಗೊಳಿಸುವುದಾಗಿ ಇದೇ ಅಧಿವೇಶನದಲ್ಲಿ ಡಿ.ಕೆ.ಶಿವಕುಮಾರ್ ಅವರು ನನಗೆ ಸವಾಲು ಹಾಕಿದ್ದರು. ನಾನು ಕೇವಲ ಬಾಯಿ ಮಾತಿನ ಆರೋಪ ಮಾಡುತ್ತಿಲ್ಲ. ದಾಖಲೆಗಳ ಸಹಿತ ಸಾಬೀತು ಮಾಡುತ್ತಿದ್ದೇನೆ ಎಂದು ದಾಖಲೆಗಳನ್ನು ಪ್ರದರ್ಶಿಸಿದರು. ಎಲ್ಲ ಆರೋಪ ಹಾಗೂ ವಿಚಾರವನ್ನು ತಾಳ್ಮೆಯಿಂದ ಕೇಳಿಸಿಕೊಂಡ ಡಿ.ಕೆ.ಶಿವಕುಮಾರ್ ಅವರು ಸರಕಾರದ ಪರವಾಗಿ ಉತ್ತರ ನೀಡುವಾಗ ಪ್ರತಿಕ್ರಿಯಿಸುತ್ತೇನೆ ಎಂದು ಹೇಳಿದರು.

ವಿಧೇಯಕ ಮಂಡಿಸಿ ವಿವರಣೆ ನೀಡಿದ ಸಚಿವ ಮಧು ಬಂಗಾರಪ್ಪ | ಧ್ವನಿಮತದ ಮೂಲಕ ಅಂಗೀಕಾರ

ಶಿಕ್ಷಕರ ವರ್ಗಾವಣೆ ನಿಯಂತ್ರಣ ವಿಧೇಯಕಕ್ಕೆ ಅಸ್ತು

ವಿಶ್ವವಾಣಿ ಸುದ್ದಿಮನೆ ವಿಧಾನಸಭೆ

ಬೋಧಕ ಹುದ್ದೆಗಳ ಸ್ಥಾನಿಕರನ್ನು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯಲ್ಲಿನ ಬೋಧಕೇತರ ಹುದ್ದೆಗಳಿಗೆ, ರಾಜ್ಯ ಸಿವಿಲ್ ಸೇವೆಗಳು ಅಥವಾ ಮಂಡಳಿಗಳು ಅಥವಾ ನಿಗಮಗಳಲ್ಲಿನ ಯಾವುದೇ ಇತರ ಹುದ್ದೆಗಳಿಗೆ ವರ್ಗಾವಣೆಗೆ ಅವಕಾಶ ನೀಡದ 2026ನೇ ಸಾಲಿನ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) (ತಿದ್ದುಪಡಿ) ವಿಧೇಯಕಕ್ಕೆ ವಿಧಾನಸಭೆಯ ಅನುಮೋದನೆ ದೊರೆಯಿತು.

ಶಾಸನಾ ರಚನಾ ಕಲಾಪದಲ್ಲಿ ಶಿಕ್ಷಣ ಸಚಿವ ಸಚಿವ ಮಧು ಬಂಗಾರಪ್ಪ ಈ ವಿಧೇಯಕವನ್ನು ಪರ್ಯಾಲೋಚನೆಗಾಗಿ ಮಂಡಿಸಿ ವಿವರಣೆ ನೀಡಿದ ನಂತರ ಹಲವು ಸದಸ್ಯರು ಚರ್ಚೆಯಲ್ಲಿ ಭಾಗವಹಿಸಿ ಉಪಯುಕ್ತ ಸಲಹೆಗಳನ್ನು ನೀಡಿದ ನಂತರ ಸಭಾಧ್ಯಕ್ಷ ಯು.ಟಿ.ಖಾದರ್ ವಿಧೇಯಕವನ್ನು ಮತಕ್ಕೆ ಹಾಕಿದಾಗ ಧ್ವನಿಮತದ ಅಂಗೀಕಾರ ದೊರೆಯಿತು.

ಇದಕ್ಕೂ ಮುನ್ನ ಸಚಿವ ಮಧು ಬಂಗಾರಪ್ಪ ಮಾತನಾಡಿ, ಕೌನ್ಸೆಲಿಂಗ್ ಮೂಲಕ ಶಿಕ್ಷಕರ ವರ್ಗಾವಣೆ ಮಾಡಲಾಗುವುದು. ಶಾಲೆ ಅಥವಾ ಕಾಲೇಜುಗಳಲ್ಲಿನ ಸ್ಥಾನಿಕ ವೃಂದದಲ್ಲಿ ಸಲ್ಲಿಸಿರುವ ಕನಿಷ್ಠ ಸೇವಾವಧಿಯು 12 ವರ್ಷಗಳಾಗಿರಬೇಕು. ಕಲ್ಯಾಣ ಕರ್ನಾಟಕ ಕೋಟಾದಡಿಯಲ್ಲಿ ನೇಮಕಗೊಂಡ ಶಿಕ್ಷಕರು ಕಲ್ಯಾಣ ಕರ್ನಾಟಕ ಭಾಗದಲ್ಲಿ ಕನಿಷ್ಠ 10 ವರ್ಷ ಸೇವೆ ಸಲ್ಲಿಸಬೇಕು. ಆ ನಂತರ ವರ್ಗಾವಣೆಗೆ ಅವಕಾಶ ದೊರೆಯಲಿದೆ. ಶಿಕ್ಷಕಿಯರು ಪ್ರಸೂತಿ ರಜೆ ಪಡೆದ ಬಳಿಕ ಮಗುವಿಗೆ ಐದು ವರ್ಷ ತುಂಬುವವರೆಗೆ ಅವರು ಇಚ್ಚಿಸುವ ಶಾಲೆಯಲ್ಲಿ ಮುಂದುವರೆಸಲು ಅವಕಾಶ ಕಲ್ಪಿಸಲಾಗುವುದು. ಒಂದು ಶಾಲೆ ಅಥವಾ ಪದವಿ ಪೂರ್ವ ಕಾಲೇಜಿನಲ್ಲಿ ಕನಿಷ್ಠ ಸೇವಾವಧಿ ಸಲ್ಲಿಸಿರುವ ಶಿಕ್ಷಕ ಅಥವಾ ಉಪನ್ಯಾಸಕನಿಗೆ ವರ್ಗಾವಣೆಗಾಗಿ ಲಭ್ಯವಿರುವ ನಿರ್ದಿಷ್ಟಯಕ ಹುದ್ದೆ ಮತ್ತು ನಿಯಮಿಸಬಹುದಾದಂತಹ ಇತರ ಷರತ್ತುಗಳಿಗೆ ಒಳಪಟ್ಟು ವರ್ಗಾವಣೆಯನ್ನು ಕೋರಲು ಆಯ್ಕೆ ನೀಡಲಾಗುತ್ತದೆ. ಕರ್ನಾಟಕ ಪಬ್ಲಿಕ್ ಶಾಲೆ, ಪಿಎಂಶ್ರೀ ಶಾಲೆ, ಆದರ್ಶ ವಿದ್ಯಾರ್ಥಿ ಶಾಲೆಗಳಿಗೆ 36 ಸಾವಿರ ಶಿಕ್ಷಕರು ಬೇಕು. 19 ಸಾವಿರ ಶಿಕ್ಷಕರ ಹುದ್ದೆಗಳು ಖಾಲಿ ಉಳಿಯುತ್ತವೆ ಎಂದು ಹೇಳಿದರು.

ಮಕ್ಕಳೇ ಶೌಚಾಲಯ ಕ್ಲೀನ್ ಮಾಡಲಿ:

ಜೆಡಿಎಸ್ ಸದಸ್ಯ ಸುರೇಶ್ ಬಾಬು ಮಾತನಾಡಿ, ವರ್ಗಾವಣೆ ಮಸೂದೆಯಲ್ಲಿ 'ಡಿ' ಗ್ರೂಪ್ ನೌಕರ'ನ್ನೂ ಸೇರಿಸಿ. 'ಡಿ' ಗ್ರೂಪ್ ನೌಕರರಿಲ್ಲದ ಶಾಲೆಗಳಲ್ಲಿ ಮಕ್ಕಳಿಂದ ಗುಡಿಸುವ ಕೆಲಸ ಮಾಡಲಾಗುತ್ತಿದೆ ಎಂದರು. ಈ ವೇಳೆ ಮಧ್ಯಪ್ರವೇಶಿಸಿದ ಸ್ಪೀಕರ್ ಯು.ಟಿ.ಖಾದರ್, ಅದರಲ್ಲಿ ತಪ್ಪೇನಿಲ್ಲ. ನಾವು ವಿದ್ಯಾರ್ಥಿಯಾಗಿದ್ದಾಗ ನಾವೇ ಸ್ವಚ್ಛ ಮಾಡುತ್ತಿದ್ದೆವು. ಮಾಡಲಿ ಮಕ್ಕಳಿಗೆ ಗೊತ್ತಾಗುತ್ತದೆ ಎಂದು ಸಮರ್ಥಿಸಿಕೊಂಡರು. ಇದಕ್ಕೆ ಪ್ರತಿಕ್ರಿಯಿಸಿದ ಸುರೇಶ್ ಬಾಬು, ಹಾಗಾದಾರೆ ಆ ರೀತಿ ಕಾನೂನಾದರೂ ಮಾಡಿ. ಇಲ್ಲವಾದರೆ ಪೋಷಕರಲ್ಲಿ ಗೊಂದಲ ಉಂಟಾಗುತ್ತದೆ ಎಂದು ಸಲಹೆ ನೀಡಿದರು. ಇದೇ ವೇಳೆ ಮಾತನಾಡಿದ ಶಾಸಕ ಆರಗ ಜ್ಞಾನೇಂದ್ರ, ಶೌಚಾಲಯ ಕ್ಲೀನ್ ಮಾಡಲು ಶಾಲಾ ಮಕ್ಕಳಿಗೆ ಅವಕಾಶ ಕೊಡಿ. ಶಾಲೆಗಳ ಶೌಚಾಲಯವನ್ನು ಮಕ್ಕಳೇ ಕ್ಲೀನ್ ಮಾಡಲಿ. ನಾವೆಲ್ಲಾ ಮಾಡಿ ಬಂದಿದ್ದೇವೆ. ಅವರು ಕಲಿಯಲಿ ಎಂದು ಒತ್ತಾಯಿಸಿದರು.

ಈ ವೇಳೆ ಸ್ಪೀಕರ್ ಆ ಸಂಬಂಧ ಕಾನೂನು ಬದಲಾವಣೆ ಮಾಡಲು ಸಾಧ್ಯನಾ ನೋಡಿ ಎಂದು ಸಚಿವರಿಗೆ ಪ್ರಶ್ನಿಸಿದರು. ಇದಕ್ಕೆ ಸಚಿವ ಮಧು ಬಂಗಾರಪ್ಪ ಪ್ರತಿಕ್ರಿಯಿಸುತ್ತಾ, ಮಕ್ಕಳ ಹಕ್ಕು ಅನ್ನುವುದು ಇದೆ. ಅದಕ್ಕನುಗುಣವಾಗಿ ನಿಯಮ ರೂಪಿಸಬೇಕಾಗುತ್ತದೆ. ಹೇಗೆ ಮಾಡುವುದು ಎಂಬ ಬಗ್ಗೆ ನಿಮ್ಮ ಅಭಿಪ್ರಾಯ ತಿಳಿಸಿ, ಪರಿಶೀಲಿಸೋಣ. ನಿಯಮಗಳನ್ನು ರೂಪಿಸುವಾಗ ಶಾಸಕರ ಸಲಹೆಗಳನ್ನು ಪರಿಗಣಿಸಲಾಗುವುದು ಸಚಿವರು ತಿಳಿಸಿದರು.

ಕೌನ್ಸೆಲಿಂಗ್ ಮೂಲಕ ಶಿಕ್ಷಕರನ್ನು ವರ್ಗಾವಣೆ ಮಾಡುವಾಗ ಕರ್ನಾಟಕ ಪಬ್ಲಿಕ್ ಶಾಲೆ, ಆದರ್ಶ ವಿದ್ಯಾಲಯ ಮತ್ತು ಪಿಎಂಶ್ರೀ ಶಾಲೆಗಳಿಗೆ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲಾಗುವುದು. ಈ ಶಿಕ್ಷಕರ ಹುದ್ದೆಗಳನ್ನು ಕ್ರಿಟಿಕಲ್ ಹುದ್ದೆ ಎಂದು ಪರಿಗಣಿಸಲಾಗುವುದು. ಈ ಶಾಲೆಗಳ ಶಿಕ್ಷಕರ ಹುದ್ದೆ ಭರ್ತಿ ಮಾಡಿದ ನಂತರ ಉಳಿದ ಶಾಲೆಗಳ ಶಿಕ್ಷಕರ ಹುದ್ದೆ ಭರ್ತಿ ಮಾಡಲಾಗುವುದು.

-ಮಧು ಬಂಗಾರಪ್ಪ, ಸಚಿವ

ಶಾಲಾ ಆಸ್ತಿ ರಕ್ಷಣೆ ವಿಧೇಯಕಕ್ಕೆ ಒಪ್ಪಿಗೆ

ಬೆಂಗಳೂರು: ಸರಕಾರಿ ಶೈಕ್ಷಣಿಕ ಸಂಸ್ಥೆಯ ಭೂಮಿಗಳ ಸಂರಕ್ಷಣೆಗೆ ಸಂಬಂಧಿಸಿದ 2026ನೇ ಸಾಲಿನ ಕರ್ನಾಟಕ ಸರಕಾರಿ ಶೈಕ್ಷಣಿಕ ಸಂಸ್ಥೆಯ ಭೂಮಿಗಳ (ರಕ್ಷಣೆ ಮತ್ತು ಸಕ್ರಮಾತಿ) ವಿಧೇಯಕವನ್ನು ಚರ್ಚೆಯಿಲ್ಲದೆ ವಿಧಾನಸಭೆಯಲ್ಲಿ ಅಂಗೀಕರಿಸಲಾಯಿತು.

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಅವರು ಮಂಡಿಸಿ ವಿವರಣೆ ನೀಡುತ್ತಾ ಸರಕಾರಿ ಶಾಲೆಗೆ ಜಮೀನನ್ನು ದಾನ ಕೊಟ್ಟಿದ್ದಾರೆ. ಅಂತಹ ಜಮೀನು ಇಲಾಖೆ ಹೆಸರಿಗೆ ದಾಖಲಾಗಿರುವುದಿಲ್ಲ. ಶಾಲಾ ಆಸ್ತಿ ಸಂರಕ್ಷಣೆಯ ಉದ್ದೇಶದಿಂದ ಈ ವಿಧೇಯಕ ತರಲಾಗಿದೆ. ಇದಕ್ಕೆ ಅನುಮೋದನೆ ನೀಡಬೇಕು ಎಂದು ಕೋರಿದರು.

ವಿರೋಧಪಕ್ಷದ ನಾಯಕ ಆರ್.ಅಶೋಕ ಈ ವಿಧೇಯಕವನ್ನು ನಾವು ಸ್ವಾಗತಿಸುತ್ತೇವೆ, ನಮ್ಮ ಬೆಂಬಲವೂ ಇದೆ. ಜಮೀನನ್ನು ಶಾಲೆ ಹೆಸರಿಗೆ ಖಾತೆ ಮಾಡಿಸಿ ಎಂಬ ಸಲಹೆ ಕೊಟ್ಟರು. ಜೆಡಿಎಸ್ ಹಿರಿಯ ಶಾಸಕ ಜಿ.ಟಿ.ದೇವೇಗೌಡ ಸೇರಿದಂತೆ ಹಲವು ಶಾಸಕರು ಕಾಲೇಜು, ಆಸ್ಪತ್ರೆ ಸೇರಿದಂತೆ ಸರಕಾರಿ ಸಂಸ್ಥೆಗಳ ಆಸ್ತಿಗಳನ್ನು ಆಯಾ ಸಂಸ್ಥೆ ಹೆಸರುಗಳಿಗೆ ದಾಖಲಾಗುವಂತೆ ಮಾಡಬೇಕು ಎಂಬ ಸಲಹೆ ನೀಡಿದರು.

ಸಂಪಾದಕೀಯ

ಕೆಡವೋದು ಸುಲಭ, ಕಟ್ಟೋದು ಕಷ್ಟ

ದೀರ್ಘಾವಧಿವರೆಗೆ ಶ್ರಮಪಟ್ಟು ಕಟ್ಟಿಕೊಂಡ ವ್ಯವಸ್ಥೆ/ಬದುಕು ಅಥವಾ ಹಗಲೂರಾತ್ರಿ ನಿದ್ರೆಗೆಟ್ಟು ಮಾಡಿದ ಅಧ್ಯಯನ/ಸಂಶೋಧನೆಯ ಫಲಶ್ರುತಿಯು ಕಿಡಿಗೇಡಿಗಳ ಕೆಟ್ಟದೃಷ್ಟಿಗೆ ಸಿಲುಕಿ ನಾಶವಾದರೆ, ಅದು ನೀಡುವ ನೋವಿನ ತೀವ್ರತೆಯನ್ನು ವ್ಯಾಖ್ಯಾನಿಸಲು 'ಕುಂಬಾರನಿಗೆ ಒಂದು ವರುಷ, ದೊಣ್ಣೆಗೆ ಒಂದು ನಿಮಿಷ' ಎಂಬ ಜಾಣನುಡಿಯನ್ನು ಜನರು ಬಳಸುವುದುಂಟು. ಕಾರಣ, ಕಟ್ಟುವಿಕೆಗೆ ಅಥವಾ ಅಧ್ಯಯನಕ್ಕೆ ವಿನಿಯೋಗಿಸಿದ ಸಮಯ ಹಾಗೂ ಪರಿಶ್ರಮ ಎಷ್ಟು ಅಗಾಧವಾಗಿರುತ್ತದೆ ಎಂಬುದು, ಅದರ ಫಲಶ್ರುತಿಯನ್ನು ಧ್ವಂಸಗೊಳಿಸುವ ಕಿಡಿಗೇಡಿಗಳಿಗೆ ಗೊತ್ತಿರುವುದಿಲ್ಲ, ಅಥವಾ ಗೊತ್ತಿದ್ದರೂ 'ಎದುರಾಳಿ ಹಾಳಾಗಿಹೋಗಲಿ' ಎಂಬ ಕುತ್ಸಿತ ಚಿಂತನೆಯಿಂದಾಗಿಯೇ ಇಂಥ 'ಕಟ್ಟೋಣ'ವನ್ನು ಆಹುತಿ ತೆಗೆದುಕೊಳ್ಳುತ್ತದೆ ಕಣ್ಣಿಗೆ ಅಮರಿಕೊಂಡಿರುವ ದ್ವೇಷದ ಜ್ವಾಲೆ. ಮಧ್ಯಪ್ರಾಚ್ಯ ಯುದ್ಧದ ದೃಶ್ಯಗಳನ್ನು ಅನಿವಾರ್ಯವಾಗಿ ವೀಕ್ಷಿಸಬೇಕಾಗಿ ಬಂದಿದೆ. ಇಲ್ಲಿ ತಪ್ಪು ಆ ಪಾಳಯದ್ದೋ, ಈ ಪಾಳಯದ್ದೋ? ಎಂಬ ಪ್ರಶ್ನೆ ಒತ್ತಟ್ಟಿಗಿರಲಿ; ಆದರೆ ಇಲ್ಲಿ ಮಣ್ಣುಪಾಲಾಗುತ್ತಿರುವುದು ಮಾನವೀಯತೆಯ ಒರತೆ ಎಂಬುದಂತೂ ಖರೆ. ಹುಂಬ ನಾಯಕಗಣವು ತನ್ನ ಅಹಮಿಕೆಯನ್ನು ತಣಿಸಿಕೊಳ್ಳಲು ಅಮಾಯಕ ಜನರ ಅಸ್ತಿತ್ವಕ್ಕೇ ಕೊಡಲಿಪೆಟ್ಟು ನೀಡುತ್ತಿದೆ. ಹಿಂದಿನ ದಿನವಷ್ಟೇ ಊಟಕ್ಕಿಟ್ಟು ಆಶ್ರಯ ನೀಡಿದ್ದ ಮನೆಯು, ನೋಡನೋಡುತ್ತಿದ್ದಂತೆ ಬಾಂಬ್ ದಾಳಿಗೆ ಕುಸಿದುಹೋದಾಗ, ಅದರ ನಿವಾಸಿಗಳ ಕಣ್ಣಲ್ಲಿ ಭುಗಿಲೇಳುವ 'ಮುಂದೇನು?' ಎಂಬ ಅನಿಶ್ಚಿತತೆಯ ಪ್ರಶ್ನೆಗೆ ಪ್ರಾಯಶಃ ಈ ಹುಂಬನಾಯಕರ ಬಳಿ ಉತ್ತರವಿಲ್ಲ. ಜನರನ್ನು ಕಾಯುವವರನ್ನು 'ನಾಯಕ' ಎಂದು ಕರೆಯುವುದು ವಾಡಿಕೆ. ಮತ್ತೊಂದೆಡೆ, 'ಕಾಯುವುದು ದೇವರ ಕೆಲಸ, ಕೊಲ್ಲುವುದು ರಾಕ್ಷಸರ ಕೆಲಸ' ಎಂಬ ಜಾಣನುಡಿಯೂ ಇದೆ. ಆದರಿಲ್ಲಿ, ಕಾಯಬೇಕಾದವರೇ ಜನರ ಕುತ್ತಿಗೆಯನ್ನು ಹಿಸುಕುತ್ತಿರುವಾಗ, ಇವರನ್ನು 'ನಾಯಕರು' ಎನ್ನಬೇಕೋ, 'ದಾನವರು' ಎನ್ನಬೇಕೋ? ಎಂದು ಗೊಂದಲವಾಗುತ್ತದೆ. ಅಂತಾರಾಷ್ಟ್ರೀಯ ಭೂರಾಜಕೀಯದ ಹಿತಾಸಕ್ತಿಯ ನೆರವೇರಿಕೆಗೆಂದು ಯುದ್ಧದಲ್ಲಿ ತೊಡಗಿದ ನಾಯಕರು ಮಾತ್ರ ಸುರಕ್ಷಿತರಾಗೇ ಇರುತ್ತಾರೆ; ಆದರೆ 'ಮೂರಾಬಟ್ಟೆ'ಯಾಗುವುದು ಜನಸಾಮಾನ್ಯರ ಬದುಕು. ಇಂಥ ಶ್ರೀಸಾಮಾನ್ಯರು ಬಾರಿಸಬೇಕಾದ 'ನ್ಯಾಯದ ಗಂಟೆ' ಎಲ್ಲಿದೆ? ಅದಕ್ಕೆ ಕಟ್ಟಿರುವ ಹಗ್ಗ ಅವರಿಗೆ ಎಟುಕುತ್ತಿಲ್ಲವಲ್ಲವೇಕೆ...?!

ಸೊಂಪಾದಕೀಯ

ಶಾಲೆಯಲ್ಲಿ 'ಕುಕ್ಕು'ಟೋದ್ಯಮ

ನಮ್ಮ ಸರಕಾರಿ ಪ್ರಾಥಮಿಕ ಶಾಲೆಗಳ ಪರಿಸ್ಥಿತಿ ಹೇಗಿರುತ್ತದೆ ಎಂಬುದನ್ನು, ಸುಮಾರು 2 ವರ್ಷಗಳ ಹಿಂದಿನ ಈ 'ಫ್ಲ್ಯಾಷ್‌ಬ್ಯಾಕ್' ಸ್ಟೋರಿ ಹೇಳಬಲ್ಲದು. ಚಾಮರಾಜನಗರದ ಪೆದ್ದನಪಾಳ್ಯ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಬೀಗ ಜಡಿಯಲಾಯಿತು. ಇದಕ್ಕೆಲ್ಲಾ ಕಾರಣ ಒಂದು ಕೋಳಿ. ಒಂದನೇ ತರಗತಿ ಹುಡುಗನೊಬ್ಬನಿಗೆ ಕೋಳಿಯೊಂದು ಕುಕ್ಕಿತಂತೆ. ಹಕ್ಕಿ ಬಂದು ಹುಡುಗನನ್ನು ಕುಕ್ಕಿದರೆ ಶಾಲೆಗೆ ಯಾಕೆ ಬೀಗ ಹಾಕಬೇಕು ಅಂದ್ರೆ, ಇಲ್ಲಿದೆ ಉತ್ತರ. ಶಾಲಾ ಆವರಣದಲ್ಲಿ ಕೆಲವರು ಹಸು, ಕೋಳಿಗಳನ್ನೂ ಸಾಕುತ್ತಿದ್ದರಂತೆ. ಹಾಗಾಗಿ ಶಾಲೆ ಆವರಣದಲ್ಲಿ ಕೋಳಿಗಳಿಗೇನು ಕೆಲಸ ಅಂತ ಗ್ರಾಮಸ್ಥರಿಗೆ ಸಿಟ್ಟು ಬಂತಂತೆ. ಕೋಳಿ ಕೇಳಿ ಮಸಾಲೇನೇ ಅರೆಯೋಲ್ಲ, ಅಂಥದ್ರಲ್ಲಿ ಶಾಲೆಗೆ ಬೀಗ ಹಾಕೋಕೆ ಕೋಳಿ ಕೇಳ್ತೀವಾ ಅಂತ ಅವರು ಬೀಗ ಹಾಕಿಕೊಂಡು ಹೋದರಂತೆ. ಇಲ್ಲಿ ಶಾಲಾ ಕಟ್ಟಡಕ್ಕೆ ಒಬ್ಬರು ಜಾಗ ನೀಡಿದ್ದರಂತೆ. ಅವರೇ ಆ ಜಾಗವನ್ನು ಮರುವಶಪಡಿಸಿಕೊಳ್ಳಲು ಪ್ರಯತ್ನ ಮಾಡ್ತಾ ಇದ್ದರಂತೆ. ಆದರೆ ಅದು ಆಗುತ್ತಿಲ್ಲ ಅನ್ನೋ ಕಾರಣಕ್ಕೋ ಏನೋ ಶಾಲಾ ಆವರಣದಲ್ಲಿ ಹಸು, ಕೋಳಿ ಸಾಕಣೆಗೆ ಅವಕಾಶ ನೀಡಿದ್ದರಂತೆ. ಆಗಲಾದ್ರೂ ಮಕ್ಕಳು ಮತ್ತು ಮೇಷ್ಟ್ರು ಶಾಲೆ ಬಿಟ್ಟು ಹೋಗ್ತಾರೆ ಅನ್ನೋದು ಅವರ ಅಂದಾಜು ಆಗಿತ್ತಂತೆ. ಪೊಲೀಸರು ಬಂದು ಗ್ರಾಮಸ್ಥರು, ಶಾಲಾ ಸಿಬ್ಬಂದಿ ಮತ್ತು ಜಾಗ ದಾನ ಮಾಡಿದ ವ್ಯಕ್ತಿಯ ಜತೆ ಸಂಧಾನ ಮಾಡಲು ಪ್ರಯತ್ನಪಟ್ಟರೂ ಫಲಕಾರಿ ಆಗಲಿಲ್ಲವಂತೆ. ಹೀಗಾಗಿ ಕೋಳಿಯ ಈ 'ಕುಕ್ಕು'ಟೋದ್ಯಮದಿಂದಾಗಿ ಮಕ್ಕಳು 'ಸ್ಕೂಲಿಗ್ ರಜಾ, ಕೋಳಿ ಮಜಾ' ಅಂತ ಖುಷಿಯಾಗಿ ತಿರುಗಾಡುವಂತಾಯಿತಂತೆ. ಕೆದಕುತ್ತ ಹೋದರೆ ಇಂಥ ಇನ್ನೂ ಅದೆಷ್ಟು ಸ್ಟೋರಿಗಳು ಸಿಗುತ್ತವೋ..!!

ಸಂಪಾದಕರ ಸದ್ಯಶೋಧನೆ

ನಕಲಿ ಪೈಲಟ್

ದಕ್ಷಿಣ ಆಫ್ರಿಕಾ ಏರ್‌ವೇಸ್ ವಿಮಾನಯಾನ ಸಂಸ್ಥೆ (SAA)ಯ ಒಬ್ಬ ಪೈಲಟ್ ಬರೋಬ್ಬರಿ ಇಪ್ಪತ್ತು ವರ್ಷಗಳ ಕಾಲ ನಕಲಿ ಪರವಾನಗಿ ಬಳಸಿ ವಿಮಾನ ಹಾರಾಟ ಮಾಡಿದ್ದ ಅಂದ್ರೆ ನಂಬಬೇಕು. ಈ ಆಘಾತಕಾರಿ ಸುದ್ದಿ ಇಡೀ ವಿಮಾನಯಾನ ಲೋಕವನ್ನು ಬೆಚ್ಚಿ ಬೀಳಿಸಿತ್ತು. ವಿಲಿಯಂ ಚಾಂಡ್ಲರ್ ಎಂಬ ಈ ಪೈಲಟ್‌ನ ವಂಚನೆ ಬಹಿರಂಗವಾದಾಗ, ಅನೇಕ ಪ್ರಶ್ನೆಗಳು ಹುಟ್ಟಿಕೊಂಡವು. ಸಾವಿರಾರು ಪ್ರಯಾಣಿಕರ ಜೀವದ ಜತೆ ಆಟವಾಡಿದ ಈ ಘಟನೆ, ವಿಮಾನಯಾನ ಸುರಕ್ಷತೆಯ ಬಗ್ಗೆ ಗಂಭೀರವಾದ ಕಳವಳಗಳನ್ನು ಮೂಡಿಸಿತ್ತು. ವಿಲಿಯಂ ಚಾಂಡ್ಲರ್ ಸುಮಾರು ಎರಡು ದಶಕಗಳ ಕಾಲ SAAನಲ್ಲಿ ಪೈಲಟ್ ಆಗಿ ಕೆಲಸ ಮಾಡಿದ. ಅವನಿಗೆ ಕಮರ್ಷಿಯಲ್ ಪೈಲಟ್ ಲೈಸೆನ್ಸ್ ಮಾತ್ರ ಇತ್ತು. ಆದರೆ, ವಾಣಿಜ್ಯ ವಿಮಾನಗಳ ಕ್ಯಾಪ್ಟನ್ ಆಗಲು ಕಡ್ಡಾಯವಾಗಿ ಬೇಕಾಗುವ ಅಡ್ವಾನ್ಸ್‌ಡ್ ಏರ್‌ಲೈನ್ ಟ್ರಾನ್ಸ್‌ಪೋರ್ಟ್ ಪೈಲಟ್ ಲೈಸೆನ್ಸ್ (ATPL) ಅವನ ಬಳಿ ಇರಲಿಲ್ಲ. ಈ ATPL ಪರವಾನಗಿ ಪಡೆಯಲು ಪೈಲಟ್‌ಗಳು ಸಾವಿರಾರು ಗಂಟೆಗಳ ಹಾರಾಟದ ಅನುಭವ ಮತ್ತು ಕಠಿಣ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಬೇಕು. ವಿಮಾನವನ್ನು ನಿಯಂತ್ರಿಸುವ ಅತ್ಯುನ್ನತ ಮಟ್ಟದ ಜ್ಞಾನ ಮತ್ತು ಕೌಶಲಗಳನ್ನು ಇದು ಪ್ರತಿನಿಧಿಸುತ್ತದೆ. ಆದರೆ, ಚಾಂಡ್ಲರ್ ಕೇವಲ ಕಮರ್ಷಿಯಲ್ ಪರವಾನಗಿ ಇಟ್ಟುಕೊಂಡು ATPL ಹೊಂದಿರುವಂತೆ ವಂಚಿಸಿದ. ಅವನ ವಂಚನೆ ಬಹಿರಂಗವಾಗಿದ್ದು 2018ರಲ್ಲಿ. SAA ವಿಮಾನವೊಂದು ಫ್ರಾಂಕ್‌ಫರ್ಟ್‌ಗೆ ಹಾರುತ್ತಿದ್ದಾಗ ಒಂದು ವಿಚಿತ್ರ ಘಟನೆ ನಡೆಯಿತು. ಆ ವಿಮಾನದಲ್ಲಿದ್ದ ಚಾಂಡ್ಲರ್, ಕ್ಯಾಪ್ಟನ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದ. ಆತನ ವರ್ತನೆಯಲ್ಲಿ ಕೆಲವು ಅಸಹಜ ಅಂಶಗಳು ಪೈಲಟ್‌ಗಳ ಗಮನಕ್ಕೆ ಬಂದವು. ಈ ಅನುಮಾನವೇ ಆಂತರಿಕ ತನಿಖೆಗೆ ಕಾರಣವಾಯಿತು. ತನಿಖೆ ಮುಂದುವರಿದಂತೆ, ಚಾಂಡ್ಲರ್‌ನ ಪರವಾನಗಿ ದಾಖಲೆಗಳು ನಕಲಿ ಎಂಬ ಸತ್ಯ ಬೆಳಕಿಗೆ ಬಂತು. ತಕ್ಷಣವೇ ತನಿಖೆ ಆರಂಭಿಸಿ ಆತನನ್ನು ವಿಚಾರಣೆಗೆ ಒಳಪಡಿಸಲಾಯಿತು. ತನ್ನ ವಂಚನೆ ಬಯಲಾದಾಗ, ಚಾಂಡ್ಲರ್ ತಕ್ಷಣವೇ ತನ್ನ ಕೆಲಸಕ್ಕೆ ರಾಜೀನಾಮೆ ನೀಡಿದ. ಇಪ್ಪತ್ತು ವರ್ಷಗಳ ಕಾಲ ಒಬ್ಬ ವ್ಯಕ್ತಿ ನಕಲಿ ಪರವಾನಗಿ ಬಳಸಿ ವಿಮಾನ ಹಾರಾಟ ಮಾಡಲು ಹೇಗೆ ಸಾಧ್ಯವಾಯಿತು? ಏರ್‌ಲೈನ್‌ಗಳು ಮತ್ತು ನಿಯಂತ್ರಣ ಪ್ರಾಧಿಕಾರಗಳು ಪರವಾನಗಿಗಳನ್ನು ನಿಯತವಾಗಿ ಪರಿಶೀಲಿಸುವುದಿಲ್ಲವೇ? ತನ್ನ ಪರವಾನಗಿ ಇಲ್ಲದಿದ್ದರೂ, ಅವನು ಇಷ್ಟು ವರ್ಷಗಳ ಕಾಲ ಸಾವಿರಾರು ಪ್ರಯಾಣಿಕರ ಜೀವವನ್ನು ಅಪಾಯದಲ್ಲಿಟ್ಟಿದ್ದ. ಅದೃಷ್ಟವಶಾತ್ ಯಾವುದೇ ದೊಡ್ಡ ಅನಾಹುತ ಸಂಭವಿಸಿಲ್ಲ. ಆದರೆ, ಇದು ವಿಮಾನಯಾನ ವಲಯದಲ್ಲಿರುವ ಸುರಕ್ಷತಾ ಲೋಪಗಳನ್ನು ಸ್ಪಷ್ಟವಾಗಿ ತೋರಿಸುತ್ತದೆ. SAA ನಂಥ ದೊಡ್ಡ ಸಂಸ್ಥೆ ತನ್ನ ಸಿಬ್ಬಂದಿಯ ಪ್ರಮುಖ ದಾಖಲೆಗಳನ್ನು ಸರಿಯಾಗಿ ಪರಿಶೀಲಿಸಿಲ್ಲವೇ? ಚಾಂಡ್ಲರ್‌ನ ಕೆಲಸದ ಅವಧಿಯಲ್ಲಿ ಅವನ ಕಾರ್ಯಕ್ಷಮತೆ ಮತ್ತು ಅನುಭವದ ಬಗ್ಗೆ ಯಾವುದೇ ಅನುಮಾನಗಳು ಮೂಡಲಿಲ್ಲವೇ? ಪೈಲಟ್‌ಗಳ ವೃತ್ತಿಯಲ್ಲಿ ಪರವಾನಗಿಗಳು ಕೇವಲ ಒಂದು ಕಾಗದದ ತುಂಡಲ್ಲ. ಅವು, ಒಬ್ಬ ಪೈಲಟ್ ಹೊಂದಿರುವ ಅರ್ಹತೆ, ಜ್ಞಾನ ಮತ್ತು ಅನುಭವದ ಸಾಕ್ಷಿ. ವಿವಿಧ ಹಂತದ ಪರವಾನಗಿಗಳು ನಿರ್ದಿಷ್ಟ ಜವಾಬ್ದಾರಿ ಮತ್ತು ಸಾಮರ್ಥ್ಯಗಳನ್ನು ಸೂಚಿಸುತ್ತವೆ. ವಿಲಿಯಂ ಚಾಂಡ್ಲರ್‌ನ ಬಳಿ ATPL ಇರಲಿಲ್ಲ ಎಂಬುದು ಆತ ದೊಡ್ಡ ವಾಣಿಜ್ಯ ವಿಮಾನಗಳನ್ನು ನಿರ್ವಹಿಸುವ ಜ್ಞಾನ ಮತ್ತು ತರಬೇತಿಯನ್ನು ಅಧಿಕೃತವಾಗಿ ಪಡೆದಿರಲಿಲ್ಲ ಎಂಬುದನ್ನು ಸ್ಪಷ್ಟಪಡಿಸುತ್ತದೆ. ಆತನ ಅನಧಿಕೃತ ನಾಯಕತ್ವದಲ್ಲಿ ಪ್ರಯಾಣಿಸಿದ ಎಲ್ಲರೂ ಅದೃಷ್ಟವಂತರು ಎಂದು ಹೇಳಬಹುದು. ಚಾಂಡ್ಲರ್ ರಾಜೀನಾಮೆ ನೀಡಿದ ನಂತರ, ಆತ 20 ವರ್ಷಗಳ ಕಾಲ ಪಡೆದ ಸಂಬಳ ಮತ್ತು ಇತರ ಸವಲತ್ತುಗಳನ್ನು ಅವನಿಂದ ಮರಳಿ ಪಡೆಯಲು SAA ಪ್ರಯತ್ನಿಸುತ್ತಿದೆ. ಇದು ಕೇವಲ ಹಣಕಾಸಿನ ವಿಷಯವಲ್ಲ, ಬದಲಿಗೆ ಸಂಸ್ಥೆಯ ಘನತೆ ಮತ್ತು ಕಾನೂನಿನ ಗೌರವವನ್ನು ಎತ್ತಿಹಿಡಿಯುವ ಕ್ರಮವಾಗಿದೆ. ಈ ಘಟನೆಯು SAA ಮತ್ತು ಇತರ ವಿಮಾನಯಾನ ಸಂಸ್ಥೆಗಳಿಗೆ ಒಂದು ಎಚ್ಚರಿಕೆ ಗಂಟೆ. ತಮ್ಮ ಸಿಬ್ಬಂದಿಯ ಅರ್ಹತಾ ದಾಖಲೆಗಳನ್ನು ನಿಯತವಾಗಿ ಮತ್ತು ಕಟ್ಟುನಿಟ್ಟಾಗಿ ಪರಿಶೀಲಿಸುವುದು ಎಷ್ಟು ಮುಖ್ಯ ಎಂಬುದನ್ನು ಇದು ತೋರಿಸುತ್ತದೆ. ವಿಲಿಯಂ ಚಾಂಡ್ಲರ್‌ನ ಈ ವಂಚನೆಯ ಕಥೆ ನಂಬಲು ಅಸಾಧ್ಯವಾದರೂ, ಇದು ಸತ್ಯ. ಒಬ್ಬ ವ್ಯಕ್ತಿಯ ದುರಾಸೆ ಮತ್ತು ನಿರ್ಲಕ್ಷ್ಯ, ಸಾವಿರಾರು ಜನರ ಜೀವವನ್ನು ಅಪಾಯಕ್ಕೆ ತಳ್ಳುತ್ತದೆ ಎಂಬುದಕ್ಕೆ ಇದೊಂದು ಜೀವಂತ ಉದಾಹರಣೆ. ಈ ಘಟನೆಯು ವಿಮಾನಯಾನ ಉದ್ಯಮದಲ್ಲಿ ಪಾರದರ್ಶಕತೆ, ಕಟ್ಟುನಿಟ್ಟಿನ ನಿಯಂತ್ರಣಗಳು ಮತ್ತು ನಿರಂತರ ಪರಿಶೀಲನೆಯ ಅವಶ್ಯಕತೆಯನ್ನು ಒತ್ತಿಹೇಳುತ್ತದೆ. ಇದು ಕೇವಲ ನಿಯಮಗಳ ಪಾಲನೆಯಲ್ಲ, ಬದಲಾಗಿ ಪ್ರಯಾಣಿಕರ ಜೀವ ಮತ್ತು ಭದ್ರತೆಯ ಪ್ರಶ್ನೆಯಾಗಿದೆ.

ವಿರೋಧಿ ಕೂಗಿಗೆ ಸಾಂತ್ವನವನ್ನಷ್ಟೇ ಹೇಳಬಹುದು!

ದೇಶದ ಬಹುಪಾಲು ಪ್ರಾದೇಶಿಕ ಪಕ್ಷಗಳನ್ನು ಕುಟುಂಬಗಳೇ ನಡೆಸುತ್ತಿವೆ. ರಾಷ್ಟ್ರೀಯ ಪಕ್ಷಗಳಿಗೂ ನಿರ್ದಿಷ್ಟ ಕ್ಷೇತ್ರಗಳಲ್ಲಿ ಕುಟುಂಬಗಳ ಪ್ರಭಾವ-ಸಾಮರ್ಥ್ಯ-ಆರ್ಥಿಕ ಶಕ್ತಿಯನ್ನು ಮೀರಿ ರಾಜಕಾರಣ ಮಾಡಲು ಸಾಧ್ಯವಾಗದ ಕಾರಣ, ಸೋಲು-ಗೆಲುವು ಏನೇ ಇರಲಿ, ಸಮರ್ಥ್ ಶಾಮನೂರು ಅಂಥವರಿಗೆ ಟಿಕೆಟ್ ನೀಡುವುದು ಅನಿವಾರ್ಯವಾಗುತ್ತದೆ.

ಜನಪಥ

ರಾಘವಶರ್ಮ ನಿಡ್ಲೆ
vveditoped@gmail.com

ಶಾಸಕರಾಗಿದ್ದ ಶಾಮನೂರು ಶಿವಶಂಕರಪ್ಪ ಮತ್ತು ಎಚ್.ವೈ. ಮೇಟಿ ಅವರ ನಿಧನದಿಂದ ಕ್ರಮವಾಗಿ ತೆರವಾಗಿದ್ದ ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆ ವಿಧಾನಸಭೆ ಕ್ಷೇತ್ರಗಳ ಉಪಚುನಾವಣೆಗಳಿಗೆ ಅವರದ್ದೇ ಕುಟುಂಬದ ವ್ಯಕ್ತಿಗಳಿಗೆ ಟಿಕೆಟ್ ನೀಡಿರುವುದು ಪಕ್ಷದೊಳಗೆ ವ್ಯಾಪಕ ಆಕ್ರೋಶಕ್ಕೆ ಕಾರಣವಾಗಿದೆ. ಶಾಮನೂರು ಶಿವಶಂಕರಪ್ಪನವರ ಬಗ್ಗೆ ಒಲವಿದ್ದರೂ, ಅವರ ಕ್ಷೇತ್ರಕ್ಕೆ ಮೊಮ್ಮಗನನ್ನು ಆಯ್ಕೆ ಮಾಡಿರುವುದು ಕಾರ್ಯಕರ್ತರಿಗೆ ಒಪ್ಪಲಾಗುತ್ತಿಲ್ಲ. ಆದರೆ, ಈಗಿನ ರಾಜಕೀಯ ವ್ಯವಸ್ಥೆಯಲ್ಲಿ ಕುಟುಂಬವೊಂದರ ಪ್ರಭಾವ, ಗೆಲ್ಲುವ ಸಾಮರ್ಥ್ಯ ಹಾಗೂ ಹಣಬಲಗಳೇ ಟಿಕೆಟ್ ನೀಡಿಕೆಗೆ ಮಾನದಂಡವಾಗುವುದರಿಂದ ಶಾಮನೂರು ಮೊಮ್ಮಗನಿಗೆ ಟಿಕೆಟ್ ನೀಡುವುದು ಕಾಂಗ್ರೆಸ್‌ಗೆ ಅನಿವಾರ್ಯವಾಗಿತ್ತು. ಎಲ್ಲಕ್ಕಿಂತ ಮುಖ್ಯವಾಗಿ, ಪಕ್ಷದ ಹಿರಿಯಾಳುಗಳಾದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಸಿಎಂ ಸಿದ್ದರಾಮಯ್ಯ ಸೇರಿದಂತೆ ಅನೇಕರು ತಮ್ಮ ಪ್ರಭಾವ ಬಳಸಿ ತಮ್ಮ ಮಕ್ಕಳನ್ನೇ ಶಾಸಕ, ಸಂಸದ, ಸಚಿವರನ್ನಾಗಿ ಮಾಡಿರುವುದರಿಂದ ಶಾಮನೂರು ಶಿವಶಂಕರಪ್ಪರ ಮೊಮ್ಮಗ, ಸಚಿವ ಎಸ್.ಎಸ್. ಮಲ್ಲಿಕಾರ್ಜುನ-ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ ದಂಪತಿ ಪುತ್ರ ಸಮರ್ಥ್ ಶಾಮನೂರು ಹೆಸರಿಗೆ ವಿರೋಧವೊಡ್ಡುವ, ಪ್ರಾಮಾಣಿಕ ಕಾರ್ಯಕರ್ತರಿಗೆ ನೀಡಬೇಕು ಎಂದು ವಾದಿಸುವ ನೈತಿಕ ಸ್ಥೈರ್ಯವೂ ಅವರಲ್ಲಿ ಇಲ್ಲ. ರಾಷ್ಟ್ರಮಟ್ಟದಲ್ಲಿ ರಾಹುಲ್ ಗಾಂಧಿ ಸೇರಿ ಅನೇಕರು ಇದೇ ಮಾನದಂಡದಿಂದಲೇ ಅಧಿಕಾರಕ್ಕೇರಿರುವುದರಿಂದ ಯಾರು ಯಾರನ್ನು ವಿರೋಧಿಸುವುದು ಎನ್ನುವುದು ಪ್ರಶ್ನೆ.

ಸಾಮಾನ್ಯವಾಗಿ, ಜನಪ್ರತಿನಿಧಿಗಳು ನಿಧನರಾದಾಗ ಅನುಕಂಪದ ಲಾಭ ಪಡೆದುಕೊಳ್ಳುವ ಸಲುವಾಗಿ ಅವರದ್ದೇ ಕುಟುಂಬದ ವ್ಯಕ್ತಿಗಳಿಗೆ ಟಿಕೆಟ್ ನೀಡುವ ಸಂಪ್ರದಾಯವನ್ನು ಎಲ್ಲ ಪಕ್ಷಗಳೂ ಪಾಲಿಸಿಕೊಂಡು ಬರುತ್ತಿವೆ. ವಿಮಾನ ಅಪಘಾತದಲ್ಲಿ ಮಹಾರಾಷ್ಟ್ರ ಡಿಸಿಎಂ ಅಜಿತ್ ಪವಾರ್ ಮೃತಪಟ್ಟ ನಂತರ ಅವರಿಂದ ತೆರವಾಗಿದ್ದ ಸ್ಥಾನಕ್ಕೆ ಪತ್ನಿ ಸುನೇತ್ರಾ ಪವಾರ್‌ರನ್ನು ಎನ್‌ಡಿಎ ಮೈತ್ರಿಕೂಟದ ನಾಯಕರು ತಂದು ಕೂರಿಸಿದ್ದು ಈಚಿನ ಒಂದು ಉದಾಹರಣೆ. ನಿಧನದ ಸಂದರ್ಭಗಳಲ್ಲಿ ಅರ್ಹತೆಗಿಂತ ಅನುಕಂಪವು ವ್ಯಕ್ತಿಯನ್ನು ಗೆಲುವಿನ ದಡ ಸೇರಿಸುತ್ತದೆ. ಕರೋನಾ ಮಹಾಮಾರಿ ಸಂದರ್ಭದಲ್ಲಿ ಕೇಂದ್ರ ಸಚಿವ ಸುರೇಶ್ ಅಂಗಡಿಯವರು ನಿಧನರಾದ ನಂತರ ನಡೆದ ಬೆಳಗಾವಿ ಲೋಕಸಭೆ ಕ್ಷೇತ್ರದ ಉಪಚುನಾವಣೆಗೆ ಪತ್ನಿ ಮಂಗಳಾ ಸುರೇಶ್ ಅಂಗಡಿ ಸ್ಪರ್ಧಿಸಿ ಗೆದ್ದಿದ್ದರು. ಆದರೆ, 2024ರ ಲೋಕಸಭೆ ಚುನಾವಣೆಯಲ್ಲಿ ಅವರನ್ನು ಕ್ಷೇತ್ರದ ಜನ ಗೆಲ್ಲಿಸುವ ಬಗ್ಗೆ ಅನುಮಾನಗಳಿದ್ದ ಕಾರಣ ಜಗದೀಶ್ ಶೆಟ್ಟರ್‌ಗೆ ಟಿಕೆಟ್ ನೀಡಲಾಯ್ತು.

ಚುನಾವಣೆಗಳಲ್ಲಿ ಗೆಲ್ಲುವ ಸಾಮರ್ಥ್ಯ, ಆರ್ಥಿಕ ಕ್ರೋಡೀಕರಣ-ಹಂಚಿಕೆ ಮುಖ್ಯವಾಗುತ್ತದೆಯೇ ವಿನಾ ಉಳಿದದ್ದೆಲ್ಲವೂ ಗೌಣ. ಸಮಾವೇಶಗಳಲ್ಲಿ ಕುಟುಂಬ ರಾಜಕಾರಣದ ವಿರುದ್ಧ ಎಷ್ಟೇ ಮಾತನಾಡಿದರೂ, ಚುನಾವಣೆ ಬಂದಾಗ ವ್ಯಕ್ತಿಯ ಹಣಬಲ ಮತ್ತು ಗೆಲ್ಲುವ ಶಕ್ತಿಯೇ ಟಿಕೆಟ್‌ಗೆ ಮಾನದಂಡ. ದಾವಣಗೆರೆ ದಕ್ಷಿಣ ಕ್ಷೇತ್ರದ ಟಿಕೆಟ್ ಆಯ್ಕೆಯಲ್ಲೂ ಕಾಂಗ್ರೆಸ್ ಅದೇ ಮಾನದಂಡ ಅನುಸರಿಸಿತು. ಶಾಮನೂರು ಕುಟುಂಬದ ರಾಜಕೀಯ ಪ್ರಾಬಲ್ಯ ಹಾಗೂ ಸಂಪನ್ಮೂಲ ಶಕ್ತಿಗಳು ಪಕ್ಷಕ್ಕೆ ಭವಿಷ್ಯದಲ್ಲೂ ಮುಖ್ಯವಾಗಿರುವುದರಿಂದ ಅವರ ಕುಟುಂಬವನ್ನು ಕಡೆಗಣಿಸುವುದು ಸುಲಭದ ಮಾತಲ್ಲ. ಎಚ್.ವೈ. ಮೇಟಿ ಪ್ರಭಾವಿ ರಾಜಕಾರಣಿಯಾಗಿದ್ದರಿಂದ ಅವರ ಪುತ್ರ ಉಮೇಶ್ ಮೇಟಿಗೂ ಟಿಕೆಟ್ ಕೊಟ್ಟು ಕಣಕ್ಕಿಳಿಸಲಾಗಿದೆ.

ಆದರೆ, ಸುರಕ್ಷಿತ ಎಂದು ಪರಿಗಣಿಸಲಾದ ಕ್ಷೇತ್ರಗಳಲ್ಲಿ ಕುಟುಂಬಸ್ಥರನ್ನು ನಿಲ್ಲಿಸದಿದ್ದರೂ ಗೆಲ್ಲುತ್ತೇವೆ ಎಂಬ ವಿಶ್ವಾಸವಿದ್ದಾಗ ಪಕ್ಷಗಳು ಪ್ರಯೋಗ ಮಾಡಿದ್ದನ್ನು ನೋಡಬಹುದು. ಬಿಜೆಪಿ ನಾಯಕ, ಕೇಂದ್ರ ಸಚಿವ ಅನಂತ್ ಕುಮಾರ್ ಅವರ ನಿಧನದ ನಂತರ, 2019ರ ಲೋಕಸಭೆ ಚುನಾವಣೆಗೆ ಬೆಂಗಳೂರು ದಕ್ಷಿಣ ಕ್ಷೇತ್ರದಿಂದ ಅವರ ಪತ್ನಿ ತೇಜಸ್ವಿನಿ ಅನಂತ್ ಕುಮಾರ್‌ಗೆ ಟಿಕೆಟ್ ನೀಡಬೇಕೆಂದು ಮಾಜಿ ಸಿಎಂ ಬಿ.ಎಸ್. ಯಡಿಯೂರಪ್ಪರಿಂದ ಒತ್ತಡವಿದ್ದರೂ, ದಿಲ್ಲಿ ನಾಯಕರು ಬೇರೆಯೇ ಲೆಕ್ಕಾಚಾರ ಹಾಕಿ ತೇಜಸ್ವಿ ಸೂರ್ಯಗೆ ಟಿಕೆಟ್ ನೀಡಿದ್ದರು. ಈ ಕ್ಷೇತ್ರ ಬಿಜೆಪಿಯ ಭದ್ರಕೋಟೆಯಾಗಿದ್ದರಿಂದ ಅನಂತ್ ಕುಮಾರ್ ಕುಟುಂಬದವರಲ್ಲದವರಿಗೆ ಟಿಕೆಟ್ ಕೊಟ್ಟರೂ ಗೆಲ್ಲುವುದು ನಿಶ್ಚಿತವಾಗಿತ್ತು. ಹೀಗಾಗಿ, ಬಿಜೆಪಿ ಇಲ್ಲಿ ಪ್ರಯೋಗ ಮಾಡಿತು. ಆದರೆ, ತೀವ್ರ ಹಣಾಹಣಿ ಇರುವ ಸವಾಲಿನ ಕ್ಷೇತ್ರಗಳಲ್ಲಿ ಇಂಥ ಪ್ರಯೋಗದ ಸಾಹಸಗಳನ್ನು ಮಾಡುವುದು ಅಪಾಯಕಾರಿ. ಗಾಳಿ ವಿರುದ್ಧ ಗುದ್ದಾಟ ಮಾಡಿ ಪೆಟ್ಟು ತಿಂದಿರುವುದರಿಂದ ಪಕ್ಷಗಳು ಇಂಥ ಸಾಹಸ ಮಾಡುವುದು ಈಗ ಕಡಿಮೆಯಾಗಿದೆ.

2021ರ ಹಾನಗಲ್ ಉಪಚುನಾವಣೆ ಇದಕ್ಕೆ ಉದಾಹರಣೆಯಾಗಬಲ್ಲದು. ಮಾಜಿ ಸಚಿವ ಸಿ.ಎಂ. ಉದಾಸಿಯವರ ನಿಧನದಿಂದ ತೆರವಾದ ಕ್ಷೇತ್ರದಲ್ಲಿ ತಾವು ಅಭ್ಯರ್ಥಿಯಾಗಿ ಸ್ಪರ್ಧಿಸುವುದಾಗಿ ಪುತ್ರ ಮತ್ತು ಆಗ ಹಾವೇರಿ ಸಂಸದರಾಗಿದ್ದ ಶಿವಕುಮಾರ್ ಉದಾಸಿ ಹೈಕಮಾಂಡ್ ಬಳಿ ಮನವಿ ಮಾಡಿದ್ದರು. ಆದರೆ, ಹಾನಗಲ್ ಟಿಕೆಟ್ ಅನ್ನು ಶಿವರಾಜ್ ಸಜ್ಜನ್‌ಗೆ ನೀಡಲಾಯಿತು. ಅವರು ಚುನಾವಣೆಯನ್ನು ಹೀನಾಯವಾಗಿ ಸೋತರು. ಪಕ್ಷದ ಕಾರ್ಯಕರ್ತರು, ಮುಖಂಡರು ಕೂಡ ಶಿವಕುಮಾರ್ ಉದಾಸಿಗೆ ಟಿಕೆಟ್ ನೀಡಿ ಎಂದು ಹೇಳಿದ್ದರೂ,

ಅದನ್ನು ನಿರ್ಲಕ್ಷಿಸಲಾಗಿತ್ತು. ಅಂದಿನ ಸಿಎಂ ಬಸವರಾಜ ಬೊಮ್ಮಾಯಿ ಅವರ ತವರು ಜಿಲ್ಲೆಯ ಹಾನಗಲ್‌ನಲ್ಲೇ ಬಿಜೆಪಿ ಮುಖಭಂಗ ಅನುಭವಿಸಿತ್ತು. ಈ ಸೋಲಿನ ಅಲೆಯಿಂದಾಗಿ ಇದೇ ಕ್ಷೇತ್ರದಲ್ಲಿ 2023ರ ವಿಧಾನಸಭೆ ಚುನಾವಣೆಯಲ್ಲೂ ಬಿಜೆಪಿ ಸೋತಿತು. 2024ರ ಲೋಕಸಭೆ ಚುನಾವಣೆಗೆ ಹಾವೇರಿ ಕ್ಷೇತ್ರದಿಂದ ಸ್ಪರ್ಧೆ ಮಾಡಲು ಶಿವಕುಮಾರ್ ಉದಾಸಿ ಹಿಂದೇಟು ಹಾಕಿದ್ದರಿಂದ ಬಸವರಾಜ ಬೊಮ್ಮಾಯಿ ಅವರು ಸ್ಪರ್ಧಿಸಿ ಗೆದ್ದರು. ಅವರಿಂದ ತೆರವಾದ ಶಿಗ್ಗಾಂವಿ ವಿಧಾನಸಭಾ ಕ್ಷೇತ್ರಕ್ಕೆ ಬೊಮ್ಮಾಯಿ ಅವರ ಪುತ್ರ ಭರತ್ ಬೊಮ್ಮಾಯಿಯವರನ್ನೇ ಬಿಜೆಪಿ ಕಣಕ್ಕಿಳಿಸಿತು. ಆದರೆ, ವಿಚಿತ್ರ ಎಂದರೆ, ಭರತ್‌ರನ್ನು ಶಿಗ್ಗಾಂವಿ ಮತದಾರರು ಶಾಸಕರಾಗಿ ಸ್ವೀಕರಿಸಲಿಲ್ಲ. ಹೀಗಾಗಿ, ಎಲ್ಲಾ ಕ್ಷೇತ್ರಗಳಲ್ಲಿ ಕುಟುಂಬ ರಾಜಕಾರಣಕ್ಕೆ ಜನಮನ್ನಣೆ ಇರುತ್ತದೆ ಎಂದೇನಲ್ಲ. ಕುಟುಂಬಿಕರ ಆಯ್ಕೆ ವಿಷಯದಲ್ಲಿ ಜನರು ಸಮಯ-ಸಂದರ್ಭಕ್ಕನುಗುಣವಾಗಿ ತೀರ್ಪು ನೀಡುತ್ತಾರೆ ಎನ್ನುವುದೂ ಉಲ್ಲೇಖಾರ್ಹ. ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು ತಮ್ಮ ಪುತ್ರ ನಿಖಿಲ್ ಕುಮಾರಸ್ವಾಮಿಯವರನ್ನು ಮೂರು ಬಾರಿ (ಮಂಡ್ಯ, ರಾಮನಗರ, ಚೆನ್ನಪಟ್ಟಣ) ಚುನಾವಣೆ ಸ್ಪರ್ಧೆ ಮೂಲಕ 'ಪೊಲಿಟಿಕಲಿ ಲಾಂಚ್' ಮಾಡಲು ಯತ್ನಿಸಿದರೂ, ಜನಾದೇಶ ನಿಖಿಲ್ ಪರ ಇರಲಿಲ್ಲ.

ಚಿತ್ರನಟ ಅಂಬರೀಷ್ ಅವರ ನಿಧನದ ನಂತರ ಮಂಡ್ಯ ಕ್ಷೇತ್ರದಿಂದ ಅವರ ಪತ್ನಿ ಸುಮಲತಾ ಅವರು ಪಕ್ಷೇತರ ಅಭ್ಯರ್ಥಿಯಾಗಿ, ಗೆದ್ದಿದ್ದರು. ಅಂಬರೀಷ್ ಸಾವಿನ ನೋವಿನಲ್ಲಿದ್ದ ಮಂಡ್ಯ ಜನತೆ ಸುಮಲತಾರಿಗೆ ಸಂಸತ್ ಸ್ಥಾನದ ಉಡುಗೊರೆ ನೀಡಿದ್ದರು. ಆದರೆ, 5 ವರ್ಷಗಳ ನಂತರ ಪರಿಸ್ಥಿತಿ ಸುಮಲತಾ ಪರ ಇರಲಿಲ್ಲ. ಪಕ್ಷೇತರರಾಗಿ ಸ್ಪರ್ಧಿಸಿದರೂ, ಗೆಲ್ಲುವ ಸಾಧ್ಯತೆಗಳ ಬಗ್ಗೆ ಅನೇಕರಿಗೆ ಅನುಮಾನಗಳಿದ್ದವು ಮತ್ತು 5 ವರ್ಷಗಳ ಹಿಂದೆ ಇದ್ದ ಅನುಕಂಪದ ಅಲೆ 2024ರಲ್ಲಿ ಇರಲಿಲ್ಲ. ಇದನ್ನು ರಾಜಕೀಯ ಪಕ್ಷಗಳೂ ಅರಿತುಕೊಂಡಿದ್ದವು. ರಾಜ್ಯದ ಮಾಜಿ ಸಿಎಂ ವೀರೇಂದ್ರ ಪಾಟೀಲರ ಪುತ್ರ ಕೈಲಾಶ್‌ನಾಥ್ ಪಾಟೀಲ್, ಜೆ.ಎಚ್. ಪಟೇಲರ ಪುತ್ರ ಮಹಿಮಾ ಪಟೇಲ್ ತಂದೆಯವರ ಪ್ರಭಾವಳಿಯಲ್ಲಿ ಒಂದೆರಡು ಚುನಾವಣೆ ಗೆದ್ದರೂ, ನಂತರದಲ್ಲಿ ಅದೇ ವೇಗ ಮತ್ತು ಪ್ರಭಾವವನ್ನು ರಾಜಕೀಯದಲ್ಲಿ ವಿಸ್ತರಿಸಲು ಅವರಿಗೆ ಸಾಧ್ಯವಾಗಲಿಲ್ಲ. ಅಪ್ಪನ ಪ್ರಭಾವಳಿಯಲ್ಲಿ ರಾಜಕಾರಣದ ಮುಖ್ಯ ವೇದಿಕೆಗೆ ಬಂದರೂ ರಾಜ್ಯವ್ಯಾಪಿ ಜನಪ್ರಿಯರಾಗಲು ಸಾಧ್ಯವಾಗಲಿಲ್ಲ. ಕೆಂಗಲ್ ಹನುಮಂತಯ್ಯರ ಮೊಮ್ಮಗ ಎಂದು ಪ್ರಚಾರ ಮಾಡಿದರೂ, 2013ರ ವಿಧಾನಸಭೆ ಚುನಾವಣೆಯಲ್ಲಿ ಮಲ್ಲೇಶ್ವರಂ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದ ಕೆಂಗಲ್ ಶ್ರೀಪಾದರೇಣು ಹೀನಾಯವಾಗಿ ಸೋತರು.

ಪರಿವಾರವಾದ ದೇಶದ ರಾಜಕಾರಣಕ್ಕೆ ಒಳ್ಳೆಯದೋ ಕೆಟ್ಟದೋ ಎಂಬ ಬಗ್ಗೆ ಅಕ್ಯಾಡೆಮಿಕ್ ಚರ್ಚೆಗಳನ್ನು ಮಾಡಬಹುದು. ಆದರೆ, ಪರಿವಾರವಾದವನ್ನು ಬಿಟ್ಟು ರಾಜಕೀಯ ನಡೆಸಲು ಸಾಧ್ಯವೇ ಇಲ್ಲ. ಪ್ರಧಾನಿ ನರೇಂದ್ರ ಮೋದಿ ಅವರು ಗಾಂಧಿ ಕುಟುಂಬ ಸೇರಿದಂತೆ ಕಾಂಗ್ರೆಸ್ಸಿನ ಅನೇಕರನ್ನು ಪರಿವಾರವಾದದ ಹೆಸರಲ್ಲಿ ಗುರಿ ಮಾಡಬಹುದು. ಆದರೆ, ಬಿಜೆಪಿ ಕೂಡ ವಂಶ ರಾಜಕಾರಣದ ಕುಡಿಗಳನ್ನು ಪ್ರೋತ್ಸಾಹಿಸಿ ಬೆಳೆಸಿರುವುದು ವಾಸ್ತವವೇ. ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬಿನ್ ಕೂಡ ವಂಶ ರಾಜಕಾರಣದ ಹಿನ್ನೆಲೆಯಿಂದ ಬಂದವರು. ಅವರ ತಂದೆ ನಬಿನ್ ಕಿಶೋರ್ ಪ್ರಸಾದ್ ಸಿನ್ಹಾ ಅವರು ಪಟನಾ ಪಶ್ಚಿಮ ಕ್ಷೇತ್ರದಿಂದ 4 ಬಾರಿ ಶಾಸಕರಾಗಿದ್ದರು. ತಂದೆಯ ಮರಣದ ನಂತರ ಚುನಾವಣಾ ರಾಜಕೀಯಕ್ಕೆ ಪ್ರವೇಶಿಸಿದ್ದ ನಿತಿನ್, 2006ರಲ್ಲಿ ತಂದೆ ಪ್ರತಿನಿಧಿಸಿದ್ದ ಪಟನಾ ಪಶ್ಚಿಮ ಕ್ಷೇತ್ರದ ಉಪಚುನಾವಣೆಯಲ್ಲಿ ಗೆದ್ದಿದ್ದರು. ಕ್ಷೇತ್ರ ಪುನರ್‌ವಿಂಗಡಣೆಯ ನಂತರ, ಪಟನಾದ ಬಂಕಿಪುರ ಕ್ಷೇತ್ರದಲ್ಲಿ ಸ್ಪರ್ಧಿಸಿ, 2010, 2015, 2020 ಮತ್ತು 2025ರಲ್ಲಿ ಆಯ್ಕೆಯಾಗುತ್ತಾ ಬಂದಿದ್ದಾರೆ. ನಿತಿನ್ ತಮ್ಮ ವೈಯಕ್ತಿಕ ವರ್ಚಸ್ಸನ್ನು ವೃದ್ಧಿಸಿಕೊಂಡಿದ್ದರಿಂದ ರಾಜಕಾರಣದಲ್ಲಿ ಯಶಸ್ವಿಯಾಗಿ, ಈಗ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಹುದ್ದೆಗೇರಿದ್ದಾರೆ. ಗೃಹ ಸಚಿವ ಅಮಿತ್ ಶಾ ಅವರ ಪುತ್ರ ರಾಜಕಾರಣದಲ್ಲಿ ಇರದಿರಬಹುದು; ಆದರೆ, ಅವರು ರಾಜಕೀಯ ವ್ಯವಸ್ಥೆಯೊಂದಿಗೆ ತಳುಕು ಹಾಕಿಕೊಂಡಿರುವ ಬಿಸಿಸಿಐ ಅಧ್ಯಕ್ಷರಾಗಿ, ಐಸಿಸಿ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಿರುವುದು ಉಲ್ಲೇಖಾರ್ಹ. ಕರ್ನಾಟಕದಲ್ಲಿ ಬಿ.ವೈ. ರಾಘವೇಂದ್ರ, ಬಿ.ವೈ. ವಿಜಯೇಂದ್ರ ಕೂಡ ಬಿ.ಎಸ್. ಯಡಿಯೂರಪ್ಪನವರ ಕಾರಣದಿಂದಲೇ ರಾಜಕಾರಣದಲ್ಲಿ ಸ್ಥಾನಮಾನ ಪಡೆದುಕೊಂಡಿದ್ದಾರೆ ಮತ್ತು ಈಗ ಸ್ವಂತ ವರ್ಚಸ್ಸು ಬೆಳೆಸಿಕೊಂಡಿದ್ದಾರೆ.

ರಾಜಕಾರಣದಲ್ಲಿ ನೇತಾಗಳು ಮಾತನಾಡಿದ್ದೆಲ್ಲಾ ನಡೆಯುತ್ತದೆ ಎಂದೇನಲ್ಲ. ಕಾರ್ಯಕರ್ತರಲ್ಲಿ ಹುಮ್ಮಸ್ಸು-ಉತ್ಸಾಹ ಹೆಚ್ಚಿಸಲು ಜನಸಭೆಗಳಲ್ಲಿ ಪರಿವಾರವಾದದ ವಿರುದ್ಧ ಗುಡುಗಿ ಭಾಷಣ ಮಾಡುತ್ತಾರೆ. ಪೊಲಿಟಿಕಲ್ ನರೇಟಿವ್ ಸೆಟ್ ಮಾಡಲು ಇದು ಸಹಕಾರಿ. ಇಂದು ನರೇಟಿವ್‌ಗಳ ಮೇಲೆಯೇ ರಾಜಕಾರಣ ನಡೆಯುತ್ತಿರುವುದರಿಂದ ಸತ್ಯ ಕಳೆದುಹೋಗುತ್ತಿದ್ದು, ಸುಳ್ಳುಗಳೇ ವಿಜೃಂಭಿಸುತ್ತಿವೆ. 'ವಂಶವಾದ ಇಲ್ಲದ ರಾಜಕಾರಣ ಮಾಡುತ್ತೇವೆ' ಎನ್ನುತ್ತಲೇ ಅದಕ್ಕೆ ಮಣೆಹಾಕುವ ಅನಿವಾರ್ಯ ರಾಜಕೀಯ ವ್ಯವಸ್ಥೆಗೆ ನಾವು ಹೊಂದಿಕೊಂಡುಬಿಟ್ಟಿದ್ದೇವೆ.

ಅಜಿತ್ ಪವಾರ್ ಪತ್ನಿ ಸುನೇತ್ರ ಪವಾರ್ ಸಕ್ರಿಯ ರಾಜಕಾರಣಿಯಾಗಿರಲಿಲ್ಲ. ಡಿಸಿಎಂ ಸ್ಥಾನ ನಿರ್ವಹಿಸುವ ಸಾಮರ್ಥ್ಯ ಇದೆಯೋ ಇಲ್ಲವೋ ಎಂಬುದು ಆಗ ಮುಖ್ಯವಾಗಿರಲಿಲ್ಲ. ಅಜಿತ್ ಪವಾರ್ ಸಾವಿನಿಂದುಂಟಾದ ದುಃಖದ ಪರಿಸ್ಥಿತಿಯಲ್ಲಿ ಅವರ ಪತ್ನಿಯನ್ನೇ ಡಿಸಿಎಂ ಸ್ಥಾನಕ್ಕೆ ಆಯ್ಕೆ ಮಾಡುವುದು ಆ ಕ್ಷಣಕ್ಕೆ ರಾಜಕೀಯವಾಗಿ ಸೂಕ್ತ ನಿರ್ಧಾರವಾಗಿತ್ತು ಮತ್ತು ಅಜಿತ್ ಪವಾರ್ ಕುಟುಂಬದ ಹಿಡಿತ ಇಲ್ಲದಿದ್ದರೆ ಎನ್‌ಸಿಪಿ ಹೋಳಾಗಬಹುದು ಎಂಬ ಆತಂಕವೂ ಇದ್ದುದರಿಂದ ಸುನೇತ್ರರಿಗೆ ಜವಾಬ್ದಾರಿ ನೀಡಲಾಯ್ತು. ಹಾಗಂತ, ಮುಂದಿನ ಅವಧಿಯಲ್ಲೂ (ಎನ್‌ಡಿಎ ಗೆದ್ದರೆ) ಅವರಿಗೆ ಡಿಸಿಎಂ ಸ್ಥಾನ ಸಿಗುತ್ತದೆ ಎಂಬ ಖಾತರಿ ಇಲ್ಲ. ಅದು ಅವರ ರಾಜಕೀಯ ಸಾಮರ್ಥ್ಯ ಹಾಗೂ ವರ್ಚಸ್ಸು ರೂಪಿಸಿಕೊಳ್ಳುವುದರ ಮೇಲೆ ಅವಲಂಬಿತವಾಗಿದೆ.

ಆಂಧ್ರಪ್ರದೇಶದಲ್ಲಿ ವೈ.ಎಸ್. ರಾಜಶೇಖರ ರೆಡ್ಡಿಯವರ ಹಠಾತ್ ಸಾವಿನ ನಂತರ ಖಾಲಿಯಾಗಿದ್ದ ಸ್ಥಾನವನ್ನು ಅವರ ಪುತ್ರ ಜಗನ್ ರೆಡ್ಡಿ ತುಂಬಿದರು. ಜನರೂ ಜಗನ್ ರೆಡ್ಡಿ ರಾಜಕೀಯ ಪ್ರವೇಶ ಒಪ್ಪಿಕೊಂಡು, ಅವರನ್ನು ರಾಜ್ಯದ ಮುಖ್ಯಮಂತ್ರಿಯನ್ನಾಗಿಯೂ ಆಯ್ಕೆ ಮಾಡಿದರು. ಆಂಧ್ರದ ಹಾಲಿ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಅವರು ತಮ್ಮ ಪುತ್ರ ನಾರಾ ಲೋಕೇಶ್‌ರನ್ನು ಉತ್ತರಾಧಿಕಾರಿಯಾಗಿ ಸಿದ್ಧಪಡಿಸಿದ್ದು, ಜನಬೆಂಬಲವೂ ವ್ಯಾಪಕವಾಗಿದೆ. ಉತ್ತರಾಧಿಕಾರಿಯನ್ನು ಮೊದಲೇ ಸಿದ್ಧಪಡಿಸದಿದ್ದರೆ ಏನಾಗುತ್ತದೆ ಎನ್ನಲು ತಮಿಳುನಾಡಿನ ಎಐಎಡಿಎಂಕೆ ಉದಾಹರಣೆಯಾಗಬಲ್ಲದು. ಜೆ.ಜಯಲಲಿತಾ ನಂತರ ಯಾರು ಎಂಬ ಪ್ರಶ್ನೆಗೆ ಅವರ ಸಾವಿನ ನಂತರವೂ ಉತ್ತರ ಇರಲಿಲ್ಲ. ಹಿರಿಯ ನಾಯಕರಾದ ಪನ್ನೀರ್ ಸೆಲ್ವಂ ಮತ್ತು ಪಳನಿ ಸ್ವಾಮಿ 'ನಾ ಮುಂದು ತಾ ಮುಂದು' ಎಂದು ಕಿತ್ತಾಡಿದರು. ಬಹುಶಃ ಜಯಲಲಿತಾ ತಮ್ಮ ಕುಟುಂಬದಿಂದಲೇ ಒಬ್ಬರನ್ನು ಉತ್ತರಾಧಿಕಾರಿಯನ್ನಾಗಿ ಮೊದಲೇ ಆಯ್ಕೆ ಮಾಡಿದ್ದರೆ ಎಐಎಡಿಎಂಕೆ ಈ ಪರಿಯ ಬಿಕ್ಕಟ್ಟನ್ನು ಎದುರಿಸುತ್ತಿರಲಿಲ್ಲವೇನೋ. ಇಂಥ ವ್ಯವಸ್ಥೆ ಅನಿವಾರ್ಯ ಎಂದೇನಲ್ಲ. ಆದರೆ, ಕುಟುಂಬದ ನಿಯಂತ್ರಣ ತಪ್ಪಿದಾಗ ನಾಯಕತ್ವದ ಪ್ರಶ್ನೆ ಉದ್ಭವಿಸಿ ಪಕ್ಷ ಹೋಳಾಗುವ ಸಾಧ್ಯತೆಯೇ ಹೆಚ್ಚಿರುತ್ತದೆ. ಒಡಿಶಾದಲ್ಲಿ ಬಿಜೆಡಿ ನಾಯಕ ನವೀನ್ ಪಟ್ನಾಯಕ್ ನಂತರ ಯಾರು ಎಂಬ ಪ್ರಶ್ನೆಗೆ ಈಗಲೂ ಉತ್ತರವಿಲ್ಲ. ಕಾಂಗ್ರೆಸ್‌ಗೆ ಕೂಡ ಗಾಂಧಿ ಕುಟುಂಬದ ಹಿಡಿತದಲ್ಲಿರುವುದು ಅನಿವಾರ್ಯ. ಇಲ್ಲವಾದಲ್ಲಿ ಪಕ್ಷ ಹೋಳಾಗುವುದು ಖಚಿತ ಎನ್ನುವುದು ಕಾಂಗ್ರೆಸ್ಸಿಗರಿಗೂ ಗೊತ್ತಿದೆ. ಪಶ್ಚಿಮ ಬಂಗಾಳದಲ್ಲಿ ಮಮತಾ ಬ್ಯಾನರ್ಜಿ ಕೂಡ ಭವಿಷ್ಯದಲ್ಲಿ ತಮ್ಮ ಸೋದರ ಸಂಬಂಧಿ ಅಭಿಷೇಕ್ ಬ್ಯಾನರ್ಜಿಗೆ ಅಧಿಕಾರ ನೀಡುವುದು ನಿಶ್ಚಿತ. ಅದೇ ಕಾರಣಕ್ಕೆ ಪಕ್ಷದ ಬಹುತೇಕ ವ್ಯವಹಾರಗಳನ್ನು ಸಚಿವ ಅಭಿಷೇಕ್ ಬ್ಯಾನರ್ಜಿಯೇ ನೋಡಿಕೊಳ್ಳುತ್ತಿದ್ದಾರೆ. ಉತ್ತರ ಪ್ರದೇಶದಲ್ಲಿ ಬಿಎಸ್‌ಪಿಯ ಮಾಯಾವತಿ ಕೂಡ ಸೋದರಳಿಯ ಆಕಾಶ್ ಆನಂದ್‌ರನ್ನು ಸಜ್ಜುಗೊಳಿಸುತ್ತಿದ್ದಾರೆ. ಎಲ್ಲಿಯವರೆಗೆ ಪಕ್ಷದ ಬೆಂಬಲಿಗರು, ಮತದಾರರು ಇವರನ್ನು ತಿರಸ್ಕರಿಸುವುದಿಲ್ಲವೋ ಅಲ್ಲಿಯವರೆಗೆ ಈ ವ್ಯವಸ್ಥೆ ಮುಂದುವರಿಯುತ್ತಲೇ ಇರುತ್ತದೆ.

ಬಿಹಾರದಲ್ಲಿ ಲಾಲೂ ಯಾದವರ ಆರ್‌ಜೆಡಿ, ಚಿರಾಗ್ ಪಾಸ್ವಾನ್‌ರ ಎಲ್‌ಜೆಪಿ, ಈಗ ನಿತೀಶ್ ಕುಮಾರ್ ಬಳಿಕ ನಿಶಾಂತ್ ಪ್ರವೇಶಿಸಿರುವ ಜೆಡಿಯು, ಉತ್ತರ ಪ್ರದೇಶದಲ್ಲಿ ಸಮಾಜವಾದಿ ಪಕ್ಷ, ಮಾಯಾವತಿಯವರ ಬಿಎಸ್‌ಪಿ, ಜಾರ್ಖಂಡ್‌ನಲ್ಲಿ ಸೊರೇನ್ ಕುಟುಂಬದ ಜೆಎಂಎಂ, ಕರ್ನಾಟಕದಲ್ಲಿ ಜೆಡಿಎಸ್ ಹೀಗೆ ಪಕ್ಷಗಳ ಅಸ್ತಿತ್ವ ವು ಕುಟುಂಬಗಳ ಮೇಲೆಯೇ ನಿರ್ಭರವಾಗಿರುವುದರಿಂದ ಕುಟುಂಬ ಪ್ರಾಬಲ್ಯವನ್ನು ಭಾರತದ ರಾಜಕಾರಣದಿಂದ ದೂರವಿಡುವುದು ಅಸಾಧ್ಯ. ದೇಶದ ಬಹುಪಾಲು ಪ್ರಾದೇಶಿಕ ಪಕ್ಷಗಳನ್ನು ಕುಟುಂಬಗಳೇ ನಡೆಸುತ್ತಿವೆ. ರಾಷ್ಟ್ರೀಯ ಪಕ್ಷಗಳಿಗೂ ನಿರ್ದಿಷ್ಟ ರಾಜ್ಯ (ಕರ್ನಾಟಕ ಬಿಜೆಪಿ) ಹಾಗೂ ಕ್ಷೇತ್ರಗಳಲ್ಲಿ ಕುಟುಂಬಗಳ ಪ್ರಭಾವ-ಸಾಮರ್ಥ್ಯ-ಆರ್ಥಿಕ ಶಕ್ತಿಯನ್ನು ಮೀರಿ ರಾಜಕಾರಣ ಮಾಡಲು ಸಾಧ್ಯವಾಗದ ಕಾರಣ, ಸೋಲು-ಗೆಲುವು ಏನೇ ಇರಲಿ, ಸಮರ್ಥ್ ಶಾಮನೂರು ಅಂಥವರಿಗೆ ಟಿಕೆಟ್ ನೀಡುವುದು ಅನಿವಾರ್ಯವಾಗುತ್ತದೆ.

ಫ್ರೆಂಚ್ ಕ್ರಾಂತಿಯ ಸಮಸಮಾಜ ಮತ್ತು ಶರಣರ ಸಾಮರಸ್ಯ

ಶರಣರ ದರ್ಶನದಲ್ಲಿ ಸಮತೆ ಎಂದರೆ ಹೊರಗಿನ ಸಾಮಾಜಿಕ ಸಮಾನತೆ ಅಲ್ಲ. ಅದು ಲಿಂಗಾಂಗ ಸಾಮರಸ್ಯದ ಅನುಭವದಿಂದ ಹುಟ್ಟುವ ಅಂತಃಕರಣದ ಸ್ಥಿತಿ, ಅಲ್ಲಿ ಶಿವಭಕ್ತನಿಗೆ ಭೇದಭಾವಗಳೆಲ್ಲ ಕರಗುತ್ತವೆ. ಸಮಾಧಿ ಸ್ಥಿತಿ ಎಂದರೆ ಮನಸ್ಸಿನ ವೃತ್ತಿಗಳು ನಿಶ್ಚಲಗೊಂಡು ಆತ್ಮತತ್ತ್ವದಲ್ಲಿ ಲೀನವಾಗುವ ಸ್ಥಿತಿ. ದ್ವೈತ ಭಾವದ ಲಯ ಮತ್ತು ಏಕತ್ವದ ಅನುಭವವಿದೆ. ಭಕ್ತಿ-ಅನುಭಾವದ ಮೂಲಕ ಸಮತೆ ವ್ಯಕ್ತವಾಗುತ್ತದೆ.

ವಿಶ್ಲೇಷಣೆ

ಜನಮೇಜಯ ಉಮರ್ಜಿ
vveditoped@gmail.com

ಕಳೆದವಾರ 'ವಿಶ್ವವಾಣಿ'ಯಲ್ಲಿ 'ಶರಣರ ಬಯಕೆ ಸಮಸಮಾಜವೋ, ಲಿಂಗಾಂಗ ಸಾಮರಸ್ಯವೋ?' ಎಂಬ ಲೇಖನವು ಪ್ರಕಟವಾಗಿತ್ತು. ಶರಣರು ಹೇಳದ 'ಸಮಸಮಾಜ'ವನ್ನು ಅವರ ಹೆಸರಿನಲ್ಲಿ ಹೇಗೆ ಪ್ರಚಾರ ಮಾಡಲಾಗುತ್ತಿದೆ ಎಂಬುದನ್ನು ಅದು ಬಿಚ್ಚಿಟ್ಟಿತ್ತು. ಹಲವು ಸಹೃದಯಿಗಳು, ಹಿರಿಯರು ಮೆಚ್ಚಿಕೊಂಡರು, ಜತೆಗೆ ವಚನಗಳ ಉಲ್ಲೇಖ ಲೇಖನದಲ್ಲಿ ಇದ್ದರೆ ಇನ್ನೂ ಚೆನ್ನಾಗಿರುತ್ತಿತ್ತು ಎಂದರು. ಅಷ್ಟೇ ಅಲ್ಲದೆ 'ಸಮಸಮಾಜ'ದ ತಪ್ಪು ತಿಳಿವಳಿಕೆ ಮತ್ತು ಆ ಶಬ್ದ ತರುವ ಅಪಾಯದ ಕಾಳಜಿ ಅವರಲ್ಲಿತ್ತು. ಹೀಗಾಗಿ ಮತ್ತೆ ಬರೆಯಬೇಕಾಗಿದೆ. 'ಸಮತೆ' ಎನ್ನುವ ಶಬ್ದ ವಚನಗಳಲ್ಲಿ 135 ಕಡೆ ಉಲ್ಲೇಖವಾಗಿದೆ. ಹೆಚ್ಚು ಕಡೆ ಸಮತೆಯು 'ಇಂದ್ರಿಯಗಳ ಸಮ ಸ್ಥಿತಿ', 'ಲೌಕಿಕ ವಿಷಯರಾಹಿತ್ಯ ಸ್ಥಿತಿ' ಎಂಬರ್ಥದಲ್ಲಿ ಬಳಕೆಯಾಗಿದೆ. ಇನ್ನು ಹಲವು ಕಡೆ 'ಲಿಂಗಾಂಗ ಸಾಮರಸ್ಯ' ಎಂಬರ್ಥದಲ್ಲಿ ಬಳಕೆಯಾಗಿದೆ. ಕನಿಷ್ಠ ಪಕ್ಷ ಒಂದು ಕಡೆಯೂ 'ಸಮಸಮಾಜ' ಎಂಬ ಅರ್ಥದಲ್ಲಿ ಬಳಕೆಯಾಗಿಲ್ಲ. ಹಾಗಾದರೆ 'ಸಮಸಮಾಜ'ವನ್ನು ಏಕೆ ಎಳೆದುತರಲಾಯಿತು? ಉದ್ದೇಶ ಸ್ಪಷ್ಟವಿದೆ. ಲಿಂಗಾಯತವನ್ನು ಸಮಾಜವಾದಿ ಮಾಡಬೇಕು ಇಲ್ಲವೇ ರಿಲಿಜನ್ ಮಾಡಬೇಕು, ಅದನ್ನು ಯುರೋಪ್ ಇಲ್ಲವೇ ಮರಳುಗಾಡಿನ ಪರಿಸರಕ್ಕೆ ಹೊಂದಿಸಬೇಕು.

ಫ್ರೆಂಚ್ ರಕ್ತಕ್ರಾಂತಿಯ ಸಮಯದಲ್ಲಿ ಹುಟ್ಟಿಕೊಂಡ 'ಸಮಸಮಾಜ' ಏನನ್ನು ಹೇಳುತ್ತದೆ? ಒಂದು 'ವಿತರಣಾ ಸಮಾನತೆ', ಅಂದರೆ ಸಂಪತ್ತಿನ ಸಮಾನ ಹಂಚಿಕೆ; ಇನ್ನೊಂದು 'ಸಾಪೇಕ್ಷತಾ ಸಮಾನತೆ', ಅಂದರೆ ಹೊಸ ಸಮಾಜದ ನಿರ್ಮಾಣ. ಅಧಿಕಾರ ಕ್ರಾಂತಿ ಅದರ ಸಾಧನೆಯ ಮಾರ್ಗ. 'ವಿತರಣಾ ಸಮಾನತೆ'ಯನ್ನು 'ದಾಸೋಹ' ಎಂತಲೂ, 'ಸಾಪೇಕ್ಷತಾ ಸಮಾನತೆ'ಯನ್ನು 'ಪ್ರತ್ಯೇಕ ಧರ್ಮ' ಎಂತಲೂ ಅಂದುಕೊಂಡು ಯುರೋಪಿನ ಶಬ್ದಗಳನ್ನು ನೇರವಾಗಿ ಹೇಳದೇ, ಹಿಂದೂ ಧರ್ಮವನ್ನು ಒಡೆಯುವ 'ಅಧಿಕಾರ ಕ್ರಾಂತಿ'ಯ ಜಪವು ಪ್ರತ್ಯೇಕಿಗಳ ಭಾಷಣಗಳಲ್ಲಿ, ಮುಖವಾಣಿಗಳಲ್ಲಿ ಕಂಡುಬರುತ್ತದೆ. ಶಿವಯೋಗಿ ಸಿದ್ಧರಾಮೇಶ್ವರರು ಸಮತೆಯನ್ನು ಬಹಳ ಸ್ಪಷ್ಟವಾಗಿ ವ್ಯಾಖ್ಯಾನ ಮಾಡಿದ್ದಾರೆ- ''ಆರೇನೆಂದಡೂ ಓರಂತಿಪ್ಪುದೆ ಸಮತೆ. ಆರು ಜರಿದವರೆನ್ನ ಮನದ ಕಾಳಿಕೆಯ ಕಳೆದರೆಂಬುದೆ ಸಮತೆ. ಆರು ಸ್ತೌತ್ಯವ ಮಾಡಿಹರೆನ್ನ ಜನ್ಮಜನ್ಮದ ಹಗೆಗಳೆಂಬುದೆ ಸಮತೆ, ಇಂತು ಗುರುಕಾರುಣ್ಯ, ಮನವಚನಕಾಯದಲ್ಲಿ ಅವಿತಥವಿಲ್ಲದಿರ್ದಡೆ, ಕಪಿಲಸಿದ್ಧಮಲ್ಲಿಕಾರ್ಜುನಾ, ನಿನ್ನವರ ನೀನೆಂಬುದೆ ಸಮತೆ''. ಯಾರು ಏನೇ ಅಂದರೂ, ಏನೇ ನಿಂದಿಸಿದರೂ ಅದನ್ನು ನಿರ್ವಿಕಾರವಾಗಿ ಸ್ವೀಕರಿಸುವುದೇ ಸಮತೆ. ಬೈದವರು ನನ್ನ ಮನಸ್ಸನ್ನು ನಿರ್ಮಲವಾಗಿಟ್ಟುಕೊಳ್ಳುವಂತೆ ಮಾಡಿದರು ಎಂದುಕೊಳ್ಳುವುದೇ ಸಮತೆ. ಹೊಗಳಿಕೆಗಳು ಜನ್ಮಜನ್ಮದ ಹಗೆಗಳು ಅಂದರೆ ಅಹಂಕಾರದ ಸಂಕೋಲೆಗಳು ಎಂದು ತಿಳಿಯುವುದು ಸಮತೆ. ಸುಖ-ದುಃಖ, ಲಾಭ-ನಷ್ಟ ಎರಡೂ ನನ್ನವೂ, ಎರಡರಲ್ಲೂ ಕಪಿಲಸಿದ್ಧ ಮಲ್ಲಿಕಾರ್ಜುನ ನೀನು ನನ್ನೊಂದಿಗೆ ಎಂದುಕೊಳ್ಳುವುದೇ ಸಮತೆ. ಜೀವನು ಶಿವನಂತೆಯೇ ಇರುವುದೇ ನಿಜವಾದ ಸಮತೆ. ನೋಡಿ ಇಲ್ಲಿ ಎಲ್ಲಿಯೂ 'ಸಮಸಮಾಜ' ಬಂದಿಲ್ಲ.

ಅಲ್ಲಮಪ್ರಭುಗಳು ಒಂದು ಕಡೆ 'ಸಮತೆ'ಯನ್ನು ಸೂತಕ ಎಂದು ಹೇಳಿದ್ದಾರೆ. ಶಬ್ದಶಃ ನೋಡಿದರೆ ಸಮಾನತೆಯನ್ನು ಪ್ರಭುದೇವರು ವಿರೋಧಿಸಿದ್ದಾರೆ ಎಂದಾದೀತು. ಅದು ಹಾಗಲ್ಲ. ''ಭವಿಯೆಂಬುದು ಹುಸಿ, ಭಕ್ತಿಯೆಂಬುದು ಉಪದೇಶ. ಶೀಲವೆಂಬುದು ಸಂಕಲ್ಪ, ಸಮತೆಯೆಂಬುದು ಸೂತಕ. ಇಂತೀ ಚತುರ್ವಿಧದೊಳಗಿಲ್ಲ, ಗುಹೇಶ್ವರಾ, ನಿಮ್ಮ ಶರಣ ನಿಸ್ಸೀಮ''! ಈ ವಚನವು ಭವಿ, ಭಕ್ತಿ, ಶೀಲ, ಸಮತೆ ಎಂಬ ನಾಲ್ಕು ಲೌಕಿಕ ಪರಿಕಲ್ಪನೆಗಳನ್ನು ಮೀರಿ ಗುಹೇಶ್ವರನಲ್ಲಿ ಲೀನವಾದ ಶರಣನು ಈ ಮಿತಿಗಳಿಲ್ಲದ, ಪರಿಪೂರ್ಣ ಅಂದರೆ ನಿಸ್ಸೀಮ ಎಂದು ಹೇಳುತ್ತದೆ. ಇಲ್ಲಿ ಸಮತೆಯೆಂಬುದು ಸೂತಕ, ಎಂದರೆ ಸಾಮರಸ್ಯ ಸಾಧಿಸಿದ್ದೇನೆ ಎಂಬ ಅಹಂಕಾರ. ಈ ಅಹಂಕಾರವೇ ಮೈಲಿಗೆ. ಇಲ್ಲಿಯೂ 'ಸಮಸಮಾಜ' ಸುಳಿದಿಲ್ಲ.

ಈಗ ಚೆನ್ನಬಸವಣ್ಣನವರ ವಚನ- ''ಆಚಾರವೆಂಬ ಬಿಲ್ಲಿಗೆ ವಿಚಾರವೆಂಬ ನಾರಿ, ಸಮತೆಯೆಂಬ ತಿರುವ ಮೆಟ್ಟಿ ಜೇವೊಡೆಗೆಯ್ದು, ಶಿಷ್ಯನೆಂಬ ಬಾಣವ ತೊಡಚಿ, ಗುರುವೆಂಬ ವ್ಯಾಧನು ಲಿಂಗವೆಂಬ ಬಯಲ ಗುರಿಯನೆಚ್ಚಡೆ, ಗರಿ ತೋರದಂತೆ ಮುಳುಗಿ ಅಡಗಿತ್ತು. ಆ ಗರಿಯನು ಬಾಣವನು ಅರಸಲುಂಟೆ, ಕೂಡಲಚೆನ್ನಸಂಗಾ ನಿಮ್ಮಲ್ಲಿ?''. ಅಂದರೆ ಗುರುವೆಂಬ ಬಿಲ್ಲುಗಾರ ವಿಚಾರವೆಂಬ ಹಗ್ಗ ಬಿಗಿದು ಸದಾಚಾರವೆಂಬ ಬಿಲ್ಲು ಹಿಡಿದಿದ್ದಾನೆ. ಇಲ್ಲಿ ಶಿಷ್ಯನೇ ಬಾಣ, ಲಿಂಗವೆಂಬ ಬಯಲೇ ಗುರಿ. ಆ ಬಿಲ್ಲಿಗೆ ಸಮತೆಯೆಂಬ ತಿರುವು, ಆ ಸಮತೆಯನ್ನು ಗುರುವು ಗಟ್ಟಿ ಹಿಡಿದು ಬಾಣದ ಹೆದೆ ಏರಿಸಿ ನಿಶ್ಚಲ ಗುರಿ ಇಟ್ಟಿದ್ದಾನೆ. ಆದರೆ ಲಿಂಗವು ಗರಿಯನ್ನೂ ತೋರದಂತೆ ನೀರಲ್ಲಿ ಮುಳುಗಿ ಸಿಗದಂತೆ ಅಡಗಿದೆ. ಅಂದರೆ, ಗುರುವಿನಿಂದ ತನುವಿಗೆ ಚಾರವನಳವಡಿಸಿ, ಮನಕ್ಕೆ ಜ್ಞಾನವನಳವಡಿಸಿ, ದುರ್ಬುದ್ಧಿಯಿಲ್ಲದಂತೆ ಶಾಂತಿಯನಳವಡಿಸಿ, ಶಿಷ್ಯನೆಂಬ ಆತ್ಮನನು ಲಿಂಗವೆಂಬ ಪರಮಾತ್ಮನಲ್ಲಿ ಪ್ರಯೋಗಿಸಲು ತನು ಕರಣೇಂದ್ರಿಯಂಗಳು ಸಹವಾಗಿ ಆತ್ಮನು ಲಿಂಗಾಂಗ ಸಾಮರಸ್ಯ ಹೊಂದಿ, ಅಂಗ ಲಿಂಗ ಭಾವ ಅಳಿಯುವುದೇ ಇದರ ತಾತ್ಪರ್ಯ. ಇಲ್ಲಿ ಸಮಾಜವಾದದ ಸೋಂಕೇ ಇಲ್ಲ.

ಪ್ರಭುದೇವರ ಇನ್ನೊಂದು ವಚನ- ''ಅಂಗ ಲಿಂಗದಲ್ಲಿ ತರಹರವಾಗಿ, ಸಮತೆ ಶಾಂತಿಯಲ್ಲಿ ತರಹರವಾಗಿ, ಮನ ಜ್ಞಾನದಲ್ಲಿ ತರಹರವಾಗಿ, ಭಾವ ನಿರ್ಭಾವದಲ್ಲಿ ತರಹರವಾಗಿ ಇರಬಲ್ಲಡೆ, ಆತನೆ ಅಚ್ಚಶರಣನು ಕಾಣಾ ಗುಹೇಶ್ವರಾ''. ಇದಕ್ಕೆ ಹೆಚ್ಚಿನ ವಿವರಣೆ ಬೇಕಾಗಿಲ್ಲ. ಶಿವಶರಣನ ಅಂಗವೆಲ್ಲ ಲಿಂಗವಾಗಿರುವಾಗ, ಜ್ಞಾನವೇ ಮನತುಂಬಿರುವುದು. ಆತ್ಮನನ್ನು ಅರಿತ ಅವಿರಳ ಜ್ಞಾನದಿಂದ ಭಾವವಡಗಿ ನಿರ್ಭಾವವಾಗುವುದು, ಒಟ್ಟಿನಲ್ಲಿ ಲಿಂಗಾಂಗ ಸಾಮರಸ್ಯವೆಂಬ ಸಮತೆಯಿಂದ ನಿಜಶಾಂತಿ ನೆಲೆಸುವುದು. ಇನ್ನು ಬಹುಚರ್ಚಿತ ಕೃಷಿ ವಚನ- ''ತನುವ ತೋಂಟವ ಮಾಡಿ, ಮನವ ಗುದ್ದಲಿ ಮಾಡಿ ಅಗೆದು ಕಳೆದೆನಯ್ಯಾ ಭ್ರಾಂತಿನ ಬೇರ. ಒಡೆದು ಸಂಸಾರದ ಹೆಂಟೆಯ, ಬಗಿದು ಬಿತ್ತಿದೆನಯ್ಯಾ ಬ್ರಹ್ಮಬೀಜವ. ಅಖಂಡಮಂಡಲವೆಂಬ ಬಾವಿ, ಪವನವೆ ರಾಟಾಳ, ಸುಷುಮ್ನನಾಳದಿಂದ ಉದಕವ ತಿದ್ದಿ. ಬಸವಗಳೈವರು ಹಸಗೆಡಿಸಿಹವೆಂದು ಸಮತೆ ಸೈರಣೆಯೆಂಬ ಬೇಲಿಯನಿಕ್ಕಿ, ಆವಾಗಲೂ ಈ ತೋಂಟದಲ್ಲಿ ಜಾಗರವಿದ್ದು ಸಸಿಯ ಸಲಹಿದೆನು ಕಾಣಾ ಗುಹೇಶ್ವರಾ''. 'ತನುವ ತೋಂಟವ ಮಾಡಿ' ವಚನವು 'ಆತ್ಮಸಾಕ್ಷಾತ್ಕಾರ'ದ ಅತ್ಯುನ್ನತ ಕೃಷಿಯನ್ನು ವ್ಯಾಖ್ಯಾನಿಸುತ್ತದೆ. ದೇಹವನ್ನು ತೋಟ, ಮನಸ್ಸನ್ನು ಗುದ್ದಲಿ, ಭ್ರಾಂತಿಯನ್ನು ಕಳೆ ಹಾಗೂ ಸಮತೆ-ಸೈರಣೆಯನ್ನು ಬೇಲಿಯನ್ನಾಗಿ ಮಾಡಿ, ಬ್ರಹ್ಮ ಬೀಜ ಬಿತ್ತಿ, ಸತತ ಜಾಗೃತಿಯಿಂದ ಜ್ಞಾನದ ಸಸಿ ಸಲಹುವುದೇ ಈ ವಚನದ ಸಾರ. ನಮ್ಮ ದೇಹವು ಆತ್ಮನು ವಿಹರಿಸುವ, ಅರಿವಿನ ಸಸಿ ಬೆಳೆಸುವ ಪವಿತ್ರ ತೋಟ. ಸಂಸಾರದ ಮೋಹ, ಭ್ರಾಂತಿ, ಕಾಮ-ಕ್ರೋಧಗಳನ್ನು ತೆಗೆದುಹಾಕಲು ಮನಸ್ಸನ್ನು ಜಾಗ್ರತೆಯಿಂದ ಬಳಸಬೇಕು, ಅದುವೇ ಮನಸ್ಸೆಂಬ ಗುದ್ದಲಿ. ಬ್ರಹ್ಮ ಬೀಜ ಎಂದರೆ ಜಾಗೃತಿ, ತಪ್ಪು ತಿಳಿವಳಿಕೆಯನ್ನು ಹೋಗಲಾಡಿಸಿ, ಅರಿವು ಎಂದರೆ ಬ್ರಹ್ಮಜ್ಞಾನ ಎಂಬ ಬೀಜವನ್ನು ಬಿತ್ತಬೇಕು. ಸಾಧನೆಯ ಬೇಲಿ ಎಂದರೆ ಇಂದ್ರಿಯಗಳ ಸೆಳೆತವನ್ನು ತಡೆಯಲು ಸಮತೆ (ಸಾಮರಸ್ಯ) ಮತ್ತು ಸೈರಣೆ (ಸಹನೆ) ಎಂಬ ಬೇಲಿ ಅವಶ್ಯಕ. ಜಾಗ್ರತಾವಸ್ಥೆ ಎಂದರೆ ಜಾಗರವಿದ್ದು ಜ್ಞಾನದ ಸಸಿ ಒಣಗದಂತೆ ಸದಾ ಎಚ್ಚರದಿಂದ, ಭಕ್ತಿ-ಜ್ಞಾನದ ನೀರೆರೆದು ಸಲಹಬೇಕು. ಸರಳವಾಗಿ ಹೇಳುವುದಾದರೆ, ಭೌತಿಕ ದೇಹ ಮತ್ತು ಮನಸ್ಸನ್ನು ಬಳಸಿಕೊಂಡು, ಆಂತರಿಕ ಸಂಘರ್ಷಗಳನ್ನು ಹೋಗಲಾಡಿಸಿ, ಪರಿಶುದ್ಧ ಅರಿವನ್ನು ಬೆಳೆಸಿಕೊಳ್ಳುವುದೇ 'ತನುವ ತೋಂಟವ ಮಾಡಿ' ವಚನದ ನಿಜವಾದ ಅರ್ಥ. ಇಲ್ಲಿ ಸಮತೆ ಎಂಬುದು 'ಇಂದ್ರಿಯ ನಿಗ್ರಹ' ಎಂಬರ್ಥದಲ್ಲಿ ಬಳಕೆಯಾಗಿದೆ.

''ಜಲದ ಚಿತ್ತಾರದ ಕೊರಳಿನಲ್ಲಿ ದಾರವಿಲ್ಲದ ಮುತ್ತಿನ ಸರವು ನೋಡಾ! ಚಿತ್ತಾರವಳಿಯದೆ, ಮುತ್ತು ಉಳಿಯದೆ ನಿಂದ ನಿಲವಿನ ಪರಿಯ ನೋಡಾ! ಗಮನವಿಲ್ಲದ ಗಂಭೀರ, ಶಬುದವಿಲ್ಲದ ಸಾರಾಯ ಸಮತೆಯಾಗಿ ನಿಂದ ಅಜಗಣ್ಣಂಗೆ ಇನ್ನಾರು ಸರಿ ಎಂಬೆನು''- ಇದು ಮುಕ್ತಾಯಕ್ಕನ ವಚನ. ಈ ವಚನವು ಅಜಗಣ್ಣನ ನಿರಹಂಕಾರದ, ಅವಿರಳ ಜ್ಞಾನದ ಸ್ಥಿತಿಯನ್ನು ಸಾರುತ್ತದೆ. ಗಮನವಿಲ್ಲದ ಗಂಭೀರತೆ, ಶಬ್ದ ಮೀರಿ ನಿಂತ ನಿಲುವು ಮತ್ತು ಪರಿಪೂರ್ಣ ಅರಿವಿನ ಸ್ಥಿತಿ ಅಥವಾ ಲಿಂಗಾಂಗ ಸಾಮರಸ್ಯ ಸ್ಥಿತಿ ತಲುಪಿದ ಅಜಗಣ್ಣನಿಗೆ ಇನ್ನಾರು ಸರಿ ಎಂದು ಆಕೆ ಹೇಳುತ್ತಾಳೆ.

ಇನ್ನೊಂದು ಸಿದ್ಧರಾಮೇಶ್ವರರ ವಚನ- ''ಸಕಲ ಶ್ರುತಿಗಳು ನಿನ್ನ ಅನುಮಿಸಿದ ವಾಸನೆಗೆ ಮುಸುಕಲಮ್ಮದೆ ತೊಲಗಿ ಹೊಗಳುತಿರಲು, ನಾನೆ ಅಭೇದ್ಯಯೆಂದು ಹೊಗಳುವ ವೇದ ಸಮತೆ ಸಾಯುಜ್ಯದಲಿ ದೀಕ್ಷೆಯವಕೆ. ದೃಷ್ಟವಪ್ಪವ ನೀನು ಶ್ರುತವೆಂದು ಹೇಳುವೆ, ಅತಿಶಯದ ಶ್ರುತ ದೃಷ್ಟಕೆ ಒಡೆಯನಾದವನೆ ಹದುಳದಿಂದರ್ಚಿಸಾ ಸಮತೆ ಪದವಾ. ಸಮತೆ ಸಜ್ಜನರೊಂದು ನೆನಹಿನಲಿ ಮೂರ್ತಿಯ್ಯೆ, ಕರುಣ ವಾರುಧಿಗಳದರ ಕೆಲಬಲದಲಿ. ಕರುಣಾಕರನು ಕಪಿಲಸಿದ್ಧಮಲ್ಲೇಶ್ವರನು ಸಮತೆ ಸಂಯೋಗದಲಿ ಸುಖಿಯಾದನು''. ಇಲ್ಲಿ ಸಮತೆ ಸಜ್ಜನರ ನೆನಹಿನ ಕೈಗೊಂಬೆ. ಕಪಿಲಸಿದ್ಧಮಲ್ಲೇಶ್ವರನು ಸಮತೆ ಸಂಯೋಗದಲಿ ಸುಖಿಯಾದ ಲಿಂಗಾಂಗ ಸಾಮರಸ್ಯದ ಪದವ ಹದುಳದಿಂದರ್ಚಿಸಬೇಕು. ಇನ್ನು ಬಸವಣ್ಣನವರ ಒಂದು ವಚನ- ''ಕಾಯವೆಂಬ ಘಟಕ್ಕೆ ಚೈತನ್ಯವೆ ಸಯಿದಾನ, ಸಮತೆಯೆಂಬ ಜಲ, ಕರಣಾದಿಗಳೆ ಶ್ರವಣ; ಜ್ಞಾನವೆಂಬಗ್ನಿಯನಿಕ್ಕಿ, ಮತಿಯೆಂಬ ಸಟ್ಟುಗದಲ್ಲಿ ಘಟ್ಟಿಸಿ ಪಾಕಕ್ಕೆ ತಂದು, ಭಾವದಲ್ಲಿ ಕುಳ್ಳಿರಿಸಿ ಪರಿಣಾಮದೋಗರವ ನೀಡಿದರೆ ಕೂಡಲಸಂಗಮದೇವಂಗೆ ಆರೋಗಣೆಯಾಯಿತ್ತು''. ಇಲ್ಲಿ ದೇಹವೆಂಬ ಕುಡಿಕೆ, ಚೈತನ್ಯವೆಂಬ ಅಕ್ಕಿ,ಬೇಳೆ, ಬೆಲ್ಲ, ಸಮತೆಯೆಂಬ ಜಲ, ಜ್ಞಾನವೆಂಬ ಅಗ್ನಿಯನಿಕ್ಕಿ, ಬುದ್ಧಿಯಿಂದ ಹುಟ್ಟಿನಿಂದ ಘಟ್ಟಿಸಿ ಪಾಕಕ್ಕೆ ತಂದು ಭಾವದಲ್ಲಿ ಕುಳ್ಳಿರಿಸಿ ಮಾಡಿದ ಪಾಯಸ ಕೂಡಲಸಂಗಮದೇವನಿಗೆ ಅರ್ಪಿತವಾಯ್ತು ಎಂದಿದೆ. ಈ ಎರಡೂ ವಚನಗಳಲ್ಲಿ 'ಸಮಸಮಾಜ' ಬಂದಿಲ್ಲ.

ಇನ್ನು ವಚನಗಳಲ್ಲಿ ಹಲವು ಕಡೆ ಶಿವಶರಣರ ಸಮತೆಯು ಯೋಗಸಮಾಧಿ ಸ್ಥಿತಿಯಂತೆ ಕಾಣುತ್ತದೆ. ಶರಣರ ದರ್ಶನದಲ್ಲಿ ಸಮತೆ ಎಂದರೆ ಹೊರಗಿನ ಸಾಮಾಜಿಕ ಸಮಾನತೆ ಅಲ್ಲ. ಅದು ಲಿಂಗಾಂಗ ಸಾಮರಸ್ಯದ ಅನುಭವದಿಂದ ಹುಟ್ಟುವ ಅಂತಃಕರಣದ ಸ್ಥಿತಿ, ಅಲ್ಲಿ ಶಿವಭಕ್ತನಿಗೆ ಭೇದಭಾವಗಳೆಲ್ಲ ಕರಗುತ್ತವೆ. ಸಮಾಧಿ ಸ್ಥಿತಿ ಎಂದರೆ ಮನಸ್ಸಿನ ವೃತ್ತಿಗಳು ನಿಶ್ಚಲಗೊಂಡು ಆತ್ಮತತ್ತ್ವದಲ್ಲಿ ಲೀನವಾಗುವ ಸ್ಥಿತಿ. ದ್ವೈತ ಭಾವದ ಲಯ ಮತ್ತು ಏಕತ್ವದ ಅನುಭವವಿದೆ. ಭಕ್ತಿ-ಅನುಭಾವದ ಮೂಲಕ ಸಮತೆ ವ್ಯಕ್ತವಾಗುತ್ತದೆ. ಶಿವಭಕ್ತರೆಲ್ಲ ಒಂದೇ ಎಂಬಲ್ಲಿ ಮುಕ್ತವಾಗುತ್ತದೆ. ಕಮ್ಯುನಿಸ್ಟರ 'ಸಮಸಮಾಜ' ಕಲ್ಪನೆ ಮತ್ತು ಶರಣರ ದರ್ಶನವನ್ನು ಒಂದೇ ಎನ್ನುವುದು ಆಷಾಢಭೂತಿತನ. ಶರಣರನ್ನು ಅರ್ಥಮಾಡಿಕೊಳ್ಳಬೇಕಾದರೆ, ಅವರನ್ನು ಸಮಾಜವಾದಿಗಳಾಗಿ ಅಲ್ಲ, ಆಧ್ಯಾತ್ಮಿಕ ಸಾಧಕರಾಗಿ ನೋಡುವುದು ಅನಿವಾರ್ಯ.

(ಲೇಖಕರು ಸಂಸ್ಕೃತಿ ಚಿಂತಕರು)

ಭಟ್ಟರ್ ಸ್ಕಾಚ್

- ವಿನೋದ ಚಂದ್ರ, ಬೆಂಗಳೂರು
  ಭಟ್ರೇ, ಫೇಸ್ ವ್ಯಾಲ್ಯೂ ಜಾಸ್ತಿಯಾಗಬೇಕು ಅಂದ್ರೆ ಏನು ಮಾಡಬೇಕು?
- **ಮುಖಕ್ಕೆ ಪೌಡರ್ ಹಚ್ಚಿಕೊಳ್ಳಬೇಕು!**

- ರಾಜು ಪತ್ತಾರ, ಹುಬ್ಬಳ್ಳಿ
  ಭಟ್ರೇ, ಕಂಪ್ಯೂಟರ್ ಯಾಕೆ ಯಾವಾಗಲೂ ಕೂಲ್ ಆಗಿರುತ್ತದೆ?
- **ಅದರಲ್ಲಿ 'ವಿಂಡೋಸ್' ಇರುತ್ತದಲ್ಲ!**

- ಜಾಹ್ನವಿ, (ಇಮೇಲ್ ಮೂಲಕ)
  ಭಟ್ರೇ, ಸ್ಕೂಲ್ ಬ್ಯಾಗ್ ಮತ್ತು ಟೀಚರ್ ಮಧ್ಯೆ ಇರುವ ಸಾಮ್ಯತೆ ಏನು?
- **ಎರಡು ಕೂಡ ನಮ್ಮ ಬೆನ್ನು ಹತ್ತಿರುತ್ತವೆ!**

- ಸುರೇಶ ಪಾಟೀಲ, ಬೆಂಗಳೂರು
  ಭಟ್ರೇ, ಸಮುದ್ರದಲ್ಲಿ ಮೀನುಗಳು ಯಾಕೆ ಮಾತನಾಡಲ್ಲ?
- **ಬಾಯಿಯಲ್ಲಿ ನೀರು ತುಂಬಿಕೊಂಡರೆ ಮಾತನಾಡೋಕೆ ಆಗುತ್ತಾ?**

- ರಮೇಶ ಗೌಡ, ಮಳವಳ್ಳಿ
  ಭಟ್ರೇ, ವಯಸ್ಸಾದಂತೆ ಕೂದಲು ಉದುರುತ್ತವಲ್ಲ?
- **ತೋರಿಸಿಕೊಳ್ಳಲು ಇದ್ದ ಅದೂ ಸಹ ಉದುರುತ್ತದಲ್ಲ ಎಂಬುದೇ ಆ ಆರ್.ಜಿ.ಹಳ್ಳಿ ನಾಗರಾಜನ ಚಿಂತೆ!**

- ವೀರೇಶ ಬಡಿಗೇರ, ಸಂಡೂರು
  ಭಟ್ರೇ, ಫೋನ್ ಚಾರ್ಜಿಂಗ್ ಇಟ್ಟಾಗ ಯಾಕೆ ಬಿಸಿಯಾಗುತ್ತದೆ?
- **ಪವರ್ ಬಂದಾಗ ಯಾರಿಗಾದರೂ ಸ್ವಲ್ಪ 'ಜೋಶ್' ಬರಲ್ವಾ?!**

- ನಾಗೇಂದ್ರ, ಭಾರತಿ, ತುಮಕೂರು
  ಭಟ್ರೇ, ಮನುಷ್ಯನಿಗೆ ಯಾವ ಕಾಯಿಲೆ ಬಂದಾಗ ತುಂಬಾ ಖುಷಿಯಾಗುತ್ತಾನೆ?
- **ಆಫೀಸ್‌ಗೆ ರಜೆ ಸಿಗುವಂಥ 'ಜ್ವರ' ಬಂದಾಗ!**

- ವಿಶಾಲ್, (ಇಮೇಲ್ ಮೂಲಕ)
  ಭಟ್ರೇ, ನಿದ್ದೆ ಮಾಡದಿದ್ದರೂ ಕನಸು ಕಾಣೋದು ಹೇಗೆ?
- **ಹಗಲುಗನಸು ಕಂಡರೆ ಆಯ್ತಪ್ಪ!**

- ಕಮಲಾ ಬನ್ನಿ, ಮೈಸೂರು
  ಭಟ್ರೇ, ಸೊಳ್ಳೆಗಳು ಸಂಜೆ ಹೊತ್ತೇ ಯಾಕೆ ಜಾಸ್ತಿ ಬರುತ್ತವೆ?
- **ಯಾಕೆಂದರೆ ಅವುಗಳಿಗೆ 'ಡ್ಯೂಟಿ' ಶುರುವಾಗುವುದು ಆಗಲೇ!**

- ವೆಂಕಟೇಶ ಹೆಗಡೆ, ಸೊರಬ
  ಭಟ್ರೇ, ಎಮ್ಮೆ ಕಪ್ಪಗಿದ್ದರೂ ಹಾಲು ಯಾಕೆ ಬಿಳಿಯಾಗಿರುತ್ತದೆ?
- **ಎಮ್ಮೆ ಹಾಲಿಗೆ 'ಫೇರ್ ಅಂಡ್ ಲವ್ಲಿ' ಹಾಕಲ್ಲ ಅದಕ್ಕೆ!**

ಗ್ಯಾರಂಟಿ ಬೇಡ ಎನ್ನುವ ತಾಕತ್ತು ಯಾರಿಗಿದೆ ?

ಲೋಕಮತ

ಲೋಕೇಶ್ ಕಾಯರ್ಗ
vveditoped@gmail.com

ಗ್ಯಾರಂಟಿ ಯೋಜನೆಗಳಿಗೆ ದೊಡ್ಡ ಮೊತ್ತದ ಹಣವನ್ನು ಮೀಸಲಿಡುತ್ತಿರುವುದರಿಂದ, ಶಾಸಕರು ಕೇಳುತ್ತಿರುವ ಹೊಸ ರಸ್ತೆ ಅಥವಾ ಮೂಲಸೌಕರ್ಯದ ಕೆಲಸಗಳಿಗೆ ಹೆಚ್ಚಿನ ಅನುದಾನ ನೀಡಲು ಸಾಧ್ಯವಾಗುತ್ತಿಲ್ಲ ಎಂದು ಗ್ಯಾರಂಟಿ ಯೋಜನೆಗಳ ರೂವಾರಿ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಇತ್ತೀಚೆಗೆ ಬಹಿರಂಗವಾಗಿ ಒಪ್ಪಿಕೊಂಡಿದ್ದರು. ಪ್ರತಿಪಕ್ಷ ನಾಯಕ ಆರ್. ಅಶೋಕ್ ಅವರು ಈ ಹೇಳಿಕೆಯನ್ನು ಉಲ್ಲೇಖಿಸಿ, 'ಗ್ಯಾರಂಟಿ ಯೋಜನೆಗಳ ಹೆಸರಿನಲ್ಲಿ ರಾಜ್ಯವನ್ನು ದಿವಾಳಿ ಮಾಡಿದೆ. ಅಭಿವೃದ್ಧಿ ಕೆಲಸಗಳಿಗೆ ಒಂದು ರೂಪಾಯಿ ಹಣವಿಲ್ಲ ಎಂದು ಸ್ವತಃ ಉಪಮುಖ್ಯಮಂತ್ರಿಗಳೇ ಒಪ್ಪಿಕೊಳ್ಳುತ್ತಿರುವುದು ರಾಜ್ಯದ ದುರ್ದೈವ' ಎಂದು ಅವರು ಸದನದಲ್ಲಿ ವಾಗ್ದಾಳಿ ನಡೆಸಿದ್ದರು. ಅಶೋಕ್ ಮಾತಿಗೆ ' ನಿಮ್ಮ ಕ್ಷೇತ್ರಗಳಲ್ಲಿ ಗ್ಯಾರಂಟಿ ಯೋಜನೆಗಳು ಬೇಡ ಎಂದು ಹೇಳಲು ನೀವು ಸಿದ್ಧರಿದ್ದೀರಾ' ಎಂದು ಡಿಕೆಶಿ ಮರು ಸವಾಲು ಹಾಕಿದ್ದರು. ಅಲ್ಲಿಗೆ ಈ ವಾಕ್ಸಮರ ತಣ್ಣಗಾಗಿತ್ತು. 'ಅಭಿವೃದ್ಧಿಯನ್ನು ಬದಿಗಿಟ್ಟು ಜನರನ್ನು ಮರಳು ಮಾಡುವ ಯೋಜನೆ, ನಮಗೂ ಬೇಡ, ನಿಮಗೂ ಬೇಡ' ಎಂದು ಖಡಕ್ಕಾಗಿ ಉತ್ತರಿಸುವ ಧೈರ್ಯವನ್ನು ಪ್ರತಿಪಕ್ಷ ಬಿಜೆಪಿ ತೋರಿಸಲಿಲ್ಲ.

ಕರ್ನಾಟಕ ಮಾತ್ರವಲ್ಲ ಇಡೀ ದೇಶದಲ್ಲಿ ಈಗ ಚುನಾವಣೆ ಕೇವಲ ಜನಪ್ರತಿನಿಧಿಗಳ ಆಯ್ಕೆಯ ಪ್ರಕ್ರಿಯೆಯಾಗಿ ಉಳಿದಿಲ್ಲ, ಅವು ಭರವಸೆಗಳ ಮತ್ತು ಉಚಿತ ಕೊಡುಗೆಗಳ ಸ್ಪರ್ಧೆಯಾಗಿ ಬದಲಾಗಿದೆ. ಎಲ್ಲ ಪಕ್ಷಗಳ ಚುನಾವಣೆ ಪ್ರಣಾಳಿಕೆಯಲ್ಲೂ ಈಗ ಅಭಿವೃದ್ಧಿ ಯೋಜನೆಗಳ ಪ್ರಸ್ತಾಪಕ್ಕಿಂತ ಉಚಿತ ಯೋಜನೆಗಳು ಆದ್ಯತೆ ಪಡೆದಿವೆ. ಪ್ರತಿಪಕ್ಷಗಳ ಉಚಿತ ಯೋಜನೆಯನ್ನು ಕಟುವಾಗಿ ಟೀಕಿಸಿದ್ದ ಪ್ರಧಾನಿ ನರೇಂದ್ರ ಮೋದಿ ಅವರೇ, ಬಿಹಾರ ಚುನಾವಣೆಗೆ ಮುನ್ನ ಎನ್‌ಡಿಎ ಪ್ರಣಾಳಿಕೆಯಲ್ಲಿ ಘೋಷಿಸಿದ್ದ ಭರ್ಜರಿ ಉಚಿತ ಯೋಜನೆಗಳನ್ನು ಕೊಂಡಾಡಿದ್ದರು.

ಪಕ್ಷ ಯಾವುದೇ ಇರಲಿ, ಇನ್ನು ಮುಂದೆ ಚುನಾವಣೆ ಗೆಲ್ಲಲು ಉಚಿತ ಸ್ಕೀಮುಗಳು ಅನಿವಾರ್ಯ ಎನ್ನುವ ವಾತಾವರಣ ಸೃಷ್ಟಿಯಾಗಿದೆ. ಇದರಿಂದ ರಾಜ್ಯ ಇಲ್ಲವೇ ದೇಶದ ಆರ್ಥಿಕತೆಗೆ ಅಪಾಯ ಕಟ್ಟಿಟ್ಟ ಬುತ್ತಿ ಎಂದು ಗೊತ್ತಿದ್ದರೂ ಗ್ಯಾರಂಟಿ ಸ್ಕೀಮ್ ಎಂಬ ಹುಲಿ ಸವಾರಿಗೆ ಎಲ್ಲರೂ ಸಜ್ಜಾಗಿದ್ದಾರೆ. ಹುಲಿ ಏರಿದ ಮೇಲೆ ಸವಾರಿ ಮಾಡಲೇಬೇಕು. ಇಲ್ಲವಾದರೆ ಅದು ಸವಾರನನ್ನೇ ಬಲಿ ಪಡೆಯುತ್ತದೆ. ರಾಜಕೀಯ ಪಕ್ಷಗಳ ಕಥೆಯೂ ಈಗ ಇದೇ ಆಗಿದೆ. ಜನರ ಜೇಬನ್ನು ನೇರವಾಗಿ ತುಂಬಿಸುವ ಯೋಜನೆಗಳ ಹೊರತು ಚುನಾವಣೆ ಗೆಲ್ಲುವುದು ಅಸಾಧ್ಯ ಎನ್ನುವ ಮನಸ್ಥಿತಿ ರಾಜಕೀಯ ಪಕ್ಷಗಳಲ್ಲಿದೆ. ಅಧಿಕಾರವೇ ಮುಖ್ಯ. ಇದಕ್ಕಾಗಿ ಯಾವ ಹಾದಿ ತುಳಿದರೂ ತಪ್ಪಿಲ್ಲ ಎಂಬ ನಿರ್ಧಾರಕ್ಕೆ ಬಂದಿರುವ ರಾಜಕೀಯ ನಾಯಕರು ಪಕ್ಷಾತೀತವಾಗಿ 'ನಗದು ಕೊಡುಗೆ' ಮತ್ತು ಉಚಿತ ಯೋಜನೆಗಳನ್ನು ತಮ್ಮ ಪ್ರಣಾಳಿಕೆಯಲ್ಲಿ ಸೇರಿಸಿಕೊಳ್ಳಲು ಪೈಪೋಟಿಗೆ ಬಿದ್ದಿದ್ದಾರೆ.

ಜನಪ್ರಿಯ ಯೋಜನೆಗಳ ರಾಜಕೀಯ ಪರಂಪರೆ ಇಂದು ನಿನ್ನೆಯದಲ್ಲ, ಇದರ ಬೇರುಗಳು ದಶಕಗಳ ಹಿಂದಿನವು. ಉಚಿತ ಕೊಡುಗೆಗಳನ್ನು ಚುನಾವಣಾ ಅಸ್ತ್ರವನ್ನಾಗಿ ಬಳಸಲು ಆರಂಭಿಸಿದ್ದು ತಮಿಳುನಾಡು. 1960ರಲ್ಲಿ ಕೆ. ಕಾಮರಾಜ್ ಅವರು ಆರಂಭಿಸಿದ ಬಿಸಿಯೂಟ ಯೋಜನೆಯನ್ನು 1982ರಲ್ಲಿ ಅಂದಿನ ಮುಖ್ಯಮಂತ್ರಿ ಎಂ.ಜಿ. ರಾಮಚಂದ್ರನ್ ರಾಜ್ಯಮಟ್ಟಕ್ಕೆ ವಿಸ್ತರಿಸಿದರು. ಇದು ಕೇವಲ ಕಲ್ಯಾಣ ಯೋಜನೆಯಾಗಿ ಉಳಿಯದೆ, ಅವರನ್ನು ಜನಪ್ರಿಯತೆಯ ತುತ್ತ ತುದಿಯಲ್ಲಿ ಕೂರಿಸಿತು. ಪ್ರತಿಯಾಗಿ ಡಿಎಂಕೆ ನಾಯಕ ಎಂ. ಕರುಣಾನಿಧಿ ಅವರು ಒಂದು ರುಪಾಯಿಗೆ ಒಂದು ಕೆಜಿ ಅಕ್ಕಿ ಮತ್ತು ಉಚಿತವಾಗಿ ಬಣ್ಣದ ಟಿವಿ ನೀಡುವುದಾಗಿ ಘೋಷಿಸಿದರು. ಇದು ಭಾರತೀಯ ರಾಜಕೀಯದಲ್ಲಿ ಒಂದು ದೊಡ್ಡ ಮೈಲಿಗಲ್ಲಾಯಿತು. ಅಲ್ಲಿಂದ ಮುಂದೆ ಮಿಕ್ಸಿ, ಗ್ರೈಂಡರ್, ಲ್ಯಾಪ್‌ಟಾಪ್, ಸೈಕಲ್‌ಗಳ ಹಂಚಿಕೆ ಒಂದು ಸಂಪ್ರದಾಯವಾಗಿ ಬೆಳೆಯಿತು. ಆಂಧ್ರಪ್ರದೇಶದಲ್ಲಿ ಎಂಜಿಆರ್ ಮಾದರಿಯನ್ನು ಅನುಸರಿಸಿದ ಎನ್‌ಟಿಆರ್ ತಮ್ಮ ಮುಖ್ಯಮಂತ್ರಿ ಗಾದಿಯನ್ನು ಭದ್ರಪಡಿಸಿಕೊಂಡರು. ಅವರು ಘೋಷಿಸಿದ ಎರಡು ರುಪಾಯಿಗೆ ಒಂದು ಕೆಜಿ ಅಕ್ಕಿ ಯೋಜನೆ ದೇಶಾದ್ಯಂತ ಸಂಚಲನ ಮೂಡಿಸಿತ್ತು. ಈ ಯೋಜನೆಗಳು ಎಂಜಿಆರ್ ಮತ್ತು ಎನ್‌ಟಿಆರ್ ಅವರನ್ನು ಬಡವರ ಕಣ್ಣಲ್ಲಿ ದೈವತ್ವಕ್ಕೇರಿಸಿದವು. ನಂತರ ದಕ್ಷಿಣದ ಬಹುತೇಕ ರಾಜ್ಯಗಳು ಉಚಿತ ಅಕ್ಕಿ ಯೋಜನೆಯನ್ನು ಜಾರಿಗೊಳಿಸಿದವು.

2005ರಲ್ಲಿ ಯುಪಿಎ ಸರಕಾರ ಜಾರಿಗೆ ತಂದ 100 ದಿನಗಳ ಉದ್ಯೋಗ ಖಾತ್ರಿ ಯೋಜನೆಯ ಮೂಲಕ ಜನರಿಗೆ ನೇರವಾಗಿ ನಗದು ವರ್ಗಾವಣೆ ಮಾಡುವ ಪರಂಪರೆ ಆರಂಭವಾಯಿತು. ಮೋದಿ ಸರಕಾರವೂ 'ಪಿಎಂ ಕಿಸಾನ್' ಹೆಸರಲ್ಲಿ ನಗದು ವರ್ಗಾವಣೆ ಯೋಜನೆ ಆರಂಭಿಸಿತು. ಸಮಾಜವಾದಿ ಚಿಂತನೆಯಿಂದ ಆರಂಭವಾದ ಈ ಯೋಜನೆಗಳೆಲ್ಲವೂ ದೇಶದ ಬಡವರು, ರೈತರು ಮತ್ತು ಗ್ರಾಮೀಣರ ಅಭ್ಯುದಯಕ್ಕೆ ತಮ್ಮದೇ ಆದ ಕೊಡುಗೆ ನೀಡಿರುವುದು ಸುಳ್ಳಲ್ಲ.ಆದರೆ ಕರ್ನಾಟಕ ಸರಕಾರ ಆರಂಭಿಸಿದ ಪಂಚ ಗ್ಯಾರಂಟಿ ಯೋಜನೆಗಳು ಜನಪ್ರಿಯ ಯೋಜನೆಗಳ ವ್ಯಾಖ್ಯಾನವನ್ನು ಬದಲಿಸಿವೆ. ಇಡೀ ಸರಕಾರವೇ ಈಗ ಗ್ಯಾರಂಟಿ ಸ್ಕೀಮುಗಳ ನಡುವೆ ಗಿರಕಿ ಹೊಡೆಯುತ್ತಿದೆ. ಮೊನ್ನೆ ಮಂಡಿಸಿರುವ 2026-27ರ ಸಾಲಿನ ಬಜೆಟ್‌ನಲ್ಲಿ ಈ ಯೋಜನೆಗಳಿಗಾಗಿ 51,286 ಕೋಟಿ ರು. ಮೀಸಲಿಡಲಾಗಿದೆ. ಅಂದರೆ ರಾಜ್ಯದ ಒಟ್ಟು ವೆಚ್ಚದ ಶೇ. 12ರಷ್ಟು ಭಾಗ ಈ ಯೋಜನೆಗೆ ವ್ಯಯವಾಗಲಿದೆ. ಸರಕಾರಿ ನೌಕರರ ವೇತನ, ಪಿಂಚಣಿ ಸಾಲದ ಮೇಲಿನ ಬಡ್ಡಿ ಪಾವತಿಯನ್ನು ಸೇರಿಸಿದರೆ ದೈನಂದಿನ ಖರ್ಚುಗಳಿಗೆ ಸರಕಾರ ಸಾಲ ಮಾಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಬಜೆಟ್ ಪ್ರಸ್ತಾಪದ ಪ್ರಕಾರ ರಾಜ್ಯ 22,957 ಕೋಟಿ ರು. ಆದಾಯದ ಕೊರತೆಯನ್ನು ಎದುರಿಸುತ್ತಿದೆ. ರಾಜ್ಯದ ಒಟ್ಟು ಸಾಲ ಮತ್ತು ಜಿಡಿಪಿ ಅನುಪಾತವು ಹೆಚ್ಚುತ್ತಿದ್ದು ಸಾಲದ ಪ್ರಮಾಣ 8 ಲಕ್ಷ ಕೋಟಿಗಳ ಆಸುಪಾಸಿನಲ್ಲಿದೆ.

ಈ ಪರಿಸ್ಥಿತಿಯಲ್ಲಿ ಯಾವುದೇ ಅಭಿವೃದ್ಧಿ ಯೋಜನೆಗಳಿಗೆ ಹಣ ಮೀಸಲಿಡುವುದು ಸವಾಲಿನ ಕೆಲಸ. ಬಜೆಟ್‌ನಲ್ಲಿ ಎಲ್ಲ ಯೋಜನೆಗಳನ್ನೂ ಹೆಸರಿಸಿ ಒಂದಷ್ಟು ಅನುದಾನ ಮೀಸಲಿಡಬಹುದೇ ಹೊರತು ಕಾಲ ಮಿತಿಯಲ್ಲಿ ಯಾವುದೇ ಯೋಜನೆ ಪೂರ್ಣಗೊಳಿಸಲು ಸಾಧ್ಯವಿಲ್ಲ. ಆರ್ಥಿಕ ತಜ್ಞರ ಪ್ರಕಾರ, ಒಂದು ರುಪಾಯಿಯನ್ನು ರಸ್ತೆ ಅಥವಾ ಸೇತುವೆ ನಿರ್ಮಾಣಕ್ಕೆ ಬಳಸಿದರೆ ಅದು ಆರ್ಥಿಕತೆಗೆ ಎರಡೂವರೆ ಪಟ್ಟು ಲಾಭ ನೀಡುತ್ತದೆ. ಆದರೆ, ಅದೇ ಹಣವನ್ನು ಉಚಿತವಾಗಿ ಹಂಚಿದರೆ ಅದರ ಮೌಲ್ಯ 0.90 ಪೈಸೆಗಿಳಿಯುತ್ತದೆ. ಸಿಎಂ ಸಿದ್ದರಾಮಯ್ಯ ಪ್ರಕಾರ ಗ್ಯಾರಂಟಿ ಮೂಲಕ ನೀಡಲಾದ ಹಣವು ಮರಳಿ ರಾಜ್ಯದ ಆರ್ಥಿಕ ಬೆಳವಣಿಗೆಗೆ, ಜಿಡಿಪಿ ಹೆಚ್ಚಳಕ್ಕೆ ಕಾರಣವಾಗಿದೆ. ಆದರೆ ದೂರಗಾಮಿ ನೆಲೆಯಲ್ಲಿ ರಾಜ್ಯವು ಕೈಗೊಳ್ಳಬೇಕಾದ ಯೋಜನೆಗಳಿಗೆ, ಅಭಿವೃದ್ಧಿ ಕೆಲಸಗಳಿಗೆ ಹಣ ಸಿಗದೇ ಹೋದರೆ ಕರ್ನಾಟಕದ ಬೆಳವಣಿಗೆ ಕುಂಠಿತವಾಗಲಿದೆ. ಆಸ್ತಿ ತೆರಿಗೆ, ಅಬಕಾರಿ ತೆರಿಗೆ, ಸೆಸ್, ನೋಂದಣಿ ಶುಲ್ಕ, ವಿದ್ಯುತ್ ಶುಲ್ಕ, ನೀರಿನ ಶುಲ್ಕ ಏರಿಕೆಗಳ ಬಳಿಕವೂ ರಾಜ್ಯದ ಆದಾಯ ಕೊರತೆಯನ್ನು ತುಂಬಲು ಸಾಧ್ಯವಾಗುತ್ತಿಲ್ಲ. ಆಡಳಿತ ಪಕ್ಷದ ಶಾಸಕರು ಮತ್ತು ಸಚಿವರೇ, ಅಭಿವೃದ್ಧಿ ಕೆಲಸಗಳಿಗೆ ಹಣ ಸಿಗುತ್ತಿಲ್ಲ ಎಂದು ದೂರುತ್ತಿದ್ದಾರೆ. ಮಾರ್ಚ್ 2026ರ ವರದಿಯ ಪ್ರಕಾರ, ಸುಮಾರು 37ಕ್ಕೂ ಹೆಚ್ಚು ದೊಡ್ಡ ಹಾಗೂ ಮಧ್ಯಮ ಗಾತ್ರದ ನೀರಾವರಿ ಯೋಜನೆಗಳು ಹಣದ ಕೊರತೆ ಮತ್ತು ಭೂಸ್ವಾಧೀನ ಪ್ರಕ್ರಿಯೆಯ ವಿಳಂಬದಿಂದ ಕುಂಟುತ್ತಾ ಸಾಗಿವೆ. ಇದರಲ್ಲಿ ಹೆಚ್ಚಿನವು 10ರಿಂದ 100 ಕೋಟಿ ವೆಚ್ಚದ ಸಣ್ಣ ನೀರಾವರಿ ಯೋಜನೆಗಳು. ಕೇವಲ 10 ರಿಂದ 50 ಕೋಟಿ ರು. ವೆಚ್ಚದ ಕಾರಣಕ್ಕಾಗಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ರಸ್ತೆ ಮತ್ತು ಸೇತುವೆ ನಿರ್ಮಾಣದ ನೂರಾರು ಕಾಮಗಾರಿಗಳು ಕಳೆದ ಎರಡು ವರ್ಷಗಳಿಂದ ನನೆಗುದಿಗೆ ಬಿದ್ದಿರುವ ಆರೋಪವಿದೆ.

ರಾಜ್ಯದಲ್ಲಿ ಗುತ್ತಿಗೆದಾರರಿಗೆ ಪಾವತಿಸಬೇಕಾದ ಬಾಕಿ ಮೊತ್ತವೇ ಸುಮಾರು 20,000 ಕೋಟಿಗೂ ಹೆಚ್ಚು ಇದೆ ಎಂದು ಅಂದಾಜಿಸಲಾಗಿದೆ. ಸರಕಾರ 'ಬಿಲ್ ಪಾವತಿ' ಮಾಡದ ಕಾರಣ ಗುತ್ತಿಗೆದಾರರು ಕೆಲಸ ನಿಲ್ಲಿಸಿದ್ದಾರೆ. ಬಜೆಟ್‌ನಲ್ಲಿ ಸಾಂಕೇತಿಕವಾಗಿ ಹಣ ಮೀಸಲಿಟ್ಟ ಸಾವಿರಕ್ಕೂ ಹೆಚ್ಚು ಸಣ್ಣ ಯೋಜನೆಗಳನ್ನು ಕೈ ಬಿಡಲು ಇಲ್ಲವೇ ವಿಲೀನಗೊಳಿಸಲು ಕರ್ನಾಟಕ ಆಡಳಿತ ಸುಧಾರಣಾ ಆಯೋಗವೇ ಶಿಫಾರಸು ಮಾಡಿದೆ. ಇನ್ನೊಂದೆಡೆ ಸರಕಾರ ದಲಿತ ಮತ್ತು ಹಿಂದುಳಿದ ವರ್ಗಗಳ ಅಭಿವೃದ್ಧಿಗೆ ಮೀಸಲಿದ್ದ ಯೋಜನೆಗಳ ಹಣವನ್ನು ಗ್ಯಾರಂಟಿಗಳಿಗೆ ಬಳಸಿಕೊಳ್ಳಲು ಮುಂದಾಗಿದೆ. ಇದು ಮುಂದೆ ಎಲ್ಲಿಗೆ ಸಾಗಲಿದೆ ಎನ್ನುವುದು ನಾಯಕರಿಗೆ, ಅಧಿಕಾರಿಗಳಿಗೆ ತಿಳಿಯದ ವಿಚಾರವಲ್ಲ. ಆದರೆ ಗ್ಯಾರಂಟಿ ಎಂಬ ಹುಲಿಯನ್ನು ಏರಿದವರು ಈಗ ಸವಾರಿ ಮಾಡಲೇಬೇಕಿದೆ.

ಇದು ಕರ್ನಾಟಕವೊಂದರ ಕಥೆಯಲ್ಲ. ಬಹುತೇಕ ರಾಜ್ಯಗಳು ಜನಪ್ರಿಯ ಯೋಜನೆಗಳ ಜಾರಿಯ ಭರದಲ್ಲಿ ಸಾಲದ ಬಲೆಗೆ ಸಿಲುಕಿವೆ. ಕೇಂದ್ರಸರಕಾರವೂ ಇದಕ್ಕೆ ಹೊರತಲ್ಲ. ಕೇಂದ್ರದ ಸಾಲ ಪ್ರಮಾಣ 200 ಲಕ್ಷ ಕೋಟಿಯ ಸಮೀಪ ತಲುಪಿದ್ದು ಸಾಲದ ಮೇಲಿನ ಬಡ್ಡಿ ಪಾವತಿಯೇ ಬಜೆಟ್‌ನ ಬಹು ದೊಡ್ಡ ಪಾಲನ್ನು ನುಂಗಿ ಹಾಕುತ್ತಿದೆ. ಸಂವಿಧಾನದ 4ನೇ ಭಾಗದಲ್ಲಿರುವ ರಾಜ್ಯ ನಿರ್ದೇಶಕ ತತ್ವಗಳ ಪ್ರಕಾರ, ಜನರ ಕಲ್ಯಾಣವನ್ನು ಸಾಧಿಸುವುದು ಸರಕಾರದ ಪ್ರಮುಖ ಕರ್ತವ್ಯ. ಶಿಕ್ಷಣ, ಆರೋಗ್ಯ ಮತ್ತು ಪೌಷ್ಟಿಕ ಆಹಾರವನ್ನು ಒದಗಿಸುವುದು ಈ ಕಲ್ಯಾಣ ರಾಜ್ಯದ ಪರಿಕಲ್ಪನೆಯಲ್ಲಿ ಬರುತ್ತದೆ. ಆದರೆ ಬಡವ-ಬಲ್ಲಿದರೆಂಬ ಭೇದವಿಲ್ಲದೆ ಎಲ್ಲರಿಗೂ ಉಚಿತ ಯೋಜನೆಗಳ ಹಂಚಿಕೆ ಜನರ ತೆರಿಗೆ ಹಣದ ದುರುಪಯೋಗ.

ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ನೇತೃತ್ವದ ಪೀಠವು ಇತ್ತೀಚೆಗೆ ಅತಾರ್ಕಿಕ ಉಚಿತ ಕೊಡುಗೆಗಳ ಬಗ್ಗೆ ಅತ್ಯಂತ ಕಟುವಾಗಿ ಮಾತನಾಡಿದೆ. ರಾಜ್ಯಗಳು ಆದಾಯದ ಕೊರತೆಯನ್ನು ಎದುರಿಸುತ್ತಿದ್ದರೂ ಸಹ, ಚುನಾವಣಾ ಲಾಭಕ್ಕಾಗಿ ಹಣವನ್ನು ಬೇಕಾಬಿಟ್ಟಿ ಹಂಚುತ್ತಿವೆ. ಇದು ಪ್ರಾಮಾಣಿಕ ತೆರಿಗೆದಾರರಿಗೆ ಮಾಡುವ ದ್ರೋಹ ಎಂದು ಕೋರ್ಟ್ ಹೇಳಿದೆ. ತೆರಿಗೆ ಹಣವನ್ನು ಸ್ಕೂಟಿ, ಬಟ್ಟೆ ಅಥವಾ ನಗದು ಹಂಚಲು ಬಳಸುವ ಬದಲು ರಸ್ತೆ, ಆಸ್ಪತ್ರೆ ಮತ್ತು ಶಾಲೆಗಳ ನಿರ್ಮಾಣಕ್ಕೆ ಏಕೆ ಬಳಸುತ್ತಿಲ್ಲ ಎಂದು ನ್ಯಾಯಾಲಯ ಪ್ರಶ್ನಿಸಿದೆ. ಶ್ರೀಮಂತರು ಮತ್ತು ಬಡವರ ನಡುವೆ ವ್ಯತ್ಯಾಸ ಮಾಡದೆ ಎಲ್ಲರಿಗೂ ಉಚಿತವಾಗಿ ನೀಡುವುದು ಮತ ತುಷ್ಟೀಕರಣವಲ್ಲದೆ ಮತ್ತೇನೂ ಅಲ್ಲ ಎಂದು ಸರ್ವೋಚ್ಚ ನ್ಯಾಯಾಲಯ ಹೇಳಿದ್ದು ಈ ಸಂಬಂಧ ನಿಯಮಗಳನ್ನು ರೂಪಿಸುವಂತೆ ಚುನಾವಣಾ ಆಯೋಗಕ್ಕೆ ಸೂಚಿಸಿದೆ.

ಎಲ್ಲ ಉಚಿತ ಯೋಜನೆಗಳೂ ಕೆಟ್ಟದ್ದಲ್ಲ, ಅತ್ಯಂತ ಬಡತನದಲ್ಲಿರುವ ಕುಟುಂಬಗಳಿಗೆ ಉಚಿತ ರೇಷನ್ ಅಥವಾ ಸಣ್ಣ ಪ್ರಮಾಣದ ನಗದು ವರ್ಗಾವಣೆ ಅವರ ಜೀವನಮಟ್ಟವನ್ನು ಸುಧಾರಿಸುತ್ತದೆ. ಆದರೆ 'ಸರ್ವರಿಗೂ ಉಚಿತ' ಕೊಡುಗೆಗಳು ಮತ್ತು ನೈಜ ಜನಕಲ್ಯಾಣದ ನಡುವೆ ಸ್ಪಷ್ಟ ರೇಖೆ ಇರಬೇಕು. ಸರಕಾರಗಳು ಮತದಾರರನ್ನು ಸೆಳೆಯಲು ಬೊಕ್ಕಸದ ಹಣವನ್ನು ಲಂಚದ ಮಾದರಿಯಲ್ಲಿ ಹಂಚುವಂತಾಗಬಾರದು. ಕೇಂದ್ರ ಮತ್ತು ರಾಜ್ಯಗಳು ತಮ್ಮ ಆದಾಯದ ಕನಿಷ್ಠ ಶೇ.25ರಷ್ಟು ಪಾಲನ್ನು ಕೇವಲ ಮೂಲಸೌಕರ್ಯಕ್ಕೆ ಬಳಸಬೇಕು ಎಂಬ ನಿಯಮವನ್ನು ಪಾಲಿಸಬೇಕಾದ ಅಗತ್ಯವಿದೆ. ನಮ್ಮ ನೆರೆ ರಾಷ್ಟ್ರಗಳ ಆರ್ಥಿಕ ಬಿಕ್ಕಟ್ಟು ನಮಗೆ ಪಾಠವಾಗಬೇಕು.

ಓದುಗರ ಒಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಕಥೆಗಾರರ ಪಡಿಪಾಟಲು

ನವೀನ್ ಸಾಗರ್ ಅವರು ತಮ್ಮ 'ಪದಸಾಗರ' ಅಂಕಣದಲ್ಲಿ (ಮಾ.24), ಚಿತ್ರರಂಗದಲ್ಲಿ ಕಾಣಬರುವ ಕೃತಿಚೌರ್ಯದ ಬಗ್ಗೆ ತುಂಬಾ ಚೆನ್ನಾಗಿ ವಿವರಿಸಿದ್ದಾರೆ. ಚಿತ್ರರಂಗದಲ್ಲಿ ಈ ಹಿಂದೆ ಅಲ್ಪಪ್ರಮಾಣದಲ್ಲಿದ್ದ 'ಕಥೆ ಕದಿಯುವ ಗೀಳು' ಇತ್ತೀಚಿನ ದಿನಗಳಲ್ಲಿ ತಾರಕಕ್ಕೇರಿದೆ. ಉತ್ತಮ ಕಥೆಯ ಚಿತ್ರವೊಂದು ಬಹಳ ದಿನಗಳ ನಂತರವಾದರೂ ಬಂತಲ್ಲಾ ಎಂದು ಸಂತಸಪಡುವಷ್ಟರಲ್ಲಿ ಆ ಕಥೆಯ ನಿಜವಾದ ಕರ್ತೃ ಬೇರೆಯೇ ಆಗಿದ್ದ ಸಂಗತಿ ಚಿತ್ರರಸಿಕರಿಗೂ ಬೇಸರ ತರಿಸುವಂಥದ್ದು. 'ಲವ್ ಮಾಕ್‌ಟೈಲ್-3' ಚಿತ್ರದ ಕಥೆಯು 1990ರಲ್ಲಿ ಬಿಡುಗಡೆಯಾಗಿದ್ದ 'ಮತ್ತೆ ಹಾಡಿತು ಕೋಗಿಲೆ' ಚಿತ್ರದ ಕಥೆಯನ್ನು ಹೋಲುವಂತಿದೆ ಎಂದು ಅಂಕಣಕಾರರು ತಿಳಿಸಿದ್ದಾರೆ; ಈ ಚಿತ್ರದ ನಿರ್ದೇಶಕರಾದ ಭಾರ್ಗವ ಅವರು ಈ ಕುರಿತಂತೆ ಸ್ಪಷ್ಟನೆ ನೀಡಿದರೆ ಒಳಿತು. ಕಿರುತೆರೆಯೂ ಇದಕ್ಕೆ ಹೊರತಾಗಿಲ್ಲ, ಅಲ್ಲಂತೂ ಕೇಳುವವರೇ ಇಲ್ಲ. ಎಲ್ಲವನ್ನೂ 'ಸ್ವರಚಿತ' ಎಂದೇ ಪ್ರತಿಪಾದಿಸಿ ವಾದ ಮಾಡುತ್ತಾರೆ. ಹೀಗಾಗಿ ಸೃಜನಶೀಲ ಲೇಖಕರು ಮೂಲೆಗುಂಪಾಗುತ್ತಿದ್ದಾರೆ. ಇದು ತುಂಬಾ ದುರದೃಷ್ಟಕರ.

- ರಾ. ರಾಮಾರಾಧ್ಯ, ಮೈಸೂರು

ಶಿಕ್ಷಕರದು ಇದೆಂಥಾ ಪಾಡು?

ರಮಾನಂದ ಶರ್ಮಾ ಅವರ 'ಅನ್ಯ ಚಟುವಟಿಕೆಗಳಿಗೆ ಶಿಕ್ಷಕರ ಬಳಕೆಯಾಗದಿರಲಿ' ಎಂಬ ಕಳಕಳಿಭರಿತ ಲೇಖನ (ಮಾ.24) ಮನಮುಟ್ಟುವಂತಿತ್ತು. ಶಿಕ್ಷಕರನ್ನು ಬೋಧಕೇತರ ಕೆಲಸಗಳಿಗೆ ನಿಯೋಜಿಸುವ ಬಗ್ಗೆ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿಯವರು ಅಸಮಾಧಾನ ವ್ಯಕ್ತಪಡಿಸಿರುವ ಉಲ್ಲೇಖವೂ ಈ ಬರಹದಲ್ಲಿದೆ. ಶಿಕ್ಷಕರನ್ನು ಬೋಧಕೇತರ ಕೆಲಸಗಳಿಗೆ ನಿಯೋಜಿಸುವಂತಿಲ್ಲವೆಂದು ಸುಪ್ರೀಂ ಕೋರ್ಟ್ ಮತ್ತು ವಿವಿಧ ಹೈಕೋರ್ಟುಗಳ ತೀರ್ಪುಗಳು ಹೇಳಿರುವುದನ್ನು ಈ ಸಂದರ್ಭ ದಲ್ಲಿ ಗಮನಿಸಬೇಕು. ಇವುಗಳ ಒಟ್ಟಾರೆ ಸಾರಾಂಶವೇನೆಂದರೆ, ಚುನಾವಣೆ, ಜನಗಣತಿ, ವಿಪತ್ಕಾಲದಲ್ಲಿನ ಪರಿಹಾರ ಕಾರ್ಯಗಳ ಹೊರತಾಗಿ ಶಿಕ್ಷಕರನ್ನು ಬೇರಾವ ಕೆಲಸಗಳಿಗೂ ನಿಯೋಜಿಸುವಂತಿಲ್ಲ; ಚುನಾವಣೆಗೆ ಸಂಬಂಧಿಸಿ ದಂತೆ ಮತದಾರರ ಪಟ್ಟಿ ಸಿದ್ಧಪಡಿಸುವಲ್ಲಿ, ಬೂತ್ ಮಟ್ಟದ ಅಧಿಕಾರಿಗಳನ್ನು ನಿಯೋಜಿಸುವ ವೇಳೆಯಲ್ಲೂ ಬೇರೆ ಸಿಬ್ಬಂದಿವರ್ಗ ಲಭ್ಯವಿಲ್ಲದಿದ್ದಾಗ ಮಾತ್ರ ಶಿಕ್ಷಕರನ್ನು ನಿಯೋಜಿಸಬಹುದು ಎಂಬ ಚುನಾವಣಾ ಆಯೋಗದ ಆದೇಶವನ್ನು ಇಲ್ಲಿ ಉಲ್ಲೇಖಿಸಲಾಗಿದೆ. ಹೀಗಿರುವಾಗ, ಬೀದಿನಾಯಿ ಸಂಬಂಧಿತ ಸಮಸ್ಯೆಗಳ ಅವಲೋಕನಕ್ಕೂ ಶಿಕ್ಷಕರೇ ಬೇಕು ಎನ್ನುವ ಸ್ಥಿತಿಯು, ಶಿಕ್ಷಣ ವ್ಯವಸ್ಥೆ ಮತ್ತು ಶಿಕ್ಷಕರ ಬಗ್ಗೆ ಇರುವ ತಾತ್ಸಾರಕ್ಕೆ ಕೈದೀವಿಗೆ ಹಿಡಿದಂತಿದೆ. ಶಿಕ್ಷಕರು ಶಿಕ್ಷಕರಾಗಷ್ಟೇ ಇರಬೇಕು ತಾನೇ?!

- ಸಾಮಗ ದತ್ತಾತ್ರಿ, ಬೆಂಗಳೂರು

ಬೀದಿನಾಯಿ ಸಮಸ್ಯೆ

ಶಿಕ್ಷಕರನ್ನು ಬೋಧಕೇತರ ಚಟುವಟಿಕೆಗಳಿಗೆ ಉಪಯೋ ಗಿಸಿಕೊಳ್ಳುತ್ತಿರುವ ನಡೆಯನ್ನು ರಮಾನಂದ ಶರ್ಮ ಅವರು ಚೆನ್ನಾಗಿ ವಿಶ್ಲೇಷಿಸಿದ್ದಾರೆ. ದಶಕಗಳಿಂದಲೂ ಶಿಕ್ಷಕರ ಕ್ಷೇತ್ರದಿಂದಲೇ ಚುನಾಯಿಲ್ಪಡುತ್ತಿರುವ ವಿಧಾನ ಪರಿಸತ್ ಸಭಾಪತಿ ಬಸವರಾಜ ಹೊರಟ್ಟಿಯವರು ಈ ನಡೆಯ ಕುರಿತು ಆಕ್ರೋಶ ವ್ಯಕ್ತಪಡಿಸಿರುವುದು ಶ್ಲಾಘನೀಯ. ನಮ್ಮ ಆಳುಗ ವ್ಯವಸ್ಥೆಯು ಬೀದಿನಾಯಿಗಳಿಗೆ ಬಿರಿಯಾನಿ ಒದಗಿಸುವ ಯೋಜನೆ ಹಾಕಿಕೊಂಡಿರುವುದು ಕೆಲ ದಿನಗಳ ಹಿಂದೆ ವರದಿ ಯಾಗಿತ್ತು; ಇದರ ಸಮರ್ಪಕ ಜಾರಿಗೂ ಮಾನವ ಸಂಪನ್ಮೂಲ ಬೇಕೇ ಬೇಕು. ಹಾಗಂತ, ಶಿಕ್ಷಕರು ಶಾಲೆಗಳಲ್ಲಿ ಮಧ್ಯಾಹ್ನದ ಬಿಸಿಯೂಟದ ತಯಾರಿ ಮತ್ತು ವಿತರಣೆಯಲ್ಲಿ ಪಳಗಿದ್ದಾರೆ ಎಂಬ ನೆಪವನ್ನು ಮುಂದುಮಾಡಿಕೊಂಡು, ಬೀದಿನಾಯಿಗಳಿಗೆ ಬಿರಿಯಾನಿ ತಿನ್ನಿಸುವ ಕೆಲಸಕ್ಕೂ ಶಿಕ್ಷಕರನ್ನು ಹಚ್ಚದಿದ್ದರೆ ಸಾಕು!ಈ ನಡುವೆ ಬ್ಯಾಂಕ್ ಸಿಬ್ಬಂದಿಗಳನ್ನೂ ಚುನಾವಣಾ ಕಾರ್ಯಕ್ಕೆ ನಿಯೋಜಿಸಲಾಗುತ್ತಿದೆ; ಮುಂದೆ ಅವರನ್ನೂ ಮತ್ತಷ್ಟು 'ಬ್ಯಾಂಕಿಂಗೇತರ' ಕಾರ್ಯಗಳಿಗೆ ಬಳಸಿಕೊಳ್ಳುವ ದಿನ ಬರಬಹುದೇ? ಗೊತ್ತಿಲ್ಲ!!

- ದಾವಣಗೆರೆ ಮುಕುಂದ, ಬೆಂಗಳೂರು

ಉದ್ಯಾನ ನಗರಿಯ ಉಸಿರುಗಟ್ಟಿಸುತ್ತಿರುವ ಕಸದ ರಾಶಿ

ಕಸ-ಕಸರತ್ತು

ಬಾಲಚಂದ್ರ ಹೆಗಡೆ
vveditoped@gmail.com

ಬೆಂಗಳೂರು ಒಂದು ಕಾಲಕ್ಕೆ 'ಉದ್ಯಾನ ನಗರಿ' ಎಂದೇ ಪ್ರಸಿದ್ಧವಾಗಿತ್ತು. 70ರ ದಶಕದಲ್ಲಿ ಬೆಂಗಳೂರು ಎಷ್ಟು ಸುಂದರವಾಗಿತ್ತೆಂದರೆ, ಇಲ್ಲಿ ನೆಲೆಸಿರುವುದೇ ಹೆಮ್ಮೆ ಎನಿಸುತ್ತಿತ್ತು. ಆದರೆ ನಂತರದ ದಿನಗಳಲ್ಲಿ ಜನಸಂಖ್ಯೆಯ ಏರಿಕೆ ಮತ್ತು ಪ್ರದೇಶವ್ಯಾಪ್ತಿಯ ವಿಸ್ತರಣೆಯಿಂದಾಗಿ ನಗರವು ವೇಗವಾಗಿ ಅಭಿವೃದ್ಧಿಯನ್ನು ಕಂಡಿತಾದರೂ, ಜನಸಂಖ್ಯೆಗೆ ತಕ್ಕ ಹಾಗೆ ಮೂಲಸೌಕರ್ಯಗಳ ಸೃಷ್ಟಿಯಾಗಲಿಲ್ಲ. ಹೀಗಾಗಿ, ತಂಪಾದ ಗಾಳಿ, ಹಸಿರು ಹೊದಿಕೆಯ ರಸ್ತೆಗಳು, ಸುಂದರ ಉದ್ಯಾನಗಳಿಂದ ಜಗತ್ತನ್ನೇ ಸೆಳೆದಿದ್ದ ಬೆಂಗಳೂರು ಇಂದು 'ಕಸದ ನಗರ'ವಾಗಿ ಮಾರ್ಪಟ್ಟಿದೆ. ರಸ್ತೆ ತಿರುವುಗಳಲ್ಲಿ, ಪಾದಚಾರಿ ಮಾರ್ಗಗಳಲ್ಲಿ ಎಲ್ಲಿ ನೋಡಿದರಲ್ಲಿ ಕಸದ ಬೆಟ್ಟಗಳು ಕಾಣಿಸಿಕೊಳ್ಳುತ್ತಿವೆ. 'ಸ್ವಚ್ಛಭಾರತ' ಎಂಥ ಬೃಹತ್ ಅಭಿಯಾನದ ನಡುವೆಯೂ ಈ ಮಹಾನಗರಿಯ ದುಸ್ಥಿತಿಯು ನಮ್ಮ ನಾಗರಿಕ ಪ್ರಜ್ಞೆಯನ್ನು ಪ್ರಶ್ನಿಸುವಂತಿದೆ.

ಅಂದಗೆಡುತ್ತಿರುವ ನಗರ

ಬೆಂಗಳೂರಿನಲ್ಲಿ ಪ್ರತಿದಿನ 5000ದಿಂದ 6000 ಟನ್‌ವರೆಗೆ ಕಸದ ಉತ್ಪಾದನೆಯಾಗುತ್ತಿದೆ. ಅತಿಯಾದ ಪ್ಲಾಸ್ಟಿಕ್ ಬಳಕೆ, ಎಲ್ಲೆಂದರಲ್ಲಿ ಕಸವನ್ನು ಸುರಿಯುವಿಕೆ, ಕೆರೆಗಳ ಮಾಲಿನ್ಯ ಇವೆಲ್ಲವೂ ನಗರದ ಅಂದವನ್ನು ಕೆಡಿಸುತ್ತಿವೆ. ಇದು ಜನರ ಆರೋಗ್ಯದ ಮೇಲೆ ವಿಪರೀತ ಕೆಟ್ಟ ಪರಿಣಾಮವನ್ನು ಬೀರುತ್ತಿದೆ. ನಗರದ ಸ್ವಚ್ಛತೆಗೆ ಅತಿದೊಡ್ಡ ಶತ್ರುವೆಂದರೆ ಪ್ಲಾಸ್ಟಿಕ್ ಎನ್ನುವಂತಾಗಿದೆ ಈಗ; ಏಕೆಂದರೆ ಚರಂಡಿಗಳು ಕಸದಿಂದ ಕಟ್ಟಿಕೊಳ್ಳಲು ಮತ್ತು ಕೆರೆಗಳು ಕಲುಷಿತಗೊಳ್ಳಲು ಪ್ಲಾಸ್ಟಿಕ್ ಪ್ರಮುಖ ಕಾರಣವಾಗಿದೆ. ಏಕಬಳಕೆಯ ಪ್ಲಾಸ್ಟಿಕ್ ಅನ್ನು ಸರಕಾರ ನಿಷೇಧಿಸಿದ್ದರೂ, ಅದಿನ್ನೂ ಬಳಕೆಯಲ್ಲಿದೆ. ಖಾಲಿ ನಿವೇಶನ, ರಸ್ತೆ ಬದಿ, ವಸತಿ ಪ್ರದೇಶಗಳು ಹೀಗೆ ಎಲ್ಲೆಂದರಲ್ಲಿ ಕಸವನ್ನು ತಂದು ಸುರಿಯುವುದು ಜನರಿಗೂ ರೂಢಿಯಾದಂತಿದೆ. ಇಂಥವರು ಕಾರು-ಬೈಕುಗಳಲ್ಲಿ ರೊಯ್ಯನೆ ಧಾವಿಸಿ ಬಂದು ರಾಜಾರೋಷವಾಗಿ ಕಸ ಬಿಸಾಕಿ ಹೋಗುತ್ತಾರೆ!

ಈ ಮಹಾನುಭಾವರು ಹೀಗೆ ಬಿಸಾಡುವ ಪ್ಲಾಸ್ಟಿಕ್ ಅನ್ನು ಮುಗ್ಧಜೀವಿಗಳಾದ ದನ-ಕರುಗಳು ತಿಂದು ಜೀವಕ್ಕೆ ಸಂಚಕಾರ ತಂದುಕೊಳ್ಳುವುದು ಹೃದಯವಿದ್ರಾವಕ ಸಂಗತಿ. ಕಸವನ್ನು ಸಂಗ್ರಹಿಸುವ ಬಿಬಿಎಂಪಿಯ ಆಟೋ ಹಾಗೂ ಟಿಪ್ಪರ್‌ಗಳು ಸಮಯದ ಮಿತಿಯಿಲ್ಲದೆ ಎಲ್ಲೆಂದರಲ್ಲಿ ಓಡಾಡುತ್ತಿರುತ್ತವೆ. ಇಂಥ ವಾಹನಗಳು ಕೆಲವೊಂದು ಮುಖ್ಯರಸ್ತೆಗಳ ಬದಿಯಲ್ಲಿ ದೀರ್ಘಾವಧಿವರೆಗೆ ನಿಂತಿರುತ್ತವೆ; ಆ ಮಾರ್ಗವಾಗಿ ಹೆಜ್ಜೆಹಾಕುವ ಜನರು ಮತ್ತು ವಾಹನ ಸವಾರಿಗರು ಆ ಗಬ್ಬುವಾಸನೆಯನ್ನು ಸಹಿಸಲಾಗದೆ ಮೂಗು ಮುಚ್ಚಿಕೊಂಡೇ ಸಾಗಬೇಕಾಗುತ್ತದೆ. ಇನ್ನೂ ಬೇಸರದ ಸಂಗತಿಯೆಂದರೆ, ಮುಂಜಾನೆಯ ವಾಯುವಿಹಾರಕ್ಕೆಂದು ಉದ್ಯಾನಗಳ ಬಳಿಗೆ ತೆರಳುವ ಜನರನ್ನು ಕಸದ ಅಡ್ಡೆಗಳು ಸ್ವಾಗತಿಸುತ್ತವೆ. ಕಸದ ಲಾರಿಗಳು ಅಲ್ಲಿಯೇ ನಿಂತಿರುತ್ತವೆ, ಸಿಬ್ಬಂದಿಗಳು ಕಸದ ವಿಂಗಡಣೆಯನ್ನೂ ಅಲ್ಲೇ ಮಾಡುತ್ತಿರುತ್ತಾರೆ. ಇದರಿಂದಾಗಿ ಉತ್ತಮವಾದ ಹವೆಯ ಸೇವನೆಗೆಂದು ಬರುವವರು ಈ ಕಸದ ದುರ್ನಾತವನ್ನು ಬಲವಂತವಾಗಿ ಸೇವಿಸುವಂತಾಗುತ್ತದೆ. ಮತ್ತೊಂದೆಡೆ, 15-20 ದಿನಗಳಾದರೂ ಕಸವನ್ನು ಸುರಿದಿರುವ ಪ್ರದೇಶದಿಂದ ಕಸವನ್ನು ಎತ್ತುವವರೇ ಇರುವುದಿಲ್ಲ, ಸಂಬಂಧಪಟ್ಟವರಿಗೆ ದೂರು ಕೊಟ್ಟರೂ ಪ್ರಯೋಜನವಾಗುತ್ತಿಲ್ಲ. ಹೀಗಾಗಿ ಬೆಂಗಳೂರು ದಿನೇ ದಿನೆ ಕಸದ ಅಡ್ಡೆಯಾಗುತ್ತಿದೆ, 'ಗಾರ್ಡನ್ ಸಿಟಿ' ಎಂದು ಕರೆಸಿಕೊಳ್ಳುತ್ತಿದ್ದುದು ಈಗ 'ಗಾರ್ಬೇಜ್ ಸಿಟಿ' ಆಗಿದೆ.

ಬೆರಗಾಗಿಸುವ ಸ್ವಚ್ಛತೆ

ಅಮೆರಿಕ, ಇಂಗ್ಲೆಂಡ್ ಅಥವಾ ಸಿಂಗಾಪುರದಂಥ ದೇಶಗಳಿಗೆ ನಾವು ಹೋದಾಗ ಅಲ್ಲಿನ ರಸ್ತೆಗಳ ಸ್ವಚ್ಛತೆಯನ್ನು ಕಂಡು ಬೆರಗಾಗುತ್ತೇವೆ. ಅಲ್ಲಿನ ಆಳುಗ ವ್ಯವಸ್ಥೆ ಎಷ್ಟು ಬಿಗಿಯಾಗಿದೆಯೋ, ಜನರ ಶಿಸ್ತೂ ಅಷ್ಟೇ ಪ್ರಬಲವಾಗಿದೆ. ಅಲ್ಲೆಲ್ಲಾ ರಸ್ತೆ ಬದಿಯಲ್ಲಿ ಕಸವನ್ನು ಎಸೆಯುವುದು ಸಾಮಾಜಿಕ ಅಪರಾಧ. ಆದರೆ ನಮ್ಮ ದೇಶದಲ್ಲಾದರೋ, 'ನನ್ನ ಮನೆ ಸ್ವಚ್ಛವಾಗಿದ್ದರೆ ಸಾಕು, ರಸ್ತೆಯ ಸ್ವಚ್ಛತೆಯನ್ನು ನೋಡಿಕೊಳ್ಳೋದು ಸರಕಾರದ ಹೊಣೆಯಲ್ಲವೇ' ಎಂಬ ಧೋರಣೆಯೇ ಸಾಕಷ್ಟು ಮಂದಿಯಲ್ಲಿ ಕಂಡುಬರುತ್ತದೆ. ಒಂದೆಡೆ ಕಂಡಕಂಡಲ್ಲಿ ಕಸ ಎಸೆಯುವ ಜನರು, ಮತ್ತೊಂದೆಡೆ ಸಮರ್ಪಕವಾಗಿ ಕಸದ ನಿರ್ವಹಣೆಯನ್ನು ಮಾಡದ ಸಿಬ್ಬಂದಿಗಳು- ಈ ದೃಶ್ಯವನ್ನು ನೋಡಿದಾಗ 'ಸ್ವಚ್ಛಭಾರತ' ಅಭಿಯಾನವು ನಿಜವಾಗಿಯೂ ಯಶಸ್ವಿಯಾಗಿದೆಯೇ ಅಥವಾ ಅದು ಜಾಹೀರಾತಿಗಷ್ಟೇ ಸೀಮಿತವಾಗಿದೆಯೇ? ಎಂಬ ಅನುಮಾನ ಕಾಡುತ್ತದೆ.

ಹೊಣೆಗಾರಿಕೆ ಮರೆಯಬೇಕು

ಕಳೆದೊಂದು ದಶಕದಿಂದ 'ಸ್ವಚ್ಛಭಾರತ'ದ ಘೋಷಣೆ ಎಲ್ಲೆಡೆ ಕೇಳಿಬರುತ್ತಿದೆ. ಶೌಚಾಲಯಗಳ ನಿರ್ಮಾಣದ ವಿಷಯದಲ್ಲಿ ಇದು ಕೆಲಮಟ್ಟಿಗೆ ನಿಜವಾಗಿದ್ದರೂ, ನಗರ ಪ್ರದೇಶಗಳಲ್ಲಿನ ಘನತ್ಯಾಜ್ಯ ನಿರ್ವಹಣೆಯ (Solid Waste Management) ವಿಷಯದಲ್ಲಿ ಅದು ನಿರೀಕ್ಷಿತ ಮಟ್ಟವನ್ನು ಮುಟ್ಟಿಲ್ಲ ಎನಿಸುತ್ತದೆ. ಈ ಪರಿಸ್ಥಿತಿಗೆ ಸರಕಾರವನ್ನು ಮಾತ್ರವೇ ದೂಷಿಸುವುದು ಸರಿಯಲ್ಲ; ಹಸಿಕಸ ಮತ್ತು ಒಣಕಸವನ್ನು ವಿಂಗಡಣೆ ಮಾಡದೆ ಎಲ್ಲವನ್ನೂ ಒಂದೇ ಪ್ಲಾಸ್ಟಿಕ್ ಕವರ್‌ನಲ್ಲಿ ಕಟ್ಟಿ ರಸ್ತೆಯ ಮೂಲೆಯಲ್ಲಿ ಎಸೆಯುವ ಜನರ ನಡವಳಿಕೆಯೂ ಈ ವೈಫಲ್ಯಕ್ಕೆ ಮುಖ್ಯ ಕಾರಣವಾಗಿದೆ. ಬೆಂಗಳೂರಿನ ಅಂದ-ಚಂದ ಮತ್ತು ಸ್ವಚ್ಛತೆಯನ್ನು ಕಾಪಿಟ್ಟುಕೊಳ್ಳುವುದಕ್ಕೆ ಈಗ ಕಾನೂನುಗಳು ಮಾತ್ರವೇ ಸಾಕಾಗುವುದಿಲ್ಲ, ನಾಗರಿಕರು ನೈತಿಕ ಹೊಣೆಗಾರಿಕೆಯನ್ನೂ ಮೆರೆಯಬೇಕಾದ ಅಗತ್ಯವಿಲ್ಲಿ ಎದ್ದುಕಾಣುತ್ತದೆ.

ಜಾಗೃತಿ ಮೂಡಿಸಬೇಕು

ಸಾರ್ವಜನಿಕವಾಗಿ ಕಸವನ್ನು ಎಸೆಯುವವರಿಗೆ, ವಿದೇಶಗಳ ಮಾದರಿಯಲ್ಲಿ ಹೆಚ್ಚಿನ ದಂಡವನ್ನು ವಿಧಿಸುವ ವ್ಯವಸ್ಥೆ ಜಾರಿಗೆ ಬರಬೇಕು. ಜತೆಗೆ, ಬಿಬಿಎಂಪಿಯ ಕಸ ಸಂಗ್ರಹಣಾ ವಾಹನಗಳು ಮನೆಮನೆಯ ಬಳಿಗೆ ಸರಿಯಾದ/ನಿಗದಿತ ಸಮಯಕ್ಕೆ ಬರುವಂತೆ ತಾಂತ್ರಿಕ ವ್ಯವಸ್ಥೆಯನ್ನು (GPS Tracking) ಬಲಪಡಿಸುವ ಅವಶ್ಯಕತೆ ತುಂಬಾ ಇದೆ. 'ಬೆಂಗಳೂರು ಕೇವಲ ಒಂದು ನಗರವಲ್ಲ, ಇದು ನಮಗೆ ಅನ್ನ-ಆಶ್ರಯ-ನೀರು-ಗಾಳಿಯನ್ನು ನೀಡುತ್ತಿರುವ ನೆಲೆ' ಎಂಬ ಭಾವನೆ ಜನರಲ್ಲಿ ದಟ್ಟವಾಗಬೇಕು. 'ಎಲ್ಲೆಂದರಲ್ಲಿ ಕಸ ಎಸೆಯುವವನು ನಮ್ಮವನಲ್ಲ' ಎಂಬ ಸಾಮಾಜಿಕ ಬಹಿಷ್ಕಾರದಂಥ ಜಾಗೃತಿ ಅವರಲ್ಲಿ ಮೂಡಬೇಕು. ತ್ಯಾಜ್ಯವನ್ನು ಸಮರ್ಪಕವಾಗಿ ನಿರ್ವಹಿಸದಿದ್ದಲ್ಲಿ, ಮುಂದಿನ ಪೀಳಿಗೆಗೆ ನಾವು 'ಹಸಿರು ಬೆಂಗಳೂರನ್ನು' ಅಲ್ಲ 'ಕಸದ ಕೂಪವನ್ನು' ಹಸ್ತಾಂತರಿಸಲಿದ್ದೇವೆ. ಸ್ವಚ್ಛತೆ ಎಂಬುದು ನಮ್ಮ ಜೀವನದ ಸಂಸ್ಕಾರವಾಗಬೇಕು. ಸಿಂಗಾಪುರದ ರಸ್ತೆಗಳನ್ನೇ ಹೊಗಳುತ್ತಾ ಕೂರುವ ಬದಲು, ನಮ್ಮ ರಸ್ತೆಗಳನ್ನೂ ಆ ಮಟ್ಟಕ್ಕೆ ಏರಿಸುವಂಥ ಸಂಕಲ್ಪವನ್ನು ನಾವು ಮಾಡಬೇಕಿದೆ.

ಅಮೆರಿಕದ ಮೇಲ್ಪಂಕ್ತಿ

ಮೊದಲೇ ಉಲ್ಲೇಖಿಸಿದಂತೆ, ನಮ್ಮಲ್ಲಿ ರಸ್ತೆಬದಿಯಲ್ಲಿ ಕಸ ಎಸೆಯುವುದು ಸಾಮಾನ್ಯ ಎನಿಸಿದರೆ, ಅಮೆರಿಕದಂಥ ದೇಶಗಳಲ್ಲಿ ಇದು ಅಪರಾಧ. ಅಲ್ಲಿ ಈ ಸಮಸ್ಯೆಯನ್ನು ಮೂರು ಸೂತ್ರಗಳ ಮೂಲಕ ಹತೋಟಿಗೆ ತರಲಾಗಿದೆ:

- ಅಲ್ಲಿನ ಬಹುತೇಕ ರಾಜ್ಯಗಳಲ್ಲಿ ರಸ್ತೆಯಲ್ಲಿ ಕಸವನ್ನು ಎಸೆದರೆ, ಅದರ ಪ್ರಮಾಣಕ್ಕೆ ಅನುಗುಣವಾಗಿ ಕನಿಷ್ಠ 500ರಿಂದ 1000 ಡಾಲರ್‌ವರೆಗೆ ದಂಡವನ್ನು ವಿಧಿಸಲಾಗುತ್ತದೆ. ಮತ್ತೆ ಕೆಲವು ಕಡೆ 'ಸಮುದಾಯ ಸೇವೆ' ಅಂದರೆ ರಸ್ತೆ ಗುಡಿಸುವ ಶಿಕ್ಷೆಯನ್ನೂ ನೀಡಲಾಗುತ್ತದೆ. ಈ ಭಯವು ಜನರಲ್ಲಿ ಶಿಸ್ತನ್ನು ಮೂಡಿಸಿದೆ.
- ಜನರು ಕಸವನ್ನು ಎಷ್ಟು ಉತ್ಪಾದಿಸುತ್ತಾರೋ ಅಷ್ಟು ಹಣವನ್ನು ಸರಕಾರಕ್ಕೆ ಪಾವತಿಸಬೇಕಾಗಿ ಬರುವ Pay-As-You-Throw ಎಂಬ ನಿಯಮವನ್ನು ಅಲ್ಲಿ ಜಾರಿಗೆ ತರಲಾಗಿದೆ. ಅಂದರೆ, ಕಸದ ಉತ್ಪಾದನೆಯನ್ನು ನೀವು ತಗ್ಗಿಸಿದಷ್ಟೂ ನಿಮ್ಮ ಹಣ ಉಳಿಯುತ್ತದೆ. ಇದು ಜನರಲ್ಲಿ ಕಸವನ್ನು ಕಡಿಮೆ ಮಾಡುವ (Reduce) ಮತ್ತು ಮರುಬಳಕೆ ಮಾಡುವ (Recycle) ಪ್ರವೃತ್ತಿಯನ್ನು ಬೆಳೆಸಿದೆ.
- ಅಲ್ಲಿ ಸಮರ್ಪಕ ತಂತ್ರಜ್ಞಾನದ ವ್ಯವಸ್ಥೆಯಿದೆ. ಅಲ್ಲಿನ ಕಸದ ತೊಟ್ಟಿಗಳು ಎಷ್ಟರಮಟ್ಟಿಗೆ 'ಸ್ಮಾರ್ಟ್' ಆಗಿವೆ ಎಂದರೆ, ತೊಟ್ಟಿ ತುಂಬಿದ ಕೂಡಲೇ ನಗರಪಾಲಿಕೆಗಳಿಗೆ ಸಂದೇಶ ರವಾನೆಯಾಗುತ್ತದೆ. ಅತ್ಯಾಧುನಿಕವಾಗಿರುವ ಕಸ ಸಂಗ್ರಹಣಾ ವಾಹನಗಳು ರಸ್ತೆಯ ಮೇಲೆ ಕೊಂಚವೂ ಚೆಲ್ಲದಂತೆ ಕಸವನ್ನು ಸಾಗಿಸುತ್ತವೆ.

ಬೇಕಿದೆ ಸಂಸ್ಕಾರ

ಅಮೆರಿಕದ ಶಾಲೆಗಳಲ್ಲಿ ಮಕ್ಕಳಿಗೆ 'ಪರಿಸರ ಪ್ರೇಮ'ವನ್ನು ಒಂದು ಪಠ್ಯವಿಷಯವಾಗಿ ಮಾತ್ರವಲ್ಲದೆ, ಜೀವನದ ಭಾಗವಾಗಿ ಕಲಿಸಲಾಗುತ್ತದೆ. 'ನನ್ನ ದೇಶದ ರಸ್ತೆಯು, ನನ್ನ ಮನೆಯ ವಾಸದ ಕೋಣೆಯಷ್ಟೇ ಪವಿತ್ರ' ಎಂಬ ಭಾವನೆಯನ್ನು ಮಕ್ಕಳಲ್ಲಿ ಚಿಕ್ಕಂದಿನಲ್ಲೇ ಬಿತ್ತಲಾಗುತ್ತದೆ. ಹೀಗಾಗಿ ಮಗುವೊಂದು ಚಾಕೊಲೇಟ್ ಅನ್ನು ತಿಂದ ನಂತರ ಅದರ ಕವರನ್ನು ಸ್ವತಃ ಕಸದ ಡಬ್ಬಿಗೆ ಎಸೆದುಬರುತ್ತದೆ. ಅಮೆರಿಕದ ಸ್ವಚ್ಛ ರಸ್ತೆಗಳನ್ನು ನೋಡಿ ನಾವು ಬೆರಗಾಗುತ್ತೇವೆ. ಆದರೆ ಅದಕ್ಕೆ ಕಾರಣವಾಗಿರುವುದು ಸರಕಾರದ ಕಠಿಣ ಕಾನೂನು ಮಾತ್ರವೇ ಅಲ್ಲ, ಜನರ ಹೊಣೆಯರಿತ ವರ್ತನೆಯ ಪಾಲೂ ಇದರ ಹಿಂದಿದೆ. 'ರಸ್ತೆಗಳಿಗೆ ಕಸವನ್ನು ಎಸೆಯುವುದು ನಮ್ಮ ಘನತೆಗೆ ಕುಂದು' ಅಂತ ಅಲ್ಲಿನ ಜನರು ಭಾವಿಸುತ್ತಾರೆ.

ನಿಜಾರ್ಥದ ನಾಗರಿಕರಾಗೋಣ

ಈ ಬರಹದಲ್ಲಿ 'ಬೆಂಗಳೂರು' ಎಂಬುದು ಪ್ರಾಸಂಗಿಕ ಉಲ್ಲೇಖವಷ್ಟೇ. ಹಾಗೆ ನೋಡಿದರೆ, ನಮ್ಮ ಹಲವು ಪಟ್ಟಣ ಮತ್ತು ನಗರಗಳಲ್ಲಿ ನೈರ್ಮಲ್ಯದ ಕೊರತೆ ಕಣ್ಣಿಗೆ ರಾಚುವಂತಿದೆ. ಇಂಥ ಎಲ್ಲ ಪ್ರದೇಶಗಳನ್ನು 'ಕಸಮುಕ್ತ'ವಾಗಿಸಬೇಕಿದೆ, ಅಂಥ ಸ್ವಚ್ಛತೆಯ ಅರಿವನ್ನು ಜನರೂ ಮೂಡಿಸಿಕೊಂಡು 'ನಿಜಾರ್ಥದ ನಾಗರಿಕರು' ಎನಿಸಿಕೊಳ್ಳಬೇಕಿದೆ. ಇಲ್ಲವಾದಲ್ಲಿ 'ಸ್ವಚ್ಛಭಾರತ' ಅಭಿಯಾನವು ತನ್ನ ಅರ್ಥವನ್ನು ಕಳೆದುಕೊಳ್ಳುವುದು ಕಟ್ಟಿಟ್ಟಬುತ್ತಿ. 'ವಿಕಸಿತ ಭಾರತ' ಎಂಬ ಮಹತ್ವಾಕಾಂಕ್ಷೆಯು ಸಾಕಾರಗೊಳ್ಳಬೇಕಿದ್ದರೆ, ಅದರ ಒಂದು ಭಾಗವಾಗಿ 'ಸ್ವಚ್ಛಭಾರತ'ದ ಆಶಯವನ್ನೂ ಸಾಕಾರಗೊಳಿಸಬೇಕಿದೆ. Cleanliness is next to godliness ಎಂಬುದೊಂದು ಮಾತಿದೆ. ಸ್ವಚ್ಛತೆಯನ್ನು ಕಾಯ್ದುಕೊಂಡರೆ ಮಾತ್ರವೇ ದೇವರ ಸಾನ್ನಿಧ್ಯದ ಅನುಭೂತಿ ನಮಗೆ ಸಿಗುತ್ತದೆ ಎಂಬುದನ್ನು ಮರೆಯದಿರೋಣ. ಬೆಂಗಳೂರನ್ನು ಅಥವಾ ನಾವು ನೆಲೆಸಿರುವ ಪ್ರದೇಶವನ್ನು ಸುಂದರ ಮತ್ತು ಆರೋಗ್ಯವಂತವಾಗಿಟ್ಟುಕೊಳ್ಳುವುದು ಮುಂದಿನ ಪೀಳಿಗೆಗೆ ನಾವು ನೀಡಬಹುದಾದ ಅತ್ಯುತ್ತಮ ಕೊಡುಗೆಯಾಗಿದೆ.

(ಲೇಖಕರು ಹವ್ಯಾಸಿ ಬರಹಗಾರರು)

ಅಭಿಮತ

ಸಂದೀಪ್ ಶರ್ಮಾ

ಪಶ್ಚಿಮ ಏಷ್ಯಾ ಬಿಕ್ಕಟ್ಟು: ಭಾರತದ ಕಾರ್ಯತಂತ್ರದ ಸ್ಪಷ್ಟತೆ

ರಾಜಕಾರಣದಲ್ಲಿ ಸ್ಮರಣಶಕ್ತಿ ಎನ್ನುವುದು ಸಮಯಸಾಧಕತನದ ಮೊದಲ ಬಲಿಪಶು ಎನ್ನಬಹುದು. ಪ್ರಸ್ತುತ ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಸಂಘರ್ಷಗಳ ಕುರಿತಾದ ಭಾರತ ಸರಕಾರದ ನಿಲುವನ್ನು ಟೀಕಿಸುತ್ತಿರುವ ವಿರೋಧ ಪಕ್ಷಗಳ ನಡೆ ಇದಕ್ಕೆ ಉತ್ತಮ ಉದಾಹರಣೆ. ಇರಾನ್ ಮತ್ತು ಇಸ್ರೇಲ್ ನಡುವಿನ ಉದ್ವಿಗ್ನ ಪರಿಸ್ಥಿತಿಯ ಮಧ್ಯೆ ಭಾರತವು ತೋರುತ್ತಿರುವ ಮೌನ ಅಥವಾ ತಟಸ್ಥತೆಯನ್ನು ಕಾಂಗ್ರೆಸ್ ಸೇರಿದಂತೆ ಕೆಲವು ರಾಜಕೀಯ ಪಕ್ಷಗಳು 'ನೈತಿಕ ಪತನ'ವೆಂದು ಬಣ್ಣಿಸುತ್ತಿವೆ. ಆದರೆ, ಈ ಟೀಕೆಗಳು ಕೇವಲ ಆಯ್ಕೆಯ ಆಕ್ರೋಶ ಮತ್ತು ರಾಜಕೀಯ ಹಿತಾಸಕ್ತಿಯಿಂದ ಕೂಡಿವೆಯೇ ಹೊರತು ದೇಶದ ಹಿತಾಸಕ್ತಿಯಿಂದಲ್ಲ ಎಂಬುದು ಲೇಖನದ ಪ್ರಮುಖ ಆಶಯ.

ಇಂದು ಪಶ್ಚಿಮ ಏಷ್ಯಾ ಒಂದು ಅಪಾಯಕಾರಿ ಅಂಚಿನಲ್ಲಿದೆ. ಅಮೆರಿಕ ಮತ್ತು ಇಸ್ರೇಲ್ ನಡೆಸಿದ ವೈಮಾನಿಕ ದಾಳಿಗಳಿಗೆ ಪ್ರತಿಯಾಗಿ ಕ್ಷಿಪಣಿ ಮತ್ತು ಡ್ರೋನ್ ದಾಳಿಗಳನ್ನು ಇರಾನ್ ನಡೆಸುತ್ತಿದೆ. ಈ ಸಂಘರ್ಷ ಕೇವಲ ಎರಡು ದೇಶಗಳಿಗೆ ಸೀಮಿತವಾಗಿಲ್ಲ; ಇದು ಸೌದಿ ಅರೇಬಿಯಾ, ಯುಎಇ, ಜೋರ್ಡಾನ್ ಮತ್ತು ಇರಾಕ್ ಸೇರಿದಂತೆ ಇಡೀ ಪ್ರದೇಶದ ಮೇಲೆ ಆರ್ಥಿಕ ಮತ್ತು ಭೌಗೋಳಿಕ ಪರಿಣಾಮ ಬೀರುತ್ತಿದೆ. ಜಗತ್ತಿನ ಒಟ್ಟು ತೈಲ ಬಳಕೆಯ ಸುಮಾರು ಶೇ. 20ರಷ್ಟು ಹರಿಯುವ ಹಾರ್ಮುಜ್ ಜಲಸಂಧಿಯನ್ನು ಮುಚ್ಚುವ ಇರಾನ್ ನಿರ್ಧಾರವು ಜಾಗತಿಕ ಇಂಧನ ಭದ್ರತೆಗೆ ದೊಡ್ಡ ಸವಾಲಾಗಿದೆ. ಇಂಥ ಸಂಕೀರ್ಣ ಪರಿಸ್ಥಿತಿಯಲ್ಲಿ ಯಾವುದೇ ಒಂದು ರಾಷ್ಟ್ರವನ್ನು 'ಅಪ್ಪಟ ನೈತಿಕವಾದಿ' ಎಂದು ಕರೆಯುವುದು ಕಷ್ಟ.

ಇರಾನ್‌ನ ಪರಮೋಚ್ಚ ನಾಯಕ ಅಯತೊಲ್ಲಾ ಅಲಿ ಖಮೇನಿ ಅವರ ಹತ್ಯೆಯನ್ನು ಖಂಡಿಸದ ಭಾರತದ ನಡೆಯನ್ನು ಜವಾಬ್ದಾರಿಯಿಂದ ನುಣುಚಿಕೊಳ್ಳುವಿಕೆ ಎಂದು ಟೀಕಿಸಿದ್ದಾರೆ ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ. ಭಾರತದ ಸನಾತನ ಮೌಲ್ಯವಾದ 'ವಸುಧೈವ ಕುಟುಂಬಕಂ' ಅನ್ನು ಉಲ್ಲೇಖಿಸಿ, ಅನ್ಯಾಯದ ವಿರುದ್ಧ ಭಾರತವು ಧ್ವನಿ ಎತ್ತಬೇಕಿತ್ತು ಎಂದು ಅವರು ವಾದಿಸಿದ್ದಾರೆ. ಆದರೆ, ಇದೇ ನಾಯಕರು ನೆರೆಯ ಬಾಂಗ್ಲಾದೇಶದಲ್ಲಿ ಹಿಂದೂಗಳ ಮೇಲೆ ದೌರ್ಜನ್ಯ ನಡೆದಾಗ ಅಥವಾ ಕಾಶ್ಮೀರದಲ್ಲಿ ಪಂಡಿತರ ಮಾರಣಹೋಮ ನಡೆದಾಗ ಇಂಥ ನೈತಿಕ ಆಕ್ರೋಶವನ್ನು ಏಕೆ ವ್ಯಕ್ತಪಡಿಸಲಿಲ್ಲ? ಎಂಬ ಪ್ರಶ್ನೆ ಏಳುತ್ತದೆ.ಖಮೇನಿ ಅವರು ಈ ಹಿಂದೆ ಭಾರತದ ಆಂತರಿಕ ವಿಷಯಗಳಾದ ಆರ್ಟಿಕಲ್ 370ರ ರದ್ದತಿ ಮತ್ತು ದೆಹಲಿ ಗಲಭೆಗಳ ಬಗ್ಗೆ ಭಾರತ ವಿರೋಧಿ ಹೇಳಿಕೆಗಳನ್ನು ನೀಡಿದ್ದರು. ಭಾರತದ ಸಾರ್ವಭೌಮತ್ವಕ್ಕೆ ಸವಾಲು ಹಾಕಿದ್ದ ವ್ಯಕ್ತಿಯ ಪರವಾಗಿ ಇಂದು ಕಂಬನಿ ಮಿಡಿಯುವುದು ವಿಪಕ್ಷಗಳ ರಾಜಕೀಯ ಅನಿವಾರ್ಯತೆಯೇ ಹೊರತು ದೇಶಪ್ರೇಮವಲ್ಲ. ಕಳೆದ ಒಂದು ದಶಕದಲ್ಲಿ ಭಾರತದ ವಿದೇಶಾಂಗ ನೀತಿಯು ಗಮನಾರ್ಹವಾಗಿ ಬದಲಾಗಿದೆ. ಭಾರತವು ಇಂದು ಯಾವುದೇ ಒಂದು ಗುಂಪಿನ ಪರವಾಗಿ ಕುರುಡಾಗಿ ನಿಲ್ಲದೆ, ತನ್ನ ರಾಷ್ಟ್ರೀಯ ಹಿತಾಸಕ್ತಿಗನುಗುಣವಾಗಿ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಿದೆ. ಪ್ರಧಾನಿ ಮೋದಿಯವರ ನಾಯಕತ್ವದಲ್ಲಿ ಭಾರತವು ಇಸ್ರೇಲ್ ಜತೆಗೆ ತಂತ್ರಜ್ಞಾನ ಮತ್ತು ರಕ್ಷಣಾ ವಲಯದಲ್ಲಿ ಬಲವಾದ ಸಂಬಂಧವನ್ನು ಹೊಂದಿರುವಂತೆಯೇ, ಸೌದಿ ಅರೇಬಿಯಾ ಮತ್ತು ಯುಎಇ ಮುಂತಾದ ಅರಬ್ ರಾಷ್ಟ್ರಗಳೊಂದಿಗೂ ಐತಿಹಾಸಿಕ ಒಪ್ಪಂದಗಳನ್ನು ಮಾಡಿಕೊಂಡಿದೆ.

ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರು ಹೇಳಿದಂತೆ, ನಾವು ಜಗತ್ತನ್ನು ಮೆಚ್ಚಿಸಲು ಬೇರೆಯವರ ಅನುಕರಣೆ ಮಾಡಬೇಕಿಲ್ಲ. ನಾವು ಯಾರು ಎಂಬ ಆತ್ಮವಿಶ್ವಾಸದ ಮೇಲೆ ಜಗತ್ತಿನೊಂದಿಗೆ ವ್ಯವಹರಿಸಬೇಕು. ಇದೇ ಭಾರತದ ಇಂದಿನ 'ಕಾರ್ಯತಂತ್ರದ ಸ್ಪಷ್ಟತೆ'. ಅಮೆರಿಕ-ಇಸ್ರೇಲ್ ಮತ್ತು ಇರಾನ್ ನಡುವಿನ ಸಂಘರ್ಷದಲ್ಲಿ ಭಾರತವು ಯಾರ ಪರವಾಗಿಯೂ ನಿಲ್ಲುವ ಅಗತ್ಯವಿಲ್ಲ; ಬದಲಿಗೆ ಭಾರತವು ಭಾರತದ ಪರವಾಗಿ ನಿಲ್ಲುವುದು ಮುಖ್ಯ. ಹಿಂದಿನ ಸರಕಾರಗಳು ಇರಾನ್ ಮೇಲಿನ ಅಮೆರಿಕದ ದಿಗ್ಬಂಧನಗಳಿಗೆ ಹೆದರಿ ತೈಲ ಆಮದನ್ನು ಕಡಿಮೆ ಮಾಡಿದ್ದವು. ಆದರೆ ಇಂದು ಭಾರತವು ರಷ್ಯಾದಿಂದ ರಿಯಾಯಿತಿ ದರದಲ್ಲಿ ತೈಲ ಖರೀದಿಸುವ ಮೂಲಕ ತನ್ನ ಆರ್ಥಿಕ ಸ್ವಾಯತ್ತತೆಯನ್ನು ಸಾಬೀತುಪಡಿಸಿದೆ. ಪಶ್ಚಿಮ ಏಷ್ಯಾದ ಬಿಕ್ಕಟ್ಟಿನಿಂದಾಗಿ ತೈಲ ಬೆಲೆ ಏರಿಕೆಯಾಗುವ ಭೀತಿಯಿದ್ದರೂ, ಭಾರತವು ತನ್ನ ಕಾರ್ಯತಂತ್ರದ ಮೀಸಲು ಸಂಗ್ರಹ ಮತ್ತು ಪರ್ಯಾಯ ಮಾರ್ಗಗಳ ಮೂಲಕ ಪರಿಸ್ಥಿತಿಯನ್ನು ನಿಭಾಯಿಸಲು ಸನ್ನದ್ಧವಾಗಿದೆ.

ಕೊನೆಯದಾಗಿ, ಪಶ್ಚಿಮ ಏಷ್ಯಾದ ಈ ಮಹಾಯುದ್ಧದಂಥ ಪರಿಸ್ಥಿತಿಯಲ್ಲಿ ಯಾರೂ ಸಂಪೂರ್ಣ ಸತ್ಯವಂತರಲ್ಲ. ಇರಾನ್ ತನ್ನ ಪ್ರಾಕ್ಸಿಗಳ ಗುಂಪುಗಳ ಮೂಲಕ ಪ್ರಾದೇಶಿಕ ಅಸ್ಥಿರತೆಯನ್ನು ಉಂಟುಮಾಡುತ್ತಿದ್ದರೆ, ಪಾಶ್ಚಿಮಾತ್ಯ ರಾಷ್ಟ್ರಗಳು ತಮ್ಮದೇ ಆದ ಹಿತಾಸಕ್ತಿಗಳನ್ನು ಹೊಂದಿವೆ. ಅಂತಾರಾಷ್ಟ್ರೀಯ ರಾಜತಾಂತ್ರಿಕತೆಯಲ್ಲಿ ಭಾವನಾತ್ಮಕ ನಿರ್ಧಾರಗಳಿಗಿಂತ ವಾಸ್ತವಿಕ ಮತ್ತು ತರ್ಕಬದ್ಧ ನಿಲುವುಗಳು ಮುಖ್ಯವಾಗುತ್ತವೆ. ಭಾರತವು ಇಂದು ಯಾವುದೇ ದೇಶದ 'ಕಿರಿಯ ಪಾಲುದಾರ'ನಾಗದೆ, ತನ್ನದೇ ಆದ ದಾರಿಯನ್ನು ಕಂಡುಕೊಂಡಿದೆ. ಈ ಸ್ಪಷ್ಟತೆಯೇ ಭಾರತವನ್ನು ಜಾಗತಿಕ ವೇದಿಕೆಯಲ್ಲಿ ಪ್ರಬಲ ಶಕ್ತಿಯನ್ನಾಗಿ ಮಾಡಿದೆ. ವಿರೋಧ ಪಕ್ಷಗಳ ಆಯ್ಕೆಯ ಆಕ್ರೋಶವು ದೇಶದ ಈ ರಾಜತಾಂತ್ರಿಕ ಪ್ರಗತಿಯನ್ನು ಕುಂಠಿತಗೊಳಿಸಲು ಸಾಧ್ಯವಿಲ್ಲ.

(ಲೇಖಕರು ಸಿವಿಲ್ ಎಂಜಿನಿಯರ್)

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:11, Issue:68

ಸಮಾಚಾರ ಸಣ್ಣದಲ್ಲ

ದೆಹಲಿ ಸ್ಪೀಕರ್‌ಗೆ ಬಾಂಬ್ ಬೆದರಿಕೆ

ದೆಹಲಿ: ಕೇಂದ್ರಾಡಳಿತ ಪ್ರದೇಶ ದೆಹಲಿಯ ವಿಧಾನಸಭೆಯ ಸ್ಪೀಕರ್ ವಿಜೇಂದ್ರ ಗುಪ್ತಾ ಅವರಿಗೆ ಮಂಗಳವಾರ ಇ-ಮೇಲ್ ಮೂಲಕ ಬಾಂಬ್ ಬೆದರಿಕೆ ಬಂದಿದೆ. ವಿಧಾನಸಭೆಯ ಕಟ್ಟಡ ಮತ್ತು ದೆಹಲಿ ಮೆಟ್ರೊ ನಿಲ್ದಾಣ ಸ್ಫೋಟಿಸುವ ಬೆದರಿಕೆ ಹಾಕಲಾಗಿದೆ. ದೆಹಲಿ ಲೆಫ್ಟಿನೆಂಟ್ ಗವರ್ನರ್ ತರಣ್‌ಜಿತ್ ಸಿಂಗ್ ಸಂಧು, ಮುಖ್ಯಮಂತ್ರಿ ರೇಖಾ ಗುಪ್ತಾ ಮತ್ತು ಸಚಿವ ಮಂಜಿಂದರ್ ಸಿಂಗ್ ಸಿರ್ಸಾ, ಪ್ರಧಾನಿ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ, ವಿದೇಶಾಂಗ ಸಚಿವ ಜೈಶಂಕರ್ ಹೆಸರುಗಳ ಉಲ್ಲೇಖವೂ ಇದೆ. ಸ್ಪೀಕರ್ ವಿಜೇಂದರ್ ಗುಪ್ತಾ ಅವರ ಇಮೇಲ್ ಖಾತೆಗೆ ಬೆಳಗ್ಗೆ 7.49ಕ್ಕೆ, ವಿಧಾನಸಭೆ ಕಚೇರಿಯ ವಿಳಾಸಕ್ಕೆ ಬೆಳಗ್ಗೆ 7.28ಕ್ಕೆ ಇ-ಮೇಲ್ ಬೆದರಿಕೆ ಬಂದಿದೆ. ವಿಧಾನಸಭೆ ಭದ್ರತಾ ಸಿಬ್ಬಂದಿ ಸ್ಪೀಕರ್ ಕೊಠಡಿಗೆ ತೆರಳಿ ಶೋಧ ನಡೆಸಿದ್ದಾರೆ ಎಂದು ವಿಧಾನಸಭಾ ಸ್ಪೀಕರ್ ಕಚೇರಿ ಸುದ್ದಿಗಾರರಿಗೆ ಮಾಹಿತಿ ನೀಡಿದೆ. ಫೆಬ್ರವರಿಯಲ್ಲಿಯೂ ಇ-ಮೇಲ್‌ನಲ್ಲಿ ಸರಣಿ ಬಾಂಬ್ ಸ್ಫೋಟದ ಬೆದರಿಕೆ ಬಂದಿತ್ತು. ಶೋಧದ ನಂತರ ಅದೆಲ್ಲವೂ ಹುಸಿ ಬೆದರಿಕೆ ಎಂಬುದು ದೃಢಪಟ್ಟಿತು. ಇ-ಮೇಲ್ ಕಳುಹಿಸಲು ಬಳಸಿದ ಐಪಿ ವಿಳಾಸ ಪತ್ತೆಗಾಗಿ ಸೈಬರ್ ತಂಡಗಳು ಯತ್ನಿಸುತ್ತಿವೆ. ಸೈಬರ್ ಅಪರಾಧಿಗಳು ವರ್ಚುವಲ್ ಪ್ರೈವೇಟ್ ನೆಟ್‌ವರ್ಕ್ ಬಳಸಿರುವ ಸಾಧ್ಯತೆ ಇದೆ ಎಂದು ಪೊಲೀಸರು ಹೇಳಿದ್ದಾರೆ.

ಆತ್ಮಹತ್ಯೆ ಪ್ರಚೋದನೆ: ಮಾಜಿ ಸಚಿವ ಬಂಧನ

ಚಂಡೀಗಢ: ಪಂಜಾಬ್ ರಾಜ್ಯದ ಉಗ್ರಾಣ ನಿಗಮ ಅಧಿಕಾರಿ ಆತ್ಮಹತ್ಯೆಗೆ ಪ್ರಚೋದನೆ ನೀಡಿದ ಆರೋಪದಡಿ ಪಂಜಾಬ್‌ನ ಮಾಜಿ ಸಚಿವ, ಎಎಪಿ

ಶಾಸಕ ಲಾಲ್ಜಿತ್ ಸಿಂಗ್ ಭುಲ್ಲರ್‌ರನ್ನು ಮಂಗಳವಾರ ಬಂಧಿಸಲಾಗಿದೆ. ಉಗ್ರಾಣ ನಿಗಮದ ಅಮೃತಸರ ಜಿಲ್ಲಾ ವ್ಯವಸ್ಥಾಪಕ ಗಗನ್‌ದೀಪ್ ಸಿಂಗ್ ಶನಿವಾರ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದು, ಲಾಲ್ಜಿತ್ ಕಿರುಕುಳಕ್ಕೆ ನೊಂದು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದಾಗಿ ಸೆಲ್ಫಿ ವಿಡಿಯೊದಲ್ಲಿ ಆರೋಪಿಸಿದ್ದರು. ವಿಡಿಯೊ ವೈರಲ್ ಆದ ಬಳಿಕ ಸಿಎಂ ಭಗವಂತ್ ಮಾನ್ ಸೂಚನೆಯಂತೆ ಲಾಲ್ಜಿತ್ ಸಿಂಗ್ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಬಳಿಕ ಲಾಲ್ಜಿತ್, ತಂದೆ ಸುಖದೇವ್ ಸಿಂಗ್ ಭುಲ್ಲರ್ ಮತ್ತು ಆಪ್ತ ಸಹಾಯಕ ದಿಲ್ಬಾಗ್ ಸಿಂಗ್ ವಿರುದ್ಧ ಪೊಲೀಸರು ಆತ್ಮಹತ್ಯೆ ಪ್ರೇರಣೆ ಪ್ರಕರಣವನ್ನು ದಾಖಲಿಸಿದ್ದರು. 24 ಗಂಟೆಯೊಳಗೆ ಲಾಲ್ಜಿತ್ ಬಂಧನವಾಗಬೇಕು ಎಂದು ಮೃತ ಗಗನ್‌ದೀಪ್ ಕುಟುಂಬದವರು ಒತ್ತಾಯಿಸಿದ್ದರು.

ಮೇಲ್ಮನೆಗೆ ಖಾಲಿದ್: ಕೈಗೆ ಮುಸ್ಲಿಂ ಆಗ್ರಹ

ದೆಹಲಿ: 2020ರಲ್ಲಿ ದೆಹಲಿ ಗಲಭೆ-ಹಿಂಸಾಚಾರ ಪ್ರಕರಣದಲ್ಲಿ ದೇಶದ ವಿರುದ್ಧ ದಂಗೆ ಆರೋಪದಡಿ ಬಂಧಿತನಾಗಿ 5 ವರ್ಷಗಳಿಂದ ಜೈಲಿನಲ್ಲಿರುವ ಜೆಎನ್

ಯು ಮಾಜಿ ವಿದ್ಯಾರ್ಥಿ ನಾಯಕ ಸಯ್ಯದ್ ಉಮರ್ ಖಾಲಿದ್‌ರನ್ನು ರಾಜ್ಯಸಭೆಗೆ ನಾಮ ನಿರ್ದೇಶನ ಮಾಡಬೇಕು ಎಂದು ರಾಜಸ್ಥಾನದ ಕೆಲ ಮುಸ್ಲಿಂ ಸಂಘಟನೆಗಳು ಕಾಂಗ್ರೆಸ್ ಪಕ್ಷವನ್ನು ಒತ್ತಾಯಿಸಿವೆ. ಜೂನ್‌ನಲ್ಲಿ ರಾಜಸ್ಥಾನದ 3 ರಾಜ್ಯಸಭಾ ಸ್ಥಾನ ತೆರವಾಗಲಿದ್ದು, ಅದರಲ್ಲಿ ಬಿಜೆಪಿ 2, ಕಾಂಗ್ರೆಸ್ 1 ಸ್ಥಾನ ಪಡೆಯಲು ಅವಕಾಶವಿದೆ. ಆ 1 ಸ್ಥಾನಕ್ಕೆ ಖಾಲಿದ್‌ರನ್ನು ನಾಮನಿರ್ದೇಶನ ಮಾಡಿದರೆ ಸಾಂವಿಧಾನಿಕ ಮೌಲ್ಯಕ್ಕೆ ಪಕ್ಷ ಬದ್ಧವಾಗಿರುವ ಸಂದೇಶ ನೀಡಿದಂತಾಗಲಿದೆ ಎಂದು ರಾಜಸ್ಥಾನ ಮುಸ್ಲಿಂ ಒಕ್ಕೂಟದ ಅಧ್ಯಕ್ಷ ಮೊಹ್ಸಿನ್ ರಶೀದ್ ಟೋಂಕ್, ಎಐಸಿಸಿಗೆ ಪತ್ರ ಬರೆದು ಆಗ್ರಹಿಸಿದ್ದಾರೆ.

ಉಗ್ರಗಾಮಿ ಸಿದ್ಧಾಂತ ಹಂಚಿಕೆ: ಮೂವರ ಸೆರೆ

ವಿಜಯವಾಡ: ಆಂಧ್ರಪ್ರದೇಶದ ವಿಜಯವಾಡದಲ್ಲಿದ್ದುಕೊಂಡು ಜಾಲತಾಣದ ಮೂಲಕ ಉಗ್ರಗಾಮಿ ಸಿದ್ಧಾಂತಗಳನ್ನು ಪ್ರಚುರಪಡಿಸುತ್ತಿದ್ದ, ಭಯೋತ್ಪಾದಕರ ಜಾಲದೊಂದಿಗೆ ಸಂಪರ್ಕ ಹೊಂದಿದ್ದ ಆರೋಪದಡಿ ಮೂವರು ಯುವಕರನ್ನು ಬಂಧಿಸಲಾಗಿದೆ. ವಿಜಯವಾಡ ನಗರದ ಟ್ರೂ ಟೌನ್ ಪ್ರದೇಶದ ನಿವಾಸಿಗಳಾದ ಮಹಮ್ಮದ್ ರಹಮತುಲ್ಲಾ ಷರೀಫ್(23), ಮಿರ್ಜಾ ಸೊಹೈಲ್ ಬೇಗ್(23), ಮಹಮ್ಮದ್ ದಾನಿಶ್(27) ಬಂಧಿತರು. ಮೂವರೂ ದೇಶದ ವಿವಿಧೆಡೆ ಸಕ್ರಿಯವಾಗಿರುವ 10 ಸದಸ್ಯರ ತಂಡದ ಭಾಗವಾಗಿದ್ದಾರೆ ಎಂದು ಪ್ರಾಥಮಿಕ ವಿಚಾರಣೆ ವೇಳೆ ತಿಳಿದುಬಂದಿದೆ ಎಂದು ಪೊಲೀಸರು ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ. ಗುಪ್ತಚರ ಇಲಾಖೆಯ ಮಾಹಿತಿ ಆಧರಿಸಿ ವಿಜಯವಾಡ ಪೊಲೀಸರು ಸೋಮವಾರ ಕಾರ್ಯಾಚರಣೆ ನಡೆಸಿ ಮೂವರನ್ನೂ ಬಂಧಿಸಿದ್ದಾರೆ.

{ **ಸುರೇಶ್ ಗೋಪಿ** } ಇಂಧನ ಖಾತೆ ರಾಜ್ಯ ಸಚಿವ

ಇರಾನ್ ಯುದ್ಧದಿಂದ ವಿವಿಧ ದೇಶಗಳಿಂದ ಭಾರತಕ್ಕೆ ಕಚ್ಚಾತೈಲ ಪೂರೈಕೆ ವ್ಯತ್ಯಯವಾಗಿದೆ. ಆದರೆ, ಆತಂಕ ಅನಗತ್ಯ. ತುರ್ತು ಸಂದರ್ಭಕ್ಕಾಗಿ ಆಂಧ್ರದ ವಿಶಾಖಪಟ್ಟಣಂ, ಕರ್ನಾಟಕದ ಮಂಗಳೂರು-ಉಡುಪಿ ಸಮೀಪದ ಪಾದೂರಿನಲ್ಲಿ 53.3 ಲಕ್ಷ ಟನ್ ಸಾಮರ್ಥ್ಯದ ಭೂಮಿಯಾಳದ ತೈಲ ಸಂಗ್ರಹಣಾಗಾರಗಳಿದ್ದು, ಅವುಗಳಲ್ಲಿ ಒಟ್ಟು 33 ಲಕ್ಷ ಟನ್ ತೈಲ ಸಂಗ್ರಹವಿದೆ.

ಉ.ಪ್ರ. ಭೋವಾಪುರ ಸೇನಾನೆಲೆ ಫೋಟೊ-ವಿಡಿಯೊ ಪಾಕ್‌ಗೆ ರವಾನೆ | 2ನೇ ದೊಡ್ಡ ಮಟ್ಟದ ದಾಳಿಗೆ ಸಂಚು, ಪುಲ್ವಾಮಾಗೂ ಭೇಟಿ

ಪಾಕ್ ಬೇಹುಗಾರಿಕೆ ಬೃಹತ್ ಜಾಲ ಪತ್ತೆ, 22 ಸೆರೆ

ಲಖನೌ: ಜಮ್ಮು-ಕಾಶ್ಮೀರದಲ್ಲಿ 2ನೇ ದೊಡ್ಡ ದಾಳಿಗೆ ಸಿದ್ಧತೆ ನಡೆಸಿದ್ದ, ಪಾಕಿಸ್ತಾನದ ಗುಪ್ತಚರ ಸಂಸ್ಥೆಯೊಂದಿಗೆ ನಿರಂತರ ಸಂಪರ್ಕ ಹೊಂದಿರುವ ಉತ್ತರ ಪ್ರದೇಶದಲ್ಲಿನ ಬಹುದೊಡ್ಡ ಬೇಹುಗಾರಿಕೆ ಜಾಲ ಕೇಂದ್ರದ ತನಿಖಾ ಸಂಸ್ಥೆಗಳು, ವಿವಿಧ ರಾಜ್ಯಗಳ ಪೊಲೀಸರ ಜಂಟಿ ಪ್ರಯತ್ನದ ಫಲವಾಗಿ ಇತ್ತೀಚೆಗೆ ಬಯಲಾಗಿದೆ. ಈ ಸಂಬಂಧ ಕಳೆದ 10 ದಿನಗಳಲ್ಲಿ ಅಪ್ರಾಪ್ತ ವಯಸ್ಕರು, ಒಬ್ಬ ಮಹಿಳೆ ಸೇರಿದಂತೆ ಒಟ್ಟು 22 ಜನರನ್ನು ಬಂಧಿಸಲಾಗಿದೆ.

ಗುಪ್ತಚರ ಇಲಾಖೆ ನೀಡಿದ ಮಾಹಿತಿ ಆಧರಿಸಿ ಗಾಜಿಯಾಬಾದ್‌ನ ಕೌಶಂಬಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ದಾಳಿ ನಡೆಸಿದ ಉತ್ತರ ಪ್ರದೇಶ ಪೊಲೀಸರು ಮೊದಲಿಗೆ ದೊಡ್ಡ ಬೇಹುಗಾರಿಕಾ ಜಾಲದ ಒಂದು ಎಳೆಯನ್ನು ಬಯಲಿಗೆಳೆದರು. ಆ ಬಳಿಕ ವಿಶೇಷ ತನಿಖಾ ತಂಡ ಕಾರ್ಯಾಚರಣೆಗಿಳಿದಿದ್ದರಿಂದ 22 ಜನರ ಬಂಧನವಾಗಿದೆ.

ಕೆಲವು ಯುವಕರು ಉತ್ತರ ಪ್ರದೇಶದ ಭೋವಾಪುರದಲ್ಲಿನ ರೈಲ್ವೆ ನಿಲ್ದಾಣ, ಸೇನಾನೆಲೆಗಳ ಫೋಟೊ, ವಿಡಿಯೊಗಳನ್ನು ತೆಗೆದು ಪಾಕಿಸ್ತಾನಕ್ಕೆ ರವಾನಿಸುತ್ತಿದ್ದಾರೆ ಎಂಬ ಮಾಹಿತಿ ಸಿಕ್ಕ ಬಳಿಕ ಉತ್ತರ ಪ್ರದೇಶ ಪೊಲೀಸರು ಕಾರ್ಯಾಚರಣೆ ಆರಂಭಿಸಿ ಅಪ್ರಾಪ್ತರು ಸೇರಿದಂತೆ ಕೆಲವು ಯುವಕರನ್ನು ಬಂಧಿಸಿದರು. ಇವರ ಮೊಬೈಲ್ ಫೋನ್‌ಗಳಲ್ಲಿ ಭೋವಾಪುರದ ಸೇನಾನೆಲೆಗಳ ಹಲವಾರು ವಿಡಿಯೊ, ಛಾಯಾಚಿತ್ರಗಳು ಇರುವುದು ಪತ್ತೆಯಾಯಿತು.

ಆ ಬಳಿಕ ಇಂದಿರಾಪುರಂ ಪೊಲೀಸ್, ಸೈಬರ್ ಅಪರಾಧ ದಳ, ಗುಪ್ತಚರ ವಿಭಾಗ ಮತ್ತು 'ಸ್ವಾಟ್' ಸಿಬ್ಬಂದಿಗಳನ್ನು ಒಳಗೊಂಡ ವಿಶೇಷ ತನಿಖಾ ತಂಡವನ್ನು(ಎಸ್‌ಐಟಿ) ರಚಿಸಲಾಗಿತ್ತು. ಸಿಮ್ ಪೂರೈಕೆ ಮಾಡಿದ್ದ ಐವರು ಅಪ್ರಾಪ್ತರು ಸೇರಿದಂತೆ 9 ಜನರನ್ನು ಮಾ.20ರಂದು ಎಸ್‌ಐಟಿ ಬಂಧಿಸಿತು.

ಪಂಕ್ಚರ್ ಅಂಗಡಿ ನಡೆಸುತ್ತಿದ್ದ ನೌಶಾದ್ ಅಲಿ(ಲಾಲು) ಎಂಬವನನ್ನು ಫರಿದಾಬಾದ್‌ನಲ್ಲಿ, ಪಾಕ್‌ನಲ್ಲಿರುವ ಸರ್ಫರಾಜ್(ಸರ್ದಾರ್) ಎಂಬವನ ಜತೆ ಸಂಪರ್ಕದಲ್ಲಿರುವ ಮಥುರಾದ ಇ-ರಿಕ್ಷಾ ಚಾಲಕಿ(ಅಪ್ರಾಪ್ತೆ) ಮೀರಾ ಎಂಬಾಕೆಯನ್ನು ಮಾ.22ರಂದು ಬಂಧಿಸಲಾಯಿತು. ಮಾ.14ರಿಂದಲೇ ಬಂಧನ ಕಾರ್ಯಾಚರಣೆ ನಡೆಸಲಾಗಿದೆ.

ಈ ತಂಡದ ಬಗ್ಗೆ ಗುಪ್ತಚರ ವಿಭಾಗದಿಂದ ಮಾಹಿತಿ ಸಿಕ್ಕ ಬಳಿಕ ಎಸ್‌ಐಟಿ, ದೆಹಲಿ ಕಂಟೋನ್ಮೆಂಟ್ ಮತ್ತು ಹರಿಯಾಣದ ಸೋನಿಪತ್ ಸೇರಿದಂತೆ ದೆಹಲಿ-ಜಮ್ಮು ರೈಲ್ವೆ ಕಾರಿಡಾರ್‌ನಲ್ಲಿ ಹಲವೆಡೆ ಸೌರಶಕ್ತಿ ಚಾಲಿತ ಸಿಸಿಟಿವಿ ಕೆಮರಾಗಳನ್ನು ಅಳವಡಿಸಿತ್ತು. ಆ ಕ್ಯಾಮೆರಾಗಳಲ್ಲಿ ದಾಖಲಾಗಿರುವ ದೃಶ್ಯಗಳನ್ನು ವಿಧಿವಿಜ್ಞಾನ ತಂಡಗಳು ಪರಿಶೀಲಿಸುತ್ತಿವೆ.

ಪಂಕ್ಚರ್ ಅಂಗಡಿಯ ನೌಶಾದ್ ಅಲಿಯನ್ನು ಫರಿದಾಬಾದ್‌ನಲ್ಲಿ, ಇ-ರಿಕ್ಷಾ ಚಾಲಕಿ(ಅಪ್ರಾಪ್ತೆ) ಮೀರಾಳನ್ನು ಮಥುರಾದಲ್ಲಿ ಬಂಧಿಸಿದ ಘಾಜಿಯಾಬಾದ್ ಪೊಲೀಸರು.

ಫರೀದಾಬಾದ್‌ನಲ್ಲಿ ರಸ್ತೆಬದಿ ನೌಶಾದ್‌ನ ಪಂಕ್ಚರ್ ಅಂಗಡಿ

ರೈಲ್ವೆ ಮಾರ್ಗದಲ್ಲಿ ಸಿಸಿಟಿವಿ ಕ್ಯಾಮೆರಾ

ಶೂಟರ್ ಸಮೀರ್‌ಗೆ ಎನ್‌ಐಎ ಶೋಧ

22 ಮಂದಿಯ ಬಂಧನದ ಸುದ್ದಿ ತಿಳಿಯುತ್ತಲೇ ಈ ತಂಡದ ಪ್ರಮುಖ, ಪಾಕ್ ಸಂಪರ್ಕದಲ್ಲಿದ್ದ ಶಂಕಿತ ಉಗ್ರ ಸಮೀರ್ ಅಲಿಯಾಸ್ ಶೂಟರ್ ಸಮೀರ್ ನಾಪತ್ತೆಯಾಗಿದ್ದಾನೆ. ಆತನ ಬಂಧನಕ್ಕಾಗಿ ರಾಷ್ಟ್ರೀಯ ತನಿಖಾ ಸಂಸ್ಥೆ(ಎನ್‌ಐಎ), ಉಗ್ರ ನಿಗ್ರಹ ಪಡೆ(ಎಟಿಎಸ್), ಉತ್ತರ ಪ್ರದೇಶ, ದೆಹಲಿ ಮತ್ತು ಹರಿಯಾಣ ಪೊಲೀಸರ ದೊಡ್ಡ ತಂಡವೇ ದೇಶದ ವಿವಿಧೆಡೆ ಶೋಧ ಕಾರ್ಯದಲ್ಲಿ ತೊಡಗಿದೆ.

ಶಂಕಿತರಿಂದ ಪುಲ್ವಾಮಾಗೂ ಭೇಟಿ

ಜಮ್ಮು-ಕಾಶ್ಮೀರದಲ್ಲಿ 2ನೇ ದೊಡ್ಡ ದಾಳಿಗೆ ಸಿದ್ಧತೆ ನಡೆಸಿತ್ತು. ಅದಕ್ಕಾಗಿ ಬಂಧಿತರಲ್ಲಿ ನಾಲ್ವರು ಜಮ್ಮು-ಕಾಶ್ಮೀರದ ಪುಲ್ವಾಮಾಕ್ಕೆ ತೆರಳಿ ಅಲ್ಲಿನ ಸೂಕ್ಷ್ಮ ಸ್ಥಳಗಳ ಚಿತ್ರ-ಮಾಹಿತಿಗಳನ್ನು ಪಾಕ್‌ಗೆ ಕಳುಹಿಸಿದ್ದರು. ಈ ಕಾರ್ಯಕ್ಕೆ ಸ್ಥಳೀಯವಾಗಿಯೇ ಹೆಚ್ಚು ಯುವಕರನ್ನು ನೇಮಿಸಿಕೊಳ್ಳಲು ಪಾಕ್‌ನಿಂದ ಸೂಚನೆ ಬಂದಿತ್ತು ಎಂದು ಪ್ರಾಥಮಿಕ ತನಿಖೆ ವೇಳೆ ತಿಳಿದು ಬಂದಿದೆ. ಈ ಬೇಹುಗಾರಿಕೆ ಜಾಲವನ್ನು ಸುಹೇಲ್ ಮಲಿಕ್, ನೌಶಾದ್ ಅಲಿ ಮತ್ತು ಸಮೀರ್ ಅಲಿಯಾಸ್ ಶೂಟರ್ ಸಮೀರ್ ನಡೆಸುತ್ತಿದ್ದರು. ಈ ತಂಡ ಉತ್ತರ ಪ್ರದೇಶ ಮಾತ್ರವಲ್ಲದೇ, ಬಿಹಾರ, ಮಹಾರಾಷ್ಟ್ರ, ನೇಪಾಳದಲ್ಲಿ ಸಂಪರ್ಕ ಜಾಲ ಹೊಂದಿದೆ. ಪಾಕ್‌ನಿಂದ ಬರುವ ಸೂಚನೆ ಮೇರೆಗೆ ಕಾರ್ಯನಿರ್ವಹಿಸುತ್ತಿದೆ. ಯುವಕರು ಹಣಕ್ಕಾಗಿ ಬೇಹುಗಾರಿಕೆ ಕೆಲಸ ಮಾಡುತ್ತಿದ್ದರು. ಪ್ರತಿ ವಿಡಿಯೊ, ಫೋಟೊ ಮಾಹಿತಿಗೆ ಕನಿಷ್ಠ 5 ಸಾವಿರ ರು.ನಿಂದ ಗರಿಷ್ಠ 20 ಸಾವಿರ ರು.ವರೆಗೂ ಹಣ ಸಿಗುತ್ತಿತ್ತು ಎಂದು ಬಂಧಿತರು ತನಿಖಾಧಿಕಾರಿಗಳಿಗೆ ತಿಳಿಸಿದ್ದಾರೆ.

ಪಾಕ್‌ಗೆ ಬೇಹುಗಾರಿಕೆ: ಐಎಎಫ್ ಸಿಬ್ಬಂದಿ ಸೆರೆ

ದಿಸ್‌ಪುರ: ಪಾಕಿಸ್ತಾನ ಪರ ಬೇಹುಗಾರಿಕೆ ನಡೆಸುತ್ತಾ ಐಎಸ್‌ಐ ಹ್ಯಾಂಡ್ಲರ್‌ಗಳಿಗೆ ದೇಶದ ಮಹತ್ವದ ಮಾಹಿತಿ ದಾಟಿಸುತ್ತಿದ್ದ ಆರೋಪದಡಿ ವಾಯುಪಡೆಯ ಒಬ್ಬ ಸಿಬ್ಬಂದಿಯನ್ನು

ರಾಜಸ್ಥಾನ ಗುಪ್ತಚರ ಮತ್ತು ವಾಯುಪಡೆ ಗುಪ್ತಚರ ಇಲಾಖೆಯ ಜಂಟಿ ಕಾರ್ಯಾಚರಣೆಯಲ್ಲಿ ಬಂಧಿಸಲಾಗಿದೆ. ಅಸ್ಸಾಂನ ವಾಯುಪಡೆ ವಿಮಾನ ನಿಲ್ದಾಣದಲ್ಲಿ ನಿಯೋಜಿತನಾಗಿದ್ದ ಉತ್ತರ ಪ್ರದೇಶದ ನಿವಾಸಿ ಸುಮಿತ್ ಕುಮಾರ್(36) ಪಾಕ್‌ಗೆ ಸೂಕ್ಷ್ಮ ಮಾಹಿತಿ ನೀಡಿದ ಆರೋಪದಡಿ ಬಂಧಿತನಾಗಿದ್ದಾನೆ. ಸುಮಿತ್ ಕುಮಾರ್ ದಿಬ್ರುಗಢದ ಚಾಬುವಾದಲ್ಲಿರುವ ವಾಯುಪಡೆ ವಿಮಾನ ನಿಲ್ದಾಣದಲ್ಲಿ ಮಲ್ಟಿ-ಟಾಸ್ಕಿಂಗ್ ಸ್ಟಾಫ್(ಎಂಟಿಎಸ್) ಆಗಿ ಕಾರ್ಯನಿರ್ವಹಿಸುತ್ತಿದ್ದ ಎಂದು ಈ ಬಗ್ಗೆ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ (ಗುಪ್ತಚರ) ಪ್ರಫುಲ್ ಕುಮಾರ್ ಸುದ್ದಿಗಾರರಿಗೆ ಸೋಮವಾರ ತಿಳಿಸಿದ್ದಾರೆ. ಆರೋಪಿಯು 2023ರಿಂದಲೂ ಪಾಕ್ ಗುಪ್ತಚರ ಸಂಸ್ಥೆ ಐಎಸ್‌ಐ ಜತೆ ಸಂಪರ್ಕದಲ್ಲಿದ್ದಾನೆ ಮತ್ತು ಹಣಕ್ಕಾಗಿ ಗೌಪ್ಯ ಮಾಹಿತಿ ಹಂಚಿಕೊಂಡಿದ್ದಾನೆ ಎಂಬುದು ವಿಚಾರಣೆ ವೇಳೆ ತಿಳಿದುಬಂದಿದೆ ಎಂದು ಅಧಿಕಾರಿ ತಿಳಿಸಿದ್ದಾರೆ.

ಕಚ್ಚಾತೈಲ ಧಾರಣೆ ಮತ್ತೆ ಏರುಮುಖ

ಲಂಡನ್: ಇರಾನ್ ವಿದ್ಯುತ್ ಸ್ಥಾವರಗಳು, ಮೂಲ ಸೌಕರ್ಯ ಘಟಕಗಳ ಮೇಲೆ ಮುಂದಿನ

5 ದಿನಗಳ ಕಾಲ ದಾಳಿ ನಡೆಸುವುದಿಲ್ಲ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸೋಮವಾರ ಸೇನಾ ಕಾರ್ಯಾಚರಣೆಗೆ ವಿರಾಮ ಘೋಷಿಸಿದ ಬಳಿಕ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ 1 ಬ್ಯಾರಲ್ ಕಚ್ಚಾತೈಲ (159 ಲೀ.) ಬೆಲೆ ಶೇ.11ರಷ್ಟು ಇಳಿಕೆಯಾಗಿತ್ತು.

ಆದರೆ, ಟ್ರಂಪ್ ಘೋಷಣೆಯ ನಂತರ, ಅಮೆರಿಕದ ಜತೆಗೆ ಯಾವುದೇ ಶಾಂತಿ ಮಾತುಕತೆ ನಡೆದಿಲ್ಲ ಎಂದು ಇರಾನ್ ಸ್ಪಷ್ಟಪಡಿಸಿದ ನೀಡಿದ ಬಳಿಕ ಮತ್ತೆ ಕಚ್ಚಾ ತೈಲದ ದರ ಏರಿಕೆ ಕಾಣತೊಡಗಿದೆ.

ಹಾಗಾಗಿ, ಮಂಗಳವಾರದ ವಹಿವಾಟಿನಲ್ಲಿ ಬ್ರೆಂಟ್ ಕಚ್ಚಾತೈಲದ ಬೆಲೆ ಶೇ.2.63ರಷ್ಟು ಏರಿಕೆ ಕಂಡು, ಬ್ಯಾರಲ್‌ಗೆ 102.46 ಡಾಲರ್‌ಗಳಂತೆ ವಹಿವಾಟು ನಡೆಸಿದೆ.

ಡಬ್ಲ್ಯುಟಿಸಿ ಕಚ್ಚಾತೈಲದ ಧಾರಣೆ ಸೋಮವಾರಕ್ಕೆ ಹೋಲಿಸಿದರೆ ಶೇ. 3.50ರಷ್ಟು ಹೆಚ್ಚಳವಾಗಿದ್ದು, ಬ್ಯಾರಲ್‌ಗೆ 91.23 ಡಾಲರ್ ನಂತೆ ವಹಿವಾಟು ನಡೆಸಿದೆ.

ನೈಸರ್ಗಿಕ ಅನಿಲದ ಬೆಲೆಯೂ ಶೇ.1.46ರಷ್ಟು ಏರಿಕೆ ದಾಖಲಿಸಿ 2.94 ಡಾಲರ್ ಲೆಕ್ಕದಲ್ಲಿ ಮಾರಾಟವಾಗಿದೆ.

ಅಮೆರಿಕದ ಪ್ರಮುಖ ತೈಲ ಸಂಸ್ಕರಣಾಗಾರದಲ್ಲಿ ಸ್ಫೋಟ

ಅಮೆರಿಕದ ಟೆಕ್ಸಾಸ್ ರಾಜ್ಯ ಬಂದರು ಬಳಿ ಕೊಲ್ಲಿ ಪ್ರದೇಶದಲ್ಲಿ 4,000 ಎಕರೆಗಳಷ್ಟು ವಿಸ್ತಾರದಲ್ಲಿರುವ, ನಿತ್ಯ 4.35 ಲಕ್ಷ ಬ್ಯಾರಲ್ ಕಚ್ಚಾತೈಲ ಸಂಸ್ಕರಣಾ ಸಾಮರ್ಥ್ಯದ ವ್ಯಾಲೆರೊ ಸಂಸ್ಕರಣಾಗಾರದಲ್ಲಿ ಸೋಮವಾರ ಭಾರೀ ಸ್ಫೋಟವಾಗಿದೆ. ಬೆಂಕಿ ಹೊತ್ತಿ ಉರಿಯುತ್ತಿದ್ದು, ನಂದಿಸುವುದೇ ಕಷ್ಟವಾಗಿದೆ. ದಟ್ಟ ಹೊಗೆ ಆಕಾಶದೆತ್ತರಕ್ಕೆ ಆವರಿಸಿದೆ. ಕೈಗಾರಿಕಾ ಹೀಟರ್‌ನಿಂದ ಸ್ಫೋಟವಾಗಿರಬಹುದು ಎಂದು ಅಂದಾಜು ಮಾಡಲಾಗಿದೆ. ಘಟಕದಲ್ಲಿ 770 ಉದ್ಯೋಗಿಗಳಿದ್ದು, ನಿತ್ಯವೂ ಗ್ಯಾಸೊಲಿನ್, ಡೀಸೆಲ್, ವಿಮಾನದ ಇಂಧನತೈಲದ ಉತ್ಪಾದನೆಯಾಗುತ್ತದೆ.

ಯಹೂದಿ ಸಮುದಾಯದ 3 ಆಂಬ್ಯುಲೆನ್ಸ್ ಪೂರ್ಣ ಭಸ್ಮ | ಈವರೆಗೆ ಬಂಧನ ಇಲ್ಲ

ಲಂಡನ್‌ನಲ್ಲಿ ಇರಾನ್ ಕಿಚ್ಚು: 4 ಆಂಬ್ಯುಲೆನ್ಸ್‌ಗೆ ಬೆಂಕಿ

ಲಂಡನ್: ಇರಾನ್ ವಿರುದ್ಧದ ಅಮೆರಿಕ-ಇಸ್ರೇಲ್ ಯುದ್ಧದ ಕಿಚ್ಚು, ಅದರ ಪ್ರತಿಕ್ರಿಯೆ ಲಂಡನ್ ವರೆಗೂ ಬಂದು ತಲುಪಿದೆ. ಯುನೈಟೆಡ್ ಕಿಂಗ್ಡಂನ ರಾಜಧಾನಿ ನಗರ ಲಂಡನ್‌ನಲ್ಲಿ ಗೋಲ್ಡರ್ಸ್ ಗ್ರೀನ್ ಪ್ರದೇಶದಲ್ಲಿರುವ ಯಹೂದಿ ಸಮುದಾಯ ಕೇಂದ್ರದ ಮೇಲೆ ಸೋಮವಾರ ದಾಳಿ ನಡೆದಿದೆ.

ಯಹೂದಿ ಸಮುದಾಯಕ್ಕೆ ಸೇರಿದ, ಬ್ರಿಟನ್ ಜನತೆಗೆ ಉಚಿತ ಸೇವೆ ಒದಗಿಸುತ್ತಿದ್ದ 4 ಆಂಬ್ಯುಲೆನ್ಸ್‌ಗಳಿಗೆ ದುಷ್ಕರ್ಮಿಗಳು ಸೋಮವಾರ ನಸುಕಿನಲ್ಲಿ ಬೆಂಕಿ ಹಚ್ಚಿದ್ದಾರೆ. 3 ಆಂಬ್ಯುಲೆನ್ಸ್ ಪೂರ್ಣ ಸುಟ್ಟು ಹೋಗಿದ್ದರೆ, ಒಂದು ಭಾಗಶಃ ಸುಟ್ಟಿದೆ.

'ಸಿನೆಗಾಗ್'ವೊಂದರ (ಯಹೂದಿಗಳ ಪ್ರಾರ್ಥನಾ ಮಂದಿರ, ಸಭಾಸ್ಥಳ) ಪಕ್ಕದ ಖಾಲಿ ಜಾಗದಲ್ಲಿ ನಿಲುಗಡೆ ಮಾಡಿದ್ದಾಗ ನಾಲ್ಕೂ ವಾಹನಗಳಿಗೆ ದುಷ್ಕರ್ಮಿಗಳು ಕಿಚ್ಚಿಟ್ಟು ಸುಟ್ಟು ಹಾಕಿದ್ದಾರೆ. ಆಂಬ್ಯುಲೆನ್ಸ್‌ಗಳಲ್ಲಿದ್ದ ಸಿಲಿಂಡರ್ ಬೆಂಕಿಯಿಂದ ಸ್ಫೋಟಗೊಂಡಿದ್ದು, ಸಮೀಪದ ಕಟ್ಟಡಗಳಿಗೂ ಹಾನಿಯಾಗಿದೆ. ಕಿಟಕಿ, ಬಾಗಿಲುಗಳು ಜಖಂಗೊಂಡಿವೆ. ಅಗ್ನಿಶಾಮಕ ದಳದ 6 ವಾಹನಗಳು, 40 ಸಿಬ್ಬಂದಿ ಒಂದೂವರೆ ಗಂಟೆಗಳ ಕಾಲ ಶ್ರಮಿಸಿ ಬೆಂಕಿಯನ್ನು ನಂದಿಸಿದ್ದಾರೆ. ಸುರಕ್ಷತಾ ದೃಷ್ಟಿಯಿಂದ ಘಟನಾ ಸ್ಥಳದ ಪಕ್ಕದ ಕಟ್ಟಡಗಳಲ್ಲಿದ್ದ ಜನರನ್ನು ಬೆಂಕಿ ನಂದಿಸುವವರೆಗೂ ತೆರವುಗೊಳಿಸಲಾಗಿತ್ತು. ಹಾಗಾಗಿ ಯಾವುದೇ ಜೀವಹಾನಿಯಾಗಿಲ್ಲ ಎಂದು ವರದಿಯಾಗಿದೆ.

ಇರಾನ್ ಮೂಲದ ಭಯೋತ್ಪಾದಕ ಸಂಘಟನೆಯಿಂದಲೇ ಈ ಕೃತ್ಯ ನಡೆದಿದೆ ಎಂದು ಯಹೂದಿ ಸಮುದಾಯ ಆರೋಪಿಸಿದೆ.



ಮೂವರು ಮುಸುಕುಧಾರಿ ಯುವಕರು ಸೋಮವಾರ ನಸುಕಿನ 1.36 ವೇಳೆ ಬಂದು ನಾಲ್ಕೂ ಆಂಬ್ಯುಲೆನ್ಸ್‌ಗಳಿಗೆ ಬೆಂಕಿ ಹಚ್ಚಿ ಓಡಿ ಹೋಗುವುದು, ಆಂಬ್ಯುಲೆನ್ಸ್‌ನಲ್ಲಿದ್ದ ಆಮ್ಲಜನಕದ ಸಿಲಿಂಡರ್ ಸ್ಫೋಟಗೊಂಡಿರುವುದು ಅದೇ ರಸ್ತೆಯ ಕಟ್ಟಡವೊಂದರಲ್ಲಿನ ಸಿಸಿಟಿವಿ ಕ್ಯಾಮೆರಾದಲ್ಲಿ ದಾಖಲಾಗಿದೆ. ಘಟನೆ ಸಂಬಂಧ ಈವರೆಗೂ ಯಾರನ್ನೂ ಬಂಧಿಸಲಾಗಿಲ್ಲ.

ಪ್ರಧಾನಿ ಕೇರ್ ಪ್ರತಿಕ್ರಿಯೆ

'ಈ ಘಟನೆ ಬಹಳ ಆಘಾತಕಾರಿಯಾಗಿದೆ. ಆಂಟಿ ಸೆಮಿಟಿಸಂ ಚಟುವಟಿಕೆಗಳಿಗೆ ಬ್ರಿಟನ್‌ನಲ್ಲಿ ಅವಕಾಶವಿಲ್ಲ ಎಂದು ಪ್ರತಿಕ್ರಿಯಿಸಿರುವ ಬ್ರಿಟನ್ ಪ್ರಧಾನಿ ಕೇರ್ ಸ್ಟಾರ್ಮರ್, ಆಂಬ್ಯುಲೆನ್ಸ್‌ಗಳಿಗೆ ಬೆಂಕಿ ಹಚ್ಚಿದ ದುಷ್ಟರ ಬಗ್ಗೆ ಮಾಹಿತಿ ಇದ್ದವರು ಪೊಲೀಸರಿಗೆ ತಿಳಿಸಿ ಎಂದು ಕರೆ ನೀಡಿದ್ದಾರೆ.

'ಆಂಟಿಸೆಮಿಟಿಕ್ ಹೇಟ್ ಕ್ರೈಂ' ಪ್ರಕರಣ ದಾಖಲಿಸಿಕೊಂಡಿರುವ ಮೆಟ್ರೊಪಾಲಿಟನ್ ಪೊಲೀಸರು ತನಿಖೆ ನಡೆಸಲಾರಂಭಿಸಿದ್ದಾರೆ. ಸಿಸಿಟಿವಿ ದೃಶ್ಯಾವಳಿಗಳನ್ನು ಪೊಲೀಸರು ಪರಿಶೀಲಿಸಿದ್ದು, ಮೂವರು ದುಷ್ಕರ್ಮಿಗಳನ್ನು ಶೀಘ್ರವೇ ಬಂಧಿಸುವ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಆದರೆ, ಈ ಘಟನೆಯನ್ನು ಭಯೋತ್ಪಾದಕ ಕೃತ್ಯ ಎಂದು ಗುರುತಿಸಲು ಪೊಲೀಸರು ನಿರಾಕರಿಸಿದ್ದಾರೆ.

ಪಶ್ಚಿಮ ಏಷ್ಯಾ ಬಿಕ್ಕಟ್ಟು, ಭಾರತದ ಸಶಸ್ತ್ರಪಡೆಗಳ ಸನ್ನದ್ಧತೆ ಚರ್ಚೆ

ರಕ್ಷಣಾ ಸಚಿವ ರಾಜನಾಥ್ ಸಿಂಗ್ ಮಹತ್ವದ ಸಭೆ

ದೆಹಲಿ: ಮಹತ್ವದ ಬೆಳವಣಿಗೆಯಲ್ಲಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಮಂಗಳವಾರ ಬೆಳಗ್ಗೆ ದೇಶದ ರಕ್ಷಣಾ ಪಡೆಗಳ ಮುಖ್ಯಸ್ಥರು ಮತ್ತು ರಕ್ಷಣಾ ಸಚಿವಾಲಯದ ಉನ್ನತ ಅಧಿಕಾರಿಗಳ ಸಭೆ ನಡೆಸಿದ್ದಾರೆ.

ಪ್ರಸ್ತುತ ಪಶ್ಚಿಮ ಏಷ್ಯಾ ಭಾಗದಲ್ಲಿ 25 ದಿನಗಳಿಂದ ಇರಾನ್ ಹಾಗೂ ಅಮೆರಿಕ-ಇಸ್ರೇಲ್ ನಡುವೆ ನಡೆಯುತ್ತಿರುವ ಯುದ್ಧ, ಹೊರ್ಮುಜ್ ಜಲಸಂಧಿ ಬಿಕ್ಕಟ್ಟು, ಭಾರತದ ಕಚ್ಚಾತೈಲ-ಅನಿಲ ಮತ್ತು ಇತರೆ ಸರಕು ಸಾಗಣೆ ನೌಕೆಗಳ ಸಂಚಾರಕ್ಕೆ ಅಡಚಣೆ ಎದುರಾಗಿರುವುದು, ಭಾರತದ ಪ್ರಾದೇಶಿಕ ವಲಯದಲ್ಲಿನ ಪರಿಸ್ಥಿತಿಗಳ ಬಗ್ಗೆ ಸಭೆಯಲ್ಲಿ ಸಚಿವರು ಚರ್ಚೆ ನಡೆಸಿದರು. ಅಲ್ಲದೇ, ಭಾರತದ ಮೂರೂ ಸಶಸ್ತ್ರ ಪಡೆಗಳ ಸನ್ನದ್ಧತೆಯ ವಿಚಾರವೂ ಚರ್ಚೆಗೊಳಗಾಯಿತು ಎಂದು ಮೂಲಗಳು ತಿಳಿಸಿವೆ.

ಈ ಮಹತ್ವದ ಸಭೆಯಲ್ಲಿ ಸಶಸ್ತ್ರ ಪಡೆಗಳ ಸಿಬ್ಬಂದಿ ಮುಖ್ಯಸ್ಥ(ಸಿಡಿಎಸ್) ಜನರಲ್ ಅನಿಲ್ ಚೌಹಾಣ್, ವಾಯುಪಡೆ ಮುಖ್ಯಸ್ಥ ಏರ್‌ಚೀಫ್ ಮಾರ್ಷಲ್ ಅಮರ್ ಪ್ರೀತ್‌ಸಿಂಗ್, ಸೇನೆಯ ಮುಖ್ಯಸ್ಥ ಜನರಲ್ ಉಪೇಂದ್ರ ದ್ವಿವೇದಿ, ನೌಕಾಪಡೆ ಮುಖ್ಯಸ್ಥ ಅಡ್ಮಿರಲ್ ದಿನೇಶ್ ಕೆ.ತ್ರಿಪಾಠಿ, ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ(ಡಿಆರ್‌ಡಿಒ) ಅಧ್ಯಕ್ಷ ಸಮೀರ್ ಕಾಮತ್ ಮತ್ತು ರಕ್ಷಣಾ ಸಚಿವಾಲಯದ ಉನ್ನತ ಅಧಿಕಾರಿಗಳು ಸಭೆಯಲ್ಲಿದ್ದರು.

ವನಿತೆಯರೂ ಶಾಶ್ವತ ನೇಮಕಕ್ಕೆ ಅರ್ಹರು

ದೆಹಲಿ: ದೇಶದಲ್ಲಿನ ಎಲ್ಲಾ ಸೇನಾಪಡೆಗಳಲ್ಲಿಯೂ ಲಿಂಗ ಸಮಾನತೆ ಬಲಪಡಿಸಬೇಕು ಎನ್ನುವುದಕ್ಕೆ ಸುಪ್ರೀಂ ಕೋರ್ಟ್ ಮಂಗಳವಾರ ಒಂದು ಮಹತ್ವದ ತೀರ್ಪಿನ ಮೂಲಕ ಒತ್ತು ನೀಡಿದೆ. ಭಾರತೀಯ ಸೇನಾಪಡೆಗಳಿಗೆ 'ಶಾರ್ಟ್‌ಟರ್ಮ್ ಸರ್ವಿಸ್ ಕಮಿಷನ್'(ಎಸ್‌ಎಸ್‌ಸಿ-ಅಲ್ಪಾವಧಿ ಸೇವಾ ನೇಮಕ) ವಿಭಾಗದಲ್ಲಿ ಸೇರ್ಪಡೆಯಾಗುವ ಮಹಿಳಾ ಸೇನಾಧಿಕಾರಿಗಳೂ ಕೂಡಾ ಪುರುಷ ಸೇನಾಧಿಕಾರಿಗಳಂತೆಯೇ ಶಾಶ್ವತ ನೇಮಕಕ್ಕೆ ಅರ್ಹರಾಗಿರುತ್ತಾರೆ ಎಂದು ಸುಪ್ರೀಂ ಕೋರ್ಟ್ ತೀರ್ಪು ನೀಡಿದೆ. ಶಾಶ್ವತವಾಗಿ ಸೇನಾಪಡೆಗಳ ಸೇವೆಗಳಿಗೆ ಸೇರ್ಪಡೆ ಯಾಗುವುದಕ್ಕೆ ಮಹಿಳಾ ಸೇನಾಧಿಕಾರಿಗಳ ವಿಚಾರದಲ್ಲಿ ಯಾವುದೇ ರೀತಿಯ ತಾರತಮ್ಯ ಸಲ್ಲದು ಎಂದೂ ಪೀಠ ಹೇಳಿದೆ. ಎಸ್‌ಎಸ್‌ಸಿ ವಿಭಾಗದಲ್ಲಿ 10 ವರ್ಷಗಳ ಅಲ್ಪಾವಧಿಗೆ ಸೇನಾಪಡೆಗಳಿಗೆ ಸೇರಿಕೊಳ್ಳುವ ಮಹಿಳೆಯರ ಸೇವೆಯನ್ನು ಆ ನಂತರದಲ್ಲಿ 14 ವರ್ಷಗಳವರೆಗೂ ವಿಸ್ತರಣೆ ಮಾಡಬಹುದು ಎಂದು ಪೀಠವು ಸಂವಿಧಾನದ 142ನೇ ವಿಧಿಯಡಿ ತನಗೆ ಪ್ರದತ್ತವಾದ ಅಧಿಕಾರವನ್ನು ಬಳಸಿಕೊಂಡು ಆದೇಶ ನೀಡಿದೆ.

'ಡಬ್ಲ್ಯುಟಿಎಫ್' ಪಾಡ್‌ಕಾಸ್ಟ್ ಸಂದರ್ಶನ 20ನೇ ಸಂಚಿಕೆ ಬ್ರಿಟನ್ ಮಾಜಿ ಪ್ರಧಾನಿ ಅತಿಥಿ

ರಿಷಿ ಸುನಕ್-ಅಕ್ಷತಾ ದಂಪತಿ ಜತೆ ನಿಖಿಲ್ ತಮಾಷೆ

ದೆಹಲಿ: ಯುನೈಟೆಡ್ ಕಿಂಗ್ಡಂನ(ಯುಕೆ) ಮಾಜಿ ಪ್ರಧಾನಿ ರಿಷಿ ಸುನಕ್ ಮತ್ತು ಅವರ ಪತ್ನಿ ಅಕ್ಷತಾ ಮೂರ್ತಿ, 'ಜೆರೋಧಾ' ಸಂಸ್ಥೆಯು ಸಹ-ಸಂಸ್ಥಾಪಕ ನಿಖಿಲ್ ಕಾಮತ್ ಅವರ ಜನಪ್ರಿಯ 'ಡಬ್ಲ್ಯುಟಿಎಫ್' ಪಾಡ್‌ಕಾಸ್ಟ್ ಸಂದರ್ಶನ ಸರಣಿಯ 20ನೇ ಸಂಚಿಕೆಯಲ್ಲಿ ಅತಿಥಿಗಳಾಗಿದ್ದಾರೆ. 'ಫಸ್ಟ್ ಎವೆರ್ ಕಪಲ್ಸ್ ಎಪಿಸೋಡ್' ಶೀರ್ಷಿಕೆಯ 1.37 ನಿಮಿಷದ ಟ್ರೇಲರ್ ಈಗಷ್ಟೇ ಬಿಡುಗಡೆಯಾಗಿದ್ದು, ಮೂವರ ನಡುವಿನ ಹರಟೆ, ಚೇಷ್ಟೆ, ಲಘುವಾದ ಮಾತುಕತೆ ವೀಕ್ಷಕರಲ್ಲಿ ಹಾಸ್ಯದ ಹೊನಲು ಹರಿಸುವಂತಿದೆ. ಕಾಮತ್, ಮದುವೆ, ಸಂಗಾತಿ, ಭಾವನೆಗಳು, ಪರಸ್ಪರ ಅವಲಂಬನೆ ಕುರಿತು ರಿಷಿ-ಅಕ್ಷತಾ ದಂಪತಿಯನ್ನು ಪ್ರಶ್ನೆ ಮಾಡಿದ್ದಾರೆ. 'ಮದುವೆ ಬಗ್ಗೆ ಯೋಚಿಸಿದಾಗ, ಒಂಟಿತನ ಇಲ್ಲವಾಗಿಸಲು ಮತ್ತು ಕುಟುಂಬದಲ್ಲಿನ ನೆಮ್ಮದಿಯ ಕಾರಣದಿಂದಾಗಿ ಮದುವೆ ಅಗತ್ಯ ಎನ್ನುವುದು ನನ್ನ ಅಭಿಪ್ರಾಯ. ಅದು ಬದುಕಿನ ಉತ್ತಮ ಮಾರ್ಗ' ಎಂದು ರಿಷಿ ಮದುವೆ-ಸಂಸಾರದ ಬಗ್ಗೆ ಪ್ರತಿಕ್ರಿಯಿಸಿದ್ದಾರೆ.

'ಜನರು ಜೀವನ ಸಂಗಾತಿ ಬಗ್ಗೆ ಮಾತನಾಡುತ್ತಾರೆ, ನೀವು ಯಾವುದೇ ಪದವನ್ನಾದರೂ ಬಳಸಿ, ಸೋಲ್‌ಮೇಟ್ ಎಂದೇ ದಾಂಪತ್ಯದ ಸಂಗಾತಿಯನ್ನು ಕರೆಯಲಾಗುತ್ತದೆ' ಎಂದು ಅಕ್ಷತಾ ಹೇಳಿದ್ದಾರೆ.

ಅಕ್ಷತಾ ನಮ್ಮ ಮನೆಯಿಂದ ಕೇವಲ 5 ನಿಮಿಷ ದೂರದ

ಜಯನಗರದಲ್ಲಿ ಬೆಳೆದವರು. ರಿಷಿ ಯುಕೆಯ ಭಾರತ ಮೂಲದ ಪ್ರಧಾನಿ ಆದವರು. ಇಬ್ಬರೂ 20 ವರ್ಷಗಳಿಂದ ಜತೆಗಿದ್ದಾರೆ. ಐಸ್‌ಕ್ರೀಮ್ ರುಚಿಗಳ ಬಗ್ಗೆ ಚರ್ಚೆ ಮಾಡುತ್ತಾರೆ. ಪ್ರಧಾನಿ ಹುದ್ದೆಯಿಂದ ನಿರ್ಗಮಿಸಿದಾಗ ಏನು ಅನಿಸಿತು ಎಂಬ ಬಗ್ಗೆಯೂ ನಾವಿಲ್ಲಿ ಮಾತನಾಡಿದ್ದೇವೆ. ಮುಂದೆ ಏನು ಎಂಬ ಕುರಿತೂ ಅವರನ್ನು ಪ್ರಶ್ನೆ ಮಾಡಿರುವೆ. ಇದುವೇ ನಮ್ಮಲ್ಲಿನ ಮೊದಲ 'ಕಪಲ್ ಎಪಿಸೋಡ್' ಎಂದು ನಿಖಿಲ್ ಕಾಮತ್ ಟ್ರೇಲರ್‌ನಲ್ಲಿ ಹೇಳಿದ್ದಾರೆ.

ನೆಟ್ಟಿಗರ ಪ್ರತಿಕ್ರಿಯೆ: 'ಡಬ್ಲ್ಯುಟಿಎಫ್' ಸರಣಿಯಲ್ಲಿ ರಿಷಿ-ಅಕ್ಷತಾ ಸಂದರ್ಶನ ಬರಲಿರುವುದಕ್ಕೆ ನೆಟ್ಟಿಗರು ಅಚ್ಚರಿ, ಖುಷಿ, ನಿರೀಕ್ಷೆಗಳನ್ನು ವ್ಯಕ್ತಪಡಿಸಿದ್ದಾರೆ. ನಿಖಿಲ್ ಯಾವಾಗಲೂ ಸಂದರ್ಶನಕ್ಕೆ ಅತಿಥಿಗಳ ಆಯ್ಕೆ ವಿಚಾರದಲ್ಲಿ ಅಚ್ಚರಿ ಉಂಟು ಮಾಡುತ್ತಾರೆ. ಇದರ ನಂತರ, ಟ್ರಂಪ್-ಮೆಲೆನಿಯಾ ಸಂದರ್ಶನ ಮಾಡುವಿರಾ? ಎಂದೂ ನೆಟ್ಟಿಗರೊಬ್ಬರು ನಿಖಿಲ್‌ಗೆ ಪ್ರಶ್ನೆ ಮಾಡಿದ್ದಾರೆ.

ರಿಷಿಗೆ ಕನ್ನಡ ತಿಳಿಯಲ್ಲ: ಅಕ್ಷತಾ

ಈ ಪಾಡ್‌ಕಾಸ್ಟ್ ಸಂದರ್ಶನದಲ್ಲಿ ಕೆಲವು ಕ್ಷಣ ನಿಖಿಲ್ ಕಾಮತ್ ಮತ್ತು ಅಕ್ಷತಾ ಮೂರ್ತಿ ಇಬ್ಬರೂ ಮಾತೃಭಾಷೆ ಕನ್ನಡದಲ್ಲಿ ಮಾತನಾಡುತ್ತಾರೆ. ಆಗ ರಿಷಿ ಸುನಕ್ ಸುಮ್ಮನೆ ಕುಳಿತಿರುತ್ತಾರೆ. ಕಾಮತ್ ಕಡೆಗೆ ಬೆರಳು ತೋರಿದ ಅಕ್ಷತಾ 'ನನಗೆ ಕನ್ನಡ ಗೊತ್ತು, ನಿಮಗೂ ಗೊತ್ತು' ಎನ್ನುತ್ತಾರೆ. ಬಳಿಕ ರಿಷಿ ಕಡೆ ತಿರುಗಿ, 'ಈಗ ನಾನು, ನಿಖಿಲ್ ಮಾತನಾಡಿದ್ದು ಏನಾದರೂ ಅರ್ಥವಾಯಿತಾ?' ಎಂದು ಇಂಗ್ಲಿಷ್‌ನಲ್ಲಿ ಕೇಳುತ್ತಾರೆ. ಆಗ ರಿಷಿ, 'ಏನೂ ಅರ್ಥವಾಗಿಲ್ಲ' ಎನ್ನುತ್ತಾರೆ. ಬಳಿಕ ನಿಖಿಲ್, ಅಕ್ಷತಾರನ್ನು ಉದ್ದೇಶಿಸಿ, 'ನಾವು ಕನ್ನಡದಲ್ಲಿ ರಿಷಿ ಬಗ್ಗೆ ಏನು ಬೇಕಾದರೂ ಮಾತನಾಡಬಹುದೇ?' ಎಂದು ಕನ್ನಡದಲ್ಲಿ ಕೇಳುತ್ತಾರೆ. ಅಕ್ಷತಾ ನಗುತ್ತಾ, 'ಏನು ಬೇಕಾದರೂ ಹೇಳಬಹುದು, ಅವನಿಗೆ(ರಿಷಿಗೆ) ಕನ್ನಡ ಗೊತ್ತಾಗಲ್ಲ' ಎಂದು ಜೋರಾಗಿ ನಗುತ್ತಾರೆ.

ಪಶ್ಚಿಮ ಏಷ್ಯಾ ಯುದ್ಧ- ಸರಕಾರದ ನಿಲುವಿಗೆ ಟೀಕೆ

ವಿದೇಶಾಂಗ ನೀತಿ ಅಲ್ಲ, ಮೋದಿ ನೀತಿ

ವಡೋದರಾ: ಭಾರತ ಸರಕಾರಕ್ಕೆ ಸ್ಪಷ್ಟವಾದ ವಿದೇಶಾಂಗ ನೀತಿಯೇ ಇಲ್ಲ. ಈಗ ಇರುವುದು ವಿದೇಶಾಂಗ ನೀತಿಯಲ್ಲ, ಪ್ರಧಾನಿ ಮೋದಿ ಅವರ ವೈಯಕ್ತಿಕ

ನೀತಿಯಾಗಿದೆ. ಮತ್ತು ಅದೊಂದು 'ಜಾಗತಿಕ ಮಟ್ಟದ ಜೋಕ್' ಆಗಿದೆ ಎಂದು ಲೋಕಸಭೆ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಟೀಕೆಗಳ ಮಳೆಗರೆದಿದ್ದಾರೆ. ಗುಜರಾತ್ ರಾಜ್ಯದ ವಡೋದರಾ ನಗರದಲ್ಲಿ ಮಂಗಳವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ರಾಹುಲ್ ಗಾಂಧಿ, ಪ್ರಧಾನಿ ನರೇಂದ್ರ ಮೋದಿ ಲೋಕಸಭೆಯಲ್ಲಿ ಮಂಗಳವಾರ 25 ನಿಮಿಷ ಭಾಷಣ ಮಾಡಿದ್ದಾರೆಂದು ಕೇಳಿರುವೆ. ಆ ಭಾಷಣದಲ್ಲಿ ದೊಡ್ಡ ಕೊರತೆ ಕಾಣುತ್ತಿದೆ. ಅಮೆರಿಕವನ್ನಾಗಲೀ, ಡೊನಾಲ್ಡ್ ಟ್ರಂಪ್ ಅವರನ್ನಾಗಲೀ ಭಾಷಣದಲ್ಲಿ ಎಲ್ಲಿಯೂ ಉಲ್ಲೇಖಿಸಿಯೇ ಇಲ್ಲ. ಏಕೆಂದರೆ ಮೋದಿ ಪೂರ್ಣವಾಗಿ ಟ್ರಂಪ್ ನಿಯಂತ್ರಣದಲ್ಲಿದ್ದಾರೆ ಎಂದು ಟೀಕಿಸಿದ್ದಾರೆ.

ಸಂಸತ್ತಿನ ಚರ್ಚೆಗಳಲ್ಲಿ ಭಾಗವಹಿಸಲು ಪ್ರಧಾನಿ ಮೋದಿಗೆ ಸಾಧ್ಯವಿಲ್ಲ, ಏಕೆಂದರೆ ಅವರು ಅಮೆರಿಕಕ್ಕೆ ಶರಣಾಗಿದ್ದಾರೆ. ಮೋದಿ ಅವರ ಈ ಮೌನ ದೇಶಕ್ಕೆ ಗಂಭೀರ ಸಮಸ್ಯೆಯಿರುವುದರ ಸೂಚನೆ ಎಂದು ಕಿಡಿಕಾರಿದ್ದಾರೆ. ಅಮೆರಿಕ ಜತೆ ಕೇಂದ್ರ ಸರಕಾರ ಮಾಡಿಕೊಂಡಿರುವ ವ್ಯಾಪಾರ ಒಪ್ಪಂದ ನಮ್ಮ ರೈತರ ಮೇಲೆ ತೀವ್ರ ಪರಿಣಾಮ ಬೀರಲಿವೆ. ಅಮೆರಿಕದ ಕೃಷಿ ಉತ್ಪನ್ನಗಳಿಗೆ ಭಾರತದ ಮಾರುಕಟ್ಟೆ ಪ್ರವೇಶಕ್ಕೆ ಅವಕಾಶ ನೀಡಿರುವುದರಿಂದ ನಮ್ಮ ರೈತರಿಗೆ ಅಪಾಯ ಖಚಿತ ಎಂದರು.

'ಆದಿವಾಸಿ' ಎಂದರೆ ಭಾರತದ ಮೂಲ ನಿವಾಸಿಗಳು. ರು. ಆದರೆ ಆರ್‌ಎಸ್‌ಎಸ್-ಬಿಜೆಪಿ 'ವನವಾಸಿ' ಎಂಬ ಹೊಸ ಪದ ಬಳಸಿವೆ. ಇದು ಕೇವಲ ಅರಣ್ಯದಲ್ಲಿ ವಾಸಿಸುವವರು. ಸಂಪನ್ಮೂಲಗಳ ಮಾಲೀಕರಲ್ಲ ಎಂಬ ಅರ್ಥ ನೀಡುತ್ತದೆ. ಆದಿವಾಸಿ ಗುರುತಿನ ಅರ್ಥವನ್ನು ಬದಲಾಯಿಸಿಬಿಡುತ್ತದೆ ಎಂದು ಹೇಳಿದರು.

ಮಾ.26, 27ಕ್ಕೆ ಜಿಬಿಎ ಬಜೆಟ್ ಮಂಡನೆ?

ಬೆಂಗಳೂರು: ಜಿಬಿಎ ವ್ಯಾಪ್ತಿಯಲ್ಲಿರುವ ಐದು ನಗರ ಪಾಲಿಕೆಗಳ ಬಜೆಟ್ ಮಾ.26 ಹಾಗೂ 27 ರಂದು ಮಂಡನೆಯಾಗಲಿದ್ದು, ಜಿಬಿಎ ರಚನೆಯಾದ ನಂತರದ ಮೊದಲ ಬಜೆಟ್ ಮಂಡನೆಗೆ ಮುಹೂರ್ತ ನಿಗದಿಯಾಗಿದೆ ಎಂದು ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಪ್ರಕಟಿಸಿದ್ದಾರೆ.

ಮಾ.26 ಗುರುವಾರ ಹಾಗೂ ಮಾ. 27 ಶುಕ್ರವಾರ ಎರಡು ದಿನಗಳ ಕಾಲ ಬಜೆಟ್ ಮಂಡನೆ ನಡೆಯಲಿದ್ದು, ಮೊದಲ ದಿನವಾದ ಗುರುವಾರ (ಮಾ.26) ಎರಡು ನಗರ ಪಾಲಿಕೆಗಳ ಬಜೆಟ್ ಮಂಡನೆ ನಡೆಯಲಿದ್ದು, ಎರಡನೇ ದಿನವಾದ ಶುಕ್ರವಾರ (ಮಾ.27) ಉಳಿದ ಮೂರು ನಗರ ಪಾಲಿಕೆಗಳ ಬಜೆಟ್ ಮಂಡನೆ ನಡೆಯಲಿದೆ. ಪ್ರತಿ ನಗರ ಪಾಲಿಕೆಯೂ ತಮ್ಮ ತಮ್ಮ ವಲಯ ಮಟ್ಟದಲ್ಲಿ ಬಜೆಟ್ ಮಂಡನೆಗೆ ಸಿದ್ಧತೆಗಳನ್ನು ಪೂರ್ಣಗೊಳಿಸಿದೆ. ಈಗಾಗಲೇ ಆಡಳಿತಾಧಿಕಾರಿಗಳ ಅನುಮೋದನೆ ಕೂಡ ದೊರೆತಿದೆ.ಆಯಾ ವಲಯದ ಹಣಕಾಸು ವಿಭಾಗದ ಮುಖ್ಯಸ್ಥರು ಬಜೆಟ್ ಮಂಡಿಸಲಿದ್ದಾರೆ ಎಂದು ತಿಳಿಸಿದ್ದಾರೆ.

ಪ್ರತಿಯೊಂದು ಪಾಲಿಕೆಗಳ ಆಯವ್ಯಯ ಬಜೆಟ್ 4 ರಿಂದ 6 ಸಾವಿರ ಕೋಟಿ ಆಗಿರಲಿದ್ದು, ಆಯಾ ಪಾಲಿಕೆಗಳು ಆದಾಯ ಸ್ವೀಕೃತಿ, ವೆಚ್ಚ ಆಧರಿಸಿ ಬಜೆಟ್ ಗಾತ್ರವನ್ನು ಸಿದ್ಧಪಡಿಸಿವೆ. ರಸ್ತೆಗಳ ಅಭಿವೃದ್ಧಿ, ಪಾದಚಾರಿ ಮಾರ್ಗಗಳ ನಿರ್ಮಾಣ, ಕೆರೆಗಳ ಅಭಿವೃದ್ಧಿ, ಉದ್ಯಾನ, ಶಾಲಾ-ಕಾಲೇಜುಗಳ ನಿರ್ವಹಣೆ, ಕಸದ ಸಮಸ್ಯೆ ಹಾಗೂ ಇನ್ನಿತರೆ ಮೂಲಸೌಕರ್ಯಗಳ ಕೊರತೆಗಳ ನಿವಾರಣೆಗೆ ಬಜೆಟ್‌ನಲ್ಲಿ ಹೆಚ್ಚಿನ ಆದ್ಯತೆ ನೀಡಲಿವೆ. ಮಾ.25ರಂದು ಪೂರ್ವ ನಗರ ಪಾಲಿಕೆ ಹಾಗೂ ದಕ್ಷಿಣ ನಗರ ಪಾಲಿಕೆಯು ಬಜೆಟ್ ಮಂಡಿಸಲಿವೆ. ಮಾ.26ರಂದು ಉತ್ತರ, ಪಶ್ಚಿಮ ಮತ್ತು ಕೇಂದ್ರ ನಗರ ಪಾಲಿಕೆಗಳು ಆಯವ್ಯಯ ಮಂಡಿಸಲು ತಯಾರಿ ಮಾಡಿಕೊಂಡಿವೆ.

ಪಿಪಿಪಿ ಮಾದರಿಯಲ್ಲಿ ಮುಂದುವರಿಸುವ ಬಗ್ಗೆ ಪರಿಶೀಲನೆ: ಡಿಸಿಎಂ ಡಿಕೆಶಿ

ವೈಮಾನಿಕ ತರಬೇತಿ ಕೇಂದ್ರ ಸ್ಥಳಾಂತರವಿಲ್ಲ

ವಿಶ್ವವಾಣಿ ಸುದ್ದಿಮನೆ ವಿಧಾನಸಭೆ

ಬೆಂಗಳೂರು ನಗರದಲ್ಲಿರುವ ಪ್ರತಿಷ್ಠಿತ ಜಕ್ಕೂರು ವೈಮಾನಿಕ ತರಬೇತಿ ಕೇಂದ್ರ ಸ್ಥಳಾಂತರಿಸುವ ಪ್ರಸ್ತಾಪ ಸರಕಾರದ ಮುಂದಿಲ್ಲ ಎಂದು ಬೆಂಗಳೂರು ಅಭಿವೃದ್ಧಿ ಸಚಿವರಾದ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸ್ಪಷ್ಟಪಡಿಸಿದ್ದಾರೆ.

ಬೆಂಗಳೂರಿನ ಸಮಸ್ಯೆಗಳು ಮತ್ತು ಅಭಿವೃದ್ಧಿಯ ಕುರಿತು ವಿಧಾನಸಭೆಯಲ್ಲಿ ನಿಯಮ 69 ಅಡಿ ಸಾರ್ವಜನಿಕ ಮಹತ್ವದ ವಿಚಾರವನ್ನಾಗಿ ಚರ್ಚೆ ಕೈಗೆತ್ತಿಕೊಂಡ ವೇಳೆ ಪ್ರತಿಪಕ್ಷದವರು ಮಾತನಾಡಿ, ಬಡವರ ಮಕ್ಕಳು ವೈಮಾನಿಕ ತರಬೇತಿ ಪಡೆಯಲಿಕ್ಕಾಗಿ ಹಿಂದೆ ಮೈಸೂರು ಮಹಾರಾಜರು 1940ರಲ್ಲಿ ಅರಣ್ಯ ಇಲಾಖೆಗೆ ಸೇರಿದ 377 ಎಕರೆ ಜಮೀನನ್ನು ಡಿ ನೋಟಿಸಿಕೇಷನ್ ಮಾಡಿ ವೈಮಾನಿಕ ತರಬೇತಿ ಕೇಂದ್ರಕ್ಕಾಗಿ ನೀಡಿದ್ದರು. ಆಗಿನ ಪ್ರಧಾನಿ ಜವಾಹರ ಲಾಲ್ ನೆಹರು ವೈಮಾನಿಕ ತರಬೇತಿ ಕೇಂದ್ರಕ್ಕೆ ಅಡಿಗಲ್ಲು ಹಾಕಿದರು. ಆದರೆ ಈಗ ಡಿ.ಕೆ. ಶಿವಕುಮಾರ್ ಅವರು ಆ ಕಲ್ಲನ್ನು ಕಿತ್ತು ಹಾಕುತ್ತಿದ್ದಾರೆ ಎಂದು ಆರೋಪಿಸಿದರಲ್ಲದೆ, ಕೇಂದ್ರಕ್ಕೆ ಈಗ 217 ಎಕರೆ ಭೂಮಿ ಇದೆ. ಅದರ ಮೇಲೆ ಡಿ.ಕೆ.

- ವೈಮಾನಿಕ ತರಬೇತಿ ಕೇಂದ್ರವನ್ನು ಶಿವಮೊಗ್ಗ, ಹಾಸನ, ಮೈಸೂರು ಸೇರಿ ಬೇರೆ ಕಡೆಗೆ ಸ್ಥಳಾಂತರಿಸಲು ಕ್ರಮ ಕೈಗೊಳ್ಳುವಂತೆ ಸಿಎಂಗೆ ಪತ್ರ
- ಜಕ್ಕೂರಿನ ಜಾಗದಲ್ಲಿ ಬೃಹತ್ ಕ್ರೀಡಾ ಸಂಕೀರ್ಣ ನಿರ್ಮಾಣ ಮಾಡಲು ಸಲಹೆ

ಶಿವಕುಮಾರ್ ಅವರ ಕಣ್ಣು ಬಿದ್ದಿದೆ ಎಂದು ವರದಿಯಾಗಿದೆ. ಇದು ನಿಜವೇ ಎಂದು ಪ್ರಶ್ನಿಸಿದರು.

ಕಾಂಗ್ರೆಸ್ ಶಾಸಕ ಬಸವರಾಜ ರಾಯರಡ್ಡಿ, ಡಿ.ಕೆ.ಶಿವಕುಮಾರ್ ಅವರು ಜಕ್ಕೂರಿನ ವೈಮಾನಿಕ ತರಬೇತಿ ಕೇಂದ್ರದ ಜಾಗದ ಮೇಲೆ ಕಣ್ಣು ಹಾಕಿಲ್ಲ, ಅದನ್ನು ಉಳಿಸಬೇಕು ಎಂದು ಪ್ರಯತ್ನ ಮಾಡುತ್ತಿದ್ದಾರೆ ಎಂದು ಸ್ಪಷ್ಟನೆ ನೀಡಿದರು.

ಇಂಧನ ಸಚಿವ ಕೆ.ಜೆ.ಜಾರ್ಜ್, ತಾವು ತರಬೇತಿ ಕೇಂದ್ರದ ಕ್ಲಬ್‌ಗೆ ಸಲಹಾ ಸಮಿತಿಯ ಸದಸ್ಯನಾಗಿದ್ದು ವಾಸ್ತವ ಅಂಶದ ಅರಿವಿದೆ. ಜಕ್ಕೂರು ಏರೋ ಡ್ರಮ್‌ನ ಸಮೀಪ ರಾಷ್ಟ್ರೀಯ ಹೆದ್ದಾರಿ ರಸ್ತೆ ಮತ್ತು ಮೆಟ್ರೋ ರೈಲು ಮಾರ್ಗದ ಮೇಲು ಸೇತುವೆಗಳು ಹಾದುಹೋಗಿವೆ. ಹೀಗಾಗಿ ಅಲ್ಲಿ ವಿಮಾನಗಳ ಹಾರಾಟಕ್ಕೆ ಡಿಜಿಸಿಎ ಅನುಮತಿ ನೀಡುತ್ತಿಲ್ಲ. ಈ ಎಲ್ಲಾ ಹಿನ್ನೆಲೆಯಲ್ಲಿ ವೈಮಾನಿಕ ತರಬೇತಿ ಕೇಂದ್ರವನ್ನು ಶಿವಮೊಗ್ಗ, ಹಾಸನ, ಮೈಸೂರು ಸೇರಿದಂತೆ ಬೇರೆ ಕಡೆಗೆ ಸ್ಥಳಾಂತರಿಸಲು ಕ್ರಮ ಕೈಗೊಳ್ಳುವಂತೆ ಮುಖ್ಯಮಂತ್ರಿ ಯವರಿಗೆ ಪತ್ರ ಬರೆದಿದ್ದೇನೆ. ಅಲ್ಲದೆ, ಜಕ್ಕೂರಿನ ಜಾಗದಲ್ಲಿ ಬೃಹತ್ ಕ್ರೀಡಾ ಸಂಕೀರ್ಣ ನಿರ್ಮಾಣ ಮಾಡಲು ಸಲಹೆ ನೀಡಿದ್ದೇನೆ ಎಂದು ಹೇಳಿದರು.

ಜಾರ್ಜ್ ಅವರು ಪದೇ ಪದೆ ಅಶೋಕ ಅವರ ಮಾತುಗಳಿಗೆ ಅಡ್ಡಿಪಡಿಸಿ, ಸ್ಪಷ್ಟನೆ ನೀಡುವಾಗ ಮಧ್ಯಪ್ರವೇಶಿಸಿದ ಬಿಜೆಪಿಯ ಸುರೇಶ್ ಕುಮಾರ್, ಕುಂಬಳಕಾಯಿ ಎಂದು ಮಾತ್ರವೇ ನಾವು ಹೇಳುತ್ತಿದ್ದೇವೆ. ಸಚಿವರು ಹೆಗಲು ಮುಟ್ಟಿ ನೋಡಿಕೊಳ್ಳುತ್ತಿರುವುದೇಕೆ? ಎಂದು ಪ್ರಶ್ನಿಸಿದರು.

ಡಿ.ಕೆ.ಶಿವಕುಮಾರ್ ಮಧ್ಯಪ್ರವೇಶಿಸಿ, ದಾಖಲೆಗಳಿಗೆ ತಪ್ಪು ಮಾಹಿತಿ ಹೋಗಬಾರದು ಎಂದು ಸ್ಪಷ್ಟನೆ ನೀಡುತ್ತಿದ್ದೇನೆ. ಜಕೂರು ವೈಮಾನಿಕ ತರಬೇತಿ ಕೇಂದ್ರವನ್ನು ಸ್ಥಳಾಂತರಿಸುವ ಪ್ರಸ್ತಾವನೆ ಸರಕಾರದ ಮುಂದಿಲ್ಲ. ಪಿಪಿಪಿ ಮಾದರಿಯಲ್ಲಿ ಕೇಂದ್ರವನ್ನು ಮುಂದುವರಿಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ. ಸ್ಥಳೀಯ ಶಾಸಕರು ಆಗಿರುವ ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರ ಅಭಿಪ್ರಾಯಗಳಿಗೆ ತಮ್ಮ ಸಹಮತ ಇದೆ ಎಂದು ಹೇಳಿದರು.

ಸರಕಾರಕ್ಕೆ ತರಬೇತಿ ಕೇಂದ್ರವನ್ನು ಸ್ಥಳಾಂತರ ಮಾಡಬಾರದು ಎಂಬ ಆಶಯವಿದ್ದಿದ್ದರೆ ಯುವಜನ ಸಬಲೀಕರಣ ಹಾಗೂ ಕ್ರೀಡಾ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರು ಮೈಸೂರಿಗೆ ಕೇಂದ್ರ ಸ್ಥಳಾಂತರಿಸುವ ಬಗ್ಗೆ ಸಭೆ ನಡೆಸಿದ್ದೇಕೆ? ಕೇಂದ್ರದ ವಿಮಾನ ಹಾರಾಟದ ಪಥದಲ್ಲಿ ಒಂದು ಕಿಲೋಮೀಟರ್ ದೂರ ಅತಿ ಎತ್ತರದ ಕಟ್ಟಡಗಳ ನಿರ್ಮಾಣಕ್ಕೆ ಅವಕಾಶ ಇಲ್ಲ. ಅದನ್ನು ಹೊರತುಪಡಿಸಿದರೆ ಸುತ್ತಮುತ್ತ ಅತಿ ಎತ್ತರದ ನಿರ್ಮಾಣಗಳಿಗೆ ಯಾವುದೇ ಅಡಚಣೆ ಇಲ್ಲ. ಆದರೂ ರಿಯಲ್ ಎಸ್ಟೇಟ್ ಮಾಫಿಯಾ ಈ ಕೇಂದ್ರವನ್ನು ಸ್ಥಳಾಂತರ ಮಾಡಿಸುವ ಹುನ್ನಾರ ನಡೆಸಿದೆ.

-ಆರ್.ಅಶೋಕ್, ಪ್ರತಿಪಕ್ಷ ನಾಯಕ

ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯಲ್ಲಿನ ಮಕ್ಕಳ ಆರೈಕೆ ಘಟಕ ಕಪೂರ್ ವಾರ್ಡ್‌ಗೆ ಕೆಎಸ್‌ಆರ್‌ಪಿ 12ನೇ ಪಡೆ ತುಮಕೂರಿನ ಕಮಾಂಡೆಂಟ್ ಹಂಜಾ ಹುಸೇನ್ ಅವರು ಭೇಟಿ ಮಾಡಿ ರೋಗಿಗಳ ಆರೋಗ್ಯ ವಿಚಾರಿಸಿದರು. ಸಂಸ್ಥೆ ನಿರ್ದೇಶಕ ಡಾ.ಟಿ.ನವೀನ್, ಸಂಸ್ಥೆಯ ಓರಲ್ ಅಂಕಾಲಜಿ ವಿಭಾಗದ ಮುಖ್ಯಸ್ಥ ಡಾ.ನದೀಮುಲ್ ಹೂಡಾ, ವೈದ್ಯರಾದ ಡಾ.ಅರುಣ್ ಕುಮಾರ್, ಡಾ.ಮಹಾಂತೇಶ್ ಇದ್ದರು.

ಆರ್‌ಸಿಬಿಗೆ ಕೆಎಂಎಫ್ ಪ್ರಾಯೋಜಕತ್ವ ಸಾಥ್

ಬೆಂಗಳೂರು: ಐಪಿಎಲ್ ಹಬ್ಬಕ್ಕೆ ದಿನಗಣನೆ ಆರಂಭವಾಗಿದ್ದು, ಈ ಬಾರಿಯ ಐಪಿಎಲ್‌ನಲ್ಲಿ ಕೆಎಂಎಫ್ ಆರ್‌ಸಿಬಿಗೆ ಸಾಥ್ ನೀಡಿದೆ.

2026ರ ಆವೃತ್ತಿಯಲ್ಲಿ ಆರ್‌ಸಿಬಿಗೆ ಕೆಎಂಎಫ್ ಪ್ರಾಯೋಜಕತ್ವ ನೀಡಿದ್ದು, ಒಟ್ಟು 4 ಕೋಟಿ ರು. ವೆಚ್ಚದಲ್ಲಿ ಒಂದು ವರ್ಷದ ಟೆಂಡರ್ ಪಡೆದಿದೆ. ಆ ಮೂಲಕ ನಂದಿನಿ ಉತ್ಪನ್ನಗಳು ದೇಶಕ್ಕೆ ಪರಿಚಯವಾಗಲಿದೆ. ಆರ್‌ಸಿಬಿ ಅತಿ ಹೆಚ್ಚು ಅಭಿಮಾನಿಗಳನ್ನು ಹೊಂದಿರುವ ತಂಡವಾಗಿರುವುದರಿಂದ ಪ್ರಾಯೋಜಕತ್ವ ನೀಡುವ ಮೂಲಕ ಅಂತಾರಾಷ್ಟ್ರೀಯ ಮಟ್ಟದಲ್ಲಿ ನಂದಿನಿ ಉತ್ಪನ್ನ ಪರಿಚಯಕ್ಕೆ ಮುಂದಾಗಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕ ಶಿವಸ್ವಾಮಿ, 2026ರ ಆವೃತ್ತಿಯಲ್ಲಿ ಆರ್‌ಸಿಬಿಗೆ ಕೆಎಂಎಫ್ ಪ್ರಾಯೋಜಕತ್ವ ನೀಡಿದ್ದು, ಈ ಮೂಲಕ ನಂದಿನಿ ಉತ್ಪನ್ನಗಳು ದೇಶಕ್ಕೆ ಪರಿಚಯವಾಗಲಿದೆ. ಆರ್‌ಸಿಬಿ ಅತಿ ಹೆಚ್ಚು ಅಭಿಮಾನಿಗಳನ್ನು ಹೊಂದಿರುವ ತಂಡ, ಹಾಗಾಗಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ನಂದಿನಿ ಉತ್ಪನ್ನ ಪರಿಚಯವಾಗಲಿದೆ. ವಿರಾಟ್ ಕೊಹ್ಲಿ, ರಜತ್ ಪಾಟಿದಾರ್, ದೇವದತ್ತ ಪಡಿಕಲ್ ಸೇರಿ ಹಲವು ಆರ್‌ಸಿಬಿ ಆಟಗಾರರಿಂದ ಕೆಎಂಎಫ್ ಉತ್ಪನ್ನ ಪ್ರಚಾರಕ್ಕೆ ಮುಂದಾಗಿದ್ದೇವೆ. 4 ಕೋಟಿ ರು ವೆಚ್ಚದಲ್ಲಿ ಒಂದು ವರ್ಷದ ಟೆಂಡರ್ ಪಡೆದಿದೆ ಎಂದು ಮಾಹಿತಿ ನೀಡಿದ್ದಾರೆ.

ಇದೇ ವಿಷಯಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಟ್ವೀಟ್ ಮಾಡಿದ್ದು, ಕರ್ನಾಟಕದ ಹೆಮ್ಮೆಯ ನಂದಿನಿ ಬ್ರ್ಯಾಂಡ್ ಕಳೆದ ಐಪಿಎಲ್ ಸೀಸನ್‌ನ ಚಾಂಪಿಯನ್ ತಂಡ ಆರ್‌ಸಿಬಿಯ ಅಧಿಕೃತ ಡೈರಿ ಪಾಲುದಾರನಾಗಿದೆ. ನಂದಿನಿಯ ವಿಶ್ವಾಸಾರ್ಹತೆ ಮತ್ತು ಆರ್‌ಸಿಬಿಯ ಕ್ರೀಡಾ ಬದ್ಧತೆ ಈ ಬಾರಿಯ ಐಪಿಎಲ್‌ನ ಆಕರ್ಷಣೆಯ ಕೇಂದ್ರಬಿಂದುವಾಗಲಿದೆ ಎಂದಿದ್ದಾರೆ.

ಯುದ್ಧದಿಂದಾಗಿ ಎಫೆಕ್ಟ್ ಆಗಿಲ್ಲ

ಇರಾನ್ ಹಾಗೂ ಅಮೆರಿಕ, ಇಸ್ರೇಲ್ ನಡುವಿನ ಯುದ್ಧದಿಂದ ನಂದಿನಿ ಉತ್ಪನ್ನಗಳಿಗೆ ಎಫೆಕ್ಟ್ ವಿಚಾರವಾಗಿ ಮಾತನಾಡಿ,ಯುದ್ಧದಿಂದ ಹಾಲಿನ ಮಾರಾಟದಲ್ಲಿ ಯಾವುದೇ ವ್ಯತ್ಯಯವಾಗಿಲ್ಲ. 4-5 ಸಾವಿರ ಲೀಟರ್ ಹಾಲು ಮಾರಾಟ ಮಾತ್ರ ಕಡಿಮೆಯಾಗಿದೆ. ಯುದ್ಧದಿಂದಾಗಿ ನಂದಿನಿ ಉತ್ಪನ್ನಗಳಿಗೆ ದೊಡ್ಡ ಎಫೆಕ್ಟ್ ಆಗಿಲ್ಲ ಎಂದು ಸ್ಪಷ್ಟನೆ ನೀಡಿದರು. ಟಿಟಿಡಿ ತುಪ್ಪದ ಟೆಂಡರ್‌ನಲ್ಲಿ ಮಾತುಕಥೆ ನಡೆದಿದ್ದು, ಟೆಂಡರ್ ಹಾಕಿದ್ದೇವೆ ಇನ್ನು ಅಂತಿಮ ಆಗಿಲ್ಲ. ನಮ್ಮಲ್ಲಿ ಉತ್ಪಾದನೆ ಸಾಕಷ್ಟಿದೆ. ಟಿಟಿಡಿಗೆ ಬೇಕಾದಷ್ಟು ತುಪ್ಪ ಪೂರೈಕೆ ಮಾಡಲು ಶಕ್ತವಾಗಿದ್ದೇವೆ ಎಂದು ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕ ಶಿವಸ್ವಾಮಿ ಹೇಳಿದ್ದಾರೆ.

ಒಟಿಎಸ್ ಯೋಜನೆ ಪರಿಷ್ಕರಿಸಿ

ಬೆಂಗಳೂರು: ಕಲ್ಲು ಗಣಿಗಾರಿಕೆಗೆ ಸಂಬಂಧಿಸಿದಂತೆ ಅವೈಜ್ಞಾನಿಕವಾಗಿ ಜಾರಿಗೊಳಿಸಿರುವ ಒನ್ ಟೈಮ್ ಸೆಟಲ್ಮೆಂಟ್ (ಒಟಿಎಸ್) ಯೋಜನೆ ಪರಿಷ್ಕರಿಸುವುದು ಸೇರಿದಂತೆ ವಿವಿಧ ಬೇಡಿಕೆ ಈಡೇರಿಸದಿದ್ದರೆ ಕಲ್ಲು ಕ್ವಾರಿ ಮತ್ತು ಜಲ್ಲಿ ಕ್ರಷರ್ ಬಂದ್ ಮಾಡಿ ಹೋರಾಟ ನಡೆಸುವುದಾಗಿ ಕರ್ನಾಟಕ ರಾಜ್ಯ ಕಲ್ಲು ಗಣಿ ಮತ್ತು ಸ್ಟೋನ್ ಕ್ರಷರ್ ಮಾಲೀಕರ ಒಕ್ಕೂಟ ರಾಜ್ಯ ಸರಕಾರಕ್ಕೆ ಎಚ್ಚರಿಕೆ ನೀಡಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಅಧ್ಯಕ್ಷ ಡಿ.ಸಿದ್ದರಾಜು, ತಲಾತಲಾಂತರಗಳಿಂದ ಕಲ್ಲು ಗಣಿಗಾರಿಕೆಯಲ್ಲಿ ತೊಡಗಿರುವವರನ್ನು ಒಕ್ಕಲೆಬ್ಬಿಸಿ ಬಹುರಾಷ್ಟ್ರೀಯ ಕಂಪೆನಿಗಳಿಗೆ ಸರಕಾರ ರತ್ನಗಂಬಳಿ ಹಾಸುವ ಹುನ್ನಾರದಲ್ಲಿ ತೊಡಗಿದೆ. ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಲ್ಲಿ ಅರಾಜಕತೆ ಸೃಷ್ಟಿಯಾಗಿದ್ದು, ಹದಿನೈದು ದಿನಕ್ಕೊಬ್ಬರು ಕಾರ್ಯದರ್ಶಿಗಳು, ಪ್ರಧಾನ ಕಾರ್ಯದರ್ಶಿಗಳು ಬದಲಾಗುತ್ತಿದ್ದಾರೆ. ಪ್ರತಿಯೊಂದು ಜಿಲ್ಲೆಗಳ ಆಡಳಿತ ವ್ಯವಸ್ಥೆಯಲ್ಲಿ ಸಾಕಷ್ಟು ಸಮಸ್ಯೆಗಳಿವೆ. ಅಧಿಕಾರಿಗಳ ಅವೈಜ್ಞಾನಿಕ ತೀರ್ಮಾನಗಳಿಂದ ಕಲ್ಲುಗಣಿಗಾರಿಕೆಯಲ್ಲಿ ತೊಡಗಿರುವವರು ಸಂಕಷ್ಟಕ್ಕೆ ಸಿಲುಕಿದ್ದಾರೆ ಎಂದು ಹೇಳಿದರು.

ನಗರದ ಖಾಸಗಿ ಹೋಟೆಲ್‌ನಲ್ಲಿ ನಡೆದ ಸಂಘದ ಎಲ್ಲಾ ಜಿಲ್ಲೆಗಳ ಪದಾಧಿಕಾರಿಗಳ ಸಭೆಯಲ್ಲಿ ಅಧ್ಯಕ್ಷ ಡಿ.ಸಿದ್ದರಾಜು, ಗೌರವಾಧ್ಯಕ್ಷ ಸಂಜೀವ್ ವಿ. ಹಟ್ಟಿಹೊಳಿ, ಉಪಾಧ್ಯಕ್ಷರಾದ ವಾಗೀಶ್, ಅಬ್ದುಲ್ ಮಜೀದ್ ಸೇರಿದಂತೆ ಮತ್ತಿತರಿದ್ದರು.

ಕೆನರಾ ಬ್ಯಾಂಕ್ Canara Bank
(ಭಾರತ ಸರ್ಕಾರದ ಒಂದು ಉದ್ಯಮ)
ಪ್ರಧಾನ ಕಛೇರಿ: ಬೆಂಗಳೂರು

ಎಆರ್‌ಎಂ-1 ಶಾಖೆ,
2ನೇ ಮಹಡಿ, ನಂ.86, ಸ್ಪೆನ್ಸರ್ ಟವರ್,
ಎಂ.ಜಿ. ರಸ್ತೆ, ಬೆಂಗಳೂರು-560001
ದೂ: 080-25310066, ಇ-ಮೇಲ್: cb2366@canarabank.com

ಹರಾಜು ಮಾರಾಟ ಪ್ರಕಟಣೆ

ಪ್ರೊವಿಜೊ ನಿಯಮ 8(6)ರ ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002ರ ಸೆಕ್ಯೂರಿಟೈಜೇಷನ್ ಆಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸ್ಸೆಟ್ಸ್ ಆಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಆಕ್ಟ್ 2002ರ ಅಡಿಯಲ್ಲಿ ಸ್ಥಿರಾಸ್ತಿಗಳ ಇ-ಹರಾಜು ಮಾರಾಟ

ಸಾಮಾನ್ಯವಾಗಿ ಸಾರ್ವಜನಿಕರಿಗೆ, ಸಾಲಗಾರರು ಮತ್ತು ಜಾಮೀನುದಾರರಿಗೆ ಈ ಸೂಚನೆ ಮೂಲಕ ತಿಳಿಸುವುದೇನೆಂದರೆ ಭದ್ರತಾ ಸಾಲದಾತರಿಗೆ ಈ ಕೆಳಗೆ ವಿವರಿಸಿದ ಅಡಮಾನಾದ/ವಿಧಿಸಿದ ಚರಾಸ್ತಿ/ಸ್ಥಿರಾಸ್ತಿಯನ್ನು ಅಧಿಕೃತ ಅಧಿಕಾರಿ, **ಕೆನರಾ ಬ್ಯಾಂಕ್, ಎಆರ್‌ಎಂ-1 ಶಾಖೆ, ಬೆಂಗಳೂರು** ರವರು ಸ್ವಾಧೀನಪಡಿಸಿಕೊಂಡಿರುತ್ತಾರೆ ಮತ್ತು **ದಿನಾಂಕ: 16.04.2026 (ಬೆಳಿಗ್ಗೆ 10.30 ರಿಂದ 11.00 ರವರೆಗೆ)** ರಂದು ಸ್ವತ್ತನ್ನು **"ಎಲ್ಲಿದೆಯೊ ಹಾಗೆ", "ಏನಿದೆಯೊ ಹಾಗೆ","ಹೇಗಿದೆಯೋ ಹಾಗೆ"** ಆಧಾರದಲ್ಲಿ ಸಾಲ ವಸೂಲಾತಿಗಾಗಿ ಮಾರಾಟ ಮಾಡಲಾಗುವುದು ಸಂದಾಯವಾಗತಕ್ಕ ಮೊಬಲಗು: **ರೂ. 99,41,759.23 (ರೂಪಾಯಿ ತೊಂಭತ್ತೊಂಭತ್ತು ಲಕ್ಷದ ನಲವತ್ತೊಂದು ಸಾವಿರದ ಏಳುನೂರ ಐವತ್ತೊಂಭತ್ತು ಮತ್ತು ಇಪ್ಪತ್ತಮೂರು ಪೈಸೆ ಮಾತ್ರ) ಜೊತೆಗೆ ದಿನಾಂಕ: 09.03.2026** ರಂದು ಇದ್ದಂತೆ ಮತ್ತು ಜೊತೆಗೆ ಬಡ್ಡಿ ಇತರೆ ಖರ್ಚು ವೆಚ್ಚಗಳನ್ನು ಚುಕ್ತಾ ಮಾಡುವುದಕ್ಕೆ ಋಣ ಬಾಧ್ಯವಾಗಿರುತ್ತದೆ. **ಕೆನರಾ ಬ್ಯಾಂಕ್, ಎಆರ್‌ಎಂ-1 ಶಾಖೆ, ಬೆಂಗಳೂರು** ರವರಿಂದ ಸಾಲಗಾರರಾದ: **(1) ಶಕ್ತಿವೇಲ್ ನಟರಾಜನ್,** ನಂ. 105 ಸಿ ಬ್ಲಾಕ್ 1ನೇ ಮಹಡಿ, ಪೂರ್ವಿ ಲೋಟಸ್ ಅಪಾರ್ಟ್‌ಮೆಂಟ್, ಸೋಮಸಂದ್ರಪಾಳ್ಯ ಮುಖ್ಯ ರಸ್ತೆ, ಬೆಂಗಳೂರು- 560068 **(2) ಅಮೃತಾ ಶಕ್ತಿವೇಲ್,** ನಂ. 105 ಸಿ ಬ್ಲಾಕ್ 1ನೇ ಮಹಡಿ, ಪೂರ್ವಿ ಲೋಟಸ್ ಅಪಾರ್ಟ್‌ಮೆಂಟ್, ಸೋಮಸಂದ್ರಪಾಳ್ಯ ಮುಖ್ಯ ರಸ್ತೆ, ಬೆಂಗಳೂರು-560068, ಇವರುಗಳಿಗೆ ಸಾಲವನ್ನು ನೀಡಿರುತ್ತದೆ.

ಅರ್ನೆಸ್ಟ್ ಹಣವನ್ನು **M/s PSB Alliance Private Limited (https://baanknet.com/)** ಪೋರ್ಟಲ್‌ನ ಇ-ವ್ಯಾಲೆಟ್ ಮೂಲಕ ನೇರವಾಗಿ ಅಥವಾ ಚಲನ್ ಅನ್ನು ರಚಿಸುವ ಮುಖಾಂತರ RTGS/NEFT ಮೂಲಕ ಖಾತೆಯ ವಿವರಗಳಲ್ಲಿ ನಮೂದಿಸಿರುವ ಖಾತೆ ವಿವರಗಳ ಪ್ರಕಾರ **ದಿನಾಂಕ: 15.04.2026 ರ ಸಂಜೆ 6.00 ಗಂಟೆಯೊಳಗೆ** ಠೇವಣಿ ಮಾಡಬೇಕು.

(₹. ಲಕ್ಷಗಳಲ್ಲಿ)

ಕ್ರ. ಸಂ	ಸ್ಥಿರಾಸ್ತಿ/ಚರಾಸ್ತಿಗಳ ವಿವರಣೆ:	ಮೀಸಲು ಬೆಲೆ	ಇಎಂಡಿ ಮೊತ್ತ	ಬಿಡ್‌ನಲ್ಲಿ ಹೆಚ್ಚುತ್ತಿರುವ ಮೌಲ್ಯ
1	ಅಪಾರ್ಟ್‌ಮೆಂಟ್ ಫ್ಲಾಟ್ ನಂ. ಸಿ-04, ನೆಲಮಹಡಿ, ಸಿ ಬ್ಲಾಕ್, "ಕಿಂಗ್ಸ್ ಸ್ಕ್ವೇರ್", ಅಪಾರ್ಟ್‌ಮೆಂಟ್ ಸ್ವತ್ತಿನ ಸರ್ವೆ ನಂ. 189, ಈ ಆಸ್ತಿಯು ಕೋದತ್ತಿ ಗ್ರಾಮ, ವರ್ತೂರು ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ-560035 ರಲ್ಲಿದೆ. ಚಕ್ಕುಬಂದಿ : ಪೂರ್ವಕ್ಕೆ : ಶಿವನಂಜಪ್ಪ ರವರ ಭೂಮಿಯ ಸರ್ವೆ ನಂ. 188, ಪಶ್ಚಿಮಕ್ಕೆ : ಶಿವಹನುಮಂತಪ್ಪ ರವರ ಸ್ವತ್ತಿನ ಸರ್ವೆ ನಂ. 190, ಉತ್ತರಕ್ಕೆ : ಕೃಷ್ಣ ರೆಡ್ಡಿ ರವರ ಭೂಮಿಯ ಸರ್ವೆ ನಂ. 192, ದಕ್ಷಿಣಕ್ಕೆ : 40 ಅಡಿ ರಸ್ತೆ, ನಂತರ ಸರ್ವೆ ನಂ. 79	₹. 38.48	₹. 3.85	₹. 1.00
2	ಅಪಾರ್ಟ್‌ಮೆಂಟ್ ಫ್ಲಾಟ್ ನಂ. ಬಿ-04, ನೆಲಮಹಡಿ, ಬಿ ಬ್ಲಾಕ್, "ಕಿಂಗ್ಸ್ ಸ್ಕ್ವೇರ್", ಅಪಾರ್ಟ್‌ಮೆಂಟ್ ಸ್ವತ್ತಿನ ಸರ್ವೆ ನಂ. 189, ಈ ಆಸ್ತಿಯು ಕೋದತ್ತಿ ಗ್ರಾಮ, ವರ್ತೂರು ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ-560035 ರಲ್ಲಿದೆ. ಚಕ್ಕುಬಂದಿ : ಪೂರ್ವಕ್ಕೆ : ಶಿವನಂಜಪ್ಪ ರವರ ಭೂಮಿಯ ಸರ್ವೆ ನಂ. 188, ಪಶ್ಚಿಮಕ್ಕೆ : ಶಿವಹನುಮಂತಪ್ಪ ರವರ ಸ್ವತ್ತಿನ ಸರ್ವೆ ನಂ. 190, ಉತ್ತರಕ್ಕೆ : ಕೃಷ್ಣ ರೆಡ್ಡಿ ರವರ ಭೂಮಿಯ ಸರ್ವೆ ನಂ. 192, ದಕ್ಷಿಣಕ್ಕೆ : 40 ಅಡಿ ರಸ್ತೆ, ನಂತರ ಸರ್ವೆ ನಂ. 79	₹. 38.48	₹. 3.85	₹. 1.00

ಎನ್ಕಂಬರೆನ್ಸ್ ಯಾವುದಾದರೂ ಇದ್ದಲ್ಲಿ : ಬ್ಯಾಂಕಿನ ಗಮನಕ್ಕೆ ಬಂದಿಲ್ಲ.
ಮಾರಾಟದ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ, 'ಇ-ಹರಾಜು'ಲಿಂಕ್ ಪ್ರೋವೈಡೆಡ್ ಕೆನರಾ ಬ್ಯಾಂಕ್‌ರವರ ವೆಬ್‌ಸೈಟ್: **(www.canarabank.com)** ನಲ್ಲಿ ಒದಗಿಸಲಾಗಿದೆ ಅಥವಾ **M/s PSB Alliance Private Limited (https://baanknet.com/)** ಪೋರ್ಟಲ್‌ನ ಇ-ವ್ಯಾಲೆಟ್ **ಮತ್ತು ಮುಖ್ಯ ಪ್ರಬಂಧಕರು, ಕೆನರಾ ಬ್ಯಾಂಕ್, ಎಆರ್‌ಎಂ-I ಶಾಖೆ, ಬೆಂಗಳೂರು (ಮೊಬೈಲ್ ಸಂಖ್ಯೆ: 9535093706 ಮತ್ತು 9039609346)** ಯಾವುದೇ ಕೆಲಸದ ದಿನದಂದು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು.

ದಿನಾಂಕ : 24.03.2026
ಸ್ಥಳ : ಬೆಂಗಳೂರು

ಸಹಿ/- ಅಧಿಕೃತ ಅಧಿಕಾರಿ,
ಕೆನರಾ ಬ್ಯಾಂಕ್

ಕೆನರಾ ಬ್ಯಾಂಕ್ Canara Bank
(ಭಾರತ ಸರ್ಕಾರದ ಒಂದು ಉದ್ಯಮ)
ಪ್ರಧಾನ ಕಛೇರಿ: ಬೆಂಗಳೂರು

ಎಆರ್‌ಎಂ-1 ಶಾಖೆ,
2ನೇ ಮಹಡಿ, ನಂ.86, ಸ್ಪೆನ್ಸರ್ ಟವರ್,
ಎಂ.ಜಿ. ರಸ್ತೆ, ಬೆಂಗಳೂರು-560001
ದೂ: 080-25310066, ಇ-ಮೇಲ್: cb2366@canarabank.com

ಹರಾಜು ಮಾರಾಟ ಪ್ರಕಟಣೆ

ಪ್ರೊವಿಜೊ ನಿಯಮ 8(6)ರ ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002ರ ಸೆಕ್ಯೂರಿಟೈಜೇಷನ್ ಆಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸ್ಸೆಟ್ಸ್ ಆಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಆಕ್ಟ್ 2002ರ ಅಡಿಯಲ್ಲಿ ಸ್ಥಿರಾಸ್ತಿಗಳ ಇ-ಹರಾಜು ಮಾರಾಟ

ಸಾಮಾನ್ಯವಾಗಿ ಸಾರ್ವಜನಿಕರಿಗೆ, ಸಾಲಗಾರರು ಮತ್ತು ಜಾಮೀನುದಾರರಿಗೆ ಈ ಸೂಚನೆ ಮೂಲಕ ತಿಳಿಸುವುದೇನೆಂದರೆ ಭದ್ರತಾ ಸಾಲದಾತರಿಗೆ ಈ ಕೆಳಗೆ ವಿವರಿಸಿದ ಅಡಮಾನಾದ/ವಿಧಿಸಿದ ಚರಾಸ್ತಿ/ಸ್ಥಿರಾಸ್ತಿಯನ್ನು ಅಧಿಕೃತ ಅಧಿಕಾರಿ, **ಕೆನರಾ ಬ್ಯಾಂಕ್, ಎಆರ್‌ಎಂ-1 ಶಾಖೆ, ಬೆಂಗಳೂರು** ರವರು ಸ್ವಾಧೀನಪಡಿಸಿಕೊಂಡಿರುತ್ತಾರೆ ಮತ್ತು **ದಿನಾಂಕ: 16.04.2026, ಬೆಳಿಗ್ಗೆ 10.30 ರಿಂದ 11.30 ರವರೆಗೆ** [ಮಾರಾಟ ಮುಗಿಯುವವರೆಗೆ ತಲಾ 5 ನಿಮಿಷಗಳ ಅವಧಿಯ ಅನಿಯಮಿತ ವಿಸ್ತರಣೆಯೊಂದಿಗೆ], ರಂದು ಸ್ವತ್ತನ್ನು **"ಎಲ್ಲಿದೆಯೊ ಹಾಗೆ", "ಏನಿದೆಯೊ ಹಾಗೆ","ಹೇಗಿದೆಯೋ ಹಾಗೆ"** ಆಧಾರದಲ್ಲಿ ಸಾಲ ವಸೂಲಾತಿಗಾಗಿ ಮಾರಾಟ ಮಾಡಲಾಗುವುದು ಸಂದಾಯವಾಗತಕ್ಕ ಮೊಬಲಗು: **ರೂ. 1,36,55,005.69 (ರೂಪಾಯಿ ಒಂದು ಕೋಟಿ ಮೂವತ್ತಾರು ಲಕ್ಷದ ಐವತ್ತೈದು ಸಾವಿರದ ಐದು ಮತ್ತು ಅರವತ್ತೊಂಭತ್ತು ಪೈಸೆ ಮಾತ್ರ) ಜೊತೆಗೆ ದಿನಾಂಕ: 17.03.2026** ರಂದು ಇದ್ದಂತೆ ಮತ್ತು ಜೊತೆಗೆ ಬಡ್ಡಿ ಇತರೆ ಖರ್ಚು ವೆಚ್ಚಗಳನ್ನು ಚುಕ್ತಾ ಮಾಡುವುದಕ್ಕೆ ಋಣ ಬಾಧ್ಯವಾಗಿರುತ್ತದೆ. **ಕೆನರಾ ಬ್ಯಾಂಕ್, ಎಆರ್‌ಎಂ-1 ಶಾಖೆ, ಬೆಂಗಳೂರು** ರವರಿಂದ ಸಾಲಗಾರರಾದ: **(1) ಶ್ರೀ ಪ್ರಶಾಂತ್ ಗೌಡ** ಬಿನ್ ಶೇಖರ್ ಗೌಡ, **(2) ಶ್ರೀಮತಿ ಕಾವ್ಯ ಪ್ರಶಾಂತ್ ಗೌಡ** ಕೋಂ ಪ್ರಶಾಂತ್ ಗೌಡ, **ಇವರಿಬ್ಬರ ವಿಳಾಸ:** ನಂ.43, ಜನನಿ ನಿಲಯ, 5ನೇ ಕ್ರಾಸ್, ಮಂಜುನಾಥ್ ನಗರ, ರಘುವನಹಳ್ಳಿ, ಬೆಂಗಳೂರು-560062, **(3) ನಾಗರಾಜು ಟಿ (ಜಾಮೀನುದಾರರು),** ನಂ.156, ಶಾಂತಿ ವಿಲಾಸ್ ಲೇಔಟ್, 1ನೇ ಮುಖ್ಯ ರಸ್ತೆ, ಚರ್ಚ್ ಹಿಂಭಾಗ, ಕೆಂಗೇರಿ ಸ್ಯಾಟ್‌ಲೈಟ್ ಟೌನ್ ಬೆಂಗಳೂರು-560060. ಇವರುಗಳಿಗೆ ಸಾಲವನ್ನು ನೀಡಿರುತ್ತದೆ.

ಅರ್ನೆಸ್ಟ್ ಹಣವನ್ನು **M/s PSB Alliance Private Limited (https://baanknet.com/)** ಪೋರ್ಟಲ್‌ನ ಇ-ವ್ಯಾಲೆಟ್ ಮೂಲಕ ನೇರವಾಗಿ ಅಥವಾ ಚಲನ್ ಅನ್ನು ರಚಿಸುವ ಮುಖಾಂತರ RTGS/NEFT ಮೂಲಕ ಖಾತೆಯ ವಿವರಗಳಲ್ಲಿ ನಮೂದಿಸಿರುವ ಖಾತೆ ವಿವರಗಳ ಪ್ರಕಾರ **ದಿನಾಂಕ: 15.04.2026 ರ ಸಂಜೆ 4.00 ಗಂಟೆಯೊಳಗೆ** ಠೇವಣಿ ಮಾಡಬೇಕು.

(₹. ಲಕ್ಷಗಳಲ್ಲಿ)

ಕ್ರ. ಸಂ	ಸ್ಥಿರಾಸ್ತಿ ವಿವರಣೆ:	ಮೀಸಲು ಬೆಲೆ	ಇಎಂಡಿ ಮೊತ್ತ	ಬಿಡ್‌ನಲ್ಲಿ ಹೆಚ್ಚುತ್ತಿರುವ ಮೌಲ್ಯ	ಆಸ್ತಿ ಪರಿಶೀಲನಾ ದಿನಾಂಕ ಮತ್ತು ಸ್ಥಳ
1	ವಾಸಯೋಗ್ಯ ಅಪಾರ್ಟ್‌ಮೆಂಟ್ ನಂ.107, ಮೊದಲನೇ ಮಹಡಿಯು "NEHA SADAN" ಎಂದು ಕರೆಯಲ್ಪಡುವ ಅಪಾರ್ಟ್‌ಮೆಂಟ್‌ನ ಕಟ್ಟಡದಲ್ಲಿದ್ದು, 1200 ಚದರ ಅಡಿ ಸೂಪರ್ ಬಿಲ್ಟ್‌ಅಪ್ ಪ್ರದೇಶವನ್ನೊಳಗೊಂಡಿದ್ದು, ನಿವೇಶನ ನಂ.7, ಹಳೆ ಖಾತಾ ನಂ.193, ಸರ್ವೆ ನಂ.11, ಬಿಬಿಎಂಪಿ ಖಾತಾ ನಂ.730/253/254/11/7, ವಾರ್ಡ್ ನಂ.171, ಹೊಸ ಪಿಐಡಿ ನಂ.191-W 0417-35, ಈ ಆಸ್ತಿಯು ಸಿಂಗಸಂದ್ರ ಗ್ರಾಮ, ಬೇಗೂರು ಹೋಬಳಿ, ಬೆಂಗಳೂರಿನಲ್ಲಿದೆ, ಜೊತೆಗೆ ಒಂದು ಮುಚ್ಚಿದ ಕಾರು ನಿಲ್ಲಿಸುವ ಸ್ಥಳವನ್ನು ಸ್ಟಿಲ್ಟ್ ಮಹಡಿಯಲ್ಲಿ ಒಳಗೊಂಡಿದೆ ಜೊತೆಗೆ 266 ಚದರ ಅಡಿ ಅವಿಭಾಜಿತ ಭಾಗ, ಹಕ್ಕು, ಶೀರ್ಷಿಕೆ ಮತ್ತು ಹಿತಾಸಕ್ತಿಯನ್ನು ಆಸ್ತಿಯಲ್ಲಿ ಸಂಯೋಜಿಸಲಾಗಿದೆ ಮತ್ತು ಚಕ್ಕುಬಂದಿ: ಪೂರ್ವಕ್ಕೆ: ಖಾಸಗಿ ಆಸ್ತಿ, ಪಶ್ಚಿಮಕ್ಕೆ: ಕೃಷ್ಣಪ್ಪ ಅವರಿಗೆ ಸೇರಿದ ಆಸ್ತಿ, ದಕ್ಷಿಣಕ್ಕೆ: ಖಾಸಗಿ ಆಸ್ತಿ, ಉತ್ತರಕ್ಕೆ: 30 ಅಡಿ ರಸ್ತೆ. **Google Co-ordinates: 12.881415, 77.649706**	₹. 48.00 ಲಕ್ಷಗಳು	₹. 4.80 ಲಕ್ಷಗಳು	₹. 1.00 ಲಕ್ಷಗಳು	08.04.2026 ಬೆಳಿಗ್ಗೆ 10.00 ರಿಂದ ಮಧ್ಯಾಹ್ನ 2.00 ರವರೆಗೆ ಅಧಿಕೃತ ಅಧಿಕಾರಿಯವರ ಪೂರ್ವ ನಿರ್ಧರಿತದಂತೆ.

ಎನ್ಕಂಬರೆನ್ಸ್ ಯಾವುದಾದರೂ ಇದ್ದಲ್ಲಿ : ಬ್ಯಾಂಕಿನ ಗಮನಕ್ಕೆ ಬಂದಿಲ್ಲ.
ಮಾರಾಟದ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ, 'ಇ-ಹರಾಜು'ಲಿಂಕ್ ಪ್ರೋವೈಡೆಡ್ ಕೆನರಾ ಬ್ಯಾಂಕ್‌ರವರ ವೆಬ್‌ಸೈಟ್: **(www.canarabank.com)** ನಲ್ಲಿ ಒದಗಿಸಲಾಗಿದೆ ಅಥವಾ **M/s PSB Alliance Private Limited (https://baanknet.com/)** ಪೋರ್ಟಲ್‌ನ ಇ-ವ್ಯಾಲೆಟ್ **ಮತ್ತು ಮುಖ್ಯ ಪ್ರಬಂಧಕರು, ಕೆನರಾ ಬ್ಯಾಂಕ್, ಎಆರ್‌ಎಂ-I ಶಾಖೆ, ಬೆಂಗಳೂರು (ಮೊಬೈಲ್ ಸಂಖ್ಯೆ: 9535093706 ಮತ್ತು 9483544116)** ಯಾವುದೇ ಕೆಲಸದ ದಿನದಂದು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು.

ದಿನಾಂಕ : 18.03.2026
ಸ್ಥಳ : ಬೆಂಗಳೂರು

ಸಹಿ/- ಅಧಿಕೃತ ಅಧಿಕಾರಿ,
ಕೆನರಾ ಬ್ಯಾಂಕ್

ಕೆನರಾ ಬ್ಯಾಂಕ್ Canara Bank
(ಭಾರತ ಸರ್ಕಾರದ ಒಂದು ಉದ್ಯಮ)
ಪ್ರಧಾನ ಕಛೇರಿ: ಬೆಂಗಳೂರು

ಎಆರ್‌ಎಂ-1 ಶಾಖೆ,
2ನೇ ಮಹಡಿ, ನಂ.86, ಸ್ಪೆನ್ಸರ್ ಟವರ್,
ಎಂ.ಜಿ. ರಸ್ತೆ, ಬೆಂಗಳೂರು-560001
ದೂ: 080-25310066, ಇ-ಮೇಲ್: cb2366@canarabank.com

ಹರಾಜು ಮಾರಾಟ ಪ್ರಕಟಣೆ

ಪ್ರೊವಿಜೊ ನಿಯಮ 8(6)ರ ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002ರ ಸೆಕ್ಯೂರಿಟೈಜೇಷನ್ ಆಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸ್ಸೆಟ್ಸ್ ಆಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಆಕ್ಟ್ 2002ರ ಅಡಿಯಲ್ಲಿ ಸ್ಥಿರಾಸ್ತಿಗಳ ಇ-ಹರಾಜು ಮಾರಾಟ

ಸಾಮಾನ್ಯವಾಗಿ ಸಾರ್ವಜನಿಕರಿಗೆ, ಸಾಲಗಾರರು ಮತ್ತು ಜಾಮೀನುದಾರರಿಗೆ ಈ ಸೂಚನೆ ಮೂಲಕ ತಿಳಿಸುವುದೇನೆಂದರೆ ಭದ್ರತಾ ಸಾಲದಾತರಿಗೆ ಈ ಕೆಳಗೆ ವಿವರಿಸಿದ ಅಡಮಾನಾದ/ವಿಧಿಸಿದ ಚರಾಸ್ತಿ/ಸ್ಥಿರಾಸ್ತಿಯನ್ನು ಅಧಿಕೃತ ಅಧಿಕಾರಿ, **ಕೆನರಾ ಬ್ಯಾಂಕ್, ಎಆರ್‌ಎಂ-1 ಶಾಖೆ, ಬೆಂಗಳೂರು** ರವರು ಸಾಂಕೇತಿಕವಾಗಿ ಸ್ವಾಧೀನಪಡಿಸಿಕೊಂಡಿರುತ್ತಾರೆ ಮತ್ತು **ದಿನಾಂಕ: 16.04.2026 (ಬೆಳಿಗ್ಗೆ 10.30 ರಿಂದ 11.00 ರವರೆಗೆ)** ರಂದು ಸ್ವತ್ತನ್ನು **"ಎಲ್ಲಿದೆಯೊ ಹಾಗೆ", "ಏನಿದೆಯೊ ಹಾಗೆ","ಹೇಗಿದೆಯೋ ಹಾಗೆ"** ಆಧಾರದಲ್ಲಿ ಸಾಲ ವಸೂಲಾತಿಗಾಗಿ ಮಾರಾಟ ಮಾಡಲಾಗುವುದು ಸಂದಾಯವಾಗತಕ್ಕ ಮೊಬಲಗು: **ರೂ. 3,91,33,121.73 (ರೂಪಾಯಿ ಮೂರು ಕೋಟಿ ತೊಂಭತ್ತೊಂದು ಲಕ್ಷದ ಮೂವತ್ತಮೂರು ಸಾವಿರದ ಒಂದುನೂರ ಇಪ್ಪತ್ತೊಂದು ಮತ್ತು ಎಪ್ಪತ್ತಮೂರು ಪೈಸೆ ಮಾತ್ರ) ಜೊತೆಗೆ ದಿನಾಂಕ: 24.02.2026** ರಂದು ಇದ್ದಂತೆ ಮತ್ತು ಜೊತೆಗೆ ಬಡ್ಡಿ ಇತರೆ ಖರ್ಚು ವೆಚ್ಚಗಳನ್ನು ಚುಕ್ತಾ ಮಾಡುವುದಕ್ಕೆ ಋಣ ಬಾಧ್ಯವಾಗಿರುತ್ತದೆ. **ಕೆನರಾ ಬ್ಯಾಂಕ್, ಎಆರ್‌ಎಂ-1 ಶಾಖೆ, ಬೆಂಗಳೂರು** ರವರಿಂದ ಸಾಲಗಾರರಾದ: **(1) ಶ್ರೀಮತಿ. ಬಿ ಕೆ ಪ್ರೇಮಾ** ಕೋಂ ಟಿ ವರದರಾಜು, **(2) ಶ್ರೀ. ವರದರಾಜ್ ಟಿ** ಬಿನ್ ತಿಮ್ಮರಾಯಪ್ಪ, **ಇವರಿಬ್ಬರ ವಿಳಾಸ:** ನಲ್ಲೂರು ಗ್ರಾಮ, ಹನುಮನಹಳ್ಳಿ ಅಂಚೆ, ಮುಳಬಾಗಲು ತಾಲ್ಲೂಕು, ಕೋಲಾರ ಜಿಲ್ಲೆ-563127. **(3) ಶ್ರೀ.ರಘು ಕೆ** ಬಿನ್ ಜಿ ಕೃಷ್ಣಪ್ಪ, ಎಪಿಎಂಸಿ ಯಾರ್ಡ್ ಎದುರು, ಸೇಂಟ್ ಆನ್ಸ್ ಸ್ಕೂಲ್ ಮುಖ್ಯರಸ್ತೆ, ಮುಳಬಾಗಲು, ಕೋಲಾರ ಜಿಲ್ಲೆ-563131, ಇವರುಗಳಿಗೆ ಸಾಲವನ್ನು ನೀಡಿರುತ್ತದೆ.

ಅರ್ನೆಸ್ಟ್ ಹಣವನ್ನು **M/s PSB Alliance Private Limited (https://baanknet.com/)** ಪೋರ್ಟಲ್‌ನ ಇ-ವ್ಯಾಲೆಟ್ ಮೂಲಕ ನೇರವಾಗಿ ಅಥವಾ ಚಲನ್ ಅನ್ನು ರಚಿಸುವ ಮುಖಾಂತರ RTGS/NEFT ಮೂಲಕ ಖಾತೆಯ ವಿವರಗಳಲ್ಲಿ ನಮೂದಿಸಿರುವ ಖಾತೆ ವಿವರಗಳ ಪ್ರಕಾರ **ದಿನಾಂಕ: 15.04.2026 ರ ಸಂಜೆ 5.00 ಗಂಟೆಯೊಳಗೆ** ಠೇವಣಿ ಮಾಡಬೇಕು.

(₹. ಲಕ್ಷಗಳಲ್ಲಿ)

ಕ್ರ. ಸಂ	ಸ್ಥಿರಾಸ್ತಿ/ಚರಾಸ್ತಿಗಳ ವಿವರಣೆ:	ಮೀಸಲು ಬೆಲೆ	ಇಎಂಡಿ ಮೊತ್ತ	ಬಿಡ್‌ನಲ್ಲಿ ಹೆಚ್ಚುತ್ತಿರುವ ಮೌಲ್ಯ	ಆಸ್ತಿ ಪರಿಶೀಲನಾ ದಿನಾಂಕ ಮತ್ತು ಸ್ಥಳ
1	ಭೂಮಿ ಮತ್ತು ಕಟ್ಟಡದ ನಿವೇಶನ ನಂ.135/1, ಈ ಆಸ್ತಿಯು ದುಗಸಂದ್ರ ಹೋಬಳಿ, ಮುಳಬಾಗಲು ತಾಲ್ಲೂಕು, ಕೋಲಾರ ಜಿಲ್ಲೆಯಲ್ಲಿದೆ. ಭೂಮಿಯ ಒಟ್ಟು ವಿಸ್ತೀರ್ಣ 1 ಎಕರೆ 37 ಗುಂಟೆಗಳು ಮತ್ತು ಪ್ಲಾಟ್‌ನ ಒಟ್ಟು ವಿಸ್ತೀರ್ಣ 1.925 ಎಕರೆ. **Coordinates of the property Latitude- 13.162750, Longitude- 78.267083**	₹. 166.00	₹. 16.60	₹. 1.00	30.03.2026 ಬೆಳಿಗ್ಗೆ 10.00 ರಿಂದ ಮಧ್ಯಾಹ್ನ 2.00 ರವರೆಗೆ ಅಧಿಕೃತ ಅಧಿಕಾರಿಯವರ ಪೂರ್ವ ನಿರ್ಧರಿತದಂತೆ.

ಎನ್ಕಂಬರೆನ್ಸ್ ಯಾವುದಾದರೂ ಇದ್ದಲ್ಲಿ : ಬ್ಯಾಂಕಿನ ಗಮನಕ್ಕೆ ಬಂದಿಲ್ಲ.
ಮಾರಾಟದ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ, 'ಇ-ಹರಾಜು'ಲಿಂಕ್ ಪ್ರೋವೈಡೆಡ್ ಕೆನರಾ ಬ್ಯಾಂಕ್‌ರವರ ವೆಬ್‌ಸೈಟ್: **(www.canarabank.com)** ನಲ್ಲಿ ಒದಗಿಸಲಾಗಿದೆ ಅಥವಾ **M/s PSB Alliance Private Limited (https://baanknet.com/)** ಪೋರ್ಟಲ್‌ನ ಇ-ವ್ಯಾಲೆಟ್ **ಮತ್ತು ಮುಖ್ಯ ಪ್ರಬಂಧಕರು, ಕೆನರಾ ಬ್ಯಾಂಕ್, ಎಆರ್‌ಎಂ-I ಶಾಖೆ, ಬೆಂಗಳೂರು (ಮೊಬೈಲ್ ಸಂಖ್ಯೆ: 8598009010, 9966397756,8949226557 ಮತ್ತು 9039609346)** ಯಾವುದೇ ಕೆಲಸದ ದಿನದಂದು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು.

ದಿನಾಂಕ : 24.03.2026
ಸ್ಥಳ : ಬೆಂಗಳೂರು

ಸಹಿ/- ಅಧಿಕೃತ ಅಧಿಕಾರಿ,
ಕೆನರಾ ಬ್ಯಾಂಕ್

ಕೆನರಾ ಬ್ಯಾಂಕ್ Canara Bank
(ಭಾರತ ಸರ್ಕಾರದ ಒಂದು ಉದ್ಯಮ)
ಪ್ರಧಾನ ಕಛೇರಿ: ಬೆಂಗಳೂರು

ಎಆರ್‌ಎಂ-1 ಶಾಖೆ,
2ನೇ ಮಹಡಿ, ನಂ.86, ಸ್ಪೆನ್ಸರ್ ಟವರ್,
ಎಂ.ಜಿ. ರಸ್ತೆ, ಬೆಂಗಳೂರು-560001
ದೂ: 080-25310066, ಇ-ಮೇಲ್: cb2366@canarabank.com

ಹರಾಜು ಮಾರಾಟ ಪ್ರಕಟಣೆ

ಪ್ರೊವಿಜೊ ನಿಯಮ 8(6)ರ ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002ರ ಸೆಕ್ಯೂರಿಟೈಜೇಷನ್ ಆಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸ್ಸೆಟ್ಸ್ ಆಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಆಕ್ಟ್ 2002ರ ಅಡಿಯಲ್ಲಿ ಸ್ಥಿರಾಸ್ತಿಗಳ ಇ-ಹರಾಜು ಮಾರಾಟ

ಸಾಮಾನ್ಯವಾಗಿ ಸಾರ್ವಜನಿಕರಿಗೆ, ಸಾಲಗಾರರು ಮತ್ತು ಜಾಮೀನುದಾರರಿಗೆ ಈ ಸೂಚನೆ ಮೂಲಕ ತಿಳಿಸುವುದೇನೆಂದರೆ ಭದ್ರತಾ ಸಾಲದಾತರಿಗೆ ಈ ಕೆಳಗೆ ವಿವರಿಸಿದ ಅಡಮಾನಾದ/ವಿಧಿಸಿದ ಚರಾಸ್ತಿ/ಸ್ಥಿರಾಸ್ತಿಯನ್ನು ಅಧಿಕೃತ ಅಧಿಕಾರಿ, **ಕೆನರಾ ಬ್ಯಾಂಕ್, ಎಆರ್‌ಎಂ-1 ಶಾಖೆ, ಬೆಂಗಳೂರು** ರವರು ಸಾಂಕೇತಿಕವಾಗಿ ಸ್ವಾಧೀನಪಡಿಸಿಕೊಂಡಿರುತ್ತಾರೆ ಮತ್ತು **ದಿನಾಂಕ: 16.04.2026 (ಬೆಳಿಗ್ಗೆ 10.30 ರಿಂದ 11.00 ರವರೆಗೆ)** ರಂದು ಸ್ವತ್ತನ್ನು **"ಎಲ್ಲಿದೆಯೊ ಹಾಗೆ", "ಏನಿದೆಯೊ ಹಾಗೆ","ಹೇಗಿದೆಯೋ ಹಾಗೆ"** ಆಧಾರದಲ್ಲಿ ಸಾಲ ವಸೂಲಾತಿಗಾಗಿ ಮಾರಾಟ ಮಾಡಲಾಗುವುದು ಸಂದಾಯವಾಗತಕ್ಕ ಮೊಬಲಗು: **ರೂ. 8,24,36,429.67 ಜೊತೆಗೆ ದಿನಾಂಕ: 09.03.2026** ರಂದು ಇದ್ದಂತೆ ಮತ್ತು ಜೊತೆಗೆ ಬಡ್ಡಿ ಇತರೆ ಖರ್ಚು ವೆಚ್ಚಗಳನ್ನು ಚುಕ್ತಾ ಮಾಡುವುದಕ್ಕೆ ಋಣ ಬಾಧ್ಯವಾಗಿರುತ್ತದೆ. **ಕೆನರಾ ಬ್ಯಾಂಕ್, ಎಆರ್‌ಎಂ-1 ಶಾಖೆ, ಬೆಂಗಳೂರು** ರವರಿಂದ ಸಾಲಗಾರರಾದ: **(1) ಮೆ॥ ಜಾವೀದ್ ಸ್ಟೀಲ್ಸ್ ಮಾಲೀಕರು ಮೊಹಮ್ಮದ್ ಆಕಿಬ್ ಜಾವೀದ್,** ನಂ. 30, ನ್ಯೂ ಬಂಬೂಲ್ ಬಜಾರ್ ಸಿಟಿ ಮಾರ್ಕೆಟ್, ಎನ್ ಆರ್ ರಸ್ತೆ ಬೆಂಗಳೂರು-560002. **(2) ಮೊಹಮ್ಮದ್ ಆಕಿಬ್ ಜಾವೀದ್** ಬಿನ್ ಮೊಹಮ್ಮದ್ ಇರ್ಫಾನ್ ಜಾವೇದ್, **(3) ಶ್ರೀಮತಿ ಫಹ್ಮಿದಾ ಬೇಗಂ ಉರ್ಫ್ ನಿಶಾತ್ ಬೇಗಂ** ಕೋಂ ಮೊಹಮ್ಮದ್ ಇರ್ಫಾನ್ ಜಾವೀದ್, **(4) ಮೊಹಮ್ಮದ್ ಇರ್ಫಾನ್ ಜಾವೀದ್, ಇವರೆಲ್ಲರ ವಿಳಾಸ:** ನಂ.301, ತಿಮ್ಮಯ್ಯ ರಸ್ತೆ, ಸಿವಿಲ್ ಸ್ಟೇಷನ್, ಶಿವಾಜಿ ನಗರ, ಬೆಂಗಳೂರು-560046. ಇವರುಗಳಿಗೆ ಸಾಲವನ್ನು ನೀಡಿರುತ್ತದೆ.

ಅರ್ನೆಸ್ಟ್ ಹಣವನ್ನು **M/s PSB Alliance Private Limited (https://baanknet.com/)** ಪೋರ್ಟಲ್‌ನ ಇ-ವ್ಯಾಲೆಟ್ ಮೂಲಕ ನೇರವಾಗಿ ಅಥವಾ ಚಲನ್ ಅನ್ನು ರಚಿಸುವ ಮುಖಾಂತರ RTGS/NEFT ಮೂಲಕ ಖಾತೆಯ ವಿವರಗಳಲ್ಲಿ ನಮೂದಿಸಿರುವ ಖಾತೆ ವಿವರಗಳ ಪ್ರಕಾರ **ದಿನಾಂಕ: 15.04.2026 ರ ಸಂಜೆ 5.00 ಗಂಟೆಯೊಳಗೆ** ಠೇವಣಿ ಮಾಡಬೇಕು.

(₹. ಲಕ್ಷಗಳಲ್ಲಿ)

ಕ್ರ. ಸಂ	ಸ್ಥಿರಾಸ್ತಿ ವಿವರಣೆ:	ಮೀಸಲು ಬೆಲೆ	ಇಎಂಡಿ ಮೊತ್ತ	ಬಿಡ್‌ನಲ್ಲಿ ಹೆಚ್ಚುತ್ತಿರುವ ಮೌಲ್ಯ	ಆಸ್ತಿ ಪರಿಶೀಲನಾ ದಿನಾಂಕ ಮತ್ತು ಸ್ಥಳ
1	ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಸ್ಥಿರಾಸ್ತಿಯ ಮುನಿಸಿಪಲ್ ನಂ.301 (ಹಳೆಯ ನಂ.21/ಎಫ್) ಇದು ತಿಮ್ಮಯ್ಯ ರಸ್ತೆ, ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ನಂ.79, ಬೆಂಗಳೂರಿನಲ್ಲಿದೆ, ಜೊತೆಗೆ ಎಲ್ಲಾ ನಿರ್ಮಾಣಗಳೊಂದಿಗೆ ವಿಸ್ತೀರ್ಣ ಪೂರ್ವಕ್ಕೆ 103 ಅಡಿ, ಪಶ್ಚಿಮಕ್ಕೆ 99 ಅಡಿ, ಉತ್ತರಕ್ಕೆ 19 ಅಡಿ ಮತ್ತು ದಕ್ಷಿಣಕ್ಕೆ 22 ಅಡಿ ಮತ್ತು 8 ಇಂಚು, ಭೂಮಿಯ ಒಟ್ಟು ವಿಸ್ತೀರ್ಣ 2232 ಚದರ ಅಡಿ ಮತ್ತು ಚಕ್ಕುಬಂದಿ: ಪೂರ್ವಕ್ಕೆ: ತಿಮ್ಮಯ್ಯ ರಸ್ತೆಯ ಹಳೆಯ ಸಂಖ್ಯೆ 21/ಇ ಹೊಂದಿರುವ ಆವರಣ, ಪಶ್ಚಿಮಕ್ಕೆ: ತಿಮ್ಮಯ್ಯ ರಸ್ತೆಯ ಹಳೆಯ ಸಂಖ್ಯೆ 21 ಹೊಂದಿರುವ ಆವರಣ, ಉತ್ತರಕ್ಕೆ: ತಿಮ್ಮಯ್ಯ ರಸ್ತೆ, ದಕ್ಷಿಣಕ್ಕೆ: ಕನ್ಸರ್ವೆನ್ಸಿ. **Coordinates of the property Latitude- 12.59240N, Longitude- 77.36109E**	₹. 255.00	₹. 25.50	₹. 1.00	30.03.2026 ಬೆಳಿಗ್ಗೆ 10.00 ರಿಂದ ಮಧ್ಯಾಹ್ನ 2.00 ರವರೆಗೆ ಅಧಿಕೃತ ಅಧಿಕಾರಿಯವರ ಪೂರ್ವ ನಿರ್ಧರಿತದಂತೆ.

ಎನ್ಕಂಬರೆನ್ಸ್ ಯಾವುದಾದರೂ ಇದ್ದಲ್ಲಿ : ಬ್ಯಾಂಕಿನ ಗಮನಕ್ಕೆ ಬಂದಿಲ್ಲ.
ಮಾರಾಟದ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ, 'ಇ-ಹರಾಜು'ಲಿಂಕ್ ಪ್ರೋವೈಡೆಡ್ ಕೆನರಾ ಬ್ಯಾಂಕ್‌ರವರ ವೆಬ್‌ಸೈಟ್: **(www.canarabank.com)** ನಲ್ಲಿ ಒದಗಿಸಲಾಗಿದೆ ಅಥವಾ **M/s PSB Alliance Private Limited (https://baanknet.com/)** ಪೋರ್ಟಲ್‌ನ ಇ-ವ್ಯಾಲೆಟ್ **ಮತ್ತು ಮುಖ್ಯ ಪ್ರಬಂಧಕರು, ಕೆನರಾ ಬ್ಯಾಂಕ್, ಎಆರ್‌ಎಂ-I ಶಾಖೆ, ಬೆಂಗಳೂರು** ಮೊಬೈಲ್ ಸಂಖ್ಯೆ: **7022044933 ಮತ್ತು 9039609346** ಯಾವುದೇ ಕೆಲಸದ ದಿನದಂದು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು.

ದಿನಾಂಕ : 24.03.2026
ಸ್ಥಳ : ಬೆಂಗಳೂರು

ಸಹಿ/- ಅಧಿಕೃತ ಅಧಿಕಾರಿ,
ಕೆನರಾ ಬ್ಯಾಂಕ್

ACRE MAKING ASSETS WORK

ಅಸೆಟ್ಸ್ ಕೇರ್ ಮತ್ತು ರೀಕನ್‌ಸ್ಟ್ರಕ್ಷನ್ ಎಂಟರ್‌ಪ್ರೈಸ್ ಲಿಮಿಟೆಡ್
ಕಾರ್ಪೊರೇಟ್ ಕಚೇರಿ: ಘಟಕ ಸಂಖ್ಯೆ. 502, **ಸಿ ವಿಂಗ್, ಒನ್ ಬಿಕೆಸಿ, ಪ್ಲಾಟ್ ಸಂಖ್ಯೆ. ಸಿ** - 66, **ಜಿ - ಬ್ಲಾಕ್, ಬಾಂದ್ರಾ ಕುರ್ಲಾ ಕಾಂಪ್ಲೆಕ್ಸ್, ಮುಂಬೈ** - 400051. **ದೂರವಾಣಿ :** 022 68643101
ನೋಂದಾಯಿತ ಕಚೇರಿ: 14 **ನೇ ಮಹಡಿ, ಇರಾಸ್ ಕಾರ್ಪೊರೇಟ್ ಟವರ್, ನೆಹರು ಪ್ಲೇಸ್, ನವದೆಹಲಿ** - 110019
ಇಮೇಲ್ : acre.arc@acreindia.in I ವೆಬ್‌ಸೈಟ್: www.acreindia.in I CIN : U65993DL2002PLC115769

ಆರ್ಥಿಕ ಆಸ್ತಿಯ ಭದ್ರತೆ ಮತ್ತು ಪುನನಿರ್ಮಾಣ ಮತ್ತು ಬಡ್ಡಿಯ ಹಿತಾಸಕ್ತಿ ರಕ್ಷಣಾಕ್ರಮದ ಅಧಿನಿಯಮ 2002 ಸೆಕ್ಷನ್ 13 (2) ಕಾಲಂನ ಪ್ರಕಾರ ಜಾರಿ ಮಾಡುವದಕ್ಕಾಗಿ ಕೊಟ್ಟ ಸೂಚನೆ (ಅಧಿನಿಯಮ)

ಅ ನಂ.	ಸಾಲಗಾರರ ಹೆಸರು (ಎ)	ಅಡವು ಇಟ್ಟ ಆಸ್ತಿಯ ವಿವರ (ಬಿ)	ಎನ್‌ಪಿಎಯ ತಾರೀಖು (ಸಿ)	ಬಾಕಿ ಉಳಿದ ಕೊಡಬೇಕಾದಹಣ (ಡಿ)
1.	ಸಾಲ ಖಾತೆ ನಂ. HHLBAN00435739 1. ಎಂ ಎನ್ ರಾಘವೇಂದ್ರ ಪ್ರಸಾದ್ ಅಲಿಯಾಸ್ ರಾಘವೇಂದ್ರ ಪ್ರಸಾದ್ 2. ಲಕ್ಷ್ಮಿ ಸಿ ಆರ್	''ಪ್ರಾವಿಡೆಂಟ್ ಸನ್ ವರ್ತ್'' ಎಂದು ಕರೆಯಲ್ಪಡುವ ವಸತಿ ಸಂಕೀರ್ಣದ 5ಎಫ್ ಬ್ಲಾಕ್/ವಿಂಗ್‌ನಲ್ಲಿ, ಮೊದಲ ಮಹಡಿಯಲ್ಲಿರುವ ಬೆಡ್ ರೂಮ್ ಅಪಾರ್ಟ್ಮೆಂಟ್, ಹೊಂದಿರುವ ಸಂಖ್ಯೆ ಸೂರ್ಯ- II -5ಎಫ್-101, 775 ಚದರ ಅಡಿ ಕಾರ್ಪೆಟ್ ಪ್ರದೇಶವನ್ನು ಹೊಂದಿದೆ (ಇದು ಬಾಲ್ಕನಿಗಳು ಮತ್ತು ಯುಟಿಲಿಟಿ ಜಾಗವನ್ನು ಒಳಗೊಂಡಿದೆ) ಅಥವಾ 894 ಚದರ ಅಡಿಗಳ ಸ್ತಂಭ / ನಿರ್ಮಿತ ಪ್ರದೇಶವನ್ನು ಹೊಂದಿದೆ (ಇದು ಬಾಲ್ಕನಿಗಳು, ಯುಟಿಲಿಟಿ ಜಾಗವನ್ನು ಮತ್ತು ಅಪಾರ್ಟ್ಮೆಂಟ್‌ಗಳ ಗೋಡೆಗಳನ್ನು ಒಳಗೊಂಡಿದೆ), 383.69 ಚದರ ಅಡಿಗಳ ಅವಿಭಜಿತ ಹಂಚಿಕೆ ಹಕ್ಕು ಶೀರ್ಷಿಕೆ ಮತ್ತು ಆಸಕ್ತಿ ಮತ್ತು ಅನುಪಾತದ ಸಾಮಾನ್ಯ ಪ್ರದೇಶದೊಂದಿಗೆ 188 ಚದರ ಅಡಿಗಳು ಒಂದು ಸೆಮಿ ಸ್ಟಿಲ್ಟ್ ಪಾರ್ಕಿಂಗ್ ಸೌಲಭ್ಯದ ಸೀಮಿತ ಸಾಮಾನ್ಯ ಸೌಲಭ್ಯವನ್ನು ಬಳಸುವ ವಿಶೇಷ ಹಕ್ಕು, ಬೆಂಗಳೂರು ದಕ್ಷಿಣ ತಾಲ್ಲೂಕು ಕರ್ನಾಟಕ 560068, ಕೆಂಗೇರಿ ಹೋಬಳಿ, ವೆಂಕಟಾಪುರ ಗ್ರಾಮದ ಸರ್ವೆ ಸಂಖ್ಯೆ 1 ರಿಂದ 26 ರವರೆಗಿನ ಜಮೀನುಗಳಲ್ಲಿ ನಿರ್ಮಿಸಲಾಗಿದೆ.	09.07.2024	31.01.2026ರಂದಿನಂತೆ ರೂ. 30,76,893.20/- (ರೂಪಾಯಿ ಮೂವತ್ತು ಲಕ್ಷ ಎಪ್ಪತ್ತ ಆರು ಸಾವಿರದ ಎಂಟು ನೂರ ತೊಂಬತ್ತ ಮೂರು ಮತ್ತು ಪೈಸೆ ಇಪ್ಪತ್ತು ಮಾತ್ರ)

ಈ ಮೇಲೆ ಹೆಸರಿಸಲಾದ ಸಾಲಗಾರ (ರು) ಆರ್ಥಿಕ ಶಿಸ್ತು ಮತ್ತು ಸಾಲದ ಖಾತೆಯ ಜವಾಬ್ದಾರಿಯ ಹೊಣೆಯನ್ನು ಸರಿಯಾಗಿ ಪಾಲಿಸದೇ ಇದ್ದುದರಿಂದ ಕಂಪನಿಯು ತಮ್ಮ ಲೆಕ್ಕಾಶಾಸ್ತ್ರ ಪುಸ್ತಕಗಳ ಆಧಾರದಿಂದ ಈ ಸಾಲ ಪಡೆದವರ ಈಗ ಕೊಡಬೇಕಾದ ಮೊತ್ತವನ್ನು ಕಾಲಮ್ ಡಿ ಸಾಮಾನ್ಯ ಉದ್ಯೋಗ ನಿರ್ವಹಣೆಯ ಪ್ರಕಾರ, ಕೊಡದೇ ವಿಫಲರಾಗಿದ್ದಾರೆ ಎಂದು ತೋರಿಸಿಕೊಟ್ಟಿದೆ.

ಪ್ರತಿಯೊಬ್ಬ ಸಾಲ ಪಡೆದವ (ರು) ಮರಳಿ ಸಾಲ ತೀರಿಸುವಬಗ್ಗೆ ದೀರ್ಘಕಾಲದ ತೀವ್ರ ಉಪೇಕ್ಷೆ ತೋರಿಸಿದುದ ರಿಂದ ಅವರ ಸಾಲದ ಖಾತೆಯನ್ನು ಕಂಪನಿಯವರು ನಿರ್ದಿಷ್ಟಪಡಿಸಲಾದ ನಿಯಮಗಳಂತೆ ಅನುತ್ಪಾದಕ ಆಸ್ತಿ (ಕಾಲಮ್ ಸಿಯಲ್ಲಿನ ತಾರೀಖಿನಂದು) ಎಂದು ವರ್ಗೀಕರಿಸಿದ್ದಾರೆ. ತತ್ಪರಿಣಾಮವಾಗಿ ಆ್ಯಕ್ಟ್‌ನ ಸೆಕ್ಷನ್ 13 (2) ಅಧಿನಿಯಮದಂತೆ ಪ್ರತಿಯೊಬ್ಬ ಸಾಲಗಾರನಿಗೆ (ರಿಗೆ) ಸೂಚನೆಗಳನ್ನು ಕೂಡಾ ನೀಡಲಾಗಿದೆ.

ಈ ಮೇಲಿನದ್ದರ ಕಾರಣ ಈ ಮೇಲೆಹೆಸರಿಸಲಾದ ಪ್ರತೀಯೊಬ್ಬ ಸಾಲಗಾರನಿಗೆ (ರಿಗ)ಕಂಪೆನಿಯು ಈ ಮೇಲೆ ಕಾಲಮ್ ಡಿಯಲ್ಲಿ ದರ್ಶಿಸಲಾದ ಬಾಕಿ ಮೊತ್ತವನ್ನು ಈ ತನಕದ ಬಡ್ಡಿ, ವೆಚ್ಚಗಳು ಮತ್ತು ಚಾರ್ಜಸ್‌ನೊಂದಿಗೆ ಈ ಸೂಚನೆ ಪ್ರಕಟವಾದ 60 ದಿನಗಳಲ್ಲಿ ಪಾವತಿಸುವ ಮೂಲಕ ಕಂಪೆನಿಯ ಮೇಲಿನ ಅವನ/ಅವಳ ಸಂಪೂರ್ಣ ಬಾಧ್ಯತೆಯನ್ನು ಪೂರ್ಣಗೊಳಿಸಬೇಕೆಂದು ಈ ಮೂಲಕ ಕೇಳಿಕೊಳ್ಳುತ್ತಿದ್ದು ಇದಕ್ಕೆ ತಪ್ಪಿದಲ್ಲಿ, ಕಂಪನಿಯು ಈ ಮೇಲೆ ಕಾಲಮ್ ಬಿಯಲ್ಲಿ ನಮೂದಿಸಲಾದ ಅಡವು ಇಟ್ಟ ಆಸ್ತಿಯನ್ನು ಸ್ವಾಧೀನ ಪಡಿಸಿಕೊಳ್ಳಲು ಅರ್ಹವಾಗಿದೆ ಮತ್ತು ಕಂಪೆನಿ ಕಾನೂನಿನಲ್ಲಿ ಉಪಲಬ್ಧವಿರುವ ಇತರ ಕ್ರಮಗಳನ್ನು ಕೂಡಾತೆಗೆದು ಕೊಳ್ಳುತ್ತದೆ.

ಎಸ್‌ಏಆರ್‌ಎಫ್‌ಏಇಎಸ್‌ಐ (SARFAESI) ಆ್ಯಕ್ಟ್‌ನ ಸೆಕ್ಷನ್ 13ರ ಸೆಕ್ಷನ್ (8)ರ ನಿಬಂಧನೆಗಳ ವಿಶಿಷ್ಟ ಭಾಷೆಯಲ್ಲಿರುವ ಮುಂದಿನ ವಿಷಯವನ್ನು ದಯವಿಟ್ಟು ಗಮನಿಸಿರಿ: ''ಒಬ್ಬ ಸಾಲಗಾರನು ಅಡವಿನ ಆಧಾರದ ಮೇಲೆ ತನಗೆ ಸಾಲ ಕೊಟ್ಟಿರುವವನಿಗೆ, ಆತ ಸಾರ್ವಜನಿಕ ಹರಾಜಿನ ಮೂಲಕ, ಸಾರ್ವಜನಿಕರಿಂದ ಕೊಟೇಶನ್‌ಗಳನ್ನು, ಟೆಂಡರನ್ನು ಆಹ್ವಾನಿಸುವ ಮೂಲಕ ಅಥವಾ ಖಾಸಗಿ ಕರಾರಿನ ಮೂಲಕ ಅಡವಿಟ್ಟಿರುವ ಆಸ್ತಿಯನ್ನು(ಗಳನ್ನು) ಮಾರಾಟ ಮಾಡಲು ನೋಟೀಸನ್ನು ಪ್ರಕಟಿಸುವ ತಾರೀಖಿನ ತನಕ ಮಾತ್ರ, ಆತನ ಎಲ್ಲಾ ವ್ಯವಹಾರದ ವೆಚ್ಚಗಳು, ಚಾರ್ಜುಗಳು ಮತ್ತು ಖರ್ಚುಗಳೊಂದಿಗೆ ತನ್ನಿಂದ ಬಾಕಿ ಇರುವ ಹಣದ ಸಂಪೂರ್ಣ ಮೊತ್ತವನ್ನು ಸಲ್ಲಿಸಬಹುದು. ಜೊತೆಯಲ್ಲೇ ಇದನ್ನೂ ಗಮನಿಸಬಹುದು: ಸಾಲಗಾರನು ಮೇಲೆ ಹೇಳಿರುವ ಕಾಯಿದೆಬದ್ಧವಾಗಿ ಆದೇಶಿಸಿರುವ ಸಮಯದ ಚೌಕಟ್ಟಿನೊಳಗೆ ತಾನು ಅಡವಿಟ್ಟಿರುವ ಆಸ್ತಿಯನ್ನು ಬಿಡಿಸಿಕೊಳ್ಳದೆ ಹೋದರೆ, ಸಾಲಗಾರನು ಆ ಆಸ್ತಿಯನ್ನು ಬಿಡಿಸಿಕೊಳ್ಳುವ ಹಕ್ಕಿಗೆ ಅರ್ಹನಿಲ್ಲದಿರಬಹುದು''

ಎಸ್‌ಎಆರ್‌ಎಫ್‌ಎಇಎಸ್‌ಐ ಕಾಯ್ದೆಯ ಸೆಕ್ಷನ್ 13ರ ಉಪ-ಸೆಕ್ಷನ್ (13)ರ ನಿಬಂಧನೆ ಪ್ರಕಾರ ಒಂದೋ ಮಾರಾಟ, ಲೀಸ್ ಅಥವಾ ಅನ್ಯಥಾ (ಅವನ ವ್ಯಾಪಾರದ ಸಾಮಾನ್ಯ ವಿಧಾನದ ಹೊರತಾಗಿ)ವಿಧಾನದಿಂದ ಸೂಚನೆಯಲ್ಲಿ ಉಲ್ಲೇಖಿಸಲಾದ ಯಾವುದೇ ಸೆಕ್ಯೂರ್ಡ್ ಆಸ್ತಿಯನ್ನು ಸೆಕ್ಯೂರ್ಡ್ ಕ್ರೆಡಿಟರರ ಲಿಖಿತ ಪೂರ್ವ ಸಮ್ಮತಿ ಇಲ್ಲದೆ ನೀವು ವರ್ಗಾಯಿಸುವುದನ್ನು ಈ ಮೂಲಕ ನಿಷೇಧಿಸಲಾಗಿದೆ.

''ಯಾವುದೇ ಕುಂದುಕೊರತೆಗಾಗಿ ನೀವು ಶ್ರೀ ಮೊಹಮ್ಮದ್ ಶಾರಿಕ್ ಮಲಿಕ್, ಕುಂದುಕೊರತೆ ನಿವಾರಣಾ ಅಧಿಕಾರಿ, ದೂರವಾಣಿ ಸಂಖ್ಯೆ. **011&66115609**, ಇಮೇಲ್: **complaint@acreindia.in** ಅನ್ನು ಸಂಪರ್ಕಿಸಬಹುದು. ಸಂಸ್ಥೆಯೊಳಗಿನ ಕುಂದುಕೊರತೆ ಪರಿಹಾರ ಕಾರ್ಯವಿಧಾನದ ವಿವರವಾದ ನೀತಿಯನ್ನು **https://www.acreindia.in/compliance** ನಲ್ಲಿ ಪಡೆಯಬಹುದು.''

ಅಸೆಟ್ ಕೇರ್ ಮತ್ತು ರೀಕನ್‌ಸ್ಟ್ರಕ್ಷನ್ ಎಂಟರ್‌ಪ್ರೈಸ್ ಲಿ. ಗಾಗಿ
ಎ.ಸಿ.ಆರ್.ಇ 180 ಟ್ರಸ್ಟ್‌ನ ಟ್ರಸ್ಟಿಯಾಗಿ ಅದರ ಸಾಮರ್ಥ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ
ಸ್ಥಳ : ಬೆಂಗಳೂರು **ಅಧಿಕೃತ ಅಧಿಕಾರಿ**

ಸಮಾಚಾರ ಸಣ್ಣದಲ್ಲ

ಮಸೀದಿ ವಿಚಾರದಲ್ಲಿ 2 ಗುಂಪುಗಳ ಗಲಾಟೆ

ಮಂಗಳೂರು: ಮಸೀದಿ ವಿಚಾರದಲ್ಲಿ ಭಿನ್ನಾಭಿಪ್ರಾಯದಿಂದಾಗಿ ಎರಡು ತಂಡಗಳ ಸದಸ್ಯರು ಬಡಿದಾಡಿಕೊಂಡ ನಡೆದ ಘಟನೆ ಮಂಗಳೂರಿನ ಉಳ್ಳಾಲ ಸಜೀಪನಡು ಎಂಬಲ್ಲಿ ನಡೆದಿದೆ. ಸಜಿಪಪಡು ತಲೆಮೊಗರು ಬದ್ರಿಯಾ ಜುಮ್ಮಾ ಮಸೀದಿ ಬಳಿ ಎರಡು ತಂಡಗಳ ನಡುವೆ ಮಾರಾಮಾರಿ ನಡೆದಿದ್ದು, ಕತ್ತಿ,ದೊಣ್ಣೆ,ಕಬ್ಬಿಣದ ರಾಡ್ ಬಳಸಿ ಹಲ್ಲೆ ನಡೆಸಲಾಗಿದೆ. ಮಸೀದಿ ಬಳಿ ಹಲ್ಲೆ ನಡೆದ ಬಳಿಕ ಓರ್ವನ ಮನೆಗೆ ಬಂದು ಅಲ್ಲಿದ್ದ ಮಹಿಳೆಯರು ಮಕ್ಕಳ ಮುಂದೆ ಹಲ್ಲೆ ನಡೆಸಲಾಗಿದೆ. ಮಸೀದಿ ಅಧ್ಯಕ್ಷನೂ ಈ ಹಲ್ಲೆ ಪ್ರಕರಣದಲ್ಲಿ ಭಾಗಿಯಾಗಿದ್ದಾನೆ. ಹಲ್ಲೆಯಿಂದ ಗಾಯಗೊಂಡವರಿಗೆ ಬಂಟ್ವಾಳ ಸರಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದ್ದು,ದೂರು-ಪ್ರತಿದೂರು ಸೇರಿ 3 ಪ್ರಕರಣಗಳು ಬಂಟ್ವಾಳ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಬಿಎನ್‌ಎಸ್ ಮತ್ತು ಆರ್ಮ್ಸ್ ಆ್ಯಕ್ಟ್ ಅಡಿ ಅಡಿ ದಾಖಲಾಗಿದೆ.

ಮಾಜಿ ಶಾಸಕ ಪುತ್ರ ರಾಜು ಕೊಲೆ ಶಂಕೆ

ಧಾರವಾಡ: ತಾಲೂಕಿನ ರಾಮಾಪುರ ಬಳಿಯ ಕಾಡಿನಲ್ಲಿ ಸುಟ್ಟು ನಿಂತಿದ್ದ ಕಾರಿನಲ್ಲಿ ದಹನಗೊಂಡ ವ್ಯಕ್ತಿಯ ಶವ ಪತ್ತೆಯಾಗಿದೆ. ಮೃತದೇಹವನ್ನು ಬೈಲಹೊಂಗಲ ಕ್ಷೇತ್ರದ ಮಾಜಿ ಶಾಸಕ ಬಾಬುರಾವ್ ಬೋಳಶೆಟ್ಟಿ ಅವರ ಪುತ್ರ ರಾಜು ಬೋಳಶೆಟ್ಟಿ (53) ಅವರದ್ದು ಎಂದು ಗುರುತಿಸಲಾಗಿದೆ. ಮೇಲ್ನೋಟಕ್ಕೆ ಇದು ಪೂರ್ವಯೋಜಿತ ಕೊಲೆ ಎಂದು ಶಂಕಿಸಲಾಗಿದ್ದು, ಜಿಲ್ಲೆಯಾದ್ಯಂತ ಭಾರೀ ಸಂಚಲನ ಮೂಡಿಸಿದೆ. ಕಾರೊಂದು ಹೊತ್ತಿ ಉರಿಯುತ್ತಿರುವುದನ್ನು ಗಮನಿಸಿದ ಸ್ಥಳೀಯರು ಕೂಡಲೇ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಸ್ಥಳಕ್ಕೆ ಧಾವಿಸಿದ ಪೊಲೀಸರು ಪರಿಶೀಲಿಸಿದಾಗ, ಕಾರಿನೊಳಗೆ ವ್ಯಕ್ತಿಯೊಬ್ಬರ ದೇಹ ಸುಟ್ಟು ಕರಕಲಾಗಿರುವುದು ಕಂಡುಬಂದಿದೆ. ಘಟನಾ ಸ್ಥಳ ಅತ್ಯಂತ ನಿರ್ಜನ ಪ್ರದೇಶವಾಗಿದ್ದು, ದುಷ್ಕರ್ಮಿಗಳು ರಾಜು ಅವರನ್ನು ಇಲ್ಲಿಗೆ ಕರೆ ತಂದು ಅಥವಾ ಅಪಹರಿಸಿ ಕೊಲೆ ಮಾಡಿರಬಹುದು ಎಂದು ಶಂಕಿಸಲಾಗಿದೆ. ಹತ್ಯೆಯ ನಂತರ ಸಾಕ್ಷ್ಯ ನಾಶಪಡಿಸುವ ಉದ್ದೇಶ ದಿಂದ ಶವವನ್ನು ಕಾರಿನಲ್ಲೇ ಇರಿಸಿ ಕಿಡಿಗೇಡಿಗಳು ಬೆಂಕಿ ಹಚ್ಚಿ ಪರಾರಿಯಾಗಿರುವ ಸಾಧ್ಯತೆ ದಟ್ಟವಾಗಿದೆ. ವಿಷಯ ತಿಳಿಯುತ್ತಿದ್ದಂತೆಯೇ ಧಾರವಾಡ ಗ್ರಾಮೀಣ ಠಾಣೆಯ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿದರು.

ದೇವರನಾಡಿನಲ್ಲೀಗ ರಂಗೇರಿರುವ ಚುನಾವಣಾ ಕಾವು

ನಮ್ಮ ನೆರೆಯ ಕೇರಳಂ ರಾಜ್ಯದಲ್ಲಿ ವಿಧಾನಸಭಾ ಚುನಾವಣಾ ಕಣ ರಂಗೇರಿದೆ. ಏ.9ರಂದು ಅಲ್ಲಿನ ಒಟ್ಟು 140 ಕ್ಷೇತ್ರಗಳಿಗೆ ನಡೆಯುವ ಚುನಾವಣೆಯ ನಾಮಪತ್ರಿಕೆ ಸಲ್ಲಿಕೆ ಕಾರ್ಯ ಸೋಮವಾರ ಮುಗಿದಿದೆ. ಯುಡಿಎಫ್, ಎಲ್‌ಡಿಎಫ್ ಮತ್ತು ಎನ್‌ಡಿಎ ಒಕ್ಕೂಟಗಳ ಪ್ರಬಲ ಸ್ಪರ್ಧೆಯಿಂದಾಗಿ ಚುನಾವಣಾ ಕಣ ರಂಗೇರಿದೆ. ಕಾಸರಗೋಡಿನಿಂದ ತಿರುವನಂತಪುರಂ ವರೆಗೂ ಈಗ ಎಲ್ಲೆಂದರಲ್ಲಿ ಚುನಾವಣಾ ಪ್ರಚಾರದ ಅಬ್ಬರ..!

ನರೇಂದ್ರ ಪಾರೆಕಟ್

ಇದೀಗ ನಡೆಯುತ್ತಿರುವುದು ಕೇರಳಂ ರಾಜ್ಯದ 16ನೇ ವಿಧಾನಸಭಾ ಚುನಾವಣೆ. ಭಾಷಾ ವಾರು ಪ್ರಾಂತ್ಯ ವಿಭಜನೆ ಆಗಿ ವಿಧಾನಸಭೆ ಅಸ್ತಿತ್ವಕ್ಕೆ ಬಂದಂದಿನಿಂದಲೂ ಅಲ್ಲಿ ಏಕಪಕ್ಷದ ಆಡಳಿತದ ಸರಕಾರ ಅಸ್ತಿತ್ವಕ್ಕೇ ಬಂದಿಲ್ಲ ಎಂಬುದು ಒಂದು ಗಮನಾರ್ಹ ಸಂಗತಿ. ಕೇರಳ ರಾಜ್ಯದಲ್ಲಿ ಮೊಜಿದಲಿ ನಿಂದಲೂ ಪ್ರಮುಖವಾಗಿ ಅಸ್ತಿತ್ವದಲ್ಲಿರುವ 2 ಒಕ್ಕೂಟಗಳೆಂದರೆ ಕಾಂಗ್ರೆಸ್ ನೇತೃತ್ವದ ಯುಡಿಎಫ್ (ಯುನೈಟೆಡ್ ಡೆಮೊಕ್ರೆಟಿಕ್ ಫ್ರಂಟ್) ಮತ್ತು ಕಮ್ಯೂನಿಸ್ಟ್ ಪಕ್ಷಗಳ ಒಕ್ಕೂಟವಾದ ಎಲ್‌ಡಿಎಫ್ (ಲೆಫ್ಟ್ ಡೆಮೊಕ್ರೆಟಿಕ್ ಫ್ರಂಟ್). ಹಾಗಾಗಿ ಈ ಎರಡೂ ಒಕ್ಕೂಟಗಳ ಮಧ್ಯೆಯೇ ಪ್ರತೀ ವಿಧಾನಸಭಾ ಚುನಾವಣೆಯಲ್ಲಿ ನೇರ ಹಣಾಹಣಿ. ಆದರೆ ಕಳೆದ ಎರಡು ದಶಕಗಳಿಂದ 3ನೇ ಹೊಸ ರಾಜಕೀಯ ಶಕ್ತಿಯಾಗಿ ಬಿಜೆಪಿ ನೇತೃತ್ವದ ಎನ್‌ಡಿಎ ಕೂಡಾ ಅಲ್ಲಿನ ಪ್ರತಿಯೊಂದು ವಿಧಾನಸಭಾ ಕ್ಷೇತ್ರದಲ್ಲೂ ಸ್ಪರ್ಧಿಸಿ ನೆಲೆ ಕಂಡುಕೊಳ್ಳಲು ಹವಣಿಸುತ್ತಿದೆ.

ಒಟ್ಟು 140 ವಿಧಾನಸಭಾ ಸದಸ್ಯರನ್ನು ಹೊಂದಿರುವ ಕೇರಳದಲ್ಲಿ ಅಧಿಕಾರದ ಗದ್ದುಗೆಯೇರಲು ಬೇಕಿರುವ ಒಟ್ಟು ಸ್ಥಾನಗಳ ಸಂಖ್ಯೆ 71. ಕಳೆದ ನಾಲ್ಕು ದಶಕಗಳಲ್ಲಿ ಎರಡೂ ಒಕ್ಕೂಟಗಳು ಪರ್ಯಾಯ ವಾಗಿ ಅಲ್ಲಿ ಅಧಿಕಾರ ಚುಕ್ಕಾಣಿ ಹಿಡಿಯುತ್ತಾ ಬಂದಿದ್ದು ನಿಜಕ್ಕೂ ವಿಶೇಷವೇ ಸರಿ, ಒಂದು ಸಲ ಒಂದು ಒಕ್ಕೂಟ ಅಧಿಕಾರಕ್ಕೇರಿದರೆ, ಮುಂದಿನ ಚುನಾವಣೆಯಲ್ಲಿ ವಿರೋಧ ಪಕ್ಷ ಬಹುಮತ ಪಡೆಯುತ್ತಿತ್ತು. ಆದರೆ ಅದಕ್ಕೆ ಅಪವಾದವೆಂಬಂತೆ ಕಳೆದ 2021ರ ಚುನಾವಣೆಯಲ್ಲಿ 2016ರಲ್ಲಿ ಅಧಿ ಕಾರಕ್ಕೆ ಬಂದ ಪಿಣರಾಯ್ ವಿಜಯನ್ ಅವರ ನೇತೃತ್ವದ ಎಲ್‌ಡಿಎಫ್ ಒಕ್ಕೂಟ ಮತ್ತೆ ಅನಿರೀಕ್ಷಿತವಾಗಿ 2021ರಲ್ಲೂ ವಿಧಾನಸಭಾ ಚುನಾವಣೆಯಲ್ಲಿ 95 ಸ್ಥಾನಗಳನ್ನು ಗೆದ್ದು, 2ನೇ ಬಾರಿ ನಿರಂತರವಾಗಿ ಅಧಿಕಾರಕಾರದ ಚುಕ್ಕಾಣಿ ಹಿಡಿದು ಯುಡಿಎಫ್‌ನ ಕನಸಿಗೆ ತಣ್ಣೀರೆರಚಿತು.

ಎಲ್‌ಡಿಎಫ್ ಬಲಾಬಲ

2021ರಲ್ಲಿ ಅಧಿಕಾರಕ್ಕೆ ಎಲ್‌ಡಿಎಫ್ ನೇತೃತ್ವದ ಎಡ ರಂಗ ಸರಕಾರದಲ್ಲಿ ಸದ್ಯ 12 ಪಕ್ಷಗಳ ವಿಧಾನಸಭಾ ಸದಸ್ಯರಿದ್ದಾರೆ. ಆ ಒಕ್ಕೂಟದ ಪ್ರಮುಖ ಪಕ್ಷವಾದ ಕಮ್ಯೂನಿಸ್ಟ್ ಪಾರ್ಟಿ ಆಫ್ ಇಂಡಿಯಾ-ಮಾರ್ಕ್ಸ್‌ವಾದಿ (ಸಿಪಿಐಎಂ) 61 ಸದಸ್ಯರನ್ನು ಹೊಂದಿದ್ದರೆ, ಕಮ್ಯೂನಿಸ್ಟ್ ಪಾರ್ಟಿ ಆಫ್ ಇಂಡಿಯಾ (ಸಿಪಿಐ) 16 ವಿಧಾನಸಭಾ ಸದಸ್ಯರನ್ನು ಹೊಂದಿದೆ. ಉಳಿದಂತೆ ಕೇರಳ ಕಾಂಗ್ರೆಸ್ (ಮಾಣಿ) 5 ಸದಸ್ಯರು, ಇಂಡಿಯನ್ ಸೋಷಲಿಸ್ಟ್ ಜನತಾದಳದ ಇಬ್ಬರು ಸದಸ್ಯರು, ಎನ್‌ಸಿಪಿ (ಶರದ್ ಪವಾರ್)-2, ಕಾಂಗ್ರೆಸ್ ಸೆಕ್ಯುಲರ್-1, ಇಂಡಿಯನ್ ನ್ಯಾಷನಲ್ ಲೀಗ್-1, ಕೇರಳ ಕಾಂಗ್ರೆಸ್ (ಬಿ)-1, ನ್ಯಾಷನಲ್ ಸೆಕ್ಯುಲರ್ ಕಾನ್ಫರೆನ್ಸ್-1, ಆರ್‌ಜೆಡಿ-1, ರೆವೊಲ್ಯುಷನರಿ ಸೋಷ್ಯಲಿಸ್ಟ್ ಪಾರ್ಟಿ-1 ಮತ್ತು ಒಬ್ಬ ಸ್ವತಂತ್ರ ಅಭ್ಯರ್ಥಿಯ ಬೆಂಬಲ ಹೊಂದಿದೆ.

ಯುಡಿಎಫ್ ಬಲಾಬಲ

2021ರಲ್ಲಿ ಕೇರಳದಲ್ಲಿ ನಡೆದ ಚುನಾವಣೆಯಲ್ಲಿ ಯುಡಿಎಫ್ 42 ಸ್ಥಾನಗಳಿಗಷ್ಟೇ ತೃಪ್ತಿಪಡಬೇಕಾ ಯಿತು. ಆ ಒಕ್ಕೂಟದ ನೇತೃತ್ವ ವಹಿಸಿದ್ದ ಕಾಂಗ್ರೆಸ್ ಪಕ್ಷ 21, ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗ್ 15, ಕೇರಳ ಕಾಂಗ್ರೆಸ್ (ಕೆಇಸಿ)-2, ಕೇರಳ ಕಾಂಗ್ರೆಸ್ (ಜೇಕಬ್)-1, ಕೇರಳ ಡೆಮೊಕ್ರೆಟಿಕ್ ಪಕ್ಷ-1, ರೆವೊಲ್ಯುಷನರಿ ಮಾರ್ಕ್ಸ್‌ವಾದಿ ಪಾರ್ಟಿ ಆಫ್ ಇಂಡಿಯಾ-1 ಮತ್ತು ಒಬ್ಬರು ಸ್ವತಂತ್ರ ಅಭ್ಯರ್ಥಿಗಳನ್ನು ಒಳಗೊಂಡಿದೆ.

2021ರ ವಿಧಾನಸಭಾ ಚುನಾವಣೆಯಲ್ಲಿ ಸೀಟು ಗಳಿಕೆಯಲ್ಲಿ ಬಿಜೆಪಿಯದ್ದು ಶೂನ್ಯ ಸಾಧನೆ. ಅದರ ಹಿಂದಿನ 2016ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಯ ಹಿರಿಯ ನೇತಾರ ಒ. ರಾಜಗೋಪಾಲ್ ಅವರು ತಿರುವನಂತಪುರದ ನೇಮಮ್ ವಿಧಾನಸಭಾ ಕ್ಷೇತ್ರದಿಂದ ಗೆದ್ದು ಕೇರಳ ಬಿಜೆಪಿಯ ಪ್ರಪ್ರಥಮ ವಿಧಾನಸಭಾ ಸದಸ್ಯರಾಗಿದ್ದರು. ಆದರೆ 2021ರಲ್ಲಿ ಅದೇ ಕ್ಷೇತ್ರದಲ್ಲಿ ಅವರು ಸೋಲುವ ಮೂಲಕ ಆ ಚುನಾವಣೆಯಲ್ಲಿ ತನ್ನ ಸಂಖ್ಯೆ ಹೆಚ್ಚು ಮಾಡಬೇಕೆನ್ನುವ ಎನ್‌ಡಿಎ ನಿರೀಕ್ಷೆ ಹುಸಿಯಾಗಿ ವಿಧಾನಸಭೆಯಲ್ಲಿ ಪ್ರಾತಿನಿಧ್ಯವನ್ನೇ ಕಳೆದುಕೊಂಡಿತು. ಈ ಸಲ ಬಿಜೆಪಿ ನೇತೃತ್ವದ ಎನ್‌ಡಿಎ ಒಕ್ಕೂಟದಲ್ಲಿ ಭಾರತ್ ಧರ್ಮ ಜನ ಸೇನಾ (ಬಿಡಿಜೆಎಸ್), ಕೇರಳ ಕಾಂಗ್ರೆಸ್ (ಥಾಮಸ್), ಜನಾಧಿಪತ್ಯ ರಾಷ್ಟ್ರೀಯ ಸಭಾ (ಜೆಆರ್‌ಎಸ್) ಮತ್ತು ಜನಾಧಿಪತ್ಯ ಸಂರಕ್ಷಣಾ ಸಮಿತಿ (ರಾಜನ್ ಬಾಬು ವಿಭಾದ) ಜತೆಗೂಡಿ ಸ್ಪರ್ಧಿಸುತ್ತಿದೆ. ಕಳೆದ ಸಲ ದಂತೆ ಈ ಬಾರಿಯೂ ಕೇರಳದ ಎಲ್ಲಾ ವಿಧಾನ ಸಭಾ ಕ್ಷೇತ್ರಗಳಲ್ಲೂ ತ್ರಿಕೋನ ಸ್ಪರ್ಧೆ ನಡೆಯಲಿದೆ. 1957ರಿಂದ ನಡೆದ ಚುನಾವಣೆಯಲ್ಲಿ 9 ಬಾರಿ ಕೇರಳದಲ್ಲಿ ಎಲ್‌ಡಿಎಫ್ ನೇತೃತ್ವದ ಸರಕಾರ ಅಧಿಕಾರಕ್ಕೆ ಬಂದರೆ, 6 ಬಾರಿ ಯುಡಿಎಫ್ ಸರಕಾರ ಆಡಳಿತ ನಡೆಸಿದೆ.

ಕೇರಳದಲ್ಲಿ ಮುಖ್ಯಮಂತ್ರಿಗಳಾಗಿದ್ದವರು



ಕೇರಳದ ವಿಧಾನಸಭೆ ಚುನಾವಣೆಗಳು

ಕೇರಳ ರಾಜ್ಯದ ಮೊದಲ ವಿಧಾನಸಭಾ ಚುನಾವಣೆಯಲ್ಲಿ ಎಡರಂಗದ ಸರಕಾರ ಅಸ್ತಿತ್ವಕ್ಕೆ ಬಂದು ಇಎಂಎಸ್ ನಂಬೂದಿರಿಪ್ಪಾಡ್ ಮುಖ್ಯಮಂತ್ರಿಗಾದಿ ಗೇರಿದವರು. ಆ ವೇಳೆ ಕಾಂಗ್ರೆಸ್‌ನ ಪಿ.ಟಿ. ಚಾಕೋ ವಿರೋಧಪಕ್ಷದ ನಾಯಕರಾಗಿದ್ದರು. 1960ರಲ್ಲಿ ನಡೆದ 2ನೇ ಚುನಾವಣೆಯಲ್ಲಿ ಪ್ರಜಾ ಸೋಷಲಿಸ್ಟ್ ಪಕ್ಷದ ಪಟ್ಟಂ ಥಾನು ಪಿಳ್ಳೈ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡರೂ, 1962ರಲ್ಲಿ ಅವರು ಸಿಎಂ ಸ್ಥಾನದಿಂದ ಕೆಳಗಿಳಿದಾಗ, ಕಾಂಗ್ರೆಸ್‌ನ ಆರ್.ಶಂಕರ್ ಮುಖ್ಯಮಂತ್ರಿ ಪದವಿಗೇರಿ ಆಡಳಿತದ ಚುಕ್ಕಾಣಿ ಹಿಡಿದರು. ಆ 5 ವರ್ಷಗಳ ಅವಧಿಯಲ್ಲಿ ಎಲ್‌ಡಿಎಫ್‌ನ ಇ.ಎಂ.ಎಸ್ ನಂಬೂದಿರಿಪ್ಪಾಡ್ ಪ್ರತಿಪಕ್ಷ ನಾಯಕರಾಗಿದ್ದರು. 1967ರಲ್ಲಿ ನಡೆದ 3ನೇ ಸಾರ್ವತ್ರಿಕ ಚುನಾವಣೆಯಲ್ಲಿ ಎಲ್‌ಡಿಎಫ್ ಅಧಿಕಾರಕ್ಕೆ ಬಂದು ಸಿಪಿಐಎಂ ಪಕ್ಷದ ಇಎಂಎಸ್ ನಂಬೂದಿರಿಪ್ಪಾಡ್ ಮುಖ್ಯಮಂತ್ರಿಯಾದರೆ, ಕಾಂಗ್ರೆಸ್ ಪಕ್ಷದ ಕೆ. ಕರುಣಾಕರನ್ ಪ್ರತಿಪಕ್ಷ ನಾಯಕರಾಗಿ ಸೇವೆ ಸಲ್ಲಿಸಿದ್ದರು.

1970ರ ಚುನಾವಣೆಯಲ್ಲಿ ಯುಡಿಎಫ್ ಪಾಳಯಕ್ಕೆ ಜಿಗಿದ ಸಿಪಿಐ ಪಕ್ಷದ ಸಿ.ಅಚ್ಯುತ ಮೆನನ್ ಮುಖ್ಯಮಂತ್ರಿಯಾದರು. ಸಿಪಿಐಎಂನ ಇಎಂಎಸ್ ನಂಬೂದಿರಿಪ್ಪಾಡ್ ಪ್ರತಿಪಕ್ಷ ನಾಯಕನ ಸ್ಥಾನದಲ್ಲಿದ್ದರು. 1977-80ರ 3 ವರ್ಷಗಳ ಅವಧಿಯಲ್ಲಿ ಕೇರಳವು ನಾಲ್ವರು ಮುಖ್ಯಮಂತ್ರಿಗಳನ್ನು ನೋಡಬೇಕಾಯಿತು. ಯುಡಿಎಫ್‌ನಿಂದ ಕಾಂಗ್ರೆಸ್ ನಾಯಕರಾದ ಕೆ. ಕರುಣಾಕರನ್, ಎ.ಕೆ. ಆ್ಯಂಟನಿ, ಮತ್ತು ಸಿಪಿಐನ ಪಿ.ಕೆ. ವಾಸುದೇವನ್ ನಾಯರ್ ಮತ್ತು ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗ್‌ನ ಸಿ.ಎಚ್.ಮೊಹಮ್ಮದ್ ಕೋಯ ಆ ಅವಧಿಗಳಲ್ಲಿ ಮುಖ್ಯಮಂತ್ರಿಗಳಾದರು. ಆ 3 ವರ್ಷಗಳ ಕಾಲ ಸಿಪಿಐಎಂನ ಇಎಂಎಸ್. ನಂಬೂದಿರಿಪ್ಪಾಡ್ ಕೇರಳ ವಿಧಾನಸಭೆಯಲ್ಲಿ ಪ್ರತಿಪಕ್ಷ ನಾಯಕರಾಗಿದ್ದರು.

1980ರಲ್ಲಿ ನಡೆದ ಚುನಾವಣೆಯಲ್ಲಿ ಎಡರಂಗಕ್ಕೆ ಸ್ಪಷ್ಟ ಬಹುಮತ ದೊರೆತು ಸಿಪಿಐಎಂ ಪಕ್ಷದ ಇ.ಕೆ. ನಾಯನಾರ್ ಮುಖ್ಯಮಂತ್ರಿಯಾದರೆ, ಕಾಂಗ್ರೆಸ್‌ನ ಕೆ.ಕರುಣಾಕರನ್ ಆ ಅವಧಿಯಲ್ಲಿ ಪ್ರತಿಪಕ್ಷ ನಾಯಕ ರಾಗಿದ್ದರು. 1982ರ ಚುನಾವಣೆಯಲ್ಲಿ ಯುಡಿಎಫ್ ಅಧಿಕಾರಕ್ಕೆ ಬಂದು ಕಾಂಗ್ರೆಸ್‌ನ ಕೆ. ಕರುಣಾಕರನ್ ಮುಖ್ಯಮಂತ್ರಿಯಾಗಿ ಆಯ್ಕೆಯಾದ ಅವಧಿಯಲ್ಲಿ ಎಲ್‌ಡಿಎಫ್‌ನ ಇ.ಕೆ. ನಾಯನಾರ್ ಪ್ರತಿಪಕ್ಷ ನಾಯಕರಾಗಿ ಕಾರ್ಯನಿರ್ವಹಿಸಿ ದರು. 1987ರಲ್ಲಿ ಸಿಪಿಐಎಂನ ಇ.ಕೆ.ನಾಯನಾರ್ ಮುಖ್ಯಮಂತ್ರಿಯಾದರೆ, ಕಾಂಗ್ರೆಸ್‌ನ ಕೆ.ಕರುಣಾಕರನ್ ವಿಪಕ್ಷ ನಾಯಕರಾದರು.

1992-1996ರ ಅವಧಿಯ ನಡುವೆ ಯುಡಿಎಫ್‌ನ ಕೆ. ಕರುಣಾಕರನ್ ಅಧಿಕಾರದಿಂದ ಕೆಳಗಿಳಿದಾಗ ಎ.ಕೆ. ಆ್ಯಂಟನಿ ಮುಖ್ಯಮಂತ್ರಿಯಾದರು. 1996ರಲ್ಲಿ ಇ.ಕೆ. ನಾಯನಾರ್ ಮತ್ತೆ ಮುಖ್ಯಮಂತ್ರಿ ಯಾದರೆ, 2001-2006ರ ಅವಧಿ ಯಲ್ಲಿ ಯುಡಿಎಫ್‌ನ ಎ.ಕೆ.ಆ್ಯಂಟನಿ ಮುಖ್ಯಮಂತ್ರಿ ಹುದ್ದೆಯಿಂದ ಕೆಳಗಿಳಿದಾಗ ಉಮ್ಮನ್ ಚಾಂಡಿ ಮುಖ್ಯಮಂತ್ರಿಯಾದರು. 2006ರಲ್ಲಿ ಎಲ್‌ಡಿಎಫ್ ಅಧಿಕಾರಕ್ಕೆ ಬಂದು ವಿಎಸ್. ಅಚ್ಯುತಾನಂದನ್ ಮುಖ್ಯ ಮಂತ್ರಿಯಾದರು. 2011ರಲ್ಲಿ ಚುನಾವಣೆ ನಡೆದಾಗ ಯುಡಿಎಫ್ ಬಹುಮತ ಪಡೆದು 5 ವರ್ಷ ಉಮ್ಮನ್ ಚಾಂಡಿ ಮುಖ್ಯಮಂತ್ರಿಯಾಗಿದ್ದರು. ಆದರೆ 2016ರಲ್ಲಿ ನಡೆದ ಚುನಾವಣೆಯಲ್ಲಿ ಎಲ್‌ಡಿಎಫ್ ಅಧಿಕಾರಕ್ಕೆ ಬಂದು ಪಿಣರಾಯಿ ವಿಜಯನ್ ಮುಖ್ಯಮಂತ್ರಿಯಾಗಿ, 2021ರಲ್ಲೂ ಅವರ ಎಡರಂಗ ಒಕ್ಕೂಟಕ್ಕೆ ಭರ್ಜರಿ ಬಹುಮತ ಬಂದಿದ್ದರಿಂದ ಮತ್ತೆ ಸಿಎಂ ಸ್ಥಾನದಲ್ಲಿ ಪಿಣರಾಯಿ 2ನೇ ಅವಧಿಗೆ ಮುಂದುವರಿದರು.

ಇದೀಗ ಮತ್ತೆ 3ನೇ ಬಾರಿಯೂ ಕೇರಳದಲ್ಲಿ ತಾವೇ ಅಧಿಕಾರಕ್ಕೆ ಬಂದೇ ಬರುತ್ತದೆ ಎಂಬ ಆತ್ಮ ವಿಶ್ವಾಸವನ್ನು ಎಲ್‌ಡಿಎಫ್ ಹೊಂದಿದ್ದರೆ, 10 ವರ್ಷ ಗಳ ಬಳಿಕ ತಮ್ಮ ಪಕ್ಷ ಈ ಚುನಾವಣೆಯಲ್ಲಿ ಅಧಿಕಾ ರಕ್ಕೆ ಬರಲಿದೆ ಎಂಬುವುದು ಯುಡಿಎಫ್ ನಿರೀಕ್ಷೆ. ಈ ಸಲ ಪಕ್ಷದ ಕನಿಷ್ಠ ಎಂಟತ್ತು ತಮ್ಮ ಒಕ್ಕೂಟದ ಶಾಸಕರು ವಿಧಾನಸಭೆಯಲ್ಲಿ ಇರಲಿದ್ದಾರೆ ಎಂಬು ವುದು ಬಿಜೆಪಿಯ ಆತ್ಮವಿಶ್ವಾಸವಾಗಿದೆ.

ಒಟ್ಟು 14 ಜಿಲ್ಲೆ: 140 ಕ್ಷೇತ್ರಗಳು

ಪಿಣರಾಯಿ



ವಿ.ಡಿ ಸತೀಶನ್

ರಾಜೀವ್

ಕೇರಳದಲ್ಲಿ ಇರುವ ಒಟ್ಟು ಜಿಲ್ಲೆಗಳ ಸಂಖ್ಯೆ 14, ವಿಧಾನಸಭಾ ಕ್ಷೇತ್ರಗಳ ಒಟ್ಟು ಸಂಖ್ಯೆ 140. ವಯನಾಡು ಜಿಲ್ಲೆ ಯಲ್ಲಿ ಕೇವಲ 3 ವಿಧಾನ ಸಭಾ ಕ್ಷೇತ್ರಗಳಿದ್ದರೆ, ಮಲ ಪ್ಪುರಂ ಜಿಲ್ಲೆ 16 ಸ್ಥಾನಗಳನ್ನು ಹೊಂದಿದೆ. ಏರ್ನಾಕುಳಂ ಮತ್ತು ತಿರುವನಂತಪುರಂ ಜಿಲ್ಲೆ ತಲಾ 14 ವಿಧಾನಸಭಾ ಕ್ಷೇತ್ರಗಳನ್ನು ಹೊಂದಿವೆ

ಎನ್‌ಡಿಎ: 3ನೇ ಪ್ರಬಲ ಒಕ್ಕೂಟವಾಗಲು ಪ್ರಯತ್ನ

ಕೇರಳದಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ 3ನೇ ಶಕ್ತಿಯಾಗಿ ಕಳೆದ 2 ದಶಕಗಳಿಂದ ರಾಜ್ಯಾದ್ಯಂತ ನಿಧಾನವಾಗಿ ತನ್ನ ನೆಲೆ ಕಂಡುಕೊಳ್ಳ ತೊಡಗಿದೆ. 10 ವರ್ಷದ ಹಿಂದೆ ಕೇರಳದಲ್ಲಿ ಕೇವಲ 5% ಮತ ಗಳಿಕೆಯಲ್ಲಿದ್ದ ಎನ್‌ಡಿಎ, ಕಳೆದ ಲೋಕಸಭಾ ಚುನಾವಣೆಯಲ್ಲಿ ಒಂದು ಸಂಸದ ಸ್ಥಾನವನ್ನೂ ಗೆಲ್ಲುವ ಮೂಲಕ 17% ಮತಗಳಿಕೆ ತಲುಪಿದ್ದು, ಈ ಸಲದ ವಿಧಾನಸಭಾ ಚುನಾವಣೆಯಲ್ಲಿ 20% ಮತ ಗಳಿಕೆ ತಲುಪುವ ನಿರೀಕ್ಷೆಯಲ್ಲಿದ್ದು ಇನ್ನು 10 ವರ್ಷದಲ್ಲಿ ಕೇರಳದಲ್ಲಿ 3ನೇ ಪರ್ಯಾಯ ಪ್ರಬಲ ಒಕ್ಕೂಟವಾಗಿ ಅಧಿಕಾರ ಹಿಡಿಯುವ ಆತ್ಮವಿಶ್ವಾಸಲ್ಲಿದೆ.

ಎಐಎಡಿಎಂಕೆ ಪ್ರಣಾಳಿಕೆ ಬಿಡುಗಡೆ

ಚೆನ್ನೈ: ತಮಿಳುನಾಡು ವಿಧಾನಸಭಾ ಚುನಾವಣೆಗೆ ದಿನಗಣನೆ ನಡೆಯುತ್ತಿದ್ದು, ಅಲ್ಲಿನ ಪ್ರಮುಖ ಪ್ರತಿಪಕ್ಷವಾದ ಎಐಎಡಿಎಂಕೆ ಮಂಗಳವಾರ ತನ್ನ ಚುನಾವಣಾ ಪ್ರಣಾಳಿಕೆಯನ್ನು ಬಿಡುಗಡೆ ಮಾಡಿದೆ. ಪಡಿತರ ಚೀಟಿ ಹೊಂದಿರುವ ಕುಟುಂಬದ ಮಹಿಳಾ ಮುಖ್ಯಸ್ಥೆಯರಿಗೆ ಉಚಿತವಾಗಿ ರೆಫ್ರಿಜರೇಟರ್ (ಫ್ರಿಡ್ಜ್) ವಿತರಿಸುವುದಾಗಿ ಎಐಎಡಿಎಂಕೆ ಭರವಸೆ ನೀಡಿದೆ.

ಮುಸ್ಲಿಂ ನಾಯಕ ಬಂಡಾಯ ಕಾಂಗ್ರೆಸ್ ನಾಯಕರಿಗೆ ಬಿಸಿ

← ಮೊದಲಪುಟದಿಂದ

ಆದರೆ ಸ್ಥಳೀಯ ಮುಸ್ಲಿಂ ಮುಖಂಡರು ಯಾವುದೇ ಕಾರಣಕ್ಕೂ ನಾಮಪತ್ರ ಹಿಂಪಡೆಯಬಾರದು ಎನ್ನುವ ಒತ್ತಡವನ್ನು ಖಾಲಿದ್ ಮೇಲೆ ಹೇರಿದ್ದರಿಂದ, ಕಣದಲ್ಲಿ ಮುಂದುವರಿಯುವ ಉಮೇದನ್ನು ಖಾಲಿದ್ ಹೊಂದಿದ್ದಾರೆ. ಒಂದು ವೇಳೆ ಖಾಲಿದ್ ನಾಮಪತ್ರ ಹಿಂಪಡೆಯದಿದ್ದರೆ ಕಾಂಗ್ರೆಸ್‌ನ ಸಾಂಪ್ರದಾಯಿಕ ಹಾಗೂ ಮುಸ್ಲಿಂ ಮತಗಳು ಒಡೆಯಲಿದ್ದು, ಇದರ ನೇರ ಲಾಭ ಬಿಜೆಪಿ ಆಗಲಿದೆ ಎನ್ನುವ ಆತಂಕ ಸ್ಥಳೀಯ ಕಾಂಗ್ರೆಸ್ ನಾಯಕರದ್ದಾಗಿದೆ.

ಎಸ್‌ಡಿಪಿಐ ಸ್ಪರ್ಧೆ, ಮತ ವಿಭಜನೆ: ಇನ್ನು ಖಾಲಿದ್ ಜತೆ ಎಸ್‌ಡಿಪಿಐ ಸಹ ತನ್ನ ಅಭ್ಯರ್ಥಿಯನ್ನು ಕಣಕ್ಕೆ ಇಳಿಸಿದೆ. ಇದರಿಂದ ಮುಸ್ಲಿಂ ಮತಗಳು ಕಾಂಗ್ರೆಸ್, ಎಸ್‌ಡಿಪಿಐ ಹಾಗೂ ಖಾಲಿದ್‌ಗೆ ಹಂಚಿಕೆಯಾಗುವ ಸಾಧ್ಯತೆಯಿದೆ. ಎಸ್‌ಡಿಪಿಐ ಹಾಗೂ ಬಂಡಾಯ ಅಭ್ಯರ್ಥಿಗಳಿಬ್ಬರೂ ಕನಿಷ್ಠ ಐದು ಸಾವಿರ ವೋಟ್‌ಗಳನ್ನು ಕಿತ್ತುಕೊಂಡರೂ ಕಾಂಗ್ರೆಸ್‌ಗೆ ಭಾರಿ ಹೊಡೆತ ಬೀಳಲಿದೆ ಎನ್ನಲಾಗುತ್ತಿದೆ. ನಾಮಪತ್ರ ಹಿಂಪಡೆಯಲು ಗುರುವಾರ ಕೊನೆಯ ದಿನವಾಗಿರುವುದರಿಂದ, ಎಸ್.ಎಸ್.ಮಲ್ಲಿಕಾರ್ಜುನ ಜತೆಗೆ ರಾಜ್ಯ ಮಟ್ಟದ ಮುಸ್ಲಿಂ ನಾಯಕರಿಗೂ ಖಾಲಿದ್ ಮನವೊಲಿಸುವ ಟಾಸ್ಕ್ ಅನ್ನು ಪಕ್ಷ ನೀಡಿದೆ ಎನ್ನಲಾಗುತ್ತಿದೆ.

ಇಂದೇ ಬಜೆಟ್ ಅಧಿವೇಶನ ಕೊನೆ

← ಮೊದಲಪುಟದಿಂದ

ಈ ಹಿಂದೆ ನಿಗದಿಯಾದಂತೆ 26ರ ತನಕ ಅಧಿವೇಶನ ನಡೆಸಬೇಕೆಂದು ಪಟ್ಟು ಹಿಡಿದರು. ಆದರೆ ರಾಮನವಮಿಗೆ 27ಕ್ಕೆ ರಜೆ ನೀಡುವಂತೆ ಬಿಜೆಪಿಯವರು ಮನವಿ ಮಾಡಿದ್ದಾರೆ. ಹೀಗಿರುವಾಗ, ಒಂದು ದಿನ ಮೊದಲು ಮುಗಿಸುವುದರಿಂದ ಎರಡೂ ಪಕ್ಷದ ನಾಯಕರಿಗೆ ಅನುಕೂಲವಾಗಲಿದೆ ಎನ್ನುವ ಮಾತನ್ನು ಆಡಳಿತ ಪಕ್ಷದ ನಾಯಕರು ಹೇಳಿದ್ದರಿಂದ ಮೊಟಕುಗೊಳಿಸಲು ಸಮ್ಮತಿಸಿದರು.

ಇಂದೇ ಸ್ಪೀಕರ್ ಖಾದರ್ ಫೋಟೋಶೂಟ್: ಬದಲಾದ ಪದ್ಧತಿಯಿಂದ ತೀವ್ರ ಕುತೂಹಲ!

ಈ ನಡುವೆ ಬಜೆಟ್ ಅಧಿವೇಶನದ ಕೊನೆಯ ದಿನ ಶಾಸಕರ ಗ್ರೂಪ್ ಫೋಟೋವನ್ನು ಆಯೋಜಿಸಲಾಗಿದೆ. ಸಾಮಾನ್ಯವಾಗಿ ವಿಧಾನಸಭಾ ಚುನಾವಣೆಯ ಮುನ್ನ ನಡೆಯುವ ಅಧಿವೇಶನದ ಕೊನೆಯ ದಿನ ಈ ಫೋಟೋ ಸೆಷನ್ ನಡೆಸುವುದು ವಾಡಿಕೆ. ಆದರೆ ಯು.ಟಿ. ಖಾದರ್ ಅವರು ಚುನಾವಣೆಗೆ ಎರಡೂವರೆ ವರ್ಷವಿರುವಾಗಲೇ ಫೋಟೋ ಶೂಟ್‌ಗೆ ಆಹ್ವಾನ ನೀಡಿರುವುದು ಹಲವು ರೀತಿಯ ಚರ್ಚೆಗೆ ಗ್ರಾಸವಾಗಿದೆ. ಈ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿರುವ ಶಾಸಕ ಸುರೇಶ್ ಕುಮಾರ್, ವಾಡಿಕೆಗೂ ಮೊದಲೇ ಫೋಟೋ ಸೆಷನ್ ನಡೆಸುತ್ತಿರುವುದಕ್ಕೆ ಕಾರಣವೇನು ಎಂದು ಪ್ರಶ್ನಿಸಿರುವ ಅವರು, ಈ ಅಧಿವೇಶನದ ನಂತರ ಖಾದರ್‌ರವರು ಸಭಾಧ್ಯಕ್ಷರ ಸ್ಥಾನದಿಂದ ಸಚಿವ ಸ್ಥಾನಕ್ಕೆ ಹೋಗುವ ಇರಾದೆ ಹೊಂದಿರಬಹುದು ಮತ್ತು ಅದಕ್ಕೆ ಹಸಿರು ನಿಶಾನೆಯೂ ದೊರಕಿರಬಹುದು. ಇಲ್ಲವೇ ಮುಖ್ಯಮಂತ್ರಿ ಸಿದ್ದರಾಮಯ್ಯನವರೇ ಬದಲಾಗುತ್ತಾರೆಯೇ? ಅವರು ಮುಖ್ಯಮಂತ್ರಿ ಆಗಿರುವಾಗ ಒಂದು ಫೋಟೋ ಇರಲಿ ಎಂದೇ? ಅಥವಾ ಮಧ್ಯಂತರ ಚುನಾವಣೆ ನಡೆಯುತ್ತದೆಯೇ? ಎಂದು ವ್ಯಂಗ್ಯವಾಡಿದ್ದಾರೆ.

ಮೋದಿಗೆ ಟ್ರಂಪ್ ಕರೆ

← ಮೊದಲಪುಟದಿಂದ

ಸಭೆಯಲ್ಲಿ ಸೇನಾಪಡೆಗಳ ಮುಖ್ಯಸ್ಥ ಜನರಲ್ ಅನಿಲ್ ಚೌಹಾಣ್, ಏರ್ ಚೀಫ್ ಮಾರ್ಷಲ್ ಅಮರ್‌ಪ್ರೀತ್ ಸಿಂಗ್, ಜನರಲ್ ಉಪೇಂದ್ರ ದ್ವಿವೇದಿ, ಅಡ್ಮಿರಲ್ ದಿನೇಶ್ ಕೆ ತ್ರಿಪಾಠಿ, ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಒ) ಅಧ್ಯಕ್ಷ ಸಮೀರ್ ಕಾಮತ್ ಮತ್ತು ಇತರರು ಉಪಸ್ಥಿತರಿದ್ದರು. ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಸಂಘರ್ಷ 25ನೇ ದಿನಕ್ಕೆ ಪ್ರವೇಶಿಸಿದ್ದು, ಹೊರ್ಮುಜ್ ಜಲಸಂಧಿಯ ಮೂಲಕ ವ್ಯಾಪಾರ ಮಾರ್ಗಗಳನ್ನು ಅಸ್ತವ್ಯಸ್ತ ಗೊಳಿಸಿದೆ. ಭಾರತ ಸೇರಿ ವಿಶ್ವಾದ್ಯಂತ ಹಾಹಾಕಾರ ಉಂಟಾಗಿದೆ.

ಕ್ರೈಸ್ತರಾಗಿ ಮತಾಂತರಗೊಂಡರೆ ಪರಿಶಿಷ್ಟ ಸ್ಥಾನ ರದ್ದು

← ಮೊದಲಪುಟದಿಂದ

1950ರ ಪರಿಶಿಷ್ಟ ಜಾತಿ ಆದೇಶ ಹೇಳುವುದೇನು?: ಸಂವಿಧಾನ (ಪರಿಶಿಷ್ಟ ಜಾತಿಗಳು) ಆದೇಶ, 1950ರ ಪ್ರಕಾರ, ಭಾರತದ ರಾಷ್ಟ್ರಪತಿಗಳು ಸಂವಿಧಾನದ 341(1) ನೇ ವಿಧಿಯಡಿ ಹೊರಡಿಸಿದ ಪ್ರಮುಖ ಆದೇಶ ಇದು. ಇದು ಹಿಂದೂ, ಸಿಖ್ ಅಥವಾ ಬೌದ್ಧ ಧರ್ಮಕ್ಕೆ ಸೇರಿದ ಸಮುದಾಯಗಳನ್ನು ಪರಿಶಿಷ್ಟ ಜಾತಿಗಳೆಂದು ಗುರುತಿಸಿ, ಅವರಿಗೆ ಮೀಸಲಾತಿ ಹಾಗೂ ವಿಶೇಷ ಸೌಲಭ್ಯಗಳನ್ನು ಕಲ್ಪಿಸುತ್ತದೆ. ಈ ಪಟ್ಟಿಯನ್ನು ತಿದ್ದುಪಡಿಗಳ ಮೂಲಕ ಕಾಲಕಾಲಕ್ಕೆ ಮಾರ್ಪಡಿಸಲಾಗಿದೆ.

ಏನಿದು ಪ್ರಕರಣ?: ಆನಂದ್ ಎಂಬ ಪ್ಯಾಸ್ಟರ್ ತಾನು ತನ್ನ ಹಳ್ಳಿಯಲ್ಲಿ ಭಾನುವಾರದ ಪ್ರಾರ್ಥನೆ ನಡೆಸುತ್ತಿದ್ದಾಗ, ಅಕ್ಕಲ ರಾಮಿರೆಡ್ಡಿ ಮತ್ತು ಇತರರಿಂದ ತನ್ನ ಮೇಲೆ ಹಲ್ಲೆಗಳಾಗಿವೆ, ಜಾತಿ ತಾರತಮ್ಯ, ನಿಂದನೆಯಾಗಿದೆ ಎಂದು ಆರೋಪಿಸಿ ಪಾದ್ರಿ ಆನಂದ್ ಅವರು ಎಸ್‌ಸಿ/ಎಸ್‌ಟಿ ದೌರ್ಜನ್ಯ ತಡೆ ಕಾಯ್ದೆಯಡಿ ದೂರು ದಾಖಲಿಸಿದ್ದರು. ಪ್ರಕರಣ ಸಂಬಂಧ ಆರೋಪಿಗಳ ವಿರುದ್ಧ ಎಫ್‌ಐಆರ್ ದಾಖಲಾಗಿತ್ತು. ಪ್ರಕರಣವನ್ನು ರದ್ದುಗೊಳಿಸುವಂತೆ ಕೋರಿ ರಾಮಿರೆಡ್ಡಿ ಅವರು ಆಂಧ್ರಪ್ರದೇಶದ ಹೈಕೋರ್ಟ್ ಮೆಟ್ಟಿಲೇರಿದ್ದರು. ಆನಂದ್ ಅವರು ಕ್ರೈಸ್ತ ಧರ್ಮಕ್ಕೆ ಮತಾಂತರಗೊಂಡ ನಂತರ ತಮ್ಮ ಎಸ್‌ಸಿ ಸ್ಥಾನ ಕಳೆದುಕೊಂಡಿದ್ದಾರೆ. ಆದ್ದರಿಂದ ಅವರು ಎಸ್‌ಸಿಎಸ್‌ಟಿ ಕಾಯ್ದೆಯಡಿ ರಕ್ಷಣೆ ಪಡೆಯಲು ಸಾಧ್ಯವಿಲ್ಲ ಎಂಬ ಆಧಾರದ ಮೇಲೆ ನ್ಯಾಯಮೂರ್ತಿ ಎನ್.ಹರಿನಾಥ್ ಅವರು ಎಫ್‌ಐಆರ್ ಅನ್ನು ರದ್ದುಗೊಳಿಸಿದ್ದರು. ಇದರ ವಿರುದ್ಧ ಆನಂದ್ ಅವರು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು. ಸುಪ್ರೀಂ ಕೋರ್ಟ್, ಆಂಧ್ರ ಹೈಕೋರ್ಟ್‌ನ ತೀರ್ಪನ್ನು ಎತ್ತಿಹಿಡಿದಿದೆ.

ಜೆಜೆಎಂ ನಿರ್ವಹಣೆಯಲ್ಲಿ ವೈಫಲ್ಯ: ಸಿಎಜಿ ವರದಿ

← ಮೊದಲಪುಟದಿಂದ

ಮಿಷನ್‌ನ ಅವಧಿ 2024 ಮಾರ್ಚ್ 31ಕ್ಕೆ ಕೊನೆಗೊಂಡಿದ್ದರೂ, ರಾಜ್ಯ 2024ರ ವೇಳೆಗೆ ಗುರಿ ಮಾಡಲಾದ 72.14 ಲಕ್ಷ ಮನೆಗಳಲ್ಲಿ 24.52 ಲಕ್ಷ ಮನೆಗಳಿಗೆ (ಶೇ.34) ಎಫ್‌ಎಚ್‌ಟಿಸಿಗಳನ್ನು ಇನ್ನೂ ಒದಗಿಸಲಿಲ್ಲ ಎಂದು ಬೊಟ್ಟು ಮಾಡಲಾಗಿದೆ. ಟೆಂಡರ್ ಕರೆಯಲು ವಿಳಂಬ, ಗುತ್ತಿಗೆದಾರರಿಗೆ ಅನೇಕ ಕಾಮಗಾರಿ ವಹಿಸಿಕೊಡುವುದು, ಭೂಮಿಯ ಲಭ್ಯತೆ ಖಾತ್ರಿ ಪಡಿಸಿಕೊಳ್ಳುವ ಮೊದಲು ಕಾಮಗಾರಿಗಳನ್ನು ವಹಿಸಿಕೊಡಲಾಗಿದೆ. ಇದಲ್ಲದೆ, ರಾಜ್ಯವು ಪ್ರಗತಿ ಸಾಧಿಸಿದ್ದರೂ, ಸಾಂಸ್ಥಿಕ ರಚನೆ ವ್ಯವಸ್ಥಿತ ನ್ಯೂನತೆಗಳು, ಇತರೆ ಯೋಜನೆಗಳೊಂದಿಗೆ ಅಸಮರ್ಪಕ ಒಗ್ಗೂಡುವಿಕೆ, ವಿಳಂಬವಾದ ಟೆಂಡರ್, ಬೆಂಬಲ ಸಂಸ್ಥೆಗಳ ಕಳಪೆ ಕಾರ್ಯಕ್ಷಮತೆ, ವಿಭಜಿತ ಯೋಜನೆಗಳ ಬಗ್ಗೆ ವರದಿಯಲ್ಲಿ ಬೆಳಕು ಚೆಲ್ಲಲಾಗಿದ್ದು ಹಲವು ಶಿಫಾರಸು ಮಾಡಿದೆ.

ನೀರಿನ ಗುಣಮಟ್ಟಕ್ಕೆ ಆದ್ಯತೆ ನೀಡಿ: ಎಲ್ಲಾ ನಾಗರಿಕರಿಗೆ ಕಡ್ಡಾಯ ಗುಣಮಟ್ಟದ ನೀರು ಪೂರೈಸುವುದನ್ನು ಖಚಿತಪಡಿಸಿಕೊಳ್ಳಲು, ರಾಜ್ಯಸರಕಾರ ಎಲ್ಲಾ ಹಂತಗಳಲ್ಲಿ ನೀರಿನ ಗುಣಮಟ್ಟದ ಪರೀಕ್ಷೆಗೆ ಆದ್ಯತೆ ನೀಡಬೇಕೆಂದು ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಮೇಲಿನ ವಿಚಾರಕ್ಕೆ ಸಂಬಂಧಿಸಿದಂತೆ ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾ ಲೆಕ್ಕ ಪರಿಶೋಕರ ವರದಿ ಶಿಫಾರಸು ಮಾಡಿದೆ. ಪರಿವರ್ತನಾ ಸಮಯ ಪ್ರಯೋಗಾಲಯ ಪರೀಕ್ಷೆಯನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಮತ್ತು ನೀರಿನಿಂದ ಹರಡುವ ರೋಗಗಳನ್ನು ತಡೆಗಟ್ಟಲು ಕಲುಷಿತ ಮಾದರಿಗಳಿಗೆ ಪರಿಹಾರ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ವರದಿಯಲ್ಲಿ ಉಲ್ಲೇಖಿಸಲಾ ಗಿದೆ. ಅಲ್ಲದೆ, ಅಗತ್ಯವಿರುವ ಪ್ರಮಾಣದ ಮತ್ತು ಗುಣಮಟ್ಟದ ನಿರಂತರ ನೀರಿನ ಪೂರೈಕೆ ಖಚಿತಪಡಿಸಿಕೊಳ್ಳಲು ರಾಜ್ಯಸರಕಾರವು ಎಲ್ಲಾ ಗ್ರಾಮಗಳಲ್ಲಿ ಮರುಪೂರ್ಣ ರಚನೆಗಳು ಮತ್ತು ಬೂದುನೀರಿನ ನಿರ್ವಹಣಾ ಚಟುವಟಿಕೆಗಳನ್ನು ಕೈಗೊಳ್ಳುವುದನ್ನು ಖಚಿತಪಡಿಸಿಕೊಳ್ಳಬೇಕು ಎಂದಿದೆ. ತಪ್ಪಾದ ವರದಿಯನ್ನು ತಡೆಗಟ್ಟಲು ಆನ್‌ಲೈನ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲಾದ ದತ್ತಾಂಶವು ವಿವಿ ಹಂತದ ಪರಿಶೀಲನೆಗೆ ಒಳಪಟ್ಟಿದೆ ಎಂಬುದನ್ನು ರಾಜ್ಯಸರಕಾರ ಖಚಿತ ಪಡಿಸಿಕೊಳ್ಳಬೇಕು. ಜೆಜೆಎಂ ಅನುಷ್ಠಾನದ ಮೇಲ್ವಿಚಾರಣೆಗಾಗಿ ರಚಿಸಲಾದ ಸಮಿತಿಗಳು ಅತ್ಯುತ್ತಮ ಸಂಪನ್ಮೂಲ ಬಳಕೆಗಾಗಿ ಸಮಯ ಸೂಚಿಗಳು ಮತ್ತು ಅಳೆಯಬಹುದಾದ ಫಲಿತಾಂಶಗಳನ್ನು ನಿರ್ದಿಷ್ಟಪಡಿಸುವ ಇತರ ಯೋಜನೆಗಳೊಂದಿಗೆ ಸಮನ್ವಯ ಯೋಜನೆಗಳನ್ನು ಸಿದ್ಧಪಡಿಸಿ ಕಾರ್ಯಗತಗೊಳಿಸಲು ರಾಜ್ಯ ಸರಕಾರ ನಿರ್ದೇಶಿಸಬೇಕು ಎಂದು ವರದಿಯಲ್ಲಿ ಶಿಫಾರಸು ಮಾಡಲಾಗಿದೆ.

ಶಿಫಾರಸುಗಳೇನು?

- **ತರಬೇತಿ ಮತ್ತು ವ್ಯಕ್ತಿಗಳ ನಿಯೋಜನೆ ಮಾಡಲಾಗಿದೆಯೇ ಎಂದು ಖಚಿತಪಡಿಸಿಕೊಳ್ಳಲು ಕಾರ್ಯಕ್ಷಮತೆ ಮೇಲ್ವಿಚಾರಣೆ ಮಾಡಬೇಕು**
- **ಭೂಮಿಯ ಲಭ್ಯತೆಯನ್ನು ಖಚಿತಪಡಿಸಿದ ನಂತರವೇ ಕಾಮಗಾರಿಗಳನ್ನು ವಿತರಿಸಬೇಕು**

ಆನೇಕಲ್ ಯೋಜನಾ ಪ್ರಾಧಿಕಾರ
"ಅಣ್ಣ" ನಂ.430, ಹೆನ್ನಾಗರ ಗೇಟ್, ಹೊಸೂರು ಮುಖ್ಯರಸ್ತೆ, ಬೆಂಗಳೂರು – 560099.
ದೂರವಾಣಿ: 080–27835122 ವೆಬ್‌ಸೈಟ್: www.anekal.tpa.gov.in, www.e-vinyasa.kar.nic.in
ಸಂಖ್ಯೆ: ಆಯೋಪ್ರಾ/ಭೂ.ಬ/83/2025–26 ದಿನಾಂಕ: 23–03–2026

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಸೆಕ್ಷನ್ 14(ಎ) ಪ್ರಕಾರ ಅರ್ಜಿದಾರರು ಭೂ ಉಪಯೋಗ ಬದಲಾವಣೆಗೆ ಅರ್ಜಿ ಸಲ್ಲಿಸಿರುತ್ತಾರೆ. ಅರ್ಜಿಯನ್ನು ಪರಿಶೀಲಿಸಲಾಗಿ, ಅಡಕದಲ್ಲಿನ ಮಾಹಿತಿಯನ್ನು ಆಧರಿಸಿ ಕೆಳಕಂಡಂತೆ ವಿವರಗಳನ್ನು ಕೋಷ್ಟಕದಲ್ಲಿ ಅಳವಡಿಸಿದೆ. ಕಾಯ್ದೆಯಲ್ಲಿನ ಅಂಶಗಳನ್ವಯ ಪ್ರಸ್ತುತ ಪ್ರಕರಣಕ್ಕೆ ಸಂಬಂಧಿಸಿದಂತೆ, ಭೂ ಉಪಯೋಗ ಬದಲಾವಣೆಗೆ ಯಾರಿಂದಲಾದರು ಆಕ್ಷೇಪಣೆಗಳಿದ್ದರೆ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ **ಸದಸ್ಯ ಕಾರ್ಯದರ್ಶಿಗಳು, ಆನೇಕಲ್ ಯೋಜನಾ ಪ್ರಾಧಿಕಾರ, ಆನೇಕಲ್** ಕಛೇರಿಗೆ ಸಲ್ಲಿಸಲು ಕೋರಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮ	ಸ.ನಂ.	ವಿಸ್ತೀರ್ಣ ಎ/ಗುಂ	ಅನುಮೋದಿತ ಮಹಾಯೋಜನೆ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀಮತಿ ಕೋಮಲ್ ಧನುಕ ಕೋಂ. ಕೃಷ್ಣ ಧನುಕ ರವರ ಪರವಾಗಿ ಜಿಪಿಎ ಮತ್ತು ಜಂಟಿ ಅಭಿವೃದ್ಧಿದಾರರಾದ M/s. ATCO Projects Private Limited ಪರವಾಗಿ ನಿರ್ದೇಶಕರಾದ ಶ್ರೀ ಗೌರವ್ ಕುಮಾರ್ ಗುಪ್ತ	ಆನೇಕಲ್	ಸರ್ಜಾಪುರ	ಹಂದೇನಹಳ್ಳಿ	43/2	1–00	ಕೃಷಿ	ವಸತಿ
2	M/s. ATCO Projects Private Limited ಪರವಾಗಿ ನಿರ್ದೇಶಕರಾದ ಶ್ರೀ ಗೌರವ್ ಕುಮಾರ್ ಗುಪ್ತ	ಆನೇಕಲ್	ಸರ್ಜಾಪುರ	ಹಂದೇನಹಳ್ಳಿ	43/3	1–10	ಕೃಷಿ	ವಸತಿ

ಪ್ರಸ್ತಾವನೆಯಲ್ಲಿನ ಪ್ರಶ್ನಿತ ಜಮೀನನ್ನು ವಸತಿ ಉದ್ದೇಶಕ್ಕೆ ಅಭಿವೃದ್ಧಿಪಡಿಸುವುದರಿಂದ ಸುತ್ತಲಿನ ಪ್ರದೇಶ ಅಭಿವೃದ್ಧಿ ಹೊಂದುತ್ತದೆ. ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗಾವಕಾಶ ಸೃಷ್ಠಿಯಾಗುತ್ತದೆ. ಮೂಲಭೂತ ಸೌಕರ್ಯಗಳುಳ್ಳ ಸುಸಜ್ಜಿತವಾದ ವಸತಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಉತ್ತಮ ರಸ್ತೆಗಳು, ನಾಗರೀಕ ಸೌಲಭ್ಯ ಜಾಗಗಳು, ಉದ್ಯಾನವನಗಳು ಸಾರ್ವಜನಿಕರಿಗೆ ಲಭ್ಯವಾಗುತ್ತದೆ. ಕಾನೂನು ಬದ್ಧವಾದ ನಿವೇಶನಗಳು ಸಾರ್ವಜನಿಕರಿಗೆ ಲಭ್ಯವಾಗುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಸದರಿ ಪ್ರದೇಶವನ್ನು **"ಕೃಷಿ"** ವಲಯದಿಂದ **"ವಸತಿ"** ವಲಯಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/– ಸದಸ್ಯ–ಕಾರ್ಯದರ್ಶಿ ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು, ಆನೇಕಲ್ ಯೋಜನಾ ಪ್ರಾಧಿಕಾರ, ಆನೇಕಲ್.
ವಾಸಾಸಂಇ/ವಾ.ಪ್ರ/6426/ಅಡ್ವರ್ಟೋ/2025–26

ಕರ್ನಾಟಕ ಸರಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಇಂಜಿನೀಯರ್‌ರವರ ಕಛೇರಿ,
ಲೋಕೋಪಯೋಗಿ ಇಲಾಖೆ, ವಿಭಾಗ, ಯಾದಗಿರಿ
ಸಂ.ಕಾನಿಅ/ಲೋಇ/ಯಾವಿ/ತಾಶಾ–1/ಇ–ಟೆಂಡರ್ ಪ್ರಕಟಣೆ/2025–26/ 3581, ದಿನಾಂಕ:24.03.2026

ಅಲ್ಪಾವಧಿ ಇ –ಟೆಂಡರ್ ಅಧಿಸೂಚನೆ

1) ಕಾಮಗಾರಿ ವಿವರ: ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ, ಇಲಾಖೆ, ಯಾದಗಿರಿ ವಿಭಾಗ ಕಾರ್ಯಾಲಯದಿಂದ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮದಂತೆ ಸ್ಟ್ಯಾಂಡರ್ಡ ಬಿಡ್ ಡಾಕ್ಯುಮೆಂಟ್ ಕೆಡಬ್ಲ್ಯೂ–4 ರಂತೆ ದ್ವಿ–ಲಕೋಟೆ ಪದ್ಧತಿಯಲ್ಲಿ ಈ ವಿಭಾಗ ವ್ಯಾಪ್ತಿಯಲ್ಲಿ ಬರುವ ಲೆಕ್ಕಶೀರ್ಷಿಕೆ 2025–26ನೇ ಸಾಲಿನ ಕೆಆರ್‌ಡಿಸಿಎಲ್ ಅಡಿಯಲ್ಲಿ ಯಾದಗಿರಿ ತಾಲೂಕಿನ 29580/2ನೇ ಕರೆ ಒಟ್ಟು 1 (ಒಂದು) ಕಾಮಗಾರಿಗೆ ಕೆಪಿಪಿಪಿ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. **2) ಟೆಂಡರಿಗಿಟ್ಟ ಅಂದಾಜು ಮೊತ್ತ:** ಗರಿಷ್ಠ ರೂ:300.00 ಲಕ್ಷಗಳು **3) ಗುತ್ತಿಗೆದಾರರ ಅರ್ಹತೆ ವಿವರ:** ಸಿವಿಲ್ 2ನೇ ದರ್ಜೆ ಹಾಗೂ ಮೇಲ್ಪಟ್ಟು **4) ಟೆಂಡರ ಅರ್ಜಿಯ ಬೆಲೆ ಹಾಗೂ ಇ.ಎಮ್.ಡಿ. ಮೊತ್ತದ ವಿವರ:** ಅರ್ಜಿ ಬೆಲೆ, ಇ.ಎಮ್.ಡಿ ಮತ್ತು ಕಾಲಾವಧಿ kppp portal ನಂತೆ, **5) ಪ್ರೀ ಬಿಡ್ ಮೀಟಿಂಗ್ ದಿನಾಂಕ:** 30.03.2026 (11.30 ಗಂಟೆ ನಂತರ) **6) ಟೆಂಡರ ಬಗ್ಗೆ ಮಾಹಿತಿ ಹಾಗೂ ಸ್ಪಷ್ಟೀಕರಣ ಕೋರುವ ಕೊನೆಯ ದಿನಾಂಕ:** 01.04.2026 (17.30 ಗಂಟೆವರೆಗೆ) **7) ಟೆಂಡರ ಸಲ್ಲಿಸುವ ಕೊನೆಯ ದಿನಾಂಕ:** 04.04.2026 (16.00 ಗಂಟೆವರೆಗೆ) **8) ಟೆಂಡರ ತೆರೆಯುವ ದಿನಾಂಕ ತಾಂತ್ರಿಕ ಬಿಡ್:** 06.04.2026 (11.30 ಗಂಟೆ ನಂತರ) **9) ಆರ್ಥಿಕ ಬಿಡ್ ತೆರೆಯುವ ದಿನಾಂಕ:** 08.04.2026 (11.30 ಗಂಟೆ ನಂತರ) **10) ಹೆಚ್ಚಿನ ವಿವರಗಳಿಗೆ:** ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಯಾದಗಿರಿ ಕಚೇರಿ **11) ಅಂತರ್ಜಾಲ ತಾಣದ ವಿಳಾಸ:** https://kppp.karnataka.gov.in

ವಿಶೇಷ ಸೂಚನೆ: ತಾಂತ್ರಿಕ ಕಾರಣಗಳಿಂದ ತಿದ್ದುಪಡಿ/ಬದಲಾವಣೆಯಾದಲ್ಲಿ ಕೆಪಿಪಿಪಿ ಪೋರ್ಟಲ್‌ನಲ್ಲಿ ಮಾತ್ರ ಗಮನಿಸಬಹುದಾಗಿದೆ

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು,
ವಾ.ಸಾ.ಸಂ.ಇ/ಯಾದಗಿರಿ/607/ಕೆ.ಎಸ್.ಎಂ.ಸಿ.&ಎ/2025–26 ಲೋಕೋಪಯೋಗಿ ಇಲಾಖೆ, ವಿಭಾಗ ಯಾದಗಿರಿ.

ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ,
ಬಳ್ಳಾರಿ.ಜ್ಞಾನಸಾಗರ ಆವರಣ, ವಿನಾಯಕನಗರ,
ಕಂಟೋನ್ಮೆಂಟ್, ಬಳ್ಳಾರಿ–583105,
ಸಂಖ್ಯೆ:ವಿಶ್ರೀಕೃವಿಬ/ಕಟ್ಟಡ/ಕೆ.ಎಂ.ಇ.ಆರ್.ಸಿ/ಟೆಂಡರ್/2025–26/3782
ದಿನಾಂಕ:18–03–2026

ಸಂಕ್ಷಿಪ್ತಟೆಂಡರ್ ಪ್ರಕಟಣೆ
(ಇ–ಪ್ರೋಕ್ಯೂರ್ ಮೆಂಟ್ ಮುಖಾಂತರ ಮಾತ್ರ) ಕರೆ– 3

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ **Centre Of Excellence For Multidisciplinary Advance Research Cenntre (CEMARF)** ವಿಭಾಗ: **ರೂ. 1,07,20,278/– ವೆಚ್ಚದ** ವೈಜ್ಞಾನಿಕ ಉಪಕರಣಗಳ ಪೂರೈಕೆಗಾಗಿ ನಿಯಮಾನುಸಾರ ಅರ್ಹ ಏಜೆನ್ಸಿಗಳಿಂದ ಟೆಂಡರುಗಳನ್ನು 3ನೇ ಕರೆ ಮೂಲಕ ಆಹ್ವಾನಿಸಲಾಗಿದೆ. ವಿವರಗಳ ಅಧಿ ಸೂಚನೆ. **Kppp.karnataka.gov.in** ವೆಬ್‌ಸೈಟ್‌ನಲ್ಲಿ ಲಾಗಿನ್ ಮಾಡುವ ಮೂಲಕ ಇ–ಪ್ರೋಕ್ಯೂರ್ ಮೆಂಟ್ ಪ್ರಕ್ರಿಯೆಯಲ್ಲಿನ ವಿಷಯದ ವಿಚಾರಣೆಯನ್ನು ಪಡೆಯಬಹುದು.ಇನ್ನು ಹೆಚ್ಚಿನ ವಿವರಗಳಿಗಾಗಿ ಡಾ. ಕೆ .ಎಸ್. ಲೋಕೇಶ್(ಮೊ ; 9035500208) ಕಚೇರಿ ವೇಳೆಯಲ್ಲಿ ಮಾತ್ರ ಸಂಪರ್ಕಿಸಬಹುದು.

ಸಹಿ/–ಕುಲಸಚಿವರು, ವಿಜಯನಗರಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ.
ಡಿಐಪಿಆರ್/ಬಳ್ಳಾರಿ/1176/ಕೆಎಸ್‌ಎಂಸಿಎ/2025–26

ಕರ್ನಾಟಕ ಸರ್ಕಾರ
ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ, ಡಾ//ಬಿ.ಆರ್.ಅಂಬೇಡ್ಕರ್, ವೀಧಿ,
ಬೆಂಗಳೂರು.
ಸಂಖ್ಯೆ: ಸಿಒ 273 ಎಂಆರ್‌ಇ 2025 ದಿನಾಂಕ:26.02.2026

ಅಧಿಸೂಚನೆ

ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ 1966 ಕಲಂ 145ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ವಿಜಯಪುರ ಜಿಲ್ಲೆ, ತಾಳಿಕೋಟೆ ತಾಲ್ಲೂಕು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಮಾರುಕಟ್ಟೆ ಕ್ಷೇತ್ರವನ್ನು ವಿಭಜಿಸಿ ಮುದ್ದೇಬಿಹಾಳ ತಾಲ್ಲೂಕಿಗೆ ಹೊಸದಾಗಿ ಪ್ರತ್ಯೇಕ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ರಚಿಸಲು ಹಾಗೂ 93 ಅಧಿಸೂಚಿತ ಕೃಷಿ ಉತ್ಪನ್ನ ಮಾರಾಟ ನಿಯಂತ್ರಣಕ್ಕೆ ಒಳಪಡಿಸಲು ಉದ್ದೇಶಿಸಿದೆ.

ಆದ್ದರಿಂದ ಮೇಲ್ಕಂಡ ಉದ್ದೇಶಿತ ಪ್ರಸ್ತಾವನೆಗೆ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ 1966ರ ಕಲಂ 03 ರನ್ವಯ ಆಕ್ಷೇಪಣೆ/ಸಲಹೆಗಳನ್ನು ಆಹ್ವಾನಿಸಿದ್ದು, ಯಾವುದೇ ಆಕ್ಷೇಪಣೆಗಳು/ಸಲಹೆಗಳು ಇದ್ದಲ್ಲಿ, ಈ ಅಧಿಸೂಚನೆಯು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಅಥವಾ ಕನ್ನಡ ದಿನಪತ್ರಿಕೆಯಲ್ಲಿ ಯಾವುದರಲ್ಲಿ ತಡವಾಗಿ ಪ್ರಕಟವಾಗುವುದೋ, ಆ ದಿನಾಂಕದಿಂದ 30 ದಿವಸದೊಳಗಾಗಿ ಸರ್ಕಾರದ ಕಾರ್ಯದರ್ಶಿ, ಸಹಕಾರ ಇಲಾಖೆ, ಕೊಠಡಿ ಸಂಖ್ಯೆ:610, 6ನೇ ಮಹಡಿ, 3ನೇ ಗೇಟ್, ಬಹುಮಹಡಿಗಳ ಕಟ್ಟಡ, ಬೆಂಗಳೂರು 560001 ಇವರಿಗೆ ಸಲ್ಲಿಸತಕ್ಕದ್ದು.

ಸಹಿ/– (ಜಿ.ಎನ್.ಧನಲಕ್ಷ್ಮಿ)
ಸರ್ಕಾರದ ಅಧೀನ ಕಾರ್ಯದರ್ಶಿ–1,
ಸಹಕಾರ ಇಲಾಖೆ
ವಾಸಾಸಂಇ/ವಿಜಯಪುರ/833/ಕೆಎಸ್‌ಎಂಸಿಎ/2025–26

ಆರಾಮ

ಅನುದಿನವೂ ವಿರಾಮಕ್ಕೆ ಒಂದು ನೆಪ

ನ್ಯೂಗಿನಿಯ ನೂಂಬಾ ನನಗಂತೂ ಬೇಕೇ ಬೇಕು. ನಿಮಗೆ?!

ಹಿಂದಿರುಗಿ ನೋಡಿದಾಗ
ಡಾ. ನಾ.ಸೋಮೇಶ್ವರ
naasomeswara@gmail.com

ಮಾನವ ಶಾಸ್ತ್ರಜ್ಞರು ಹಲವು ವರ್ಷಗಳ ಹಿಂದೆ ನ್ಯೂಗಿನಿಯಲ್ಲಿರುವ ಸಿಪ್‌ಸೆಪ್ ಬುಡಕಟ್ಟಿನವರನ್ನು ಭೇಟಿಯಾಗಲು ಹೋದರು. ಆ ಜನರು ತಮ್ಮಲ್ಲಿಗೆ ಬಂದ ಅತಿಥಿ ಗಣ್ಯರನ್ನು ಸ್ವಾಗತಿಸಿದರು. ಕುಡಿಯಲು ಅವರಿಗೆ 'ನೂಂಬಾ' ಎಂಬ ಪಾನೀಯವನ್ನು ನೀಡಿದರು. ಈ ಪಾನೀಯ ಸ್ವಲ್ಪ ಕಹಿಯಾಗಿತ್ತು. ಆದರೆ ರುಚಿರುಚಿಯಾಗಿತ್ತು. ಈ ಪಾನೀಯವನ್ನು ದೇವರು ತಮಗಾಗಿ ಕರುಣಿಸಿದ್ದಾರೆಂದೂ, ಇದನ್ನು ಕುಡಿದವರು ಆರೋಗ್ಯವಂತರೂ ಹಾಗೂ ಶಕ್ತಿಶಾಲಿಗಳಾಗಿಯೂ ಇರುತ್ತಾರೆಂದೂ ಬುಡಕಟ್ಟಿನವರು ವಿವರಿಸಿದರು.

ಮಾನವಶಾಸ್ತ್ರಜ್ಞರು ನೂಂಬಾವನ್ನು ಗುಟುಕು ಗುಟುಕಾಗಿ ಚಪ್ಪರಿಸಿ ಕುಡಿದರು. ಕುಡಿಯುತ್ತಿರುವಂತೆ ದಣಿವು ಮರೆಯಾಯಿತು. ನವ ಚೈತನ್ಯವು ಮೂಡಿತು. ಹೊಸ ಚುರುಕಿನೊಡನೆ ಉತ್ಸಾಹವೂ ಮೂಡಿತು. ಈ ಪಾನೀಯ ಅವರಿಗೆ ಅದ್ಭುತವಾಗಿ ಕಂಡಿತು. ಮರುದಿವಸ ಪಾನೀಯವನ್ನು ಕುಡಿದು ಕಾಡಿನೊಳಗೆ ಹೊರಟರು. ಅವರು ದಣಿವಿಲ್ಲದೆ ನಡೆಯಲಾರಂಭಿಸಿದರು, ಓಡಲಾರಂಭಿಸಿದರು. ಬೆಟ್ಟ ಗುಡ್ಡ ಹತ್ತಿ ಇಳಿಯಲಾರಂಭಿಸಿದರು. ಅವರಿಗೆ ಸುಸ್ತಾಗಲಿಲ್ಲ. ಈ ಶಾಸ್ತ್ರಜ್ಞರ ಗುಂಪಿನಲ್ಲಿ ಒಬ್ಬಾಕೆಗೆ ಅಸ್ತಮವಿತ್ತು. ಈ ಪಾನೀಯವನ್ನು ಸೇವಿಸುತ್ತಿರುವಂತೆ ತನ್ನ ಅಸ್ತಮದ ಲಕ್ಷಣಗಳು ಕಡಿಮೆಯಾಗುತ್ತಿವೆ ಎಂದು ಆಕೆ ಹೇಳಿದಳು.

ನೂಂಬಾ ಎರಡು ತೊಂದರೆಗಳನ್ನು ಉಂಟುಮಾಡುತ್ತಿತ್ತು. ಮೊದಲನೆಯದು ರಾತ್ರಿ ನೂಂಬಾವನ್ನು ಸೇವಿಸಿದರೆ ಅವರಿಗೆ ಸರಿಯಾಗಿ ನಿದ್ದೆ ಬರುತ್ತಿರಲಿಲ್ಲ. ಎರಡನೆಯದು ಒಂದು ದಿವಸ ನೂಂಬಾವನ್ನು ಸೇವಿಸಲಿಲ್ಲವೆಂದರೆ ಮರುದಿವಸ ತಲೆನೋವು ಬರುತಿತ್ತು.

ಮಾನವ ಶಾಸ್ತ್ರಜ್ಞರು ನೂಂಬಾದ ಈ ಎರಡು ಅನನುಕೂಲತೆಗಳನ್ನು ಅಷ್ಟಾಗಿ ಲೆಕ್ಕಿಸಲಿಲ್ಲ. ಅವರಿಗೆ ನೂಂಬಾ ತುಂಬಾ ಹಿಡಿಸಿಬಿಟ್ಟಿತ್ತು! ನ್ಯೂಗಿನಿಯಿಂದ ಹಿಂದಿರುಗುವಾಗ ಒಂದಷ್ಟು ನೂಂಬಾವನ್ನು ತೆಗೆದುಕೊಂಡು ಬಂದರು. ವಿಶ್ವವಿದ್ಯಾಲಯದಲ್ಲಿ ತಮ್ಮ ಸಹೋದ್ಯೋಗಿಗಳಿಗೆ ಕುಡಿಯಲು ಕೊಟ್ಟರು. ನೂಂಬಾ ಅವರಿಗೆಲ್ಲ ತುಂಬಾ ಇಷ್ಟವಾಗಿಬಿಟ್ಟಿತು. ನೂಂಬಾ ಸವಿದ ಕೆಲವು ಸಂಶೋಧಕರು ನೂಂಬಾ ಮೂಲಿಕೆಯ ಗುಣಾವಗುಣಗಳ ಸಮಗ್ರ ಸಂಶೋಧನೆಯನ್ನು ಮಾಡಬಯಸಿದರು. ಮಾನವಶಾಸ್ತ್ರಜ್ಞರು ತುಂಬಾ ಸಂತೋಷದಿಂದ ನೂಂಬಾವನ್ನು ಸಂಶೋಧಕರಿಗೆ ನೀಡಿದರು. ಸಂಶೋಧಕರು ಈ ನೂಂಬಾವನ್ನು ಗಂಭೀರವಾಗಿ ಪರಿಗಣಿಸಿ ಪ್ರಯೋಗಗಳನ್ನು ಆರಂಭಿಸಿದರು. ಅವರ ಮನಕದಡುವಂಥ ಫಲಿತಾಂಶಗಳು ಒಂದೊಂದಾಗಿ ಬರಲಾರಂಭಿಸಿದವು.

- ನೂಂಬಾ ಅತ್ಯುತ್ತಮ ದರ್ಜೆಯ ಚಟ ವಸ್ತುವಾಗಿತ್ತು. ಜನರು ಇದಕ್ಕೆ ದಾಸರಾಗಬಲ್ಲವರಾಗಿದ್ದರು. ಇದನ್ನು ಸತತವಾಗಿ ಉಪಯೋಗಿಸುವವರು ಕಾಲಕ್ರಮೇಣ ತಾಳಿಕೆಯನ್ನು (ಟಾಲರೆನ್ಸ್) ಬೆಳೆಸಿಕೊಳ್ಳುತ್ತಿದ್ದರು. ಅಂದರೆ ಆರಂಭದಲ್ಲಿ ಒಂದು ಲೋಟ ನೂಂಬಾ ನೀಡುವ ಚೈತನ್ಯವು ದಿನಕಳೆದಂತೆ ಎರಡು ಲೋಟ ಸೇವಿಸಿದರೆ ಮಾತ್ರ ದೊರೆಯುತ್ತಿತ್ತು. ಇಲ್ಲವೇ ನೂಂಬಾವನ್ನು ದುಪ್ಪಟ್ಟು ಪ್ರಬಲಗೊಳಿಸಿ ಸೇವಿಸಬೇಕಾಗಿತ್ತು.
- ಒಂದು ದಿವಸ ನೂಂಬಾ ಸೇವನೆಯನ್ನು ತಪ್ಪಿಸಿದರೆ, ಮರುದಿವಸ ತಲೆನೋವು ಬರುತ್ತಿತ್ತು. ಇದು ಹಲವು ಪ್ರತ್ಯಾಹಾರ ಲಕ್ಷಣಗಳಲ್ಲಿ (ವಿತ್‌ಡ್ರಾವಲ್ ಸಿಂಪ್ಟಮ್ - ನೂಂಬಾ ಸೇವನೆಯನ್ನು ಹಠಾತ್ ನಿಲ್ಲಿಸುವುದರಿಂದ ಕಂಡು ಬರುವಂಥವು) ಒಂದಾಗಿತ್ತು. ತಲೆನೋವು ಮಾತ್ರವಲ್ಲದೆ ಮಲಬದ್ಧತೆ, ನಿದ್ರಾಹೀನತೆ ಹಾಗೂ ಇತರ ಚಟ ವಸ್ತುಗಳ ಸೇವನಾ ಬಯಕೆ ಕಂಡು ಬರುತ್ತಿತ್ತು.
- ನೂಂಬಾ ಉತ್ತೇಜಕ (ಸ್ಟಿಮ್ಯುಲೆಂಟ್) ಗುಣವನ್ನು ಹೊಂದಿತ್ತು. ಇದು ನಿದ್ರೆಯನ್ನು ಕೆಡಿಸುತ್ತಿತ್ತು ಎಂಬುದನ್ನು ಮಾನವ ಶಾಸ್ತ್ರಜ್ಞರು ಗಮನಿಸಿದ್ದರಲ್ಲವೆ! ಅದರ ಜತೆಗೆ ಆತಂಕ (ಆಂಕ್ಸೈಟಿ), ಕಿರಿಕಿರಿ (ಇರಿಟಬಿಲಿಟಿ), ರಕ್ತಹೀನತೆ, ಭೇದಿ, ಎದೆ ಉರಿ, ಹೊಟ್ಟೆ ಉರಿ, ಸ್ನಾಯುಬಿಗಿತ ಮುಂತಾದ ಲಕ್ಷಣಗಳನ್ನು ತೋರುತ್ತಿತ್ತು. ಕೆಲವರಲ್ಲಿ ಕ್ರೋಧ ತಡಹಿಡಿಯುವ ಸಾಮರ್ಥ್ಯವನ್ನು ಕಡಿಮೆಗೊಳಿಸಿ ಸಿಡುಕುವಂತೆ ಮಾಡುತ್ತಿತ್ತು.
- ನೂಂಬಾ ಮತ್ತೊಂದು ಗಂಭೀರ ಅವಗುಣವನ್ನು ಹೊಂದಿತ್ತು. ಪ್ರತಿದಿನ 5 ಲೋಟ ನೂಂಬಾ ಕುಡಿಯುತ್ತಿದ್ದರೆ (ಮಾನವ ಶಾಸ್ತ್ರಜ್ಞರು ದಿನವೂ 5 ಲೋಟ ಕುಡಿಯುತ್ತಿದ್ದರು) ಅವರ ಕೊಲೆಸ್ಟರಾಲ್ ಹಾಗೂ ರಕ್ತದೊತ್ತಡ ಏರುತ್ತಿತ್ತು. ಹೃದಯಾಘಾತವಾಗುವ ಸಾಧ್ಯತೆ ದುಪ್ಪಟ್ಟಾಗುತ್ತಿತ್ತು.
- ಕೆಲವು ಅಧ್ಯಯನಗಳನ್ವಯ, ನೂಂಬಾ ಮಕ್ಕಳನ್ನು ಹೆರುವ ಸಾಮರ್ಥ್ಯದ ಮೇಲೆ ದುಷ್ಪರಿಣಾಮ ಬೀರುತ್ತಿತ್ತು. ಗರ್ಭಕಟ್ಟಿದ ಪ್ರಾಣಿಗಳಿಗೆ ನೂಂಬಾ ನೀಡಿದಾಗ, ಅವುಗಳಿಗೆ ಹುಟ್ಟಿದ ಮರಿಗಳು ಅನೇಕ ಜನ್ಮದತ್ತ ವೈಕಲ್ಯಗಳನ್ನು ಹೊಂದಿದ್ದವು.
- ನೂಂಬಾವನ್ನು ಸತತವಾಗಿ ಸೇವಿಸುತ್ತಿದ್ದರೆ, ಅದು ಅರ್ಬುದ ಉದ್ಭವಕ್ಕೆ ಕಾರಣವಾಗಬಹುದೆಂಬ ಗುಮಾನಿಯೂ ಬಲವಾಯಿತು.

ನಿಮಗೆ ನೂಂಬಾ ಬೇಕೆ?: ನೂಂಬಾ ಪಾನೀಯವನ್ನು ತಂದುಕೊಟ್ಟರೆ, ಅದನ್ನು ನೀವು ಕುಡಿಯುವಿರಾ? ನೂಂಬಾ ಕುಡಿಯುವುದರಿಂದ ಚುರುಕುತನ, ಉಲ್ಲಾಸ, ಶಕ್ತಿ ಎಲ್ಲ ಬರುತ್ತದೆ. ಆದರೆ ದೀರ್ಘಕಾಲ ಸೇವಿಸಿದರೆ ಚಟದೊಂದಿಗೆ ನಿದ್ರಾಹೀನತೆ, ಎದೆ ಉರಿ, ಬೇಧಿ, ಅಧಿಕ ರಕ್ತದೊತ್ತಡ, ಹೃದಯಾಘಾತಗಳಾಗುವ ಸಾಧ್ಯತೆಯಿರುತ್ತದೆ. ಮಕ್ಕಳನ್ನು ಹೆರುವ ಸಾಮರ್ಥ್ಯ ದೋಷಪೂರಿತವಾಗಿ ಜನ್ಮದತ್ತ ವೈಕಲ್ಯಗಳನ್ನು ಹೊಂದಿರುವ ಮಕ್ಕಳು ನಿಮಗೆ ಹುಟ್ಟಬಹುದು!

ಏನು ಹೇಳುತ್ತೀರಿ ?: ಬೇಡವೇ ಬೇಡ ಈ ನೂಂಬಾ ಎನ್ನುತ್ತೀರ? ಹಾಗಿದ್ದ ಮೇಲೆ ಕಾಫಿ ಕುಡಿಯುವುದನ್ನು ನಿಲ್ಲಿಸಿಬಿಡಿ. 'ಹಾ! ಏನೆಂದಿರಿ?' ಎನ್ನಬೇಡಿ. ಹೌದು. ಕಾಫಿ ಕುಡಿಯುವುದನ್ನು ಇಂದಿನಿಂದಲೇ ನಿಲ್ಲಿಸಿಬಿಡಿ. ಏಕೆಂದರೆ ನಾವು ನೀವು ಯಾವುದನ್ನು 'ಕಾಫಿ' ಎಂದು ಕರೆಯುತ್ತೇವೆಯೋ, ಅದನ್ನು ನ್ಯೂಗಿನಿ ಸಪ್‌ಸಿಪ್ ಬುಡಕಟ್ಟಿನವರು ನೂಂಬಾ ಎಂದು ಕರೆಯುತ್ತಾರೆ.

ಹಾಂ!

ನೂಂಬಾ ... ಅಲ್ಲ ಅಲ್ಲ ... ಈ ಕಾಫಿ ಇಷ್ಟೊಂದು ಅವಗುಣಗಳನ್ನು ಹೊಂದಿರುವ ಅಪಾಯಕಾರೀ ಪಾನೀಯವೇ? ಬನ್ನಿ, ಕಾಫಿಯ ನಿಜರೂಪವನ್ನು ತಿಳಿಯಲು ಪ್ರಯತ್ನಿಸೋಣ.

ಕಾಫಿಗಿಡವು 'ರುಬಿಯೇಸಿ' ಎಂಬ ಸಸ್ಯ ವಂಶಕ್ಕೆ ಸೇರಿದೆ. ಈ ವಂಶದ ಇತರ ಗಿಡಗಳಲ್ಲಿ ಗಾರ್ಡೀನಿಯ, ಇಪಿಕಾಕ್ ಮತ್ತು ಸಿಂಕೋನ ಮುಖ್ಯವಾದುವು. ಈಗ ಕಾಫಿಯಲ್ಲಿ ಮೂರು ಪ್ರಭೇದಗಳು ಖ್ಯಾತವಾಗಿವೆ. ಅವೇ ಕಾಫೆ ಅರೇಬಿಕ, ಕಾಫೆ ಲಿಬೆರಿಕಾ ಮತ್ತು ಕಾಫೆ ರೋಬಸ್ಟ.

ಕಾಫಿಯ ಗುಣಾವಗುಣಗಳಿಗೆ ಕಾರಣವಾದ ರಾಸಾಯನಿಕವೇ ಕೆಫೀನ್. ಇದು ಕಾಫಿಯಲ್ಲಲ್ಲದೆ ಕೋಕೋ, ಟೀ, ಕೋಲಾ ಮುಂತಾದವುಗಳಲ್ಲೂ ಇರುತ್ತದೆ. ಜತೆಗೆ ನೆಗಡಿ, ಫ್ಲೂ, ತಲೆನೋವಿಗೆ ನೀಡುವ ಕೆಲವು ಗುಳಿಗೆಗಳು, ನಿದ್ರಾ ನಿಯಂತ್ರಕ ಔಷಧ, ಋತುನೋವು ನಿವಾರಕ ಗುಳಿಗೆಗಳಲ್ಲಿಯೂ ಕೆಫೀನ್ ಇರುತ್ತದೆ.

ಕಾಫಿಯಲ್ಲಿರುವ ಕೆಫೀನ್ ಪ್ರಮಾಣ, ಕಾಫಿಯನ್ನು ಹೇಗೆ ಮಾಡುತ್ತೇವೆ ಎಂಬುದನ್ನು ಆಧರಿಸುತ್ತದೆ. ಒಂದು ಕಪ್ ಇನ್‌ಸ್ಟಂಟ್ ಕಾಫಿಯಲ್ಲಿ ಸುಮಾರು 65 ಮಿ. ಗ್ರಾಂ ಕೆಫೀನ್ ಇರುತ್ತದೆ. ಫಿಲ್ಟರ್ ಕಾಫಿಯಲ್ಲಿ 100ರಿಂದ 150 ಮಿ. ಗ್ರಾಂ ಕೆಫೀನ್ ಇರುತ್ತದೆ.

ಕಾಫಿ ಕೇವಲ ನಮ್ಮ ಸಂಸ್ಕೃತಿಯಲ್ಲಿ ಮಾತ್ರವಲ್ಲ, ಜಗತ್ತಿನ ಬಹುಪಾಲು ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿಬಿಟ್ಟಿದೆ. ಮಡಿಯಲ್ಲಿ ಇರುವವರಿಗೂ ಕಾಫಿ ದೋಷವಲ್ಲ! ಅಷ್ಟು ಜನಪ್ರಿಯವಾಗಿಬಿಟ್ಟಿದೆ! ಕಾಫಿ ಸೇವನೆಯಿಂದ ನಮಗಾಗುವ ಉಪಯೋಗಗಳನ್ನು ಈ ಕೆಳಕಂಡಂತೆ ಪಟ್ಟಿಮಾಡಬಹುದು:

- ಇದೊಂದು ಕೇಂದ್ರ ನರಮಂಡಲದ ಉತ್ತೇಜಕ. ದೀರ್ಘಕಾಲ ವಾಹನ ನಡೆಸಬೇಕಾದಾಗ ಕಾಫಿ ಸೇವನೆ ಒಳ್ಳೆಯದು. ಇದು ನಿದ್ರಿಸದಂತೆ ತಡೆಯುತ್ತದೆ. ಏಕಾಗ್ರತೆಗೆ ನೆರವಾಗುತ್ತದೆ. ದಣಿವಾಗುವುದಿಲ್ಲ.
- ನೆಗಡಿ ಮಾತ್ರೆಗಳಲ್ಲಿ ಸಾಮಾನ್ಯವಾಗಿ 'ಹಿಸ್ಟಮಿನ್‌ರೋಧಕ' ಔಷಧವಿರುತ್ತದೆ. ಈ ಔಷಧದ ಪ್ರಮುಖ ಪಾರ್ಶ್ವ ಪರಿಣಾಮ ನಿದ್ರೆ. ಹಾಗಾಗಿ ನೆಗಡಿ ಔಷಧಗಳಲ್ಲಿನ ಕೆಫೀನ್, ಹಿಸ್ಟಮಿನ್‌ರೋಧಕ ಔಷಧದ ಪಾರ್ಶ್ವ ಪರಿಣಾಮವಾದ ನಿದ್ರೆಯನ್ನು ತಡೆಗಟ್ಟಲು ನೆರವಾಗುತ್ತದೆ.

- ಕಾಫಿ ದೈಹಿಕ ಶಕ್ತಿ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ. ಹಾಗಾಗಿ ಕ್ರೀಡಾಸ್ಪರ್ಧಿಗಳು ಕಾಫಿ ಸೇವಿಸಿ ಉತ್ತಮ ಪ್ರದರ್ಶನವನ್ನು ನೀಡಬಹುದು. ಆದರೆ ಎಚ್ಚರಿಕೆ! ಅಂತಾರಾಷ್ಟ್ರೀಯ ಒಲಿಂಪಿಕ್ ಕ್ರೀಡಾ ಕಮಿಟಿಯು ಕ್ರೀಡಾ ಸ್ಪರ್ಧಿಗಳು ಸೇವಿಸಬಾರದು ಎಂದು ನಿಷೇಧಿಸಿರುವ ಔಷಧಗಳ ಪಟ್ಟಿಯಲ್ಲಿ ಕಾಫಿಯೂ ಸೇರಿದೆ. ಸ್ಪರ್ಧಿಯ ಮೂತ್ರದಲ್ಲಿ ನಿಗದಿತ ಪ್ರಮಾಣಕ್ಕಿಂತ ಹೆಚ್ಚಿನ ಕೆಫೀನ್ ಕಂಡುಬಂದರೆ ಅವನು ಪದಕವನ್ನು ಕಳೆದುಕೊಳ್ಳಬಹುದು. ಮುಂದೆ ಸ್ಪರ್ಧೆಗಳಲ್ಲಿ ಭಾಗವಹಿಸದಂತೆ ಬಹಿಷ್ಕಾರಕ್ಕೂ ಒಳಗಾಗಬಹುದು.
- ಕಾಫಿ ಸೇವನೆಯು ಅಸ್ತಮದ ಆಕ್ರಮಣವನ್ನು ಮಂದಗೊಳಿಸಬಲ್ಲದು, ತಡೆಗಟ್ಟಲೂ ಬಲ್ಲದು. ಕೆಫೀನ್ ಶ್ವಾಸನಾಳವನ್ನು ವಿಸ್ತರಿಸುತ್ತದೆ. ಹಾಗಾಗಿ ಗಾಳಿ ಸರಾಗವಾಗಿ ಶ್ವಾಸಕೋಶಗಳಲ್ಲಿ ಚಲಿಸಬಲ್ಲದು. ಅಮೆರಿಕ ಮತ್ತು ಯುರೋಪಿನ ನಾಟಿವೈದ್ಯರು ಅಸ್ತಮ ತಡೆಗಟ್ಟಲು ಕಾಫಿ ಕಷಾಯವನ್ನು ನೀಡುತ್ತಿದ್ದರು. ಇದನ್ನು ಇಂದಿನ ವೈದ್ಯ ವಿಜ್ಞಾನವೂ ಬೆಂಬಲಿಸುತ್ತದೆ.
- ಕಾಫಿಯು ಕೆಲವರಲ್ಲಿ ದೇಹದ ತೂಕವನ್ನು ಇಳಿಸುತ್ತದೆ. ಕಾಫಿ ಸೇವನೆಯು ಇವರ ಮೂಲ ಉಪಚಯ ವೇಗವನ್ನು (ಬೇಸಿಕ್ ಮೆಟಬಾಲಿಕ್ ರೇಟ್) ಶೇ.4ರಷ್ಟು ಹೆಚ್ಚಿಸಬಲ್ಲದು. ಇದರ ಫಲವಾಗಿ ಇವರ ದೇಹದ ಬೊಜ್ಜು ಸ್ವಲ್ಪ ಕರಗುತ್ತದೆ.
- ಅಂತಾರಾಷ್ಟ್ರೀಯ ಪ್ರಯಾಣಿಕರ ಒಂದು ಪ್ರಮುಖ ಸಮಸ್ಯೆಯೆಂದರೆ ಜೆಟ್ ದಣಿವು (ಜೆಟ್ ಲ್ಯಾಗ್). ಇವರು ದಿನವೊಂದರಲ್ಲಿ ಹಲವು ಕಾಲ, ಪ್ರದೇಶಗಳನ್ನು ಕ್ರಮಿಸಬೇಕಾಗುತ್ತದೆ. ಹಾಗಾಗಿ ಇವರಲ್ಲಿ ನಿದ್ರಾಹೀನತೆ, ಸುಸ್ತು, ಕಾಲದೇಶಗಳ ಪರಿವೆಯಿಲ್ಲದ ಭ್ರಾಂತ ಸ್ಥಿತಿಯು ತಲೆದೋರುತ್ತದೆ. ಇದನ್ನು ತಡೆಗಟ್ಟಲು ಕಾಫಿಯನ್ನು ಸೇವಿಸಬೇಕು. ಕೆಲವು ವಿಮಾನಗಳಲ್ಲಿ ನೀವು ಪಶ್ಚಿಮಾಭಿಮುಖವಾಗಿ ಪಯಣಿಸುತ್ತಿದ್ದರೆ ಕಾಫಿಯನ್ನು ಬೆಳಗಿನಜಾವ ಸೇವಿಸಬೇಕೆಂದು, ಪೂರ್ವಾಭಿಮುಖವಾಗಿ ಹೋಗುತ್ತಿದ್ದರೆ ಮಧ್ಯಾಹ್ನದ ಹೊತ್ತು ಅಥವಾ ಸಂಜೆಯ ಹೊತ್ತು ಸೇವಿಸುವುದು ಉತ್ತಮ ಎಂದು ಸಲಹೆ ನೀಡುತ್ತಾರೆ.

ಕಾಫಿ ಸೇವನೆಯಿಂದ ನಮಗೆ ಸಂಭವಿಸಬಹುದಾದ ತೊಂದರೆಗಳು ಸಾಕಷ್ಟಿವೆ. ಈ ಬಗ್ಗೆ ಅನೇಕ ಸಂಶೋಧನೆಗಳೂ, ಅಧ್ಯಯನಗಳೂ ನಡೆದಿವೆ. ಇಂದಿಗೂ ನಡೆಯುತ್ತಿವೆ. ಅವುಗಳನ್ನು ಈ ಕೆಳಕಂಡಂತೆ ಸಂಗ್ರಹಿಸಬಹುದು:

- ಕಾಫಿ ಸೇವನೆಯು ಜಠರಾಮ್ಲದ ಉತ್ಪಾದನೆಯನ್ನು ತೀವ್ರಗೊಳಿಸುತ್ತದೆ. ಹಾಗಾಗಿ ಜಠರ ಅಥವಾ ಕರುಳಿನಲ್ಲಿ ಹುಣ್ಣುಗಳನ್ನು ಹೊಂದಿರುವವರು ಕಾಫಿ ಸೇವನೆ ನಿಲ್ಲಿಸಬೇಕು ಅಥವಾ ಮಿತಿಗೊಳಿಸಬೇಕು.
- ಮೂರು ಲೋಟ ಕಾಫಿ ಸೇವನೆಯು ರಕ್ತದೊತ್ತಡವನ್ನು ಶೇ.15ರಷ್ಟು ಹೆಚ್ಚಿಸುತ್ತದೆ. ನಿಮ್ಮ ಕುಟುಂಬದಲ್ಲಿ ಯಾರಿಗಾದರೂ ಹೃದಯಾಘಾತವಾಗಿದ್ದರೆ ಅಥವಾ ಲಕ್ವ ಹೊಡೆದಿದ್ದರೆ ನೀವು ಹುಷಾರಾಗಬೇಕು. ಕಾಫಿಯನ್ನು ಸೇವಿಸಬಹುದೆ? ಎಷ್ಟರವರೆಗೆ ಸೇವಿಸಬಹುದು? ಎಂದು ಒಮ್ಮೆ ನಿಮ್ಮ ವೈದ್ಯರಲ್ಲಿ ವಿಚಾರಿಸುವುದು ಒಳ್ಳೆಯದು.
- ನೀವು ಪ್ರತಿದಿನ ಬೆಳಗ್ಗೆ ಒಂದೆರಡು ಕಪ್ ಕಾಫಿ ಕುಡಿಯುತ್ತಿದ್ದರೆ ನಿಮ್ಮ ಕೊಲೆಸ್ಟರಾಲ್ ಪ್ರಮಾಣವು ಶೇ.5ರಷ್ಟು ಹೆಚ್ಚಬಹುದು. ದಿನಕ್ಕೆ 5ರಿಂದ 10 ಕಪ್ ಕುಡಿಯುತ್ತಿದ್ದರೆ ಈ ಪ್ರಮಾಣವು ಶೇ.10ರಷ್ಟನ್ನು ಮೀರಬಹುದು. ಕುದಿಸಿದ ಕಾಫಿ ಮಾತ್ರ ಕೊಲೆಸ್ಟರಾಲ್ ಹೆಚ್ಚಳಕ್ಕೆ ಕಾರಣವಾಗುತ್ತದೆ ಎಂಬಂಶವನ್ನು ಇತ್ತೀಚಿನ ಸಂಶೋಧನೆಗಳು ಹೊರಗೆಡವಿದೆ. ಇನ್‌ಸ್ಟಂಟ್ ಕಾಫಿ ಅಥವಾ ಫಿಲ್ಟರ್ ಕಾಫಿ ಸೇವನೆ ಕೊಲೆಸ್ಟರಾಲನ್ನು ಹೆಚ್ಚಿಸುವುದಿಲ್ಲವಂತೆ. ಈ ವೈರುಧ್ಯಕ್ಕೆ ನಿಖರವಾದ ಕಾರಣ ಮಾತ್ರ ವಿಜ್ಞಾನಿಗಳಿಗೆ ತಿಳಿದಿಲ್ಲ.

ನಿಮ್ಮ ಕೊಲೆಸ್ಟರಾಲ್ ಪ್ರಮಾಣ ಅಧಿಕವಾಗಿದ್ದು, ಹೃದ್ರೋಗ ಅಥವಾ ಲಕ್ವಕ್ಕೆ ಎಡೆಗೊಡುವ ಸಾಧ್ಯತೆಯಿದ್ದಲ್ಲಿ ಕಾಫಿ ಸೇವನೆಯ ಬಗ್ಗೆ ನಿಮ್ಮ ವೈದ್ಯರಲ್ಲಿ ಒಮ್ಮೆ ವಿಚಾರಿಸಿ. ಕಾಫಿ ಸೇವನೆಯನ್ನು ಬಿಡಲು ಅಸಾಧ್ಯವಾದಲ್ಲಿ ಇನ್‌ಸ್ಟಂಟ್ ಅಥವಾ ಫಿಲ್ಟರ್ ಕಾಫಿಯನ್ನು ಮಾತ್ರ ಸೇವಿಸಿ.

- ಕಾಫಿ ಸೇವನೆಯು ಅಧಿಕ ರಕ್ತದೊತ್ತಡ, ಅಧಿಕ ಕೊಲೆಸ್ಟರಾಲ್‌ಗಳಿಗೆ ಕಾರಣವಾಗುವುದರ ಜತೆಗೆ ಹೃದಯಾಘಾತ ಸಾಧ್ಯತೆಯನ್ನು ದುಪ್ಪಟ್ಟು ಗೊಳಿಸಿದರೆ, 10 ಕಪ್ ಸೇವನೆ ಮುಪ್ಪಟ್ಟುಗೊಳಿಸುತ್ತದೆ ಎಂದು ಹೇಳುತ್ತದೆ 'ಅಮೆರಿಕನ್ ಜರ್ನಲ್ ಆಫ್ ಎಪಿಡೆಮಿಯಾಲಜಿ'ಯ ಒಂದು ಲೇಖನ.
- ಜನ್ಮದತ್ತ ವೈಕಲ್ಯಗಳಿಗೆ ಕೆಫೀನ್ ಕಾರಣವಾಗಬಹುದು ಎಂಬುದನ್ನು ಪ್ರಾಣಿಗಳ ಮೇಲೆ ನಡೆದಿರುವ ಅನೇಕ ಅಧ್ಯಯನಗಳು ತೋರಿಸಿವೆ. ಒಬ್ಬ ಕಾಫಿ ಭಕ್ತ ಎಷ್ಟು ಕೆಫೀನನ್ನು ಕಾಫಿಯ ಮೂಲಕ ಸೇವಿಸಬಹುದೋ, ಅದಕ್ಕಿಂತಲೂ ಹಲವು ಪಟ್ಟು ಹೆಚ್ಚಿನ ಕೆಫೀನನ್ನು ಈ ಪ್ರಾಣಿಗಳಿಗೆ ನೀಡಲಾಗಿತ್ತು. ಹಾಗಾಗಿ ಪ್ರಾಣಿಗಳಲ್ಲಿ ಕಂಡುಬಂದ ಫಲಿತಾಂಶವನ್ನು ಮನುಷ್ಯರಿಗೆ ಅನ್ವಯಿಸುವುದು ತರವಲ್ಲ. ಆದರೂ ಸಹ ಗರ್ಭವತಿಯರು ಕಾಫಿ ಸೇವನೆಯ ಬಗ್ಗೆ ತುಸು ಎಚ್ಚರವಹಿಸುವುದು ಒಳ್ಳೆಯದು.
- ಕಾಫಿ ಸೇವನೆಯು ಸ್ತನಾರ್ಬುದ, ಮೂತ್ರಾಶಯಾರ್ಬುದ, ಅಂಡಾಶಯಾರ್ಬುದ, ಮಾಂಸಲಿಯಾರ್ಬುದ (ಪ್ಯಾಂಕ್ರಿಯಾಸ್ ಕ್ಯಾನ್ಸರ್) ಮತ್ತು ಶುಕ್ಲ ಗ್ರಂಥಿ ಅರ್ಬುದ (ಪ್ರಾಸ್ಟ್ರೇಟ್ ಕ್ಯಾನ್ಸರ್)ಗಳಿಗೆ ಕಾರಣವಾಗಬಹುದು ಎಂದು ಹೇಳಲಾಗಿದೆ. ಈ ಹೇಳಿಕೆ ಆಧಾರರಹಿತವಾದದ್ದು ಎಂದು ಕೆಲವು ಅಧ್ಯಯನಗಳು ವಾದಿಸಿವೆ. ಹಾಗಾಗಿ ಕಾಫಿ ಸೇವನೆಗೂ ಹಾಗೂ ಅರ್ಬುದೋದ್ಭವಕ್ಕೂ ಇರಬಹುದಾದ ನಂಟಿನ ಬಗ್ಗೆ ಸ್ಪಷ್ಟ ಚಿತ್ರ ಇನ್ನೂ ನಮಗೆ ದೊರೆಯಬೇಕಿದೆ. ಆದರೂ, ಕಾಫಿ ಬೀಜವನ್ನು ಹುರಿದಾಗ ಕೆಲವು ಕ್ಯಾನ್ಸರ್ ಕಾರಕಗಳು ರೂಪುಗೊಳ್ಳುತ್ತವೆ ಎಂದು ಭಾವಿಸಲಾಗಿದೆ. ಹಾಗಾಗಿ ಆನುವಂಶಿಕ ಕ್ಯಾನ್ಸರ್ ಹಿನ್ನೆಲೆಯನ್ನು ಹೊಂದಿರುವ ಜನರು ಕಾಫಿ ಸೇವನೆಯನ್ನು ಮಿತಗೊಳಿಸಬಹುದು.
- ಕಾಫಿ ಸೇವನೆಯು ಮಹಿಳೆಯರ ಸ್ತನಗಳಲ್ಲಿ 'ನಾರಿ ನೀರುಚೀಲ'ಗಳನ್ನು (ಫೈಬ್ರೋಸಿಸ್ಟ್) ಉಂಟುಮಾಡಬಹುದು ಎಂದು ಕೆಲವು ಅಧ್ಯಯನಗಳು ಸೂಚಿಸಿವೆ. ಇದೊಂದು ಅಪಾಯರಹಿತ ನೀರುಗಡ್ಡೆ. ಆದರೆ ಸಾಕಷ್ಟು ಕಿರಿಕಿರಿಯನ್ನುಂಟುಮಾಡಬಹುದು. ನಿಮಗೆ ಅಂಥ ತೊಂದರೆಗಳಿದ್ದಲ್ಲಿ ಎಲ್ಲ ಕೆಫೀನ್ ಮೂಲಗಳನ್ನು ವರ್ಜಿಸಿ. ಅಂದರೆ ಕಾಫಿ, ಟೀ, ಕೋಕೋ, ಚಾಕಲೇಟ್, ಕೆಫೀನ್‌ಯುಕ್ತ ಪಾನೀಯ ಹಾಗೂ ಔಷಧಗಳನ್ನು ಸೇವಿಸಬೇಡಿ. ಕಿರಿಕಿರಿ ಕಡಿಮೆಯಾದರೆ, ಕೆಫೀನನ್ನು ಸದಾಕಾಲಕ್ಕೆ ನಿಲ್ಲಿಸಬಹುದು.
- ಕೆಫೀನ್, ಕಬ್ಬಿಣದ ಅಂಶದ ಹೀರಿಕೆಯನ್ನು ಏರುಪೇರು ಮಾಡುತ್ತದೆ. ಹಾಗಾಗಿ ಕಬ್ಬಿಣಾಂಶ ಕೊರತೆಯ ರಕ್ತಹೀನತೆಯನ್ನು ಹೊಂದಿರುವವರು ಅಥವಾ ಅನಿಯಂತ್ರಿತ ಮಾಸಿಕ ಋತುಧರ್ಮವನ್ನು ಹೊಂದಿರುವವರು ಕಾಫಿ ಸೇವನೆಯನ್ನು ನಿಲ್ಲಿಸುವುದೊಳ್ಳೆಯದು.
- ದಿನಕ್ಕೆ ಒಂದು ಕಪ್ ಕಾಫಿ ಸೇವಿಸುವ ಮಹಿಳೆಯರಲ್ಲಿ ಗರ್ಭ ಕಟ್ಟುವ ಸಾಮರ್ಥ್ಯ ಅರ್ಧದಷ್ಟು ಕಡಿಮೆಯಾಗಬಹುದು ಎಂದು 'ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಎನ್ವೈರ್ನಮೆಂಟಲ್ ಹೆಲ್ತ್'ನ ಅಧ್ಯಯನ ತಿಳಿಸುತ್ತದೆ. ಹಾಗಾಗಿ ಗರ್ಭಧರಿಸಬಯಸುವ ಮಹಿಳೆಯರು ಹಾಗೂ ಗರ್ಭಧರಿಸುವಲ್ಲಿ ತೊಂದರೆಯಾಗಿರುವ ಮಹಿಳೆಯರು ಕಾಫಿ ಸೇವನೆಯನ್ನು ನಿಲ್ಲಿಸುವುದೊಳ್ಳೆಯದು. ಕಾಫಿ ಸೇವನೆ ಗರ್ಭಕಟ್ಟುವುದನ್ನು ತಡೆಯುತ್ತದೆ ಎನ್ನುವುದಾದರೆ, ಅದನ್ನು ಸಂತಾನ ನಿಯಂತ್ರಕವಾಗಿ ಬಳಸಬಹುದೆ ಎಂದೇ ಹೇಳಬೇಕಾಗುತ್ತದೆ. ಕಾಫಿ ಸೇವನೆಯು ಗರ್ಭಕಟ್ಟುವ ಸಾಮರ್ಥ್ಯಕ್ಕೆ ಸ್ವಲ್ಪಮಟ್ಟಿಗೆ ಅಡ್ಡಿಯನ್ನು ಉಂಟು ಮಾಡುತ್ತದೆಯೇ ಹೊರತು ಅದನ್ನು ಪರಿಪೂರ್ಣ ತಡೆಗಟ್ಟುವುದಿಲ್ಲ.

ಈಗ ಒಂದು ಪ್ರಶ್ನೆಯನ್ನು ಕೇಳಲೇಬೇಕಾಗುತ್ತದೆ. ನಿಜಕ್ಕೂ ಕಾಫಿ ಸೇವನೆಯು ಸುರಕ್ಷಿತವೇ?

ಆರೋಗ್ಯವಾಗಿರುವ, ಗರ್ಭಿಣಿಯಲ್ಲದೆ, ಬಾಣಂತಿಯಲ್ಲದೆ, ಹೊಟ್ಟೆಹುಣ್ಣು, ಅತಿರಕ್ತದೊತ್ತಡ, ಸಕ್ಕರೆ ಕಾಯಿಲೆ, ಅತಿ ಕೊಲೆಸ್ಟ್ರಾಲ್, ಆತಂಕ, ಗರ್ಭಧಾರಣಾ ತೊಂದರೆಗಳು, ಹೃದಯರೋಗಗಳು ಇತ್ಯಾದಿಗಳನ್ನು ಹೊಂದಿದವರು ಕಾಫಿಯನ್ನು ಮಿತವಾಗಿ ಸೇವಿಸಿದರೆ, ಬಹುಶಃ ಅವರಿಗೆ ಕಾಫಿ ಸುರಕ್ಷಿತ ಪಾನೀಯವಾಗಬಲ್ಲದು. ಕಾಫಿಯನ್ನು ಎರಡು ವರ್ಷಗಳಿಗಿಂತ ಕಡಿಮೆ ವಯಸ್ಸಿನ ಮಕ್ಕಳಿಗೆ ಕೊಡಬಾರದು. 65 ವರ್ಷ ಮೀರಿದವರಿಗೂ ಅಷ್ಟು ಒಳ್ಳೆಯದಲ್ಲ. ಕಾಫಿಯನ್ನು ಪಾನೀಯ ರೂಪದಲ್ಲಿ ದಿನಕ್ಕೆ ಮೂರು ಕಪ್‌ಗಳಷ್ಟು ಸೇವಿಸಬಹುದು. ಇದಕ್ಕಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಸೇವಿಸಿದಾಗ ಕಿರಿಕಿರಿ, ನಡುಕ, ಆತಂಕ, ನರಬೇನೆ (ಆಂಕ್ಸೈಟಿ ನ್ಯೂರೋಸಿಸ್), ನಿದ್ರಾಹೀನತೆ, ಹೃದಯಬಡಿತ ಹೆಚ್ಚಳ, ಬೇಧಿ, ಎದೆ ಉರಿ ಇತ್ಯಾದಿ ತೊಂದರೆಗಳು ಕಂಡುಬರಬಹುದು. ಕೆಫೀನನ್ನು ಔಷಧ ರೂಪದಲ್ಲಿ ಸೇವಿಸಬಯಸುವುದಾದರೆ ಅದಕ್ಕೆ ವೈದ್ಯರ ಮಾರ್ಗದರ್ಶನ ಅಗತ್ಯ!

ಕೊನೆಯ ಮಾತು: ನಿಮ್ಮ ಮನೆಯ ಮುಂದೆ ಸ್ಥಳವಿದ್ದರೆ ಒಂದೆರಡು ಕಾಫಿ ಗಿಡ ನೆಡಿ. ಇದರ ಬಿಳಿ ಬಿಳಿ ಹೂವುಗಳು ಬಲು ಸುಂದರ-ಆಕರ್ಷಕ, ಸುವಾಸನೆಯೂ ಆಹ್ಲಾದಕರ!

ರೆಪ್ಪೆಗಳ ಮೌನ: ಡಿಜಿಟಲ್ ಯುಗದ ಅಳಿಯದ ನೆನಪು

● ಲಕ್ಷ್ಮೀಕಾಂತ್ ಎಲ್.ವಿ. ತುಮಕೂರು

ಮೌನವಾಗಿ ಬಡಿಯುವ ರೆಪ್ಪೆಗಳ ಹಿಂದೆ ಅಡಗಿರುವ ನೆನಪುಗಳು ಶಬ್ದಗಳಿಗಿಂತಲೂ ಹೆಚ್ಚು ಅರ್ಥಪೂರ್ಣವಾಗಿರುತ್ತವೆ. ಕಣ್ಣು ಮುಚ್ಚಿದಾಗ ಕಾಣುವ ಚಿತ್ರಗಳು, ಕಣ್ಣು ಬಿಟ್ಟಾಗ ಕಣ್ಮರೆಯಾಗುವ ಆತಂಕಗಳು ಮತ್ತು ಈ ಎರಡರ ನಡುವೆ ಮಿಡಿಯುವ ನೆನಪು ಎಂಬ ಜೀವಂತಿಕೆ ಇಂದು ನಮ್ಮ ಆಧುನಿಕ ಬದುಕಿನ ಚಕ್ರದಡಿಯಲ್ಲಿ ಸಿಲುಕಿದೆ. ಇಂದಿನ ಡಿಜಿಟಲ್ ಯುಗದಲ್ಲಿ ಎಲ್ಲವೂ ದಾಖಲೀಕರಣಗೊಳ್ಳುತ್ತಿವೆ, ಆದರೆ ಅನುಭವಗಳು ಮಾತ್ರ ಕ್ಷಣಿಕವಾಗುತ್ತಿವೆ. ಇಂಥ ಹೊತ್ತಿನಲ್ಲಿ, ಮರೆಯಲಾರದ ಹೆಸರನ್ನು ಹೃದಯದ ಮೇಲೆ ಬರೆಯುವುದು ಕೇವಲ ಪ್ರೇಮವಲ್ಲ; ಅದು ಕಳೆದುಹೋಗುತ್ತಿರುವ ಮನುಷ್ಯ ಸಂಬಂಧಗಳ ಕುರುಹು.

ವರ್ತಮಾನದ ವಾಸ್ತವ: ಇಂದು ನಮ್ಮ ರೆಪ್ಪೆಗಳು ಬಡಿಯುವುದಕ್ಕಿಂತ ಹೆಚ್ಚಾಗಿ ಮೊಬೈಲ್ ಸ್ಕ್ರೀನ್‌ಗಳ ಮೇಲೆ ಬೆರಳುಗಳು ಚಲಿಸುತ್ತಿವೆ. ನಾವು ಮರೆಯಬಾರದು ಎಂದು ಅಂದುಕೊಂಡಿದ್ದನ್ನು ಕ್ಲೌಡ್ ಸ್ಟೋರೇಜ್‌ನಲ್ಲಿ ಸಂಗ್ರಹಿಸುತ್ತಿದ್ದೇವೆಯೇ ಹೊರತು, ಮನಸ್ಸಿನ ಒಳಗಲ್ಲ. ಹಿಂದಿನ ಕಾಲದಲ್ಲಿ ಒಬ್ಬರ ಹೆಸರು ಕೇಳಿದ ಕೂಡಲೇ ಅವರ ನೆನಪು ಇಡೀ ದೇಹದಲ್ಲಿ ಹರಿಯುತ್ತಿತ್ತು. ಆದರೆ ಇಂದು, ಸಾವಿರಾರು ಫೋಟೋಗಳಿದ್ದರೂ ಆಪ್ತತೆಯ ಕೊರತೆ ಕಾಡುತ್ತಿದೆ. ಸಾಮಾಜಿಕವಾಗಿ ನೋಡುವುದಾದರೆ, ನಾವು ಎಲ್ಲರೊಂದಿಗೂ ಸಂಪರ್ಕದಲ್ಲಿದ್ದೇವೆ, ಆದರೆ ಭಾವನಾತ್ಮಕವಾಗಿ ಒಂದಾಗಿಲ್ಲ. ರೆಪ್ಪೆಗಳ ಸದ್ದಿನಲ್ಲಿ ಹೆಸರನ್ನು ಬರೆಯುವ ಏಕಾಂತದ ಸಂಭ್ರಮ ಇಂದಿನ ಸಾಮಾಜಿಕ ಜಾಲತಾಣದ ಜಗತಿನಲ್ಲಿ ಇಲ್ಲವಾಗಿದೆ. ಲೈಕ್ ಮತ್ತು ಕಮೆಂಟ್‌ಗಳ ಅಬ್ಬರದಲ್ಲಿ, ಮೌನವಾಗಿ ಒಬ್ಬರ ಹೆಸರನ್ನು ಮೆಲುಕುಹಾಕುವ ಆ ಅನಿರ್ವಚನೀಯ ಸುಖವನ್ನು ಆಧುನಿಕ ಮಾನವ ಕಳೆದುಕೊಳ್ಳುತ್ತಿದ್ದಾನೆಯೇ ಎಂಬ ಆತಂಕ ಕಾಡುತ್ತಿದೆ.

ಮರೆಯಲಾಗದ ಭಾವಗಳ ಸಂಘರ್ಷ: ಇಂದಿನ ತಾಂತ್ರಿಕ ಯುಗದಲ್ಲಿ ಹೆಸರೆಂಬುದು ಕೇವಲ ಒಂದು 'ಯೂಸರ್ ನೇಮ್' ಅಥವಾ 'ಪ್ರೊಫೈಲ್' ಆಗಿ ಮಾರ್ಪಟ್ಟಿದೆ. ಸಾವಿರಾರು ಜನರ ಪರಿಚಯ ನಮಗಿದ್ದರೂ, ರೆಪ್ಪೆಗಳ ಸದ್ದಿನಲ್ಲಿ ಮೂಡುವ ಆ ಒಂದು ವಿಶೇಷ ಹೆಸರು ಮಾತ್ರ ನಮ್ಮ ಅಸ್ತಿತ್ವದ ಭಾಗವಾಗಿರುತ್ತದೆ. ಆಧುನಿಕ ಸಮಾಜದಲ್ಲಿ ನಾವು ವ್ಯಕ್ತಿಗಳಿಗಿಂತ ಹೆಚ್ಚಾಗಿ ಅವರ ಸಾಮಾಜಿಕ ಸ್ಥಾನಮಾನ ಅಥವಾ ಡಿಜಿಟಲ್ ಉಪಸ್ಥಿತಿಯನ್ನು ಗಮನಿಸುತ್ತಿದ್ದೇವೆ. ಆದರೆ, ಅಸಲಿ ಬದುಕು ಇರುವುದು ಸ್ಕ್ರೀನ್‌ನ ಆಚೆಗಿನ ಮೌನದಲ್ಲಿ. ನಾವು ಎಷ್ಟೇ ವೇಗವಾಗಿ ಪ್ರಗತಿ ಹೊಂದಿದರೂ, ರಾತ್ರಿಯ ಏಕಾಂತದಲ್ಲಿ ನಮಗೆ ಅರಿವಿಲ್ಲದಂತೆ ಕಣ್ಣಂಚಿನಲ್ಲಿ ಮೂಡುವ ಹನಿ ಅಥವಾ ರೆಪ್ಪೆಗಳ ಬಡಿತದಲ್ಲಿ ಮಿಡಿಯುವ ಹೆಸರು ನಮ್ಮನ್ನು ನಮ್ಮ ಬೇರುಗಳಿಗೆ ತಂದು ನಿಲ್ಲಿಸುತ್ತದೆ. ಈ ಸಾಂಸ್ಕೃತಿಕ ವಿರೋಧಾಭಾಸವೇ ಇಂದಿನ ವಾಸ್ತವ; ಅಂದರೆ, ಹೊರಜಗತ್ತಿಗೆ ನಾವು ಎಲ್ಲವನ್ನೂ ಮರೆತಂತೆ ನಟಿಸಿದರೂ, ಒಳಗಣ್ಣಿನ ಪರದೆಯ ಮೇಲೆ ಮರೆಯದ ಆ ಹೆಸರನ್ನು ಅಚ್ಚೊತ್ತಿಟ್ಟುಕೊಂಡಿರುತ್ತೇವೆ. ಇದು ಕೇವಲ ವೈಯಕ್ತಿಕ ಭಾವನೆಯಲ್ಲ, ಬದಲಿಗೆ ಯಾಂತ್ರಿಕವಾಗುತ್ತಿರುವ ಸಮಾಜದಲ್ಲಿ ಮನುಷ್ಯತ್ವವನ್ನು ಉಳಿಸಿಕೊಳ್ಳುವ ಒಂದು ಗುಪ್ತ ಪ್ರತಿರೋಧವೂ ಹೌದು.



ಸಂಬಂಧಗಳ ಸಂರಚನೆ ಮತ್ತು ಮರೆವು: ನಮ್ಮ ಸಾಂಸ್ಕೃತಿಕ ಬೇರುಗಳಲ್ಲಿ ನೆನಪು ಮತ್ತು ಋಣಕ್ಕೆ ದೊಡ್ಡ ಸ್ಥಾನವಿದೆ. ಹಿರಿಯರು ಹೇಳುತ್ತಿದ್ದರು- ''ಒಬ್ಬರನ್ನು ಪ್ರೀತಿಸಿದರೆ ಅಥವಾ ಗೌರವಿಸಿದರೆ ಅದು ಮಣ್ಣಾದ ಮೇಲೂ ಮರೆಯಬಾರದು'' ಎಂದು. ಆದರೆ ಇಂದಿನ ಸಂಸ್ಕೃತಿಯು ಬಳಸಿ ಬಿಸಾಡುವ ಮನಸ್ಥಿತಿಗೆ ಒಗ್ಗಿಕೊಂಡಿದೆ. ವೃತ್ತಿಜೀವನದ ಓಟದಲ್ಲಿ, ವಲಸೆಯ ಅನಿವಾರ್ಯತೆಯಲ್ಲಿ ನಾವು ಬೆಳೆದ ಹಳ್ಳಿ, ಆಡಿದ ಗೆಳೆಯರು ಮತ್ತು ಹರಸಿದ ಹಿರಿಯರ ಹೆಸರುಗಳು ರೆಪ್ಪೆಗಳ ಸದ್ದಿನಲ್ಲಿ ಅಡಗಿವೆಯೇ ಹೊರತು ಸಂಭಾಷಣೆಗೆ ಬರುತ್ತಿಲ್ಲ. ಇಂದಿನ ಜಗತ್ತಿನಲ್ಲಿ ಕ್ಷಣಿಕ ಸಂಬಂಧಗಳ ನಡುವೆ, ಮರೆತರೂ ಮರೆಯದ ಹಾಗೆ ಎಂಬ ಸಿದ್ಧಾಂತಕ್ಕೆ ಬೆಲೆಯೇ ಇಲ್ಲದಂತಾಗಿದೆ. ಜನರು ವ್ಯಕ್ತಿಗಳಿಗಿಂತ ಹೆಚ್ಚಾಗಿ ಅವರ ವ್ಯಕ್ತಿತ್ವದ ಲಾಭಗಳನ್ನು ಪ್ರೀತಿಸುತ್ತಿದ್ದಾರೆ. ಇಂಥ ಸನ್ನಿವೇಶದಲ್ಲಿ, ಒಬ್ಬರ ಹೆಸರನ್ನು ಮರೆಯಲಾಗದ ಸ್ಥಿತಿಯಲ್ಲಿ ಇಟ್ಟುಕೊಳ್ಳುವುದು ಒಂದು ರೀತಿಯ ಮಾನಸಿಕ ಕ್ರಾಂತಿಯೇ ಸರಿ. ಇದು ನಮ್ಮ ಮೂಲ ಸಂಸ್ಕೃತಿಗೆ ಮರಳುವ ಹಾದಿಯನ್ನು ಸೂಚಿಸುತ್ತದೆ.

ಹೊಸ ಕಾಲದ ಸವಾಲು: ಒಂದು ನೈಜ ಉದಾಹರಣೆಯೆಂದರೆ, ಇಂದಿನ ಕಾರ್ಪೊರೇಟ್ ಜಗತ್ತಿನ ಒತ್ತಡದಲ್ಲಿರುವ ಯುವಕನೊಬ್ಬ ತನ್ನ ಅಜ್ಜಿಯ ಹೆಸರನ್ನೋ ಅಥವಾ ತಾನು ಹಚ್ಚಿಕೊಂಡಿದ್ದ ಗೆಳೆಯನ ಹೆಸರನ್ನೋ ನೆನಪಿಸಿಕೊಳ್ಳುವುದಕ್ಕೂ ಸಮಯವಿಲ್ಲದವನಾಗಿದ್ದಾನೆ. ನಾವು ಎಷ್ಟೇ ಆಧುನಿಕರಾದರೂ, ಎಷ್ಟೇ ಯಾಂತ್ರಿಕ ಬದುಕನ್ನು ನಡೆಸಿದರೂ, ನಮ್ಮೊಳಗಿನ ಜೀವಂತಿಕೆ ಬಡಿಯುವುದು ಕೇವಲ ಭಾವನೆಗಳ ಮೂಲಕವೇ. ಸಾಮಾಜಿಕ ಜಾಲತಾಣಗಳಲ್ಲಿ ಪ್ರದರ್ಶಿಸುವ ಸಂಬಂಧಗಳಿಗಿಂತ, ರೆಪ್ಪೆಗಳ ಮೌನದಲ್ಲಿ ಬಚ್ಚಿಟ್ಟಿರುವ ಸಂಬಂಧಗಳೇ ಹೆಚ್ಚು ನೈಜವಾದವು. ಅವುಗಳಿಗೆ ಯಾವುದೇ ಫಿಲ್ಟರ್‌ಗಳ ಅಗತ್ಯವಿಲ್ಲ, ಯಾವುದೇ ಪ್ರಚಾರದ ಹಂಗಿಲ್ಲ. ಅದು ಆತ್ಮದ ಭಾಷೆ.

ಮರೆವಿನ ನಡುವೆ ಅಳಿಯದ ಗುರುತು: ಕೊನೆಯದಾಗಿ, ಆಧುನಿಕ ವರ್ತಮಾನದಲ್ಲಿ ರೆಪ್ಪೆಗಳ ಸದ್ದಿನಲ್ಲಿ ಹೆಸರನ್ನು ಬರೆಯುವುದು ನಮ್ಮ ಅಸ್ಮಿತೆಯ ಹುಡುಕಾಟಕ್ಕಾಗಿ. ನಾವು ಯಾರನ್ನು ಮರೆಯಬಾರದೆಂದು ಬಯಸುತ್ತೇವೆಯೋ ಅವರೇ ನಮ್ಮನ್ನು ಮನುಷ್ಯರನ್ನಾಗಿ ಇಟ್ಟಿರುತ್ತಾರೆ. ತಂತ್ರಜ್ಞಾನ ಎಷ್ಟೇ ಬೆಳೆದರೂ, ಕೃತಕ ಬುದ್ಧಿಮತ್ತೆಯು ನಮ್ಮ ಬದುಕನ್ನು ಆವರಿಸಿದರೂ, ಮನುಷ್ಯನ ಕಣ್ಣೀರ ಹನಿ ಮತ್ತು ರೆಪ್ಪೆಯ ಮಿಡಿತಕ್ಕೆ ಇರುವ ಬೆಲೆ ಯಾವುದಕ್ಕೂ ಇಲ್ಲ. ನಮ್ಮ ಸಂಸ್ಕೃತಿಯ ಸೊಗಡನ್ನು ಉಳಿಸಿಕೊಳ್ಳಬೇಕೆಂದರೆ, ಅಬ್ಬರದ ಬದುಕಿನ ನಡುವೆಯೂ ಮೌನಕ್ಕೆ ಮರಳಬೇಕು. ಆ ಮೌನದಲ್ಲಿ ನಮ್ಮ ಆತ್ಮೀಯರ ಹೆಸರುಗಳನ್ನು ಅಚ್ಚೊತ್ತಬೇಕು. ಮರೆವು ಎಂಬುದು ಇಂದಿನ ಕಾಲದ ರೋಗವಾಗಿದ್ದರೆ, ಮರೆಯದ ನೆನಪು ಎಂಬುದು ಅದಕ್ಕೆ ಇರುವ ಏಕೈಕ ಔಷಧ. ಈ ಆಧುನಿಕತೆಯ ಅಬ್ಬರದಲ್ಲಿ ನಮ್ಮ ರೆಪ್ಪೆಗಳು ಕೇವಲ ದೃಶ್ಯಗಳನ್ನು ನೋಡುವ ಕಿಟಕಿಗಳಾಗದೆ, ಪ್ರೀತಿಯ ಹೆಸರನ್ನು ಬರೆಯುವ ಲೇಖನಿಗಳಾಗಲಿ....

ಕಸ್ತೂರಿಮೃಗದ ಭ್ರಮೆ ಮತ್ತು ಅಷ್ಟಾವಕ್ರರ ಉತ್ತರ

ಒಂದೊಳ್ಳೆ ಮಾತು
ರೂಪಾ ಗುರುರಾಜ್

Vishwavani TV Special
ಯೂಟ್ಯೂಬ್ ಚಾನೆಲ್‌ನಲ್ಲಿ

ಒಬ್ಬ ಶಿಷ್ಯನು ದೀರ್ಘಕಾಲ ಕಾಡು-ಮೇಡು ಅಲೆದು, ತಪಸ್ಸು ಮಾಡಿ, ಕೊನೆಗೆ ಅಷ್ಟಾವಕ್ರ ಮುನಿಗಳ ಆಶ್ರಮಕ್ಕೆ ಬಂದನು. ಅವನ ಕಣ್ಣುಗಳಲ್ಲಿ ಆಯಾಸವಿತ್ತು, ಆದರೆ ಮನಸ್ಸಿನಲ್ಲಿ ಏನನ್ನೋ ಸಾಧಿಸಬೇಕೆಂಬ ಹಂಬಲವಿತ್ತು. ಅವನು ಅಷ್ಟಾವಕ್ರರ ಪಾದಗಳಿಗೆ ನಮಸ್ಕರಿಸಿ ಒಂದು ಪ್ರಶ್ನೆ ಕೇಳಿದನು- ''ಗುರುದೇವ, ನನಗೂ ಜ್ಞಾನೋದಯವಾಗಬೇಕು, ನನಗೂ ಆ ಪರಮಸುಖದ ಅನುಭವವಾಗಬೇಕು. ಮುಕ್ತಿ ಪಡೆಯಬೇಕೆಂಬ ಈ ಹಂಬಲ ಸರಿಯೇ?''

ಅಷ್ಟಾವಕ್ರರು ಅವನನ್ನು ದಿಟ್ಟಿಸಿ ನೋಡಿ ನಸುನಗುತ್ತಾ ಹೇಳಿದರು, ''ಮಗನೇ, ಮುಕ್ತಿಯನ್ನು ಬಯಸುವುದು ಎಂದರೆ ನೀನು ಇನ್ನೂ ಗಾಢನಿದ್ರೆಯಲ್ಲಿದ್ದೀಯ ಎಂದೇ ಅರ್ಥ! ಏಕೆಂದರೆ ಬಯಕೆ ಎನ್ನುವುದು ಯಾವಾಗಲೂ 'ಭವಿಷ್ಯ'ಕ್ಕೆ ಸೇರಿದ್ದು. ಜ್ಞಾನೋದಯ ಎನ್ನುವುದು 'ವರ್ತಮಾನ' ದಲ್ಲಿದೆ. ಯಾವಾಗ ನೀನು ಅದನ್ನು ಪಡೆಯ ಬೇಕೆಂದು ಬಯಸುತ್ತೀಯೋ, ಆಗ ನೀನು ಅದನ್ನು ನಾಳೆಗೆ ಮುಂದೂಡುತ್ತಿದ್ದೀಯ ಎಂದೇ ಅರ್ಥ''.

ಶಿಷ್ಯನಿಗೆ ಗೊಂದಲವಾಯಿತು. ''ಪಡೆಯಬೇಕೆಂಬ ಹಂಬಲವಿಲ್ಲದೆ ಗುರಿ ಮುಟ್ಟುವುದು ಹೇಗೆ?'' ಎಂದು ಕೇಳಿದನು. ಆಗ ಅಷ್ಟಾವಕ್ರರು ಒಂದು ಸುಂದರ ಉದಾಹರಣೆ ನೀಡಿದರು, ''ಕಸ್ತೂರಿ ಮೃಗವು ತನ್ನದೇ ಹೊಕ್ಕುಳಿನಿಂದ ಬರುವ ಸುಗಂಧವನ್ನು ಗುರುತಿಸದೆ, ಆ ಪರಿಮಳ ಎಲ್ಲಿದೆ ಎಂದು ಹುಡುಕುತ್ತಾ ಕಾಡಿನ ತುಂಬೆಲ್ಲಾ ಓಡುತ್ತದೆ. ಅದು ಬೆಟ್ಟ-ಗುಡ್ಡಗಳನ್ನು ಅಲೆಯುತ್ತದೆ, ಬಂಡೆಗಳಿಗೆ ಡಿಕ್ಕಿ ಹೊಡೆದು ರಕ್ತಸಿಕ್ತವಾಗುತ್ತದೆ, ಸುಸ್ತಾಗುತ್ತದೆ. ಆದರೆ ಆ ಸುಗಂಧ ಬೇರೆಲ್ಲಿಯೂ ಇಲ್ಲ, ತನ್ನೊಳಗೇ ಇದೆ ಎಂದು ತಿಳಿದಾಕ್ಷಣ ಅದರ ಓಟ ನಿಲ್ಲುತ್ತದೆ. ಆ ಓಟ ನಿಂತ ಕ್ಷಣವೇ ಅದು ಸುಗಂಧವನ್ನು ಆಸ್ವಾದಿಸಲು ಶುರು ಮಾಡುತ್ತದೆ. ನಿನ್ನ ಸ್ಥಿತಿಯೂ ಹಾಗೆಯೇ ಇದೆ''.

ಆಧ್ಯಾತ್ಮಿಕ ಹಸಿವಿನಿಂದ ಕೂಡಿದ ಮನಸ್ಸು ಯಾವಾಗಲೂ ''ಒಂದು ದಿನ ನಾನು ಸಿದ್ಧನಾಗುತ್ತೇನೆ, ಒಂದು ದಿನ ನಾನು ಆ ಪರಮಸುಖದ ಗುರಿ ಮುಟ್ಟುತ್ತೇನೆ'' ಎಂದು ಹೇಳುತ್ತಿರುತ್ತದೆ. ಆದರೆ ಅಷ್ಟಾವಕ್ರರು ನೀಡುವ ಉತ್ತರ ಅತ್ಯಂತ ಸರಳ ಮತ್ತು ಮಾರ್ಮಿಕ: ''ನೀನು ನಿನ್ನನ್ನು ಎಂದೂ ಬಿಟ್ಟು ಹೋಗಲೇ ಇಲ್ಲ, ಇನ್ನು ಮುಟ್ಟುವುದಾದರೂ ಎಲ್ಲಿಗೆ?''.

ನಾವೆಲ್ಲರೂ ಸುಖವನ್ನು ವಸ್ತುಗಳಲ್ಲಿ, ಹಣದಲ್ಲಿ ಅಥವಾ ಭವಿಷ್ಯದ ಸಾಧನೆಗಳಲ್ಲಿ ಹುಡುಕುತ್ತಿದ್ದೇವೆ. ಆದರೆ ಅಷ್ಟಾವಕ್ರರ ಪ್ರಕಾರ, ಸತ್ಯವು ಕಾಲಾತೀತವಾದುದು. ನಾವು ಯಾವುದೋ ಹೊಸದನ್ನು ಪಡೆಯಬೇಕಿಲ್ಲ, ಬದಲಾಗಿ ನಾವು ಈಗಾಗಲೇ ಪೂರ್ಣರಾಗಿದ್ದೇವೆ ಎಂಬ ಅರಿವು ನಮಗೆ ಬೇಕಾಗಿದೆ. ಯಾವಾಗ ನಾವು ನನಗೆ ಏನೋ ಬೇಕು ಎಂಬ ಹಂಬಲವನ್ನು ಬಿಟ್ಟು 'ನಾನು ಈಗಾಗಲೇ ಸುಖಿಯಾಗಿದ್ದೇನೆ' ಎಂದು ಪ್ರಶಾಂತವಾಗಿ ಕುಳಿತುಕೊಳ್ಳುತ್ತೇವೆಯೋ, ಆಗಲೇ ನಮಗೆ ಸತ್ಯದ ದರ್ಶನವಾಗುತ್ತದೆ.

ನಾವೆಲ್ಲರೂ ಯಾವುದೋ ಒಂದರ ಹಿಂದೆ ಓಡುತ್ತಿದ್ದೇವೆ. ನೆಮ್ಮದಿ, ಯಶಸ್ಸು ಅಥವಾ ಆಧ್ಯಾತ್ಮಿಕ ಮುಕ್ತಿ- ಹೀಗೆ ನಮ್ಮ ಹುಡುಕಾಟ ನಿರಂತರ. ನಾವು ಪರಮಾತ್ಮನನ್ನು ಅಥವಾ ನೆಮ್ಮದಿಯನ್ನು ಹುಡುಕಿಕೊಂಡು ಜಗತ್ತನ್ನೆಲ್ಲಾ ಸುತ್ತುತ್ತೇವೆ. ಆದರೆ ನಾವು ಎಲ್ಲಿಯವರೆಗೆ ಹುಡು ಕಾಟದಲ್ಲಿ ಇರುತ್ತೇವೆಯೋ ಅಲ್ಲಿಯವರೆಗೆ ಸತ್ಯ ದಿಂದ ದೂರವಿದ್ದೀವಿ ಎಂದೇ ಅರ್ಥ. ಹುಡುಕಾಟ ನಿಲ್ಲಿಸಿ, ನಮ್ಮ ಒಳಗೆ ಇಣುಕಿ ನೋಡಿದಾಗ, ಸುಖವು ಹೊರಗಿನ ಸಾಧನೆಯಲ್ಲಿಲ್ಲ, ಸುಖವು ನಮ್ಮ ಅಂತರಾತ್ಮದಲ್ಲಿದೆ ಎಂಬ ಸತ್ಯ ಅರಿವಾಗುತ್ತದೆ.

'ಮುಕ್ತಾಭಿಮಾನೀ ಮುಕ್ತೋ ಹಿ ಬದ್ಧೋ ಬದ್ಧಾಭಿಮಾನಿನಃ, ಕಿಂವದಂತೀಹ ಸತ್ಯೇಯಂ ಯಾ ಮತಿಃ ಸಾ ಗತಿರ್ಭವೇತ್' ಅಂದರೆ, ನಾನು ಮುಕ್ತನು ಎಂದು ಯಾರು ದೃಢವಾಗಿ ನಂಬುತ್ತಾರೋ, ಅವರು ನಿಜವಾಗಿಯೂ ಮುಕ್ತರೇ ಆಗಿರುತ್ತಾರೆ. ನಾನು ಸಂಸಾರದಲ್ಲಿ ಸಿಲುಕಿಕೊಂಡಿದ್ದೇನೆ, ನಾನು ಬದ್ಧನು ಎಂದು ಯಾರು ಭಾವಿಸುತ್ತಾರೋ, ಅವರು ಬಂಧನದಲ್ಲೇ ಇರುತ್ತಾರೆ. ಯಾವ ತರಹದ ಬುದ್ಧಿ ಅಥವಾ ಆಲೋಚನೆ ನಮ್ಮಲ್ಲಿರುತ್ತದೆಯೋ, ಅಂಥದ್ದೇ ಗತಿ (ಸ್ಥಿತಿ) ನಮಗೆ ಪ್ರಾಪ್ತವಾಗುತ್ತದೆ ಎಂಬುದು ಇಲ್ಲಿನ ಸತ್ಯ. ಸತ್ಯವನ್ನು ಪಡೆಯಬೇಕಿಲ್ಲ, ಅಸತ್ಯವನ್ನು ಬಿಟ್ಟರೆ ಸಾಕು. ಇಂಥ ಅಮೃತ ಸದೃಶ ಮಾತುಗಳು ನಮ್ಮ ಬದುಕಿಗೆ ದಾರಿದೀಪವಾಗಲಿ.

ಪದಬಂಧ

● ಸಿ.ರವಿಶಂಕರ ಶಾಸ್ತ್ರಿ, ದಂಬೆ



ಎಡದಿಂದ ಬಲಕ್ಕೆ

2. ಕಡಿದಾದ ಬೆಟ್ಟ ಹತ್ತುವಾಗ ಬೇಕಾದ ಹತೋಟಿ (4)
5. ಇನ್ನೊಬ್ಬರಿಗೆ ತೋರಿಸಿದ ಶಕ್ತಿ (3)
6. ನಿಜಾರ್ಥದಲ್ಲಿ ನೆರವಾಗುವ ಮಿತ್ರ (3)
7. ಎರಡೂ ಕೈಗಳಿಂದ ಬಾಣ ಬಿಡಬಲ್ಲವನು (4)
9. ಆಗಸಕ್ಕೆ ಮತ್ತೊಂದು ಹೆಸರು (2)
11. ಎಷ್ಟೋ ಪ್ರದೇಶಕ್ಕೆ ನೀರುಣಿಸುವ ತರಂಗಿಣಿ (2)
13. ಎರಡಕ್ಷರದ ತಪಸ್ಸು (2)
15. ಸರಿಸಮಾನವಾದುದು ಅಥವಾ ಮಟ್ಟಸವಾದುದು (2)
17. ಕೈಕಟ್ಟಿಕೊಂಡು ಬಂದಿರುವ ಸೂರ್ಯ (4)
19. ಜನರ ಗುಂಪಿನ ಮುಖಂಡ (3)
20. ಕೈಲಾಸ ದೊರಕಿಸಿ ಕೊಡಬಲ್ಲುದು ಕೆಲಸ (3)
21. ಕಟ್ಟಿಹಾಕುವುದಲ್ಲ, ನಿಯಮ (4)

ಮೇಲಿಂದ ಕೆಳಕ್ಕೆ

1. ವಾತಾವರಣದಲ್ಲಿರುವ ಗಾಳಿ (4)
2. ಎರಡಕ್ಷರದ ಕೊರಳು (2)
3. ಪಶ್ಚಿಮ ಮತ್ತು ಉತ್ತರ ನಡುವಿನ ದಿಕ್ಕು (3)
4. ಆತನ ಶತ್ರುತ್ವ (4)
7. ಒಡನಾಟ ಅಥವಾ ಜತೆಯಲ್ಲಿ ವಾಸಿಸುವುದು (4)
8. ಒಬ್ಬ ರಾಜನಿಗೆ ಅಧೀನನಾಗಿರುವ ರಾಜ (3)
10. ಹೆದರಿಕೆಯನ್ನುಂಟು ಮಾಡುವ ಎಂದರ್ಥ (4)
12. ದಿನದ ನಡುವೆ ಇರುವ ಮಂತ್ರಿ (3)
14. ಮಾಡುವ ಕೆಲಸದಲ್ಲಿರಬೇಕಾದ ನೈಪುಣ್ಯ (4)
16. ಹೂವಿನಿಂದ ಸಿಹಿ ಸಂಗ್ರಹಿಸುವ ಭ್ರಮರ (4)
18. ಕಣ್ಣಿಗೆ ಮಣ್ಣೆರಚುವ ಇಂದ್ರಜಾಲ (3)
20. ದಟ್ಟವಾಗಿ ಮರಗಿಡಗಳು ಬೆಳೆದಿರುವ ಪ್ರದೇಶ, ಅರಣ್ಯ (2)

ಸರಿಯುತ್ತರಗಳು

ಸಮಾಚಾರ ಸಣ್ಣದಲ್ಲ

ಡೇವಿಡ್ ಪೇನ್ ಬದಲಿ ಆಟಗಾರ

ಹೈದರಾಬಾದ್: ಐಪಿಎಲ್‌ನ ಸನ್‌ರೈಸರ್ಸ್ ಹೈದರಾಬಾದ್ ತಂಡವು ಆಸ್ಟ್ರೇಲಿಯಾದ ಜ್ಯಾಕ್ ಎಡ್ವರ್ಡ್ಸ್ ಬದಲಿಗೆ ಇಂಗ್ಲೆಂಡ್‌ನ ಡೇವಿಡ್ ಪೇನ್ ಅವರನ್ನು ತಂಡಕ್ಕೆ ಸೇರಿಸಿಕೊಂಡಿದೆ. 1.5 ಕೋಟಿ ರು.ಗೆ ಅವರು ತಂಡವನ್ನು ಸೇರಿಕೊಂಡಿದ್ದಾರೆ. ಇಂಗ್ಲೆಂಡ್ ಪರ ಒಂದು ಏಕದಿನ ಪಂದ್ಯ ಆಡಿರುವ 35 ವರ್ಷದ ಪೇನ್, 233 ಟಿ20 ಪಂದ್ಯಗಳ ಅನುಭವ ಹೊಂದಿರುವ ಎಡಗೈ ಸೀಮರ್ ಆಗಿದ್ದು, 21.16 ಸರಾಸರಿಯಲ್ಲಿ 304 ವಿಕೆಟ್‌ಗಳನ್ನು ಗಳಿಸಿದ್ದಾರೆ. ಅವರ ಏಕೈಕ ಅಂತಾರಾಷ್ಟ್ರೀಯ ಪಂದ್ಯ 2022ರಲ್ಲಿ ನೆದರ್ಲೆಂಡ್ ವಿರುದ್ಧವಾಗಿತ್ತು, ಆ ಪಂದ್ಯದಲ್ಲಿ ಅವರು ಒಂದು ವಿಕೆಟ್ ಪಡೆದಿದ್ದರು. ಆಸ್ಟ್ರೇಲಿಯಾದ ಆಲ್‌ರೌಂಡರ್ ಜ್ಯಾಕ್ ಎಡ್ವರ್ಡ್ಸ್ ಗಾಯದ ಕಾರಣದಿಂದಾಗಿ ಈ ಋತುವಿನಿಂದ ಹೊರಗುಳಿದಿದ್ದಾರೆ ಎಂದು ಸನ್‌ರೈಸರ್ಸ್ ಹೈದರಾಬಾದ್ ದೃಢಪಡಿಸಿದೆ. ಹರಾಜಿನಲ್ಲಿ ಅವರನ್ನು 3 ಕೋಟಿ ರು.ಗೆ ಖರೀದಿಸಲಾಗಿತ್ತು. ಟೂರ್ನಮೆಂಟ್‌ನ ಆರಂಭದಲ್ಲಿ ಪ್ಯಾಟ್ ಕಮ್ಮಿನ್ಸ್ ಅವರನ್ನು ಕಳೆದುಕೊಂಡಿರುವ ಕಾರಣ ಇಶಾನ್ ಕಿಶನ್ ಅವರನ್ನು ಹೈದರಾಬಾದ್ ತಂಡವು ಹಂಗಾಮಿ ನಾಯಕನನ್ನಾಗಿ ನೇಮಿಸಿದೆ.

ಬಿಸಿಸಿಐ ಕೇಂದ್ರಕ್ಕೆ ಬುಮ್ರಾ ಭೇಟಿ

ಮುಂಬಯಿ: ಐಪಿಎಲ್ ಆರಂಭವಾಗಲು ಇನ್ನು ಕೇವಲ ಮೂರು ದಿನ ಬಾಕಿ ಇರುವಾಗ, ಮುಂಬೈ ಇಂಡಿಯನ್ಸ್ ತಂಡದ ವೇಗಿ ಜಸ್ಪ್ರೀತ್ ಬುಮ್ರಾ ಅವರು ಬೆಂಗಳೂರಿನ ಬಿಸಿಸಿಐ ಸೆಂಟರ್ ಆಫ್ ಎಕ್ಸಲೆನ್ಸ್‌ಗೆ ಭೇಟಿ ನೀಡಿದ್ದಾರೆ. ಗಾಯದ ಸಮಸ್ಯೆಯಿಂದಾಗಿಯೋ ಅಥವಾ ನಿಯಮಿತ ತಪಾಸಣೆಯಿಂದಾಗಿಯೋ ಎಂಬುದು ಇನ್ನೂ ಖಚಿತವಿಲ್ಲದಿದ್ದರೂ ಅವರು ಸದ್ಯ ಬೆಂಗಳೂರಿನಲ್ಲಿದ್ದಾರೆ. ಐದು ಬಾರಿಯ ಚಾಂಪಿಯನ್‌ಗಳ ಶಿಬಿರಕ್ಕೆ ಇನ್ನೂ ಅವರು ಸೇರಿಲ್ಲ. ಕಳೆದ ವಾರ ಭಾರತದ ಟಿ20 ವಿಶ್ವಕಪ್ ವಿಜೇತ ಶಿಬಿರದಲ್ಲಿದ್ದ ನಾಲ್ವರು ಮುಂಬೈ ಆಟಗಾರರಿಗೆ ವಿಸ್ತೃತ ವಿರಾಮ ನೀಡಲಾಗಿದೆ ಎಂದು ಮುಂಬೈ ಇಂಡಿಯನ್ಸ್ ಮುಖ್ಯ ಕೋಚ್ ಮಹೇಲ ಜಯವರ್ಧನೆ ಬಹಿರಂಗಪಡಿಸಿದ್ದರು. ಮಾರ್ಚ್ 8ರಂದು ನಡೆದಿದ್ದ ಫೈನಲ್‌ನಲ್ಲಿ ನ್ಯೂಜಿಲೆಂಡ್ ತಂಡವನ್ನು ಸೋಲಿಸುವ ಮೂಲಕ ಭಾರತ ಟಿ20 ವಿಶ್ವಕಪ್ ಗೆದ್ದಿತ್ತು. ಮುಂಬೈ ಇಂಡಿಯನ್ಸ್ ತಂಡವು ಮಾರ್ಚ್ 29ರಂದು ವಾಂಖೆಡೆ ಕ್ರೀಡಾಂಗಣದಲ್ಲಿ ಕೋಲ್ಕತ್ತಾ ನೈಟ್ ರೈಡರ್ಸ್ ವಿರುದ್ಧ ತಮ್ಮ ಈ ಆವೃತ್ತಿಯ ಐಪಿಎಲ್ ಅಭಿಯಾನವನ್ನು ಪ್ರಾರಂಭಿಸಲಿದೆ.

ಆರ್‌ಸಿಬಿ-ಎಸ್‌ಆರ್‌ಎಚ್ ಪಂದ್ಯದ ಟಿಕೆಟ್ ಮಾರಾಟ ಆರಂಭ | ಮೊದಲ ಕೆಲ ತಾಸುಗಳಲ್ಲೇ ಬಿರುಸಿನ ಖರೀದಿ

ಐಪಿಎಲ್ ಟಿಕೆಟ್‌ಗೆ ಭಾರೀ ಬೇಡಿಕೆ

ಬೆಂಗಳೂರು: ಇಲ್ಲಿನ ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ಚುಟುಕು ಕ್ರಿಕೆಟ್ ಹಬ್ಬದ ಸಂಭ್ರಮಕ್ಕೆ ದಿನಗಣನೆ ಆರಂಭವಾಗಿದೆ. ಶನಿವಾರ ನಡೆಯಲಿರುವ ಬಹುನಿರೀಕ್ಷಿತ ಆರ್‌ಸಿಬಿ-ಹೈದರಾಬಾದ್ ನಡುವಿನ ಐಪಿಎಲ್‌ನ ಉದ್ಘಾಟನಾ ಪಂದ್ಯಕ್ಕಾಗಿ ಕಾಯುತ್ತಿದ್ದ ಅಭಿಮಾನಿಗಳಿಗೆ ಮಂಗಳವಾರ ಸಿಹಿ ಸುದ್ದಿ ಸಿಕ್ಕಿದ್ದು, ಅಧಿಕೃತವಾಗಿ ಪಂದ್ಯದ ಟಿಕೆಟ್ ಮಾರಾಟ ಪ್ರಕ್ರಿಯೆ ಆನ್‌ಲೈನ್‌ನಲ್ಲಿ ಆರಂಭವಾಗಿದೆ.

ಆರಂಭದ ಒಂದೆರಡು ತಾಸುಗಳಲ್ಲೇ ಸಾವಿರಾರು ಮಂದಿ ಕ್ರಿಕೆಟ್‌ಪ್ರೇಮಿಗಳು ಟಿಕೆಟ್ ಖರೀದಿಸಿದ್ದಾರೆ. ಕೇವಲ ಆರ್‌ಸಿಬಿಯ ಅಧಿಕೃತ ವೆಬ್‌ಸೈಟ್ ಅಥವಾ ಆರ್‌ಸಿಬಿ ಆ್ಯಪ್‌ನಲ್ಲಿ ಮಾತ್ರ ಟಿಕೆಟ್‌ಗಳು ದೊರೆಯುತ್ತಿವೆ. ಬೇರೆ ಯಾವುದೇ ಅನಧಿಕೃತ ಸೈಟ್‌ಗಳಲ್ಲಿ ಟಿಕೆಟ್ ಖರೀದಿಸಿ ಮೋಸ ಹೋಗದಂತೆ ಆರ್‌ಸಿಬಿ ಫ್ರಾಂಚೈಸಿಯು ತನ್ನ ಅಭಿಮಾನಿಗಳಿಗೆ ಎಚ್ಚರಿಕೆಯ ಸೂಚನೆ ನೀಡಿದೆ. ಟಿಕೆಟ್‌ನಲ್ಲಿ ಗೇಟ್ ಸಂಖ್ಯೆ ಮತ್ತು ಆಸನದ ವಿವರಗಳಿವೆ. ಮೈದಾನ ಪ್ರವೇಶಿಸಲು ಬೇಕಾದ ಕ್ಯೂಆರ್ ಕೋಡ್ ಪಂದ್ಯದ ದಿನದಂದು ಗೇಟ್ ತೆರೆಯುವ ಕೆಲವು ಗಂಟೆಗಳ ಮೊದಲು ಮಾತ್ರ ಆ್ಯಪ್‌ನಲ್ಲಿ ಆ್ಯಕ್ಟಿವೇಟ್ ಆಗಲಿದೆ.

ಹಾಲಿ ಚಾಂಪಿಯನ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಆಟ ನೋಡಲು ಕ್ರಿಕೆಟ್ ಪ್ರೇಮಿಗಳಿಗೆ ಭಾರೀ ಕ್ರೇಜ್ ಇರುವುದರಿಂದ ಟಿಕೆಟ್‌ಗಳು ಬಹು ಬೇಗನೆ ಖಾಲಿಯಾಗುವ ಸಾಧ್ಯತೆಯಿದೆ. ಟಿಕೆಟ್ ಹೊಂದಿದ್ದರೆ, ಪಂದ್ಯದ ದಿನದಂದು ಕ್ರೀಡಾಂಗಣಕ್ಕೆ ಬರಲು ಮತ್ತು ಮರಳಲು ಮೆಟ್ರೋದಲ್ಲಿ ಉಚಿತವಾಗಿ ಪ್ರಯಾಣ ಸೌಲಭ್ಯದ ವ್ಯವಸ್ಥೆಯೂ ಇರಲಿದೆ.

ಪ್ರೇಕ್ಷಕರಿಗೆ ಕಠಿಣ ನಿಯಮ: ಆರ್‌ಸಿಬಿ ಪಂದ್ಯಗಳ ವ್ಯವಸ್ಥೆಗಳ ಕುರಿತು ಮಾತನಾಡಿದ ಬೆಂಗಳೂರು ಪೊಲೀಸ್ ಆಯುಕ್ತರು,

ಸಾಧ್ಯವಾದಷ್ಟು ಮೆಟ್ರೋ ಸೇವೆಯನ್ನು ಕ್ರಿಕೆಟ್ ಪ್ರೇಕ್ಷಕರು ಬಳಸುವಂತೆ ಮನವಿ ಮಾಡಿದ್ದಾರೆ, ಇದರಿಂದ ಸ್ಟೇಡಿಯಂ ಸುತ್ತಮುತ್ತ ವಾಹನಗಳ ದಟ್ಟಣೆ ಮತ್ತು ಪಾರ್ಕಿಂಗ್ ಸಮಸ್ಯೆಯನ್ನು ತಪ್ಪಿಸಬಹುದು ಎಂದು ಹೇಳಿದ್ದಾರೆ. ಪಂದ್ಯದ ದಿನಗಳಲ್ಲಿ ಪ್ರತೀ ಮೂರು ನಿಮಿಷಕ್ಕೊಮ್ಮೆ ಮೆಟ್ರೋ ರೈಲು ಸಂಚಾರ ಇರಲಿದೆ ಎಂದೂ ಹೇಳಿದ್ದಾರೆ.

ಸ್ಟೇಡಿಯಂ ಸುತ್ತಲಿನ ಟ್ರಾಫಿಕ್ ವ್ಯವಸ್ಥೆಯಲ್ಲಿ ಕೆಲವು ಬದಲಾವಣೆಗಳನ್ನು ಮಾಡಲಾಗಿದೆ. ಕ್ವೀನ್ಸ್ ರೋಡ್ ಅನ್ನು ಸಂಪೂರ್ಣವಾಗಿ ಬಂದ್ ಮಾಡಲಾಗಿದ್ದು, ಕಬ್ಬನ್ ರೋಡ್‌ನಲ್ಲಿ ಏಳು ಪ್ರವೇಶ ದ್ವಾರಗಳನ್ನು ತೆರೆಯಲಾಗಿದೆ. ಒಟ್ಟು 28 ಎಂಟ್ರಿ ಪಾಯಿಂಟ್‌ಗಳ ಮೂಲಕ ಪ್ರೇಕ್ಷಕರನ್ನು ಸ್ಟೇಡಿಯಂ ಒಳಗೆ ಪ್ರವೇಶಿಸಲು ಅವಕಾಶ ನೀಡಲಾಗುತ್ತದೆ. ಪಂದ್ಯ ಆರಂಭಕ್ಕೂ ನಾಲ್ಕು ತಾಸುಗಳ ಮೊದಲು ಸ್ಟೇಡಿಯಂ ಗೇಟ್‌ಗಳನ್ನು ತೆರೆಯಲಾಗುತ್ತದೆ, ಆದ್ದರಿಂದ ಎಲ್ಲಾ ಪ್ರೇಕ್ಷಕರು ಮುಂಚಿತವಾಗಿಯೇ ಆಗಮಿಸುವಂತೆ ಪೊಲೀಸರು ಸೂಚಿಸಿದ್ದಾರೆ.

ಸ್ಟೇಡಿಯಂ ಸುತ್ತಮುತ್ತ ನೋ ಪಾರ್ಕಿಂಗ್ ವಲಯವನ್ನು ಜಾರಿಗೊಳಿಸಲಾಗಿದ್ದು, ಗರುಡ ಮಾಲ್, ಸೇಂಟ್ ಜೋಸೆಫ್ ಇಂಡಿಯನ್ ಹೈಸ್ಕೂಲ್ ಹಾಗೂ ಸೇಂಟ್ ಜೋಸೆಫ್

ಬಾಯ್ಸ್ ಹೈಸ್ಕೂಲ್, ಫ್ರೀಡಂ ಪಾರ್ಕ್‌ನಲ್ಲಿ ಪಾರ್ಕಿಂಗ್‌ಗೆ ವ್ಯವಸ್ಥೆ ಮಾಡಲಾಗಿದೆ. ಟಿಕೆಟ್ ಬುಕ್ ಮಾಡುವಾಗಲೇ ಪಾರ್ಕಿಂಗ್ ಸ್ಥಳ ಆಯ್ಕೆಮಾಡಿಕೊಳ್ಳುವ ಅವಕಾಶ ಇದೆ.

ಮೃತರಾದವರಿಗೆ ಗೌರವ: ಆರ್‌ಸಿಬಿ ಆಡಳಿತ ಮಂಡಳಿಯು ಕಳೆದ ವರ್ಷ ನಡೆದ ಆರ್‌ಸಿಬಿ ವಿಜಯೋತ್ಸವ ಕಾರ್ಯಕ್ರಮ ವೇಳೆ ಮೃತಪಟ್ಟ 11 ಅಭಿಮಾನಿಗಳಿಗೆ ವಿಶೇಷವಾಗಿ ಗೌರವ ಸಲ್ಲಿಸಲು ಮುಂದಾಗಿದೆ. ಆರ್‌ಸಿಬಿ ಮುಂದಿನ ಎಲ್ಲಾ ಪಂದ್ಯಗಳಲ್ಲಿ ಕ್ರೀಡಾಂಗಣದಲ್ಲಿ 11 ಆಸನಗಳನ್ನು ಶಾಶ್ವತವಾಗಿ ಕಾಯ್ದಿರಿಸಲು ನಿರ್ಧರಿಸಿದೆ. ಆ ಮೂಲಕ ಕಾಲ್ತುಳಿತದಲ್ಲಿ ಮೃತಪಟ್ಟ 11 ಮಂದಿ ಅಭಿಮಾನಿಗಳಿಗೆ ವಿಶೇಷ ಗೌರವವನ್ನು ನೀಡಲು ನಿರ್ಧರಿಸಿದೆ.

ಆರ್‌ಸಿಬಿಯ ಎಲ್ಲಾ ಆಟಗಾರರು 11 ಸಂಖ್ಯೆಯ ಜೆರ್ಸಿಯನ್ನು ಧರಿಸಿ ಎಲ್ಲಾ ಅಭ್ಯಾಸದ ಅವಧಿಯಲ್ಲಿ ಭಾಗವಹಿಸುತ್ತಿದ್ದಾರೆ. ಮೃತರ ಗೌರವಾರ್ಥವಾಗಿ ಸ್ಮಾರಕ ಫಲಕವನ್ನು ಸ್ಟೇಡಿಯಂನ ಒಳಪ್ರವೇಶ ದ್ವಾರದಲ್ಲಿ ಅನಾವರಣಗೊಳಿಸಲಾಗುವುದು ಎಂದು ಆರ್‌ಸಿಬಿಯ ಅಧಿಕಾರಗಳು ಹೇಳಿದ್ದಾರೆ.

ಬೆಂಗಳೂರು ತಂಡ 16,706 ಕೋಟಿ ರು. ಗೆ ಮಾರಾಟ

ಬಿರ್ಲಾ, ಟೈಮ್ಸ್ ತೆಕ್ಕೆಗೆ ಆರ್‌ಸಿಬಿ

ಬೆಂಗಳೂರು: ವಿಶ್ವದ ಅತ್ಯಂತ ಜನಪ್ರಿಯ ಕ್ರೀಡಾ ಫ್ರಾಂಚೈಸಿಗಳಲ್ಲಿ ಒಂದಾದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವನ್ನು ಆದಿತ್ಯ ಬಿರ್ಲಾ ಗ್ರೂಪ್ ಮತ್ತು ಟೈಮ್ಸ್ ಆಫ್ ಇಂಡಿಯಾ ನೇತೃತ್ವದ ಒಕ್ಕೂಟವು ಖರೀದಿಸಿದೆ. ಈ ಬೃಹತ್ ವ್ಯವಹಾರದ ಮೌಲ್ಯ 1.78 ಬಿಲಿಯನ್ ಯುಎಸ್ ಡಾಲರ್ (ಸುಮಾರು 16,706 ಕೋಟಿ ರೂಪಾಯಿ) ಎಂದು ಅಂದಾಜಿಸಲಾಗಿದೆ.

ಒಂದು ಕಾಲದಲ್ಲಿ ಕ್ರಿಕೆಟಿಗನಾಗಬೇಕು ಎಂದು ಕನಸು ಕಂಡಿದ್ದ 28 ವರ್ಷದ ಆರ್ಯಮಾನ್ ವಿಕ್ರಮ್ ಬಿರ್ಲಾ ಈಗ ಜಗತ್ತಿನ ಅತ್ಯಂತ ಜನಪ್ರಿಯ ಕ್ರೀಡಾ ಫ್ರಾಂಚೈಸಿಗಳಲ್ಲಿ ಒಂದಾದ ಆರ್‌ಸಿಬಿಯ ಹೊಸ ಚೇರ್ಮನ್ ಎನಿಸಿಕೊಂಡಿದ್ದಾರೆ. 2018ರ ಐಪಿಎಲ್‌ನಲ್ಲಿ ಆರ್ಯಮಾನ್ ವಿಕ್ರಮ್ ಬಿರ್ಲಾ ರಾಜಸ್ಥಾನ ರಾಯಲ್ಸ್ ತಂಡದ ಭಾಗವಾಗಿದ್ದರು.

ಆರ್‌ಸಿಬಿ ಖರೀದಿಸಿದ ಒಕ್ಕೂಟ: ಬ್ರಿಟಿಷ್ ಕಂಪನಿ 'ಡಿಯಾಜಿಯೋ' ಒಡೆತನದ ಯುನೈಟೆಡ್ ಸ್ಪಿರಿಟ್ಸ್ ಲಿಮಿಟೆಡ್‌ನಿಂದ ಆರ್‌ಸಿಬಿಯ ಶೇ. 100ರಷ್ಟು ಪಾಲನ್ನು ಈ ನಾಲ್ಕು ಪ್ರಮುಖ ಸಂಸ್ಥೆಗಳು ಒಟ್ಟಾಗಿ ಖರೀದಿಸಿವೆ.

ಆದಿತ್ಯ ಬಿರ್ಲಾ ಗ್ರೂಪ್, ದ ಟೈಮ್ಸ್ ಆಫ್ ಇಂಡಿಯಾ ಗ್ರೂಪ್, ಬೋಲ್ಟ್ ವೆಂಚರ್ಸ್ ಹಾಗೂ ಬ್ಲ್ಯಾಕ್‌ಸ್ಟೋನ್ ಜಂಟಿಯಾಗಿ ಆರ್‌ಸಿಬಿಯನ್ನು ಖರೀದಿ ಮಾಡಿದ್ದು, ಈ ಒಪ್ಪಂದವು ಆರ್‌ಸಿಬಿಯ ಪುರುಷರ ಮತ್ತು ಮಹಿಳೆಯರ ಎರಡೂ ತಂಡಗಳನ್ನು ಒಳಗೊಂಡಿದೆ.

ಹೊಸ ಮಾಲೀಕತ್ವದ ಟೀಮ್: ಆರ್‌ಸಿಬಿಯ ಹೊಸ ಚೇರ್ಮನ್ ಆಗಿ, ಆದಿತ್ಯ ಬಿರ್ಲಾ ಗ್ರೂಪ್ ನಿರ್ದೇಶಕ ಆರ್ಯಮನ್ ವಿಕ್ರಮ್ ಬಿರ್ಲಾ ಇರಲಿದ್ದಾರೆ, ಉಪಾಧ್ಯಕ್ಷರಾಗಿ ಟೈಮ್ಸ್ ಆಫ್ ಇಂಡಿಯಾ ಗ್ರೂಪ್‌ನ ಸತ್ಯನ್ ಗಜ್ವಾನಿ, ಒಕ್ಕೂಟದಲ್ಲಿ ಬೋಲ್ಟ್ ವೆಂಚರ್ಸ್ ಸ್ಥಾಪಕ ಡೇವಿಡ್ ಬ್ಲಿಟ್ಜರ್ ಮತ್ತು ಬ್ಲ್ಯಾಕ್‌ಸ್ಟೋನ್‌ನ ಸಿಇಒ ವೈರಲ್ ಪಟೇಲ್ ಕೂಡ ಪ್ರಮುಖ ಪಾತ್ರ ವಹಿಸಲಿದ್ದಾರೆ. ಈ ಪ್ರಕ್ರಿಯೆಯು ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ ಮತ್ತು ಭಾರತೀಯ ಸ್ಪರ್ಧಾ ಆಯೋಗದ ಅಧಿಕೃತ ಅನುಮೋದನೆಗೆ ಒಳಪಟ್ಟಿದೆ.

ದಕ್ಷಿಣ ಆಫ್ರಿಕಾದಲ್ಲಿ ನಡೆಯಲಿರುವ 5 ಪಂದ್ಯಗಳ ಟಿ.20 ಸರಣಿ | ಅನುಷ್ಕಾಗೆ ಚೊಚ್ಚಲ ಅವಕಾಶ

ಮಹಿಳಾ ಟಿ20 ತಂಡ ಪ್ರಕಟ

ದೆಹಲಿ: ಏಪ್ರಿಲ್ 17ರಿಂದ 27ರ ವರೆಗೆ ನಡೆಯಲಿರುವ ದಕ್ಷಿಣ ಆಫ್ರಿಕಾ ವಿರುದ್ಧದ ಐದು ಪಂದ್ಯಗಳ ಟಿ20 ಸರಣಿಗೆ ಭಾರತೀಯ ಮಹಿಳಾ ತಂಡ ಪ್ರಕಟವಾಗಿದ್ದು, ಯುವ ಆಲ್‌ರೌಂಡರ್ ಅನುಷ್ಕಾ ಶರ್ಮಾ ಅವರು ತಮ್ಮ ಚೊಚ್ಚಲ ರಾಷ್ಟ್ರೀಯ ತಂಡಕ್ಕೆ ಆಯ್ಕೆಯಾಗಿದ್ದಾರೆ. ಇದೇ ವರ್ಷ ನಡೆಯುವ ಟಿ20 ವಿಶ್ವಕಪ್ ನಿಟ್ಟಿನಲ್ಲಿ ಉಭಯ ತಂಡಗಳಿಗೂ ಈ ಸರಣಿ ಮಹತ್ವದಾಗಿದೆ.

ಹರ್ಮನ್‌ಪ್ರೀತ್ ಕೌರ್ ತಂಡವನ್ನು ಮುನ್ನಡೆಸಲಿದ್ದು, ಸ್ಮೃತಿ ಮಂಧಾನಾ ಉಪನಾಯಕಿಯಾಗಿ ಕಾರ್ಯನಿರ್ವಹಿಸಲಿದ್ದಾರೆ. ತಂಡದಲ್ಲಿ ಶಫಾಲಿ ವರ್ಮಾ, ಜೆಮಿಮಾ ರೋಡ್ರಿಗಸ್, ದೀಪ್ತಿ ಶರ್ಮಾ, ಭಾರ್ತಿ ಫುಲ್ಮಾಲಿ, ಉಮಾ ಚೆಟ್ರಿ ಮತ್ತು ವಿಕೆಟ್ ಕೀಪರ್-ಬ್ಯಾಟರ್ ರಿಚಾ ಘೋಷ್ ಅವರಂತಹ ಬಲಿಷ್ಠ ಬ್ಯಾಟರ್‌ಗಳಿದ್ದಾರೆ.

22 ವರ್ಷದ ಬ್ಯಾಟಿಂಗ್ ಆಲ್‌ರೌಂಡರ್ ಅನುಷ್ಕಾ ಶರ್ಮಾ, ಮಹಿಳಾ ಪ್ರೀಮಿಯರ್ ಲೀಗ್‌ನ ಗುಜರಾತ್ ಜೈಂಟ್ಸ್ ಪರ ಚೊಚ್ಚಲ ಪಂದ್ಯದಲ್ಲಿ ಅಮೋಘ ಬ್ಯಾಟಿಂಗ್ ಪ್ರದರ್ಶನ ತೋರಿ, 7 ಇನ್ನಿಂಗ್ಸ್‌ಗಳಲ್ಲಿ 25.28 ಸರಾಸರಿಯಲ್ಲಿ 177 ರನ್ ಗಳಿಸಿದ್ದರು. ಭಾರತದ ಬೌಲಿಂಗ್ ದಾಳಿ ವಿಭಾಗದಲ್ಲಿ ದೀಪ್ತಿ, ಶ್ರೇಯಾಂಕ ಪಾಟೀಲ್ ಮತ್ತು ಶ್ರೀಚರಣಿ ಸ್ಪಿನ್ ವಿಭಾಗವನ್ನು ಮುನ್ನಡೆಸಲಿದ್ದಾರೆ. ರೇಣುಕಾ ಠಾಕೂರ್, ಅರುಂಧತಿ ರೆಡ್ಡಿ ಮತ್ತು ಕ್ರಾಂತಿ ಗೌಡ್ ವೇಗದ ವಿಭಾಗದ ಪ್ರಮುಖ ಬೌಲರ್‌ಗಳಾಗಿದ್ದಾರೆ.

ತಂದೆಯ ಸಾವಿನ ಬಳಿಕದ ಕಠಿಣ ಸಮಯದಲ್ಲೂ ಭಾರತ ಕ್ರಿಕೆಟ್ ತಂಡದ ಪರ ಬದ್ಧತೆ ಪ್ರದರ್ಶನ

ರಿಂಕು ಸಿಂಗ್ ಉ.ಪ್ರ ಕ್ರೀಡಾಧಿಕಾರಿ

ಲಖನೌ: ಭಾರತ ಕ್ರಿಕೆಟ್ ತಂಡದ ಆಟಗಾರ ರಿಂಕು ಸಿಂಗ್ ಅವರನ್ನು ಉತ್ತರ ಪ್ರದೇಶ ಸರಕಾರವು ಪ್ರಾದೇಶಿಕ ಕ್ರೀಡಾ ಅಧಿಕಾರಿ (ಆರ್‌ಎಸ್‌ಒ) ಆಗಿ ನೇಮಿಸಲು ಸಿದ್ಧತೆ ನಡೆಸಿದೆ. ಸೂರ್ಯಕುಮಾರ್ ಯಾದವ್ ನಾಯಕತ್ವದಲ್ಲಿ ಟಿ 20 ವಿಶ್ವಕಪ್ ಗೆದ್ದ ಭಾರತೀಯ ತಂಡಕ್ಕೆ ನೀಡಿದ ಅಸಾಧಾರಣ ಪ್ರದರ್ಶನ ಮತ್ತು ಬದ್ಧತೆಗಾಗಿ ರಾಜ್ಯ ಸರಕಾರ ರಿಂಕು ಅವರನ್ನು ಸನ್ಮಾನಿಸಲು ಸಜ್ಜಾಗಿದೆ.

ರಿಂಕು ತನ್ನ ತಂದೆಯ ಅನಾರೋಗ್ಯ ಮತ್ತು ಅಂತಿಮವಾಗಿ ಸಾವಿನ ಬಳಿಕವೂ ಪಂದ್ಯಾವಳಿಯ ಸಮಯದಲ್ಲಿ ಕಠಿಣ ಅವಧಿಯಲ್ಲೂ ಭಾರತ ಟಿ20 ತಂಡದ ಮೇಲೆ ತಮ್ಮ ಬದ್ಧತೆ ಪ್ರದರ್ಶಿಸಿದ್ದರು. ಉತ್ತರ ಪ್ರದೇಶ ಸರಕಾರವು ಕ್ರೀಡಾಪಟುಗಳಿಗೆ ಪ್ರಮುಖ ಪ್ರೋತ್ಸಾಹಕ ಪ್ಯಾಕೇಜ್ ಘೋಷಿಸಿದ್ದು, ಇದರ ಅಡಿಯಲ್ಲಿ ಅಂತಾ ರಾಷ್ಟ್ರೀಯ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿದ ಆಟಗಾರರಿಗೆ ಸರಕಾರಿ ಉದ್ಯೋಗಗಳು, ನಗದು ಬಹುಮಾನಗಳು ಮತ್ತು ಪ್ರತಿಷ್ಠಿತ ಕ್ರೀಡಾ ಗೌರವಗಳನ್ನು ನೀಡಲಾಗುತ್ತದೆ.

ರಿಂಕು ಜತೆಗೆ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಗೆದ್ದ ಭಾರತೀಯ ಹಾಕಿ ತಂಡದ ಸದಸ್ಯ ರಾಜ್‌ಕುಮಾರ್ ಪಾಲ್ ಅವರನ್ನು ಉಪ ಪೊಲೀಸ್ ವರಿಷ್ಠಾಧಿಕಾರಿ (ಡಿಎಸ್‌ಪಿ) ಆಗಿ ನೇಮಿಸಲಾಗುತ್ತದೆ. ರಾಜ್‌ಕುಮಾರ್ ಮೂಲತಃ ಘಾಜಿಪುರದವರು. ರಾಜ್ಯ ಸರಕಾರವು ಒಟ್ಟು ಆರು ಅಂತಾರಾಷ್ಟ್ರೀಯ ಪದಕ ವಿಜೇತ ಕ್ರೀಡಾಪಟುಗಳಿಗೆ ಉದ್ಯೋಗ ನೀಡಲು ನಿರ್ಧರಿಸಿದೆ. ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರು ಲೋಕ ಭವನದಲ್ಲಿ ನಡೆಯುವ ಸನ್ಮಾನ ಸಮಾರಂಭದಲ್ಲಿ ಈ ಆಟಗಾರರಿಗೆ ನೇಮಕಾತಿ ಪತ್ರಗಳನ್ನು ಹಸ್ತಾಂತರಿಸಲಿದ್ದಾರೆ.

ಪ್ಯಾರಾಲಿಂಪಿಕ್ ಹೈಜಂಪ್ ಚಿನ್ನದ ಪದಕ ವಿಜೇತ ಪ್ರವೀಣ್ ಕುಮಾರ್ (ಗೌತಮ್ ಬುದ್ಧ ನಗರ) ಅವರನ್ನು ಡಿಎಸ್ಪಿಯಾಗಿ ನೇಮಿಸಲಾಗುವುದು.

ವೈಯಕ್ತಿಕ ಕಾರಣ ನೀಡಿ ಐಪಿಎಲ್‌ನಿಂದ ಹೊರ ಬಂದ ಆರ್‌ಸಿಬಿ ವೇಗಿ | ಫ್ರಾಂಚೈಸಿಯಿಂದ ಅಧಿಕೃತ ಹೇಳಿಕೆ

ಐಪಿಎಲ್‌ನಿಂದ ಹಿಂದೆ ಸರಿದ ಯಶ್ ದಯಾಳ್

ಬೆಂಗಳೂರು: ಈ ಆವೃತ್ತಿಯ ಐಪಿಎಲ್ ಆರಂಭಕ್ಕೂ ಮುನ್ನ ಹಾಲಿ ಚಾಂಪಿಯನ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ವೇಗಿ ಯಶ್ ದಯಾಳ್ ವೈಯಕ್ತಿಕ ಕಾರಣಗಳನ್ನು ನೀಡಿ ಟೂರ್ನಿಯಿಂದ ಹೊರಗುಳಿಯಲಿದ್ದಾರೆ. ಇದನ್ನು ಫ್ರಾಂಚೈಸಿ ಕೂಡ ದೃಢಪಡಿಸಿದೆ.

ಅಪ್ರಾಪ್ತೆಯನ್ನು ಅತ್ಯಾಚಾರ ಮಾಡಿದ ಆರೋಪ ಎದುರಿಸುತ್ತಿರುವ ಯಶ್ ದಯಾಳ್ ತಂಡದ ಶಿಬಿರವನ್ನು ಕೂಡಿಕೊಳ್ಳದಾಗಲೇ ಅವರ ಅಭ್ಯತೆ ಬಗ್ಗೆ ಅನುಮಾನಗಳಿದ್ದವು. ಕೆಲವು ತಿಂಗಳ ಹಿಂದೆ ಅಪ್ರಾಪ್ತ ವಯಸ್ಕಳ ಮೇಲೆ ಅತ್ಯಾಚಾರ ಎಸಗಿದ ಪ್ರಕರಣದಲ್ಲಿ ಭಾಗಿಯಾಗಿದ್ದಕ್ಕಾಗಿ ಅವರಿಗೆ ನಿರೀಕ್ಷಣಾ ಜಾಮೀನು ನಿರಾಕರಿಸಲಾಯಿತು.

ಈ ಆವೃತ್ತಿಯ ಐಪಿಎಲ್‌ನಲ್ಲಿ ದಯಾಳ್ ಅವರ ಅನುಪಸ್ಥಿತಿಯನ್ನು ಆರ್‌ಸಿಬಿ ತಂಡದ ನಿರ್ದೇಶಕ ಮೊ ಬೊಬಟ್ ದೃಢಪಡಿಸಿದ್ದಾರೆ. ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ದಯಾಳ್ ಕೆಲವು ವೈಯಕ್ತಿಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ ಮತ್ತು ಅವರು ಒಪ್ಪಂದದಲ್ಲಿ ಉಳಿದಿದ್ದರೂ, ಈ ಋತುವಿನಲ್ಲಿ ಪಂದ್ಯಾವಳಿಯಲ್ಲಿ ಭಾಗವಹಿಸುವುದಿಲ್ಲ' ಎಂದು ಹೇಳಿದರು.

ಯಶ್ ದಯಾಳ್ ಅವರ ಸುತ್ತ ವಿವಾದಗಳು ಜುಲೈ 2025ರಲ್ಲಿ ಪ್ರಾರಂಭವಾದವು, ಮದುವೆಯ ನೆಪದಲ್ಲಿ ಮಹಿಳೆಯನ್ನು ಶೋಷಿಸಿದ ಆರೋಪದ ಮೇಲೆ ಅವರ ವಿರುದ್ಧ ಪ್ರಕರಣ ದಾಖಲಾಗಿತ್ತು, ನಂತರ ಜೈಪುರದಲ್ಲಿ ಪೋಸ್ಕೋ ಕಾಯ್ದೆಯಡಿಯಲ್ಲಿ ಅವರ ವಿರುದ್ಧ ಹೊಸ ಪ್ರಕರಣ ದಾಖಲಾಗಿತ್ತು.

ವಿಟಾಕೀಸ್

ಹಾಡಿನಲ್ಲಿ ಮನಗೆದ್ದ ಕರುಣಾಕರ

ಈ ಹಿಂದೆ ಶಿಕ್ಷಣ ವ್ಯವಸ್ಥೆಯ ಸುತ್ತ ಸಾಗುವ ಕಥೆಯನ್ನು ಒಳಗೊಂಡ, ಪಾರ್ಕ್ ರೋಡ್ 100 ರೂಪಾಯಿ ಚಿತ್ರ ನಿರ್ದೇಶಿಸಿದ್ದ ಆರ್ಯನ್ ತೇಜಸ್, ಈಗ ಮತ್ತೊಂದು ಕಥೆಯನ್ನು ಹೊತ್ತುಬಂದಿದ್ದಾರೆ. ಈ ಬಾರಿ ತಂದೆ ಮಗನ ಬಾಂಧವ್ಯ ಬೆರೆತ ನಾನು ಕರುಣಾಕರ ಚಿತ್ರವನ್ನು ನಿರ್ದೇಶಿಸಿ ತೆರೆಗೆ ತರುತ್ತಿದ್ದಾರೆ. ಈ ಚಿತ್ರದ ಹಾಡುಗಳು ಹಾಗೂ ಟ್ರೇಲರ್ ರಿಲೀಸ್ ಆಗಿದ್ದು ಸಿನಿಮಾದ ಬಗ್ಗೆ ನಿರೀಕ್ಷೆ ಹೆಚ್ಚಿಸಿದೆ. ಅಪ್ಪ ಮಗನ ಬಾಂಧವ್ಯ ಹಾಗೂ ಗಂಡ ಹೆಂಡತಿಯ ಪವಿತ್ರ ಬಂಧದ ಸುತ್ತ ನಡೆಯುವ ಕಥೆ ಇದಾಗಿದ್ದು, ಪ್ರತಿಯೊಬ್ಬರ ಜೀವನಕ್ಕೂ ಕನೆಕ್ಟ್ ಆಗುವಂಥ ಸ್ಟೋರಿ ಇಲ್ಲದೆ ಎಂಬುದು ಟ್ರೇಲರ್‌ನಲ್ಲಿ ಸ್ಪಷ್ಟವಾಗುತ್ತದೆ. ಆರ್ಯನ್ ಅವರೇ ನಾಯಕನಾಗಿ ನಟಿಸಿದ್ದು, ಭಾರ್ಗವಿ ಎಲ್.

ಎಲ್.ಬಿ ಖ್ಯಾತಿಯ ರಾಧಾ ಭಗವತಿ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ. ಭವೀಶ್ ಮಗನ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಉಳಿದಂತೆ ಕರಿಸುಬ್ಬು, ಎಂ.ಕೆ.ಮಠ, ಬಿ.ಎಂ.ವೆಂಕಟೇಶ, ಅಪೂರ್ವಾ ಸೇರಿದಂತೆ ಹಲವರು ಚಿತ್ರದಲ್ಲಿ ಅಭಿನಯಿಸಿದ್ದಾರೆ.

ಪ್ರತಿಯೊಬ್ಬರ ಮನೆಯಲ್ಲೂ ಒಬ್ಬ ಕರುಣಾಕರ ಇರುತ್ತಾನೆ, ಅದನ್ನೇ ಆಧರಿಸಿ ಚಿತ್ರದ ಕಥೆ ಹೆಣೆಯಲಾಗಿದೆ. ಮಧ್ಯಮ ವರ್ಗದ ಕುಟುಂಬದಲ್ಲಿ ಕಾಣುವ ನೋವು ನಲಿವು ಎಲ್ಲವೂ ಚಿತ್ರದಲ್ಲಿವೆ. ಒಬ್ಬ ಸಹಾಯಕ ನಿರ್ದೇಶಕ ತನ್ನ ಕುಟುಂಬವನ್ನು ಮುನ್ನಡೆಸಿಕೊಂಡು ಹೋಗಲು ಎಷ್ಟೆಲ್ಲಾ ಕಷ್ಟ ಪಡುತ್ತಾನೆ ಎಂಬುದನ್ನು ಈ ಚಿತ್ರದಲ್ಲಿ ಹೇಳಲಾಗಿದೆ. ಕುಟುಂಬದ ಯಜಮಾನನಾಗಿ ನಾನು ನಟಿಸಿದ್ದೇನೆ ಎಂದು ಆರ್ಯನ್ ಹೇಳಿದರು.

ನಾನು ಈ ಚಿತ್ರದಲ್ಲಿ ಮಧ್ಯಮ ವರ್ಗದ ಗೃಹಿಣಿಯಾಗಿ ಕಾಣಿಸಿಕೊಂಡಿದ್ದೇನೆ. ಆಕೆಗೆ ಜೀವನದಲ್ಲಿ ಏನಾದರೂ ಸಾಧನೆ ಮಾಡಬೇಕು ಎಂಬ ಹಂಬಲವಿರುತ್ತದೆ. ಆದರೆ ಗಂಡ, ಮಗನಿಗೋಸ್ಕರ ತನ್ನ ಕನಸನ್ನು ಬದಿಗೊತ್ತುತ್ತಾಳೆ. ಈ ಚಿತ್ರದಲ್ಲಿ ಅಭಿನಯಿಸುವಾಗ ನನ್ನ ಬಾಲ್ಯದ ದಿನಗಳ

ನೆನಪಾದವು ಎಂದು ರಾಧಾ ಭಗವತಿ ತಿಳಿಸಿದರು. ಒಳ್ಳೆಯ ಸಿನಿಮಾವನ್ನು ಕನ್ನಡ ಚಿತ್ರರಂಗಕ್ಕೆ ನೀಡಬೇಕು ಎಂಬ ಕನಸು ಹಲವು ದಿನಗಳಿಂದಲೂ ಇತ್ತು. ಆ ಕನಸು ಈ ಸಿನಿಮಾ ಮೂಲಕ ನನಸಾಗಿದೆ ಎಂದು ನಿರ್ಮಾಪಕ ವೈಭವ್ ಸುರೇಶ್ ಸಂತಸ ವ್ಯಕ್ತಪಡಿಸಿದರು.

ಪಾಪ್ ಕಾರ್ನ್ ಸಿನಿಮಾ ಪ್ರೊಡಕ್ಷನ್ಸ್‌ನಲ್ಲಿ ನಮನ್ ನಾರಾಯಣ್ ಹಾಗೂ ವೈಭವ್ ಸುರೇಶ್ ಒಟ್ಟಾಗಿ ಚಿತ್ರ ನಿರ್ಮಾಣ ಮಾಡಿದ್ದಾರೆ. ಮೈಸೂರು, ಮೇಲುಕೋಟೆ, ಹಾಗೂ ಬೆಂಗಳೂರು ಸುತ್ತಮುತ್ತ ಚಿತ್ರೀಕರಣ ನಡೆಸಲಾಗಿದೆ. ನಾನು ಕರುಣಾಕರ ಏಪ್ರಿಲ್ 3 ರಂದು ರಾಜ್ಯಾದ್ಯಂತ ತೆರೆಗೆ ಬರಲಿದೆ.

ಮೋಡಿ ಮಾಡಿದ ಆಹನ

ಸಂಗೀತವನ್ನು ತಲುಪಲು ಹಾತೊರೆಯುತ್ತಿರುವಾಗ, ಸಂಗೀತವೇ ಅವನನ್ನು ನಿರಾಕರಿಸಿದರೆ ಏನಾಗಬಹುದು ಎನ್ನುವುದನ್ನು ಹಾಡಿನ ಮೂಲಕ ಕಟ್ಟಿಕೊಡಲಾಗಿದೆ. ಈ ಕಥೆಯು ರಜತ್ ಹೆಗಡೆ ಅವರ ಸ್ವಂತ ಸೃಜನಾತ್ಮಕ ಅನುಭವಗಳಿಂದ ಮೂಡಿಬಂದಿರುವುದರಿಂದ, ಅವರ ಅಭಿನಯ ಮತ್ತು ಸಂಗೀತದಲ್ಲಿ ಒಂದು ವಿಶೇಷವಾದ ಆಪ್ತತೆ ಇದೆ. ಆಹನ ಎಂದರೆ ಸೂರ್ಯನ ಮೊದಲ ಕಿರಣ. ಇದು ಜಾಗೃತಿ, ಭರವಸೆ ಮತ್ತು ಹೊಸ ಆರಂಭವನ್ನು ಸೂಚಿಸುತ್ತದೆ.

ಪ್ರಸ್ತುತ ಕನ್ನಡದಲ್ಲಿ ಸಂಗೀತ ಆಲ್ಬಂಗಳು ಬರುತ್ತಿರುವುದು ಕಡಿಮೆ. ಹಾಗಾಗಿ ಹೊಸ ಪ್ರತಿಭೆಗಳಿಗೆ ಅವಕಾಶ ಕಲ್ಪಿಸುವ ನಿಟ್ಟಿನಲ್ಲಿ ಈ ಆಲ್ಬಂ ನಿರ್ಮಾಣ ಮಾಡಿರುವುದಾಗಿ ನಿರ್ಮಾಪಕ ವಿಜಯ್ ಲೋಹಿತ್ ಹೇಳುತ್ತಾರೆ. ಮಧುರ ಸಂಗೀತದ ಆಹನ ಸಂಗೀತ ಪ್ರಿಯರನ್ನು ಸೆಳೆಯುತ್ತಿದೆ.

ವೈಷ್ಣವಿ ಫಿಲಂಸ್ ನಲ್ಲಿ ಆಹನ ಎಂಬ ವಿಭಿನ್ನ ಆಲ್ಬಂ ಹಾಡು ಸಿದ್ಧವಾಗಿದೆ. ಭಾವನಾತ್ಮಕ ಕಥೆ ಮತ್ತು ವಿನೂತನ ಸಂಗೀತದ ಸಮ್ಮಿಲನದ ಈ ಹಾಡು ಮಧುರವಾಗಿ ಮೂಡಿಬಂದಿದೆ. ರಜತ್ ಹೆಗಡೆ ಸಂಗೀತ ಸಂಯೋಜಿಸುವ ಜತೆಗೆ ಹಾಡಿಗೂ ದನಿಯಾಗಿದ್ದಾರೆ. ಹಾಡಿನಲ್ಲಿಯೂ ಕಾಣಿಸಿಕೊಂಡಿದ್ದು ಭಾವನಾತ್ಮಕ ಪ್ರಯಾಣಕ್ಕೆ ಜೀವ ತುಂಬಿದ್ದಾರೆ.

ಆಹನ ಒಬ್ಬ ಕಲಾವಿದ ಮತ್ತು ಸಂಗೀತದ ನಡುವಿನ ಸಂಬಂಧವನ್ನು ಅನಾವರಣಗೊಳಿಸುತ್ತದೆ. ಒಬ್ಬ ಕಲಾವಿದ

ಪಳ್ಳಿಚಟ್ಟಂಬಿಯ ಆ್ಯಕ್ಷನ್ ಟೀಸರ್

ಮಲೆಯಾಳಂ ಬಹು ನಿರೀಕ್ಷಿತ ಪಳ್ಳಿಚಟ್ಟಂಬಿ ಸಿನಿಮಾ ಬಿಡುಗಡೆಗೆ ಸಿದ್ಧವಾಗಿದೆ. ಇದೀಗ ಪಳ್ಳಿಚಟ್ಟಂಬಿ ಚಿತ್ರದ ಟೀಸರ್ ಬಿಡುಗಡೆಯಾಗಿದ್ದು, ಟೀಸರ್ ನಲ್ಲಿ ಭರಪೂರ ಆ್ಯಕ್ಷನ್ ದೃಶ್ಯಗಳಿದ್ದು, ಮಲೆಯಾಳಂ ಚಿತ್ರರಂಗದಲ್ಲಿ ಈ ಚಿತ್ರ ಮತ್ತೊಂದು ಮೈಲಿಗಲ್ಲು ಸೃಷ್ಟಿಸುವ ಭರವಸೆ ಮೂಡಿಸಿದೆ.

ಡಿಜೋ ಜೋಸ್ ಆಂಟೋನಿ ನಿರ್ದೇಶನದ ಈ ಚಿತ್ರದಲ್ಲಿ ಟೊವಿನೋ ಥಾಮಸ್ ನಾಯಕನಾಗಿ ನಟಿಸಿದ್ದು ಕಯಾದು ಲೋಹರ್ ನಾಯಕಿಯಾಗಿ ಅಭಿನಯಿಸಿದ್ದಾರೆ. ವಿಜಯ ರಾಘವನ್, ಸುಧೀರ್ ಕರಮನ, ಬಾಬುರಾಜ್, ವಿನೋದ್ ಕೆದಮಂಗಲಂ, ಪ್ರಶಾಂತ್ ಅಲೆಕ್ಸಾಂಡರ್ ಹೀಗೆ ಹಲವರು ತಾರಾಗಣದಲ್ಲಿದ್ದಾರೆ.

ಅರವತ್ತು ಎಪ್ಪತ್ತರ ದಶಕದ ಸುತ್ತ ಕಥೆಯನ್ನು ಹೆಣೆಯಲಾಗಿದ್ದು, ರೆಟ್ರೋ ಲುಕ್‌ನಲ್ಲಿ ಸಾಗಲಿದೆ.

ನೌಫಲ್ ಮತ್ತು ಬ್ರಿಜೇಶ್ ಒಟ್ಟಾಗಿ ಚಿತ್ರ ನಿರ್ಮಾಣ ಮಾಡಿದ್ದಾರೆ. ಕನ್ನಡ, ಮಲೆಯಾಳಂ ಸೇರಿದಂತೆ ಐದು ಭಾಷೆಯಲ್ಲಿ ಚಿತ್ರ ಬಿಡುಗಡೆಯಾಗಲಿದೆ.

ಟಿಜೊ ಟಾಮಿ ಛಾಯಾಗ್ರಹಣ, ಜೇಕ್ಸ್ ಬಿಜಾಯ್ ಸಂಗೀತ ನಿರ್ದೇಶನ, ಶ್ರೀಜಿತ್ ಸಾರಂಗ್ ಸಂಕಲನ ಈ ಚಿತ್ರಕ್ಕಿದೆ.



ಕರುಳ ಬಳ್ಳಿಯ ಕಥೆ ಕರಳೆ



ಕನ್ನಡದಲ್ಲಿ ವಿಭಿನ್ನ ಕಥೆಯ ಸಿನಿಮಾಗಳು ತೆರೆಗೆ ಬರುತ್ತಿವೆ. ಆ ಸಾಲಿಗೆ ಈಗ ಕರಳೆ ಚಿತ್ರ ಕೂಡ ಸೇರ್ಪಡೆಯಾಗಿದೆ. ಕರಳೆ ಶೀರ್ಷಿಕೆಯೇ ವಿಭಿನ್ನವಾಗಿದ್ದು ಕುತೂಹಲ ಮೂಡಿಸಿದೆ. ಈ ಹಿಂದೆ ಕಲಿವೀರ ಚಿತ್ರವನ್ನು ನಿರ್ದೇಶಿಸಿದ್ದ ಅವಿರಾಮ್ ಕಂಠೀರವ ಈ ಚಿತ್ರಕ್ಕೂ ಕಥೆ ಬರೆದು ನಿರ್ದೇಶನ ಮಾಡುತ್ತಿದ್ದಾರೆ. ಬಹುತೇಕ ಚಿತ್ರೀಕರಣ ಮುಗಿಸಿರುವ ಕರಳೆ ಚಿತ್ರದ ಮೋಷನ್ ಪೋಸ್ಟರ್ ಬಿಡುಗಡೆಯಾಗಿದೆ. ಆ ಮೂಲಕ ಚಿತ್ರತಂಡ ನಾಯಕಿಯನ್ನು ಪರಿಚಯಿಸಿದೆ. ಗರ್ಭಿಣಿ ನಾಯಕಿ ಕೋಳಿಯೊಂದನ್ನು ಕತ್ತರಿಸುತ್ತಿದ್ದಾಳೆ. ರಗಡ್ ಆಗಿ ಕಂಗೊಳಿಸುತ್ತಿರುವ ನಾಯಕಿಯ ಕಾಲಲ್ಲಿ ರಕ್ತದ ಕಲೆ ಅಂಟಿದೆ. ಬಾಯಲ್ಲಿ ಬೀಡಿ ಇದೆ. ಇದನ್ನು ಗಮನಿಸಿದರೆ ಕರಳೆಯಲ್ಲಿ ಸಸ್ಪೆನ್ಸ್, ಥ್ರಿಲ್ಲರ್ ಜತೆಗೆ ವಯಲೆನ್ಸ್ ಕಂಟೆಂಟ್ ಕೂಡ ಇದೆ ಎಂಬುದು ತಿಳಿಯುತ್ತದೆ. ಮಹಿಳಾ ಪ್ರಧಾನ ಕಥೆಯ ಈ ಚಿತ್ರದಲ್ಲಿ ಕುಂಕುಮ್ ಹರಿಹರ್ ಪ್ರಮುಖ ಪಾತ್ರದಲ್ಲಿ ನಟಿಸಿದ್ದು, ದೇವಕಿ ಎಂಬ ಪಾತ್ರದಲ್ಲಿ ಅಭಿನಯಿಸಿದ್ದಾರೆ.

ನೈಜ ಘಟನೆ: ಕರಳೆ ನೈಜ ಘಟನೆಯನ್ನು ಆಧರಿಸಿ ಸಿದ್ಧವಾಗುತ್ತಿರುವ ಚಿತ್ರ. ಭಾರತ ಮತ್ತು ಚೀನಾದಲ್ಲಿ ನಡೆದ ಘಟನೆಯನ್ನು ಆಧರಿಸಿ ಈ ಚಿತ್ರದ ಕಥೆ ಹೆಣೆಯಲಾಗಿದೆ. ಅದರ ಜತೆಗೆ ಕಾಲ್ಪನಿಕ ಅಂಶಗಳನ್ನು ಬೆರೆಸಿ ತೆರೆಗೆ ತರಲಾಗುತ್ತಿದೆ. ಇದು ರಿಯಲ್ ಸ್ಟೋರಿ ಆಗಿರುವುದರಿಂದ ಚಿತ್ರದ ಕಥೆ ಎಲ್ಲರಿಗೂ ಹಿಡಿಸಲಿದೆ. ಅಷ್ಟಕ್ಕೂ ಆ ಘಟನೆ ಏನು ಎಂಬುದು ಸಿನಿಮಾ ನೋಡಿದ ಮೇಲೆ ತಿಳಿಯುತ್ತದೆ. ಬಹುತೇಕ ಚಿತ್ರೀಕರಣ ಮುಕ್ತಾಯವಾಗಿದ್ದು, ಎರಡು ಹಾಡಿನ ಚಿತ್ರೀಕರಣ ಮಾತ್ರ ಬಾಕಿಯಿದೆ, ಇದೇ ವರ್ಷ ಚಿತ್ರವನ್ನು ತೆರೆಗೆ ತರಲಿದ್ದೇವೆ ಎನ್ನುತ್ತಾರೆ ನಿರ್ದೇಶಕರು.

ಹೊಸ ಪ್ರಯತ್ನ: ಕರಳೆ ರಿಯಲ್ ಸ್ಟೋರಿ ಅನ್ನುವುದು ವಿಶೇಷ. ಅಂತೆಯೇ ಈ ಚಿತ್ರ ಕನ್ನಡದ ಜತೆಗೆ ಮ್ಯಾಂಡರಿನ್ ಭಾಷೆಯಲ್ಲಿಯೂ ನಿರ್ಮಾಣವಾಗುತ್ತಿದೆ. ಇದು ಕನ್ನಡದಲ್ಲಿಯೇ



> ನಮ್ಮ ಚಿತ್ರದ ಮೋಷನ್ ಪೋಸ್ಟರ್ ಗಮನಿಸಿದರೆ ಇಲ್ಲಿ ಹೆಚ್ಚು ಕ್ರೌರ್ಯವಿದೆ ಎಂದು ಅನ್ನಿಸಬಹುದು. ಕಥೆಗೆ ತಕ್ಕಂತೆ ಒಂದಷ್ಟು ವೈಯಲೆನ್ಸ್ ಸನ್ನಿವೇಶಗಳಿಗೆ. ಅದಕ್ಕೂ ಮಿಗಿಲಾಗಿ ಇದು ಮಹಿಳಾ ಪ್ರಧಾನ ಕಥೆಯ ಚಿತ್ರವಾಗಿರುವುದರಿಂದ, ಚಿತ್ರದುದ್ದಕ್ಕೂ ಕೌಟುಂಬಿಕ ಕಥೆ ಮನಸೆಳೆಯುತ್ತದೆ.
> -ಅವಿರಾಮ್ ಕಂಠೀರವ ನಿರ್ದೇಶಕ

ಮೊದಲ ಪ್ರಯತ್ನವಾಗಿದೆ. ಪ್ಯಾನ್ ಇಂಡಿಯಾ ಸಿನಿಮಾಗಳ ಅಬ್ಬರದ ನಡುವೆ ನಿರ್ದೇಶಕರು ಕರಳೆ ಚಿತ್ರವನ್ನು ಪ್ಯಾನ್ ವರ್ಲ್ಡ್ ಮಟ್ಟಕ್ಕೆ ಕೊಂಡೊಯ್ಯುತ್ತಿದ್ದಾರೆ.

ನಮ್ಮ ಚಿತ್ರದಲ್ಲಿ ಇರುವ ಕಂಟೆಂಟ್‌ಗೂ ಚೀನಾದಲ್ಲಿ ನಡೆದ ಘಟನೆಗೂ ಸಂಬಂಧವಿರುವುದರಿಂದ ಮ್ಯಾಂಡರಿನ್ ಭಾಷೆಯಲ್ಲಿ ಚಿತ್ರವನ್ನು ನಿರ್ಮಾಣ ಮಾಡಿ ತೆರೆಗೆ ತರುತ್ತಿದ್ದೇವೆ. ಚಿತ್ರದಲ್ಲಿ ದೊಡ್ಡ ತಾರಾಬಳಗವೇ ಇದ್ದು, ಖ್ಯಾತ ಹಿರಿಯ ನಟ ಅನಂತ್‌ನಾಗ್ ಅವರನ್ನು ಚಿತ್ರಕ್ಕೆ ಕರೆತರುವ ಪ್ರಯತ್ನ ನಡೆಯುತ್ತಿದೆ ಎಂದು ಅವಿರಾವ್ ತಿಳಿಸಿದರು.